ಕರ್ಮವೀರ




ದೀಪಾವಳಿ ಸಂ



ಲಕ್ಷಕ್ಕೆ ಒಂದು, ದುಡ್ಡಿಗೆ ಎರಡು -
ಭಿಕುಸಾ ಛಾಪ ಸಿನ್ನರ ಬೀಡಿ
ರಜಿಸ್ಟರ ನಂ. ೨೪
विड्यांचा कारखाना
दोरा पिवळा पोष्ट सिन्नर रजिस्टर नं. २५.
भिकुसा यमासा क्षत्रीय.
ಭಿಕುಸಾ ಯಮಾಸಾ
ಕ್ಷತ್ರೀಯ.
ಸಿನ್ನರ (ಜಿ. ನಾಸಿಕ)
H.O.C.
BOM. PNA.

ಪರಿವಿಡಿ




IDEAL

ಕರ್ಮವೀರ

ದೀಪಾವಳಿ ಸಂಚಿಕೆ ೧೯೪೮

ಹುಬ್ಬಳ್ಳಿ .... ನವೆಂಬರ ೧, ೧೯೪೮

ಸಂಪಾದಕರು: ಹ. ರಾ. ಪುರೋಹಿತ

ಸಂಸ್ಥಾಪಕ–ನಿರ್ದೇಶಕರು: ರಂಗನಾಥ ದಿವಾಕರ

ನಮ್ಮ ನುಡಿ

ಭರತ ವರ್ಷದ ಹಿರಿಯ ಹಬ್ಬವಾದ ದೀಪಾವಳಿಯ ಶುಭ ಮುಹೂರ್ತದಲ್ಲಿ ಈ ವಿಶೇಷ ಸಂಚಿಕೆಯನ್ನು ಓದುಗರ ಕೈಯಲ್ಲಿಡಲು "ಕರ್ಮವೀರ"ನಿಗೆ ಅಮಿತ ಆನಂದವೆನಿಸುತ್ತದೆ. ಪ್ರಾಚೀನ ಕಾಲದಿಂದಲೂ ಜ್ಞಾನಕ್ಕೆ, ವಿವೇಕಕ್ಕೆ, ವಿದ್ಯೆಗೆ ದೀಪವನ್ನು ಸಂಕೇತವಾಗಿಟ್ಟುಕೊಳ್ಳುವದು ರೂಢಿಯಾಗಿ ಬಂದಿದೆ. ಜ್ಞಾನದಂತೆ ದೀಪವೂ ಕೊಟ್ಟು ಕಡಿಮೆಯಾಗದ ಸಂಪತ್ತು. ಒಂದು ದೀಪ ಇನ್ನೊಂದನ್ನು ಹೊತ್ತಿಸುತ್ತದೆ, ತಾನು ಕಳೆಗುಂದುವದಿಲ್ಲ. ಆ ದೃಷ್ಟಿಯಿಂದ ಅದು ಅಕ್ಷಯ್ಯ. ಜ್ಞಾನವೂ ದಾನದಿಂದ ರಿಕ್ತವಾಗದೆ ಹೊಸ ಹೊಸ ಜ್ಞಾನಿಗಳನ್ನು ಉಂಟುಮಾಡುತ್ತದೆ. "ಕರ್ಮವೀರ" ನಾದರೂ ಹಲವಾರು ವರ್ಷಗಳಿಂದ ಈ ಜ್ಞಾನದೀಪ ಸಮಾರಾಧನೆಯನ್ನು ಎಡೆಬಿಡದೆ ನಡೆಸುತ್ತ ಬಂದಿದ್ದಾನೆ. ಇಂದು ಅವನು ಕೊಡುತಿರುವದು ಹೊಸದೊಂದು ದೀಪ, ವಿಶಿಷ್ಟವಾದ ಹಣತೆಯಲ್ಲಿ ಹೊತ್ತಿಸಿದ ಹೆಚ್ಚು ಉಜ್ವಲವಾದ ದೀಪ. ಮುಂದಾದರೂ ಅದನ್ನೆ ಮಾಡುವ ಹಂಬಲ ಅವನಿಗೆ. ಈ ದೀಪದಿಂದಲೂ ಬುದ್ಧಿಯ ಬತ್ತಿಯಲ್ಲಿ ಇಚ್ಛಾತೈಲವೊಂದಿದ್ದರೆ ಬೇಕಾದವರು ಬೆಳಕನ್ನು ಹೊತ್ತಿಸಬಹುದು....

ಈ ಬಾರಿ ದೀಪಾವಳಿ ಸಂಚಿಕೆಯನ್ನು ಹೊರಡಿಸಿರುವದಕ್ಕೆ ಒಂದು ವಿಶೇಷ ಅರ್ಥವಿದೆಯೆನ್ನಬಹುದು. ಇದು ನಮ್ಮ ಸ್ವಾತಂತ್ರ್ಯದ ನಿಜವಾದ ಪ್ರಥಮ ದೀಪಾವಳಿ; ಕಳೆದ ವರ್ಷ ದೀಪಾವಳಿಗಿಂತ ಮೊದಲೇ ನಮಗೆ ಸ್ವಾತಂತ್ರ್ಯ ಬಂದಿದ್ದರೂ ದೀಪಾವಳಿಯ ಕಾಲದಲ್ಲಿ ಪಂಚನದೀ ಪ್ರದೇಶದ ರಕ್ತಧಾರೆ ಇನ್ನೂ ಆರಿದ್ದಿಲ್ಲ. ಇಂದು ದೇಶದಲ್ಲಿ ಶಾಂತಿ ನೆಲೆಸಿದ್ದು ಸುಖದ ವಾತಾವರಣದಲ್ಲಿ ದೀಪಾವಳಿಯ ದೀಪಗಳನ್ನು ಹಚ್ಚಬಲ್ಲವರಾಗಿದ್ದೇವೆ; ಸ್ವತಂತ್ರ ಭಾರತಕ್ಕೆ ನಾವು ಸಲ್ಲಿಸುವ ಮೊದಲ್ಮಡಿಪಿದು.

"ಕರ್ಮವೀರ" ದೀಪಾವಳಿ ಸಂಚಿಕೆಯನ್ನು ಹೊರಡಿಸುವ ಪ್ರಯತ್ನ ಇದೇ ಮೊದಲು. ಹಿಂದೆ ವಿಶೇಷ ಸಂಚಿಕೆಗಳನ್ನು ಹೊರಡಿಸಿಯೇ ಇಲ್ಲವೆಂದಲ್ಲ. ೧೯೪೪ ಜನೆವರಿಯಲ್ಲಿ "ಪರ್ಯಾಯ ಸಂಚಿಕೆ"ಯನ್ನು ಸುಂದರವಾಗಿ ಹೊರಡಿಸಿದ್ದು ಓದುಗರ ನೆನಪಿನಲ್ಲಿರಬಹುದು. ಆದರೆ ಆ ಸಂಚಿಕೆಯ, ಮತ್ತು ಅಂಥವೇ ಇತರ ಲಘುತರ ಪ್ರಯತ್ನಗಳ, ರೀತಿ ಬೇರೆಯಾಗಿತ್ತು; ಇದರದು ಬೇರೆಯೇ ಆಗಿದೆ. ಅದು ಒಂದು ವಿಶಿಷ್ಟ ವಿಷಯಕ್ಕೇ ಮೀಸಲೆನಿಸಿದ ಹೊತ್ತಿಗೆ. ಆದರೆ ಈ ಸಂಚಿಕೆಯಲ್ಲಿ ಹಲವು ರುಚಿಗಳಿಗೆ, ಹಲವು ಕುತೂಹಲಗಳಿಗೆ, ಹಲ ಬಗೆಯ ಜ್ಞಾನತೃಷ್ಣೆಗಳಿಗೆ ಸಾಮಗ್ರಿಯನ್ನೊದಗಿಸುವ ಪ್ರಯತ್ನವಾಗಿದೆ.

ಈ ಸಂಚಿಕೆಯನ್ನು ಹೊರಡಿಸುವ ತೀರ್ಮಾನವನ್ನು ನಾವು ತುಸು ತಡವಾಗಿಯೆ ಮಾಡಿದೆವು. ಲೇಖಗಳ ಮತ್ತು ಚಿತ್ರಗಳ ಸಂಗ್ರಹಕ್ಕೆ ಸಾಕಷ್ಟು ಸಮಯವಿರಲಿಲ್ಲ. ಆದುದರಿಂದ ನಾವು ಕೊಡಬೇಕೆಂದು ಮಾಡಿಕೊಂಡಿದ್ದ ಹಲವು ವೈಶಿಷ್ಟ್ಯಗಳನ್ನು ಉಪಾಯವಿಲ್ಲದೆ ಬಿಟ್ಟುಬಿಡಬೇಕಾಯ್ತು. ಆದರೂ ದೊರೆತ ಅತ್ಯಲ್ಪ ಸಮಯದಲ್ಲಿ ಎಷ್ಟು ಸುಂದರವಾಗಿ ಮಾಡಲು ಸಾಧ್ಯವಿದೆಯೋ ಅಷ್ಟು ಸುಂದರವಾಗಿ ಇದು ಹೊರಬಂದಿದೆಯೆಂಬ ಮಾತು ನಾವೇ ಹೇಳಿಕೊಳ್ಳುವಂತಹದಲ್ಲ.

ಇದರಲ್ಲಿ ಕೊಟ್ಟಿರುವ ವ್ಯಂಗ ಚಿತ್ರಗಳು ದೇಶವಿದೇಶದ ಪತ್ರಿಕೆಗಳಿಂದಾಯ್ದುಕೊಂಡವುಗಳು. ಅವು ಓದುಗರಿಗೆ ರುಚಿಸದಿರವು.

ಇದರಲ್ಲಿರುವ ಕುಂದುಕೊರತೆಗಳು ಎಲ್ಲರಿಗಿಂತ ನಮಗೇ ಚನ್ನಾಗಿ ಗೊತ್ತು. ಈ ಬಾರಿಯ ಅನುಭವದಿಂದ ಲಾಭ ಪಡೆದು ಮುಂದಿನ ಬಾರಿ ಬಂದಾಗ— ಏಕೆಂದರೆ ಪ್ರತಿ ದೀಪಾವಳಿಗೂ ವಿಶೇಷ ಸಂಚಿಕೆಯನ್ನು ಹೊರಡಿಸಬೇಕೆಂಬುದು ನಮ್ಮ ಮನೀಷೆ– ಇದಕ್ಕಿಂತಲೂ ಹೆಚ್ಚು ಸರ್ವಾಂಗಸುಂದರವಾದ ಸೃಷ್ಟಿಯನ್ನು ತೋರಿಸುವತ್ತ ನಮ್ಮ ಪ್ರಯತ್ನಗಳ ವಿನಿಯೋಗವಾಗುವದೆಂದಿಷ್ಟೇ ಹೇಳಬಯಸುವೆವು.

ಪ್ರಕೃತದಲ್ಲಿ, ನಾವು ಉಲ್ಲೇಖಿಸಬೇಕಾದ ಒಂದೇ ಸಂಗತಿ ಉಳಿದಿದೆ. ಅದೆಂದರೆ ಉಪಕಾರಸ್ಮರಣೆ. ನಮ್ಮ ಬಿನ್ನಹಕ್ಕೆ ಮನ್ನಣೆಯಿತ್ತು, ಕೊಟ್ಟ ಅತ್ಯಲ್ಪ ವ್ಯವಧಾನದಲ್ಲಿಯೇ, ಅಮೂಲ್ಯ ಲೇಖ, ಕವನಗಳನ್ನು ಬರೆದುಕೊಟ್ಟ ಈ ಸಂಚಿಕೆಯ ಎಲ್ಲ ವಿದಗ್ಧ ಲೇಖಕರ, ಕವಿಗಳ ದಾಕ್ಷಿಣ್ಯಶೀಲಕ್ಕೆ ನಮ್ಮ ಮೊದಲನೇ ಧನ್ಯವಾದ ಸೇರತಕ್ಕದ್ದು. ಈ ಸಂಚಿಕೆಯ ಮುಖಪತ್ರ ಬರೆದುಕೊಟ್ಟ ಹುಬ್ಬಳ್ಳಿಯ ಕಲಾವಿದ ಶ್ರೀ ಕೃಷ್ಣ ಕ್ಷತ್ರಿಯರಿಗೂ ನಾವು ಋಣಿಗಳಾಗಿದ್ದೇವೆ. ಇದರಲ್ಲಿ ಹೊಳಪಿನ ಕಾಗದದಲ್ಲಿ ಮುದ್ರಿತವಾದ ಕಾಶ್ಮೀರದ ದೃಶ್ಯಗಳು ದಿವಂಗತ ಶ್ರೀ. ಕೌಜಲಗಿ ಹಣಮಂತರಾಯರ ಸಂಗ್ರಹದೊಳಗಿನವು. ಅವನ್ನು ಉಪಯೋಗಕ್ಕಾಗಿ ಕೊಟ್ಟ ಅವರ ಪುತ್ರರಾದ ಶ್ರೀ. ಎಂ. ಎಚ್. ಕೌಜಲಗಿಯವರಿಗೂ ಹಂಪೆಯ ವಿರುಪಾಕ್ಷ ದೇವಾಲಯದ ಚಿತ್ರವನ್ನು ಕೊಟ್ಟ ಹುಬ್ಬಳ್ಳಿಯ ನ್ಯಾಶನಲ್ ಸ್ಟೂಡಿಯೋದವರಿಗೂ ನಮ್ಮ ಧನ್ಯವಾದಗಳು. ಇದಲ್ಲದೆ ಈ ಪ್ರಯತ್ನದಲ್ಲಿ ಅನೇಕ ವಿಧದಿಂದ ನೆರವಾದ ನಮ್ಮ ಸಹಕಾರಿಗಳಿಗೂ ಕಾರ್ಯಾಲಯದ ಕೆಲಸಗಾರರಿಗೂ ಪಡಿಯಚ್ಚುಗಳನ್ನು ಮಾಡಿಕೊಟ್ಟ ಹುಬ್ಬಳ್ಳಿಯ ಐಡಿಯಲ್ ಫೋಟೋ ಝಿಂಕೋ ವರ್ಕ್ಸ್ ಹಾಗು ಧಾರವಾಡದ ಶ್ರೀನಿವಾಸ ಕಂಪನಿ ಇವರಿಗೂ ಇದರಲ್ಲಿ ಜಾಹಿರಾತುಗಳನ್ನು ಕೊಟ್ಟು ಆರ್ಥಿಕ ಸ್ವಯಂಪೂರ್ಣತೆಗೆ ಸಹಾಯ ಮಾಡಿದ ಜಾಹಿರಾತುದಾರರಿಗೂ ನಮ್ಮ ವಂದನೆಗಳು.

ಈ ದೀಪಾವಳಿಯು ಸರ್ವರಿಗೂ ಶುಭಪ್ರದವಾಗಲಿ. ಸ್ವಾತಂತ್ರ್ಯವನ್ನು ಸಂಪಾದಿಸಿಕೊಂಡ ಭಾರತವು ಇತೋಪ್ಯಧಿಕವಾಗಿ ಸುಖಶಾಂತಿಗಳಲ್ಲಿ ನಲಿದಾಡಲಿ, ಕರ್ನಾಟಕವು ಬೇಗನೆ ಸ್ವತಂತ್ರ ಪ್ರಾಂತವನ್ನು ಪಡೆದು ಭಾರತದ ಸಾರ್ವಾಂಗಿಕ ಉನ್ನತಿಗೆ ತನ್ನ ಮುಡಿಪನ್ನು ಸಲ್ಲಿಸಲಿ.

ಹಚ್ಚುವೆ ತಾ ನಿನ್ನ ಹಣತಿಯ!

(ಸಾಂಗತ್ಯ)

೧

ಹಚ್ಚುವೆ ತಾ ನಿನ್ನ ಹಣತಿಯನೆಲೆ ಗೆಳತಿ,
ಅಚ್ಚನೇಹವ ತುಂಬಿ ಕೊಡುವೆನು ಬಾ!
ನಿಚ್ಚ ನಿರ್ಮಲವಿಹ ನೇರುರಿಮಿಂಚಿನ
ಉಚ್ಚ ಜ್ಞಾನಜ್ಯೋತಿ ಹಿಡಿದಿಹೆ ಬಾ!

೨

ಹೂವಾಗಿ ಅರಳಿಹೆ, ಹಣ್ಣಾಗಿ ಕಳಿತಿಹೆ,
ಗಿಣಿ ಬಾರೆ, ತುಂತುಂಬಿ ತುಂಬಿ ಬಾರೇ!
ಮಲ್ಲಿಗೆಯಾಗಿಹೆ, ಮಾಧುರ್ಯವಾಗಿಹೆ–
ಭೋಗವತಿಯೆ ಬಂದು ನೋಡಿಲ್ಲಿ ಬಾ!

೩

ರಸಗಂಗೆಯಾಗಿ ಈ ಎದೆ ಹರಿಯುತ್ತಿದೆ,
ಹೊಸ ದೇವತೆಯೆ ಬಂದು ಮಿಾಯಿಲ್ಲಿ ಬಾ!
ಹಸಿರು ಮನದ ಮೈದಾನದಿ ವಿಹರಿಸು,
ಜಸವೆಣ್ಣೆ, ಕಸವರವೇಕಿಲ್ಲಿ ಬಾ!

೪

ಬಿಗುವಿಲ್ಲ, ಲಘುವೆಲ್ಲ; ಹಗರಣವಿಲ್ಲಿಲ್ಲ,
ಸೊಗಯಿಸುವೊಲುಮೆಯ ಮಂಟಪದಿ–
ಹೊಗಬಾರೆ ಮೈದೋರೆ, ಮಮತೆಯ ಮಾಸತಿ,
ಜಗ ಕಾಣದಿರುವಂಥ ಜಯರಂಗದಿ!

೫

ಮರುಳುಗೊಳಿಸುವಂಥ ಹುಸಿವೆಡಗಿಲ್ಲಿಲ್ಲ,
ಕಪಟಾಭಿನಯನೇತ್ರದುರಿಮಿಂಚಿಲ್ಲ;
ಹರಳುಂಗುರವ ತೋರಿ ಮೋಸಮಾಡುವದಿಲ್ಲ,
ಒಲಿದರಿಪಿನ ಮೋದ ಮನಮೈಯೆಲ್ಲ!

೬

ಮೊಳ್ಳು ನಾಚಿಕೆಯಿಲ್ಲ, ಸುಳ್ಳು ಸಂಭ್ರಮವಿಲ್ಲ,
ಕಳ್ಳ ಮನದ ಕುಡಿನೋಟವಿಲ್ಲ;
ಜೊಳ್ಳು ಸಿಂಗಾರದ ಸಿರಿವಂತಿಕೆಯ ಠೀವಿ
ಇಲ್ಲಿಲ್ಲ—ತಿಳಿವಿನ ಚೆಲುವೆಲ್ಲ!

೭

ಮುಚ್ಚಿ ತೆರೆವ ಮಾಯೆ ಮಾಟಗಳಿಲ್ಲಿಲ್ಲ,
ನೆಚ್ಚದೆ ನೆಚ್ಚಿಸುವರೆಮಾತಿಲ್ಲ;
ಹುಚ್ಚಂಜಿಕೆಯ ತೋರುವರಸಿಕ ನಡೆಯಿಲ್ಲ,
ಹಚ್ಚಿದ ದೀಪದ ಪ್ರಭೆಯೆಲ್ಲ!

೮

ಹಚ್ಚುವೆ ತಾ ನಿನ್ನ ಹಣತೆಯನೆಲೆ ಗೆಳತಿ,
ನೆಚ್ಚಿಕೆ ನೇಹವ ತುಂಬಿ ನನ್ನ
ಹೊಚ್ಚ ಹೊಸ ಪ್ರಭೆ ಬೀರುವ ನೀಳುರಿ–
ಯುಚ್ಚ ಜ್ಞಾನದ ನಂದಾದೀಪದಿಂದ!

—ಬಿ. ಎಚ್. ಶ್ರೀಧರ

ನೀರು

ಚಣಚಣಕು ತಣಿವಿಲ್ಲ; ಏನಿದು ಹರಿವ ನೀರಿನ ಕಳವಳ?
ಏಕೊ ಮೊರೆಯುತ, ಎತ್ತೊ ಹರಿಯುತ, ಅಳುತಲಿಹುದೋ ಕಳವಳ!
ನೆಲದ ಎದೆ ಸಿಹಿನೀರು ಕಂಬನಿಗಡಲ ಒಡಲಿಗೆ ಅರ್ಪಣಾ
ಯಾವ ಶ್ರದ್ಧಾಬುದ್ಧಿ ಕೊಡುತಿದೆ ತೀರಲಾರದ ತರ್ಪಣಾ
ಉಗಮದಲಿ ತೋಡುವದು ಯಾವುದೊ ಎದೆಯ ಆಳದ ಜಲಹರಿ
ಜಲಧಿ ಕಲ್ಲೋಲದಲಿ ಕೂಡಲದಲ್ಲಿ ಮುಗಿವುದು ಈ ಪರಿ?
ನಿಲ್ಲಲಾರದ ಚಂಚಲತೆಯೇ ತೊರೆಯ ಹೆಸರಿಗೆ ಆಸರ.
ಜಲಕೆ ಜಡವೆನಲೆಂತು? ಇದಕೋ ಇಲ್ಲ ಹರಿಯುವ ಬೇಸರ.
ಆದರೂ ಇಷ್ಟೇಕೆ ಇಹುದೋ ತಂಪು ನೀರಿಗೆ ತಳಮಳ?
ಮುಗಿಲುಗನ್ನಡಿ ಬಿಡಿಸಿದಂತಿಹ ಜಲದ ಮೈ ಇದೆ ಜಳಜಳ
ಮೋಡ ಎರೆವುದು ಮಲೆಯ ತಲೆಯಲಿ, ಬೆಟ್ಟ ಸುರಿವುದು ಕೊಳ್ಳಕೆ,
ಕೊಳ್ಳ ತೊರೆವುದು ನದಿಗೆ, ಎಲ್ಲವು ಮರಳಿ ಕಡಲಿನ ಹಳ್ಳಕೆ.
ಸೂರ್ಯರಶ್ಮಿಯನೇರಿ ಸೇರುವದಣ್ಣ ಬಾನಿನ ಏರಿಗೆ
ನೆಲವೆ ನೀರಡಿಸಿರಲು ಕರೆವುದು ಗಿಡಮರದ ತಾಯ್ಬೇರಿಗೆ
ಜನ್ಮಮರಣದ ಚಕ್ರದಂತಿದೆ ವಕ್ರಮಾರ್ಗವು ನೀರಿಗೆ
ಬೇಕು ಈ ಅಭಿಸರಣದಂದದ ಅಧಃಪತನವು ಯಾರಿಗೆ?

ಸೊಲ್ಲಾಪುರ —— —ಅಂಬಿಕಾತನಯದತ್ತ

ಬೆಳಕು

ಮುಗಿಲು ಗಂಗೆಗೂ ತೇಲ ಬಿಟ್ಟಿವೋ ನಮ್ಮ ಬಾಳ ದೋಣಿ
ಹಗಲು ಹಿಂಗಲಿಲ್ಲಲ್ಲಿ ಹಿಡಿಯಿತೋ ಧ್ರುವನ ಚಿಕ್ಕೆ ಚುಕ್ಕಾಣಿ
ಕೋಟಿ ದ್ವೀಪಗಳ ದಾಟ ಬಂದೆವೋ ಖುಷಿಯ ಮಂಡಲಕ್ಕೆ
ಯಜ್ಞವೇದ ಋಕ್‌ಸಾಮ ಕೇಳಿತೋ ತಿರೆಯ ಮಂಗಲಕ್ಕೆ
ಭೂಮಿ ವ್ಯೋಮಗಳ ಹರಸುತಿದ್ದಿತೋ ಅರುಂಧತಿಯ ಚಿಕ್ಕೆ ॥ ೧ ॥
ಮಹತ್ ಪುಂಜಗಳು ಪಂಜು ಹಿಡಿದವೋ ಹಸಿರು ನೀಲಿ ಕೆಂಪು
ಬೃಹತ್ ಸೂರ್ಯಮಂಡಲವು ಕೂಡ ತಳೆದಿತ್ತು ಹಿಮದ ತಂಪು
ತೇಲು ಮೋಡಗಳ ಮಾಡದಲ್ಲಿ ಗಂಧರ್ವನಾಟ್ಯಗೀತ
ಮುಗಿಲ ಬಿಲ್ಲು ತೋರಣವ ಕಟ್ಟಿತೋ ಚಲುವಿದೇ ಪುನೀತ
ಓಜೆಯಾಡಿತೋಕುಳಿಯನಿಲ್ಲಿ ಕಲ್ಪನಾ ಕಲ್ಪದೂತ ॥ ೨ ॥
ಅಣುವಿನಣುವ ತುಂಬಿತ್ತು ಬೆಳಕು, ಈ ಬೆಳಕೆ ಬಾಳ ಸತ್ಯ
ಕಣವ ಕೂಡ ಕುಣಿಸಿತ್ತು ಕಲ್ಪದಲಿ ಬ್ರಹ್ಮಶಿಲ್ಪಿ ನಿತ್ಯ
ಸೋಮಸೂರ್ಯ ನಕ್ಷತ್ರಮಂಡಲವ ತುಂಬ ತುಂಬಿ ಸೂಸಿ
ಶುಕ್ರ ಮಂಗಲ ಗ್ರಹವ ಸುತ್ತಿತೋ ಬಂತು ಬಾಲ ಬೀಸಿ
ಧೂಮಕೇತು ಹೋ ಬಂತು ಬೆಳಕು ಆಕಾಶ ಕಡಲನೀಸಿ ॥ ೩ ॥
ಓ ಮರುತ್ ಮುಗಿಲ ಮಂದಾರವರಳಿತಿನ್ನೇಳು ಕೈಯ ನೀಡಿ
ವ್ಯೋಮವಾಣಿ ನುಡಿದಿತ್ತು ಮೂಡಲಲ್ಲುಷಾಸೂಕ್ತ ಹಾಡಿ
ಇರುಳ ಚಂದನದ್ರುಮದಿ ಸುತ್ತಿ ಸುತ್ತಾಡಿದಂಥ ಗಾಳಿ
ತೆರಳತೇಲು ಕಡಲೀಸಿ ಮೂಡಲಿನ ಮುಗಿಲುಗಹಳೆ ಕೇಳಿ
ಹೂಗಳರಳಿದವು ಭ್ರಮರ ತೆರಳಿದವು ಬೆಳಕಿನಲ್ಲಿ ಬಾಳಿ ॥ ೪ ॥
ಮುಗಿಲ ಗಂಗೆಗೂ ತೇಲಿ ಬಿಟ್ಟಿವೋ ನಮ್ಮ ಬಾಳ ದೋಣಿ
ಹಗಲು ಹಿಂಗಲಿಲ್ಲಲ್ಲಿ ಹಿಡಿಯಿತೋ ಧ್ರುವನ ಚಿಕ್ಕೆ ಚುಕ್ಕಾಣಿ
ಬೆಳಕು ಮುಗಿಲ ಹೊರಹೊಮ್ಮಿ ಹರಿದು ಭೂಲೋಕದಲ್ಲಿ ಬಂದು
ತುಂಬಿ ತುಳುಕಿ ನಡೆದಾಗ ಕೇಳಿತಿಳೆ "ಎಲ್ಲಿಗೆಲ್ಲಿಗೆಂದು?"
"ನನಗೆ ಸಂದಿತೆರಡಡಿಯ ದಾನ ಮತ್ತುಳಿಯಿತಿನ್ನು ಒಂದು" ॥ ೫ ॥

—ಸು. ರಂ. ಎಕ್ಕುಂಡಿ

ದೀಪದೇವತೆಯ ವಿಶ್ವರೂಪ ದರ್ಶನ

ಲೇಖಕರು:— ಶ್ರೀ. ಬಿ. ಎಚ್. ಶ್ರೀಧರ, ಎಂ. ಎ.

‘ನಾಗರಿಕತೆ’ ಎಂಬುದರ ಜನನವಾದುದು ಹಲವು ಸಾವಿರ ವರುಷಗಳ ಹಿಂದೆ. ಭೂಮಿಯ ನಾನಾ ಪ್ರದೇಶಗಳಲ್ಲಿ ಮನುಷ್ಯ ಕುಲ ಉತ್ಪನ್ನವಾದಾಗಿನ ಕಾಡು ಬಾಳು ಪಶುಸಹಜವಾಗಿತ್ತು. ನಾಗರಿಕತೆಯ ಇತಿಹಾಸಕಾರರು ಅಲ್ಲಿಂದ ಪ್ರಾರಂಭಿಸಿ ಇಂದಿನ ವರೆಗೆ ಜಗತ್ತಿನ ವಿವಿಧ ಭಾಗಗಳಲ್ಲಿ ಬೆಳೆದು ಉಳಿದು ಅಳಿದು ಪುನರುಜ್ಜೀವಿತವಾದ ಅನೇಕ ನಾಗರಿಕತೆಗಳ ಭಿನ್ನ ಭಿನ್ನ ಮಟ್ಟಗಳನ್ನು ಚಿತ್ರಿಸಿದ್ದಾರೆ. ‘ಅಮೀಬಾ’ ಎಂಬ ಏಕಲವ್ಯ ಜೀವಪಿಂಡದ (Unicellular Organism) ತತ್ವವು ಹೇಗೆ ಮಾನವರಲ್ಲಿ ಗಂಡು-ಹೆಣ್ಣುಗಳ ಐಕ್ಯದಿಂದ ಒಂದು ಮಾನವ ವ್ಯಕ್ತಿಯಾಗಿ ವ್ಯಕ್ತವಾಗುವುದು, ಅಂಥ ಅಭಿವ್ಯಕ್ತಿಗೆ ಕುಟುಂಬ ಎಂಬ ರೂಪ ಹೇಗೆ ಬರುವುದು, ಕುಟುಂಬ ವ್ಯವಹಾರವನ್ನು ಹೇಗೆ ಕಲಿತು ಅವನು ಸಮಾಜರಚನೆಗೆ ಅಡಿಗಲ್ಲಿಟ್ಟನು, ಸಮಾಜ ಬೆಳೆದು ರಾಷ್ಟ್ರ ಜೀವನದಲ್ಲಿ ಹೇಗೆ ರೂಪುಗೊಂಡಿತು, ಎಂಬೀ ವಿಚಾರಮಾಲಿಕೆಯಲ್ಲಿ ಮಾನವರ ಆದ್ಯ ಜೀವನವನ್ನು ಕಾಣಬಹುದು.

ಕಾಲ ಹೋದಹಾಗೆ ಹೆಂಗಸು ಚಕಮುಕಿ ಕಲ್ಲನ್ನು ಆಕಸ್ಮಿಕವಾಗಿ ಕಂಡು ಬಡಿದು ಬೆಂಕಿ ಮಾಡಿದಳಂತೆ. ಅಂದಿನಿಂದ ಇಂದಿನವರೆಗೆ ಹೆಂಗಸೇ ಅಡಿಗೆಯ ಮನೆಯ ಅಧಿಕಾರಿ, ಆರೋಗ್ಯಶಾಖೆಯ ಮಂತ್ರಿ, ಗೃಹಸ್ವಾಮಿನಿ ಎನಿಸಿಕೊಂಡು ನಾಗರಿಕತೆಯನ್ನು ತೋಳ ತೊಟ್ಟಿಲಲ್ಲಿಟ್ಟು ತೂಗುತ್ತಿದ್ದಾಳೆ! ಇದೇ ಬೆಂಕಿಯ ಉದ್ಗಮ. ಅಗ್ನಿದೇವನು ಮೊದಲ ಬಾರಿಗೆ ಮಾನವನಿಗೆ ಪ್ರತ್ಯಕ್ಷನಾದುದು. ಅದರಿಂದ ‘ಅಗ್ನಿರ್ವೈ ದೇವಾನಾಮವಮಃ’ ಅಗ್ನಿ ದೇವರಲ್ಲಿ ಕೆಳಗಿನವ-ಅರ್ಥಾತ್ ಮಾನವ ಲೋಕಕ್ಕೆ ಬಂದಿಳಿದವ—ಎಂಬುದು ಸಾರ್ಥಕವಾಯಿತು. ಈ ಅಗ್ನಿಯನ್ನು ಹೆಂಗಸು ಅಡಿಗೆಗೆ ಬಳಸಿಕೊಂಡರೆ ಗಂಡಸು ಅಡಿಗೆಯನ್ನು ದೈವಾರ್ಪಣಮಾಡಲು ಬಳಸಿಕೊಂಡನು. ಅದೇ ಬೆಂಕಿಯ ಸಹಾಯದಿಂದ ಮಾಡುವ ಯಜ್ಞಕ್ಕೆ ನಾಂದಿಯಾಯಿತು. ಶಾಕ ಮಾಂಸಾಹಾರಗಳನ್ನು ಈ ಅಗ್ನಿಗೆರೆದು ಪ್ರಾಕೃತಿಕ ಕಾರ್ಯಗಳಿಗೆ ಕಾರಣರಾದ ಅದೃಶ್ಯ ದೇವತೆಗಳಿಗೆ ಸಮರ್ಪಣ ಮಾಡುವುದು ಎಲ್ಲೆಲ್ಲೂ ರೂಢಿಗೆ ಬಂದಿತು. ಗುಂಪು ಗುಂಪುಗಳಲ್ಲಿ ಯುದ್ಧ ನಡೆದಾಗ ಸೋತ ಮನುಷ್ಯರನ್ನು ವಿಜಯೋತ್ಸವದಲ್ಲಿ ರಣದೇವತೆಗೆ ಬಲಿಕೊಡುವುದೂ ಒಂದು ಪೂಜೆಯೆನಿಸಿ, ನರಮೇಧಕೂಡ ಬಳಕೆಗೆ ಬಂದಿತು. ಹೀಗೆ ಅಗ್ನಿ ತಾರಕನಾದುದಲ್ಲದೆ ಮಾರಕನೂ ಆಗಲಾರಂಭಿಸಿದ. ಹೊಟ್ಟೆಯಲ್ಲಿ ಜಠರಾಗ್ನಿಯೆನಿಸಿ, ಜಗತ್ತಿನಲ್ಲಿ ಬಳಕೆಯ ಬೆಂಕಿಯೆನಿಸಿ ಆಕಾಶಾದಿಗಳಲ್ಲಿ ವಿದ್ಯುತ್ತೆನಿಸಿ ಈಗ ಅಣುಶಕ್ತಿಯೆನಿಸಿ ಮೆರೆಯುತ್ತಿರುವ ಈ ಅಗ್ನಿಯ ಪ್ರತಾಪವನ್ನು ಒಂದೆರಡು ಮಾತುಗಳಿಂದ ಬಣ್ಣಿಸಲು ಸಾಧ್ಯವಾದೀತೇ?

ಪ್ರತೀಕಭಾವ

ಮಾನವನಿಗೆ ಮೊದಲು ಸಾಕ್ಷಾತ್ಕಾರವಾದ ಈ ಅಗ್ನಿ ಅನಂತ ಪದಾರ್ಥಗಳ ಪ್ರತೀಕವೆನಿಸಿದ್ದಾನೆ. ಅವನ ಕೆಂಪೇ ಹೆಣ್ಣಿನ ಹಣೆಯಲ್ಲಿ ಮಂಗಲಕರ ಕುಂಕುಮವೆನಿಸಿತು; ವೀರರಲ್ಲಿ ಪರಾಕ್ರಮದ ಗುರುತಾಯಿತು; ಈ ಅಗ್ನಿಯನ್ನು ಉಪಾಸಿಸುವುದೊಂದು ದೊಡ್ಡ ರೂಢಿ ಪ್ರಾಚೀನ ಆರ್ಯರಲ್ಲಿ ಪ್ರಾರಂಭವಾಯಿತು. ಋಗ್ವೇದಾದಿಗಳಲ್ಲಿ ಅಗ್ನಿಸೂಕ್ತವೇ ಪ್ರಾಥಮಿಕ. ಅಗ್ನಿಯಿಲ್ಲದೆ ಯಾವ ಕಾರ್ಯವೂ ಆಗುವಂತಿಲ್ಲ; ಅಗ್ನಿಗೆ ಅಗ್ರಪೂಜೆ, ಗಣಪತಿಪೂಜೆ ಸಲ್ಲಲಾರಂಭವಾಯಿತು. ಆರ್ಯರಿಗೆ ಅಗ್ನಿ ಎಲ್ಲೆಲ್ಲೂ ‘ಪುರೋಹಿತ’ ನಾದನು, ಮುನ್ನಡೆದೋರುವವನಾದನು, ಸರ್ವ ಸಾಮಾಜಿಕ ಕಾರ್ಯಗಳಲ್ಲೂ ಅಗ್ರೇಸರನೆನೆಸಿದನು. ಸರ್ವ ಶುಭಾಶುಭ ಕರ್ಮಕ್ಕೂ ಅಗ್ನಿ ಅನಿವಾರ್ಯನೆನಿಸಿದನು. ಹಿಮಶತ್ರುವಾದ ಅವನು ಆರ್ಯರ ಪರಮ ಮಿತ್ರನಾದನು ಅವನಿಂದಲೇ ಅವರು ವೀರ್ಯ, ತೇಜ, ಬಲ, ಧೃತಿಗಳನ್ನು ಪಡೆವಂಥವರಾದರು. ಪಾಶ್ಚಾತ್ಯರಲ್ಲಿ ಉತ್ಸವದಲ್ಲೂ ಯುದ್ಧದಲ್ಲೂ ಹಿಂದೆ Bon-fire ಶಿಬಿರಾಗ್ನಿಯುರಿಸುವುದು ಪದ್ಧತಿಯಾಗಿತ್ತು. ಇಂದಿಗೂ ದನಗಾಹಿಗಳು ಅರೆಗಾಡಿನ ಪ್ರದೇಶಗಳಲ್ಲಿ ಕಸಕಡ್ಡಿಗಳಿಗೆ ಬೆಂಕಿ ಹಚ್ಚಿಸುತ್ತ ಕುಳಿತು ಆನಂದಿಸುವುದನ್ನು ನಮ್ಮ ಹಳ್ಳಿಗಾಡುಗಳಲ್ಲಿ ಕಾಣಬಹುದು; ಉತ್ಸವದಲ್ಲೂ ವ್ಯಸನದಲ್ಲೂ ಬದುಕಿಗೂ ಸಾವಿಗೂ ಅಗ್ನಿಯ ನೆರವು ಅಗತ್ಯವೆನಿಸಿರುವುದು ನಮ್ಮೆಲ್ಲರ ನಿತ್ಯಾನುಭವವಾಗಿದೆ.

ಔಂಧಿನ ಸಾತವಳೇಕರರು ತಮ್ಮ ದೈವತಸಂಹಿತೆಯಲ್ಲಿ ಅಗ್ನಿಯನ್ನು ‘ಮನು’ ಎಂದು ಸಾಧಿಸಿದ್ದಾರೆ. ಅವರ ಪ್ರಕಾರ ಅವನೇ ಆದಿ ಮಾನವ. ಕೆಲವು ಕ್ಷತ್ರಿಯ ವಂಶಗಳು ಅಗ್ನಿಕುಲದವೆಂದು ಇಂದಿಗೂ ಕರೆದುಕೊಳ್ಳುತ್ತವೆ ಎಂಬುದಕ್ಕೆ ಇತಿಹಾಸ ನಿದರ್ಶನ ಕೊಡುತ್ತದೆ. ‘ತ್ವಾಮಗ್ನೇ ಪ್ರಥಮಮಾಯುಂ’ ಎಂಬ ಮಂತ್ರದ ಆಧಾರದ ಮೇಲೆ ಶ್ರೀ ಸಾತವಳೇಕರರು ಮನುಷ್ಯಪಿತನೆಂದು ಅಗ್ನಿಯನ್ನು ವೇದವೇತ್ತರು ಭಜಿಸಿದುದಾಗಿ ಸಾರುತ್ತಾರೆ. ಅಲ್ಲಿಂದ ಮುಂದೆ ವಿವಿಧ ಮಂತ್ರಗಳ ಅರ್ಥವಿಸ್ತಾರವನ್ನು ಆಧರಿಸಿ ಅವರು ಅಗ್ನಿಯನ್ನು ‘ಅಂಗಿರಸ್’ ಎಂದರೆ ಜೀವನರಸ ಅಥವಾ ಜೀವಸತ್ವ (Protoplasm) ಎಂದೂ ವೀರ್ಯರೂಪಿಯಾಗಿ ದೇವತೆಗಳೊಡನೆ ಆತ್ಮತ್ವ ಪ್ರಭಾವದಿಂದ ಯೋನಿಸ್ಥನಾಗಿ ಸೃಷ್ಟಿಗೆ ಕಾರಣನಾಗುತ್ತಾನೆಂದೂ ಬುದ್ಧಿಗಳಲ್ಲಿ ಪ್ರಥಮ ಬುದ್ಧಿಯೆಂದೂ ಅವನ ವಿಕಾಸ ಆತ್ಮ, ಬುದ್ಧಿ, ಮನ, ಇಂದ್ರಿಯ, ಶರೀರ, ಜಾತಿಗಳಲ್ಲಿ ಆಯಿತೆಂದೂ ವರ್ಣಿಸಿದ್ದಾರೆ. ಇಷ್ಟಲ್ಲದೆ ವ್ಯಕ್ತಿ, ಸಮಾಜ, ರಾಷ್ಟ್ರ ಮತ್ತು ವಿಶ್ವ ಎಂಬ ರೂಪಗಳ ಮಾನವ ಸಂತತಿಯ ಪ್ರತೀಕವೆಂದೂ ಸಂತತಿಯ ಮೂಲಕ ಮಾನವಕುಲವನ್ನು

ಅಗ್ನಿ ಮನುಷ್ಯನ ನಾಗರಿಕತೆಯ ಮೊದಲ ಚಿಹ್ನ. ಅದರಿಂದಲೇ ಪ್ರಾಚೀನ ಸಂಸ್ಕೃತಿಯಲ್ಲಿ ಎಲ್ಲೆಲ್ಲೂ ಅಗ್ನಿಗೆ ಅದ್ವಿತೀಯವಾದ ಸ್ಥಾನ. ಅವನು ವೀರ್ಯದ, ತೇಜದ, ಜ್ಞಾನದ ದ್ಯೋತಕನಾಗಿ ಮನುಷ್ಯಬುದ್ಧಿಯನ್ನು ಸೆರೆಹಿಡಿದು ಬಿಟ್ಟಿದ್ದಾನೆ. ಇದು ಒಂದು ದೇಶಕ್ಕೆ, ಒಂದು ಧರ್ಮಕ್ಕೆ ಸಂಬಂಧಿಸಿದ ಮಾತಲ್ಲ. ಅಗ್ನಿಯಿಲ್ಲದೆ ಯಾವ ಧರ್ಮಕರ್ಮವೂ ಎಲ್ಲಿಯೂ ಆಗುವದಿಲ್ಲವೆಂದರೆ ಹೆಚ್ಚಲ್ಲ. ಆ ಅಗ್ನಿ ಹೋಮಾಗ್ನಿಯಿರಬಹುದು, ಬರೀ ಬತ್ತಿಯ ದೀಪವಿರಬಹುದು. ಪ್ರಾಚೀನ ಹೋಮಾಗ್ನಿಯೇ ಇಂದು ಹಿಂದೂ ಧರ್ಮದಲ್ಲಿಯೂ ದೀಪವೆಂಬ ಸೂಕ್ಷ್ಮರೂಪದಲ್ಲಿ ಗುಡಿಗುಂಡಾರಗಳಲ್ಲಿ ರಾಜಿಸುತ್ತಾನೆ. ಮನುಷ್ಯಬುದ್ಧಿಯ ಮುಂಬೆಳಗಿನಿಂದ ಇಂದಿನ ವರೆಗೆ ವಿವಿಧ ಧರ್ಮಗಳಲ್ಲಿ ಅಗ್ನಿಯ —ದೀಪದ— ಕಲ್ಪನೆಯ ವಿಕಾಸವೆಂತಾಯಿತೆಂದು ಶ್ರೀ. ಶ್ರೀಧರರು ಇಲ್ಲಿ ತೋರಿಸಿಕೊಟ್ಟಿದ್ದಾರೆ.

ಅಮರವೆನಿಸಿದ ವೃದ್ಧನಾಗರಿಕ (Patriarch) ಎಂದೂ ಅವರು ಕರೆಯುತ್ತಾರೆ ಈ ಅಗ್ನಿಯನ್ನು.

ಸೃಷ್ಟಿಕರ್ತೃತ್ವ

ಪುರಾಣದಲ್ಲಿ ಈಶ್ವರನ ವೀರ್ಯವನ್ನು ಅಗ್ನಿ ಎಂದು ಹೇಳಲಾಗಿದೆ. ಇದು ಅಗ್ನಿಗೆ ಸೃಷ್ಟಿಕರ್ತೃತ್ವವಿದೆ ಎಂಬ ಕಲ್ಪನೆಗೆ ಮತ್ತೊಂದು ಆಧಾರ. ಅಗ್ನಿಯ ಸೃಷ್ಟಿಕರ್ತೃತ್ವವನ್ನೂ ಜೀವನಾಧಾಯಕತೆಯನ್ನೂ ಭೂಗೋಲ ಖಗೋಲ ಶಾಸ್ತ್ರಗಳೂ ಎತ್ತಿ ಹಿಡಿಯುವುವು. ಲಕ್ಷಗಟ್ಟಲೆ ವರ್ಷಗಳ ಹಿಂದೆ ನಕ್ಷತ್ರಗಳಲ್ಲಿ ಒಂದೆನಿಸುವ ಸೂರ್ಯನೆಂಬ ಅಗ್ನಿಪಿಂಡದೊಳಗೆ ರಾಸಾಯನಿಕ ಕ್ರಿಯೆಯುಂಟಾಗಿ ಉಲ್ಕೆಯ ರೂಪದಲ್ಲಿ ಈ ಭೂಮಿ ಅಲ್ಲಿಂದ ಸಿಡಿದುಬಿದ್ದಿತು. ಅತ್ಯುಷ್ಣತೆ ಆರಿ ಹದಕ್ಕೆ ಬಂದೊಡನೆ ಸಸ್ಯಗಳೂ ಪ್ರಾಣಿಗಳೂ ಕ್ರಮೇಣ ಹುಟ್ಟಿಕೊಂಡವು. ಈ ಜೀವಿಗಳಿಗಾದರೂ ತೇಜೋಗೋಲವಾದ ಸೂರ್ಯನ ಕಿರಣಗಳೇ ಜೀವನಾಧಾಯಕವೆನಿಸಿವೆ. ಭೂಮಿಯಲ್ಲಿರುವಂತೆ ಚಂದ್ರಗೋಲದಲ್ಲಿ ಉಷ್ಣಾಂಶವಿಲ್ಲದುದರಿಂದ ಅದು ಜೀವಿಗಳಿಗೆ ಆಶ್ರಯ ಕೊಡಲಾರದಾಗಿದೆ. ಮಂಗಳ ಗೋಲದಲ್ಲಿ ಮನುಷ್ಯರಿರಬೇಕೆಂದು ಖಗೋಲಶಾಸ್ತ್ರಜ್ಞರು ತರ್ಕಿಸಲು ಅಲ್ಲಿ ಅದಕ್ಕೆ ಅಗತ್ಯವಾದ ವಾತಾವರಣವಿರುವುದನ್ನು ಕಂಡದ್ದೇ ಕಾರಣ. ಜೀವಿಗಳ ಶರೀರದಲ್ಲಿ ಶಾಕವು ಹುಟ್ಟುವಾಗಲೇ ಇರುವುದಲ್ಲದೆ ಶಾಕವಾರುವುದೇ ಅವುಗಳ ಮರಣಕ್ಕೆ ಕಾರಣವಾಗುತ್ತದೆ. ಯಂತ್ರಾದಿಗಳ ಚಲನಕ್ಕೆ ವಿದ್ಯುದ್ರೂಪದಲ್ಲಿ ಅಗ್ನಿ ಕಾರಣನಾಗುವಂತೆ ಶರೀರಯಂತ್ರದ ಚಲನಕ್ಕೂ ಅವನ ತೇಜಸ್ಸೇ ಕಾರಣ. ವಿದ್ಯುದ್ರೂಪದಲ್ಲಿ ಅವನು 'ಅಬಿಂಧನ' ಅಥವಾ ನೀರನ್ನು ಕಟ್ಟಿಗೆಯನ್ನಾಗಿ ಬಳಸಿಕೊಂಬವನಾದರೆ ಶರೀರದಲ್ಲಿ ಜಠರಾಗ್ನಿಯಾಗಿ ಆಹಾರ ದ್ರವ್ಯವನ್ನು ಕಟ್ಟಿಗೆಯನ್ನಾಗಿ ಉಪಯೋಗಿಸಿಕೊಳ್ಳುತ್ತಾನೆ.

ಅಗ್ನಿಯ ಬಿರುದುಗಳು

ಇದನ್ನು ತಿಳಿದಮೇಲೆ ವೈಶ್ವಾನರ, ಧನಂಜಯ, ಜಾತವೇದ, ತನೂನಪಾತ್, ರೋಹಿತಾಶ್ವ, ಹಿರಣ್ಯರೇತ, ಸಪ್ತಾರ್ಚಿ, ಸಪ್ತಜಿಹ್ವ ಮತ್ತು ಸರ್ವದೇವಮುಖ ಎಂಬ ಬಿರುದುಗಳನ್ನು ಪರಿಶೀಲಿಸಬಹುದು. ವಿಶ್ವನರ ಎಂದರೆ ವಿಶ್ವದ ಮಾನವರಲ್ಲಿ ಅಡಗಿರುವ ಮಾನವ್ಯ ತೇಜಸ್ಸು. ಅಗ್ನಿಯು ತೇಜೋರೂಪದಲ್ಲಿ ಸಕಲ ಮಾನವಕುಲದ ಚಟುವಟಿಕೆಗಳಿಗೆ ಕಾರಣವಾದ ಶಕ್ತಿಯೆನಿಸಿರುವನು. ನಿಜವಾದ, ಪ್ರಾಮಾಣಿಕ ಸರ್ವಹಿತದೃಷ್ಟಿಯಿಂದ ಒಂದು ಅಂತಾರಾಷ್ಟ್ರೀಯ ಸಂಘವೇರ್ಪಟ್ಟರೆ ಅದಕ್ಕೆ ವಿಶ್ವನರ ಎಂದೂ ಅದರ ಶಕ್ತಿಗೆ ವೈಶ್ವಾನರ ಎಂದೂ ಕರೆಯಬಹುದು. ಎರಡನೆಯದು ಧನಂಜಯ. ದೇಹ ಮತ್ತು ಮನಸ್ಸುಗಳ ಸಂವರ್ಧನೆಗೆ ಅವಶ್ಯವಾದ ವಸ್ತುವೇ ಧನ. ಭೌತಿಕವಾಗಿ ಶರೀರಕ್ಕೆ ಸುಖಕರವಾದ ಸರ್ವವಸ್ತುಗಳನ್ನೂ ಜೀರ್ಣಿಸಿಕೊಡುವವನು ಜಠರಸ್ಥ ಅಗ್ನಿ, ಅಂಥ ಜೀರ್ಣವಸ್ತುಗಳಿಂದ ಶರೀರದಲ್ಲಿ ಸಾಮರ್ಥ್ಯವನ್ನು ಹುಟ್ಟಿಸಿ ತನ್ಮೂಲಕ ವಸ್ತುಸಂಗ್ರಹದ ವಿವಿಧ ಕಾರ್ಯಗಳಲ್ಲಿ ಮನುಷ್ಯನು ಮಗ್ನನಾಗುವುದು ಅವನಿಂದಲೇ. ದೇಹಪೋಷಣದಿಂದ, ಅದಕ್ಕೆ ಪಂಚೇಂದ್ರಿಯಗಳ ಸಹಾಯದಿಂದ ಆಗುವ ಅನುಭವಗಳಿಂದ ಮನಸ್ಸಿಗೆ ಬೇಕಾದ ಜ್ಞಾನಧನ ಲಭಿಸಲೂ ಅವನೇ ಕಾರಣ. ಹೀಗೆ ಮನುಷ್ಯನಿಗೆ ಧನಸಂಚಯ ಮಾಡಿಕೊಡುವವನು ಅಗ್ನಿಯೇ. ಆದುದರಿಂದ ಅವನು ಧನಂಜಯ.

ಜಾತವೇದವೆಂದರೆ ಹುಟ್ಟಿದವರೆಲ್ಲರನ್ನೂ ಬಲ್ಲವನೆಂಬುದು ಒಂದು ಅರ್ಥ. ಹುಟ್ಟಿಸುವ ತೇಜೋರೂಪಿಯಾದ ಬ್ರಹ್ಮಶಕ್ತಿ ಅಗ್ನಿಯೇ ಆದುದರಿಂದ ಅವನು ಹುಟ್ಟಿದ ಚರಾಚರಗಳನ್ನು ಬಲ್ಲವನಾಗಿರುವುದು ಸಹಜವಾಗಿಯೇ ಇದೆ. ಯಾವನಿಂದ ವೇದಗಳು ಹುಟ್ಟಿದವೋ ಅವನು ಜಾತವೇದ ಎಂಬುದು ಇನ್ನೊಂದು ಅರ್ಥ. ವೇದವೆಂದರೆ ಜ್ಞಾನ. ಜೀವಸಂಚಾರವಾದಲ್ಲದೆ ಶರೀರಿಗೆ ಜ್ಞಾನಸ್ಪರ್ಶವಾಗದು. ಅಂಥ ಜೀವಸಂಚಾರಕ್ಕೆ ಅಗ್ನಿಯೇ ಕಾರಣನಾಗಿರುವುದರಿಂದ ಅವನಿಂದಲೇ ಮೂಲತಃ ಮಾನವನಿಗೆ ಜ್ಞಾನಬೋಧವಾಗುವುದು ಸ್ಪಷ್ಟವಿದೆ. ಆದುದರಿಂದ ಅಗ್ನಿಬಲದಿಂದ ಅರ್ಥಾತ್ ಬೌದ್ಧಿಕ ತೇಜಸ್ಸಿನ ಬಲದಿಂದ ಜ್ಞಾನ ಹುಟ್ಟುತ್ತದೆ. ಅದರಿಂದಲೇ ಅವನು ಜಾತವೇದನೆನಿಸಿದನು. ತನೂನಪಾತ್ ಎಂಬುದರ ಅರ್ಥವೂ ಸ್ಫುಟವಿದೆ. ತನು ಅಂದರೆ ಶರೀರವು ನಪಾತ್ ಬೀಳದಂತೆ ಹಿಡಿಯುವವನು ಅಗ್ನಿ. ಕೈಕಾಲು ತಣ್ಣಗಾಯಿತೆಂದರೆ ಮನುಷ್ಯ ಹೆಣವಾಗುವನೆಂಬುದು ಎಲ್ಲರ ಅನುಭವಕ್ಕೂ ಬಂದ ಸಂಗತಿ. ಶರೀರವು ಸಚೇತನವೆನಿಸಿ ಕಾರ್ಯಪಟುತ್ವವನ್ನು ಸಂಪಾದಿಸಲು ಅಗ್ನಿಯ ಅಸ್ತಿತ್ವ ಆವಶ್ಯಕ. ಆದುದರಿಂದ ಅವನು ತನೂನಪಾತ್ ಎಂಬ ಬಿರುದನ್ನು ಹೊತ್ತಿದ್ದಾನೆ. ಮುಂದಿನದು ರೋಹಿತಾಶ್ವ ಕೆಂಪುಬಣ್ಣದ ಕುದುರೆಗಳನ್ನುಳ್ಳವನೆಂದು ಅದರ ಅರ್ಥ. ಇದು ಅಗ್ನಿಗೆ ಮಾನವಸಹಜವಾದ ಆಕೃತಿ ಮತ್ತು ಕಾರ್ಯಪಟುತ್ವವನ್ನು ಕಲ್ಪಿಸಿ (Anthropomorphically) ಹೇಳಿದ ವಿಶೇಷಣ. ಈ ರೂಪಕೋಕ್ತಿಯು ಅಗ್ನಿಯ ಜ್ವಾಲೆಗಳನ್ನು ನಿರ್ದೇಶಿಸುತ್ತದೆ. ಜ್ವಾಲಾವಾಹಿಯಾಗಿ ಅವನು ಪ್ರಪಂಚದಲ್ಲಿ ಪ್ರವಹಿಸುತ್ತಾನೆ. ಜ್ವಾಲೆಗಳೇ ಅವನ ಕುದುರೆಗಳು. ಕೆಲವೊಮ್ಮೆ ಜ್ವಾಲೆ ಅಗ್ನಿಯ ಹೆಂಡತಿ ಎಂದೂ ವ್ಯವಹರಿಸುವುದುಂಟು. ಸೃಷ್ಟಿಯ ಮೂಲ ಅರ್ಧನಾರೀಶ್ವರತತ್ವದಲ್ಲಿ ಅಡಗಿರುವುದರಿಂದ ಪ್ರತಿಯೊಂದು ದೇವತೆಗೂ ತದವಿನಾಭಾವಿಯಾದ ಹೆಂಡತಿಯನ್ನು ಕಲ್ಪಿಸುವುದು ರೂಢಿಯಾಗಿದೆ.

ಸಪ್ತಾರ್ಚಿ, ಸಪ್ತಜಿಹ್ವ ಎಂಬ ಬಿರುದುಗಳೂ ಅಗ್ನಿಯ ಜ್ವಾಲಾಮುಖಿತ್ವವನ್ನು ಸೂಚಿಸುವುವು. ಆದರೆ ಸಪ್ತಕ್ಕೆ ವಿಶಿಷ್ಟಾರ್ಥವಿದೆ. ಅಗ್ನಿಯ ಅಥವಾ ಸೂರ್ಯಸ್ಥ ಅಗ್ನಿಯ ಬೆಳಕಿನಲ್ಲಿ ಏಳು ಬಣ್ಣಗಳು ಅಡಗಿರುವುದನ್ನು, ಅವನು ಆತ್ಮರೂಪದಲ್ಲಿ ಶರೀರದಲ್ಲಿರುವಾಗ ಉಂಟಾಗುವ ಕಣ್ಣು, ಕಿವಿ, ಮೂಗು, ನಾಲಿಗೆ, ಚರ್ಮ, ಮನ, ಅಹಂಕಾರಗಳ ವಿವಿಧಾನುಭವಗ್ರಾಹಕ ಶಕ್ತಿಗಳನ್ನು ಸಪ್ತಪದ ಸೂಚಿಸುತ್ತದೆ. ಈ ಏಳು ವಿಧದ ಅನುಭವಗಳಿಗೆ ಪ್ರಚೋದಕಗಳೆನಿಸಿ ಪೃಥ್ವಿ, ಜಲ, ತೇಜ, ವಾಯು, ಆಕಾಶ, ವಿದ್ಯುತ್ ಅಥವಾ ಇಂದ್ರತತ್ತ್ವ (ವಿಚಾರ) ಮತ್ತು ಅವಿತ್ತತ್ವ (ವ್ಯಕ್ತಿಭಾವ) ಎಂಬ ಏಳಿವೆ.

ಕ್ರೈಸ್ತರಲ್ಲಿ

ದೇವರ ಆರಾಧನೆಯಲ್ಲಿ ಅನೇಕ ಧರ್ಮಗಳು ದೀಪವನ್ನು ಬಳಸುವುದು ಅನಾದಿಕಾಲದಿಂದ ಬಂದ ರೂಢಿ. ಕ್ರಿಶ್ಚಿಯನ್ನರಲ್ಲಿ ಚರ್ಚಿನ ಪ್ರಾರ್ಥನೆ ನಡೆವಾಗ ಮೇಣದ ಬತ್ತಿಯನ್ನು ಹಚ್ಚುವುದು ಒಂದು ವಿಧಾನ. ಪಾಲಿಸ್ತಾನದಲ್ಲಿ ಮೊದಲು ಯಹೂದಿಗಳಿದ್ದರು. ಅವರ ನಡುವೆ ಯೇಸುಕ್ರಿಸ್ತನ ಧರ್ಮ ಸಂಕಟಕ್ಕೀಡಾಯಿತು. ಕ್ರಿಸ್ತ ಮತ್ತು ಅವನ ಅನುಯಾಯಿಗಳನ್ನು ನಾನಾವಿಧವಾದ ಹಿಂಸೆಗಳಿಗೆ ಅವರು ಗುರಿಪಡಿಸಿದರು. ಆಗ ಕೆಲವೊಮ್ಮೆ ಓಡಿಹೋದ ಕ್ರಿಸ್ತಾನುಯಾಯಿಗಳು ಪರ್ವತಪ್ರದೇಶಗಳಲ್ಲಿ ಗುಹಾವಾಸಿಗಳಾಗಿ ಇರತೊಡಗಿದರು. ಅಂಥವರು ಆ ಕತ್ತಲುಗವಿಯಲ್ಲಿ ಪ್ರಾರ್ಥನೆಮಾಡಲು ಬೆಳಕಿಗಾಗಿ ಮೇಣದ ಬತ್ತಿಯನ್ನು ಹಚ್ಚಿದ್ದನ್ನು ಇಂದಿನ ವರೆಗೆ ಸ್ಮಾರಕವಾಗಿ ಪ್ರಾರ್ಥನಾವಸರದಲ್ಲಿ ಅನುಕರಿಸುತ್ತಿದ್ದಾರೆ.

ಕ್ರಿಶ್ಚಿಯನ್ನರ ಧರ್ಮಗ್ರಂಥವಾದ ಬೈಬಲ್ಲಿನಲ್ಲಿ ಬೆಂಕಿ ಬೆಳಕುಗಳನ್ನು ಅನೇಕ ರೂಪಕಾರ್ಥಗಳಲ್ಲಿ, ಪ್ರತೀಕಾರ್ಥಗಳಲ್ಲಿ ಬಳಸಲಾಗಿದೆ. 'Everyone that doeth evil hateth light– ಕೆಡುಕು ಮಾಡುವವರೆಲ್ಲರೂ ಬೆಳಕನ್ನು ದ್ವೇಷಿಸುತ್ತಾರೆ' ಎಂಬಲ್ಲಿ ಬೆಳಕಿಗೆ ಸದ್ಗುಣವೆಂಬರ್ಥ ಹೊರಡುತ್ತದೆ. 'I am the light of the world ನಾನು ಜಗತ್ತಿನ ಬೆಳಕು. He that followeth me shall have the light of life. ನನ್ನನ್ನು ಅನುಸರಿಸುವವನು ಜೀವನದ ಬೆಳಕನ್ನು ಕಾಣುತ್ತಾನೆ. He stumbleth not because he seeth light– ಅವನು ಎಡಹುವದಿಲ್ಲ, ಏಕೆಂದರೆ ಅವನು ಬೆಳಕನ್ನು ಕಾಣುತ್ತಾನೆ. He stumbleth because there is no light in him ಅವನು ಎಡಹುವುದು ಅವನಲ್ಲಿ ಬೆಳಕಿಲ್ಲದುದರಿಂದ' ಎಂಬ ವಾಕ್ಯಗಳಲ್ಲಿ ಬೆಳಕೆಂದರೆ ದೇವರು, ಜೀವನ(ಜೀವ), ಪ್ರಕಾಶ, ಜ್ಞಾನ ಎಂದು ಮುಂತಾಗಿ ಅರ್ಥವಾಗುತ್ತದೆ. ಹಿಂದುಗಳಲ್ಲಾದರೂ ಇವೇ ಅರ್ಥಗಳಲ್ಲಿ ಬೆಳಕನ್ನು ಅನೇಕ ಗ್ರಂಥಗಳಲ್ಲಿ ಬಳಸಲಾಗಿದೆ. ತಮಸ್ ಅಥವಾ ಕತ್ತಲು ಅಜ್ಞಾನದ ಮತ್ತು ಜ್ಯೋತಿಸ್ ಅಥವಾ ಬೆಳಕು ಜ್ಞಾನದ ಪ್ರತೀಕವೆನ್ನಲಾಗುತ್ತದೆ. ದೇವರನ್ನು ಜ್ಯೋತಿರ್ಮಯನೆಂಬಾಗ ಇದೇ ಅರ್ಥವಿದೆ. ಸತ್ಯ, ಜ್ಞಾನ, ಪ್ರೇಮ, ಸೌಂದರ್ಯ, ಶ್ರದ್ಧೆ ಆನಂದ, ಸಾತ್ವಿಕತೆಗಳನ್ನು ಬೆಳಕು ಬಿಂಬಿಸುತ್ತವೆ. ಎಂಬುದಕ್ಕೆ ಎಷ್ಟೋ ವಾಕ್ಯಗಳನ್ನು ಉದ್ಧರಿಸಿ ಹೇಳಬಹುದು.

ಚಿಕ್ಕ ಚರ್ಚುಗಳಲ್ಲಿ ೬ ಮೇಣದ ಬತ್ತಿಗಳನ್ನೂ ದೊಡ್ಡವುಗಳಲ್ಲಿ ೭ ನ್ನೂ ಹಚ್ಚುತ್ತಾರೆ. ಈ ಏಳು ಉರಿಗಳು ದೇವರ ಏಳು ವರಗಳನ್ನು ಸೂಚಿಸುತ್ತವೆ. ಅವು ಬುದ್ಧಿ, ವಿಚಾರಶಕ್ತಿ, ಜ್ಞಾನ, ಆತ್ಮಬಲ, ಪವಿತ್ರಭಯ, ಶುದ್ಧಭಕ್ತಿ, ಸದ್ಭಾವಗಳು. ವೇದೋಕ್ತ ಅಗ್ನಿಯ ಏಳು ಜ್ವಾಲಾಜಿಹ್ವೆಗಳನ್ನು ಇಲ್ಲಿ ನೆನಪಿಗೆ ತಂದುಕೊಳ್ಳಬಹುದು.

ದೀಪ ಮಂಗಲಕರವೆಂಬುದು ಹಿಂದು ಸಮಾಜದ ನಂಬಿಗೆ ಇದು ಕ್ರಿಶ್ಚಿಯನ್ನರಲ್ಲೂ ಇದೆಯೆನ್ನಲು 'The Candle of the wicked shall be put out– ಕೆಟ್ಟವರ ದೀಪವನ್ನು ಆರಿಸಿ ಬಿಡಲಾದೀತು' ಎಂಬ ಮಾತಿನಲ್ಲಿ ಕಾಣಬಹುದು. ಕ್ರೈಸ್ತ ಸಭೆಯಲ್ಲಿ ದೀಪಗಳನ್ನು ಹಚ್ಚುವ ವಾಡಿಕೆ ಅತಿ ಪ್ರಾಚೀನ ಕಾಲದಿಂದ ಇದೆಯೆಂದು ಹೇಳಲಾಗುತ್ತದೆ. ಕುಮಾರಿ ಮರಿಯಳ ಶುದ್ಧೀಕರಣದ ಹಬ್ಬದ ಆರಾಧನೆಯಲ್ಲಿ ಪ್ರತಿಯೊಬ್ಬ ಕ್ರೈಸ್ತ ಮತ್ತು ಕ್ರೈಸ್ತಳು ಒಂದೊಂದು ದೀಪವನ್ನು ಹಿಡಿದುಕೊಳ್ಳುವ ರೂಢಿ ಇತ್ತು. ಒಂದು ವಿಶೇಷ ವಿಧಿಯಲ್ಲಿ ಶುಭ ವರ್ತಮಾನವನ್ನು ಓದುವವರ ಮುಂದೆ ಮೇಣದ ಬತ್ತಿಯನ್ನು ಹಿಡಿಯುತ್ತಾರೆ.

ದೀಪಕ್ಕಿಂತ ಸುಂದರವಾದುದಿಲ್ಲ. ಅದರ ಕಿರಣಗಳು ಸೂಸುವ ತೇಜಸ್ಸಿನ ಶಾಂತಿಗಿಂತ ಹೆಚ್ಚಿನದಿಲ್ಲ. ಸೃಷ್ಟಿಯ, ವಿಶ್ವದ ರುದ್ರಶಾಂತಿಯ ಸೊಬಗನ್ನು, ಅದ್ಭುತ ಪಾವನತೆಯನ್ನು ಉತ್ತುಂಗ ಉದಾತ್ತತೆಯನ್ನು ಅದಕ್ಕಿಂತ ಹೆಚ್ಚಾಗಿ ಇನ್ನಾವುದೂ ಸೂಚಿಸಲಾರದು. ದೀಪಾವಳಿಯಲ್ಲಿ ಪ್ರಧಾನ ವ್ಯಕ್ತಿಯೆಂದರೆ ಬಲಿಚಕ್ರವರ್ತಿ. ಬಲಿಚಕ್ರವರ್ತಿ ಭಗವಂತನಿಗೆ ನವಮ ವಿಧದ ಭಕ್ತಿಯಾದ ಆತ್ಮಸಮರ್ಪಣ ಮಾಡಿದ ಮಹಾಪ್ರೀತಿಯ ಮೂರ್ತಿ. ಪ್ರೀತಿಯ ಪರಮಾವಧಿ ನಿಃಸ್ವಾರ್ಥ, ನಿಷ್ಕಾಮ ತ್ಯಾಗದಲ್ಲಿದೆ, ಇಂಥ ತ್ಯಾಗದ ಪುಣ್ಯ ಜ್ಯೋತಿ. ದೀಪಾವಳಿಯ ದಿವ್ಯ ನೀಲನೀರದ ಮಧ್ಯಸ್ಥ ವಿದ್ಯುಲ್ಲೇಖೆಯಂತಿರುವ ಅಪ್ರತಿಮ ಸುಂದರನಾದ ಭಗವಾನ್ ಕೃಷ್ಣಪರಮಾತ್ಮನು ಕೂಡ ಬಲಿಯ ಭಕ್ತಿ ಸೌಂದರ್ಯಕ್ಕೆ ಸೋತು ಅವನ ಮನೆಗಾಹಿಯಾದನು. ಈ ಅತ್ಯುಚ್ಚ ನಾಗರಿಕ ಸಂಸ್ಕಾರದ ದಿವ್ಯಪ್ರಕಾಶ ನಾಡಿನಲ್ಲಿ ಬೆಳಗಲಿ ಎಂಬುದೇ ದೀಪಾವಳಿಯ ಸಂದೇಶ, ಬಲಿಯ ಆತ್ಮಬಲಿ.

ಬಂಗಾರದ ಆಭರಣದಿಂದ ಕಿವಿ ಅಲಂಕೃತವಾದರೆ ಅದು ಕೃತಕ; ಸತ್ಕೀರ್ತಿಯೇ ನಿಜವಾದ ಭೂಷಣ. ಬಂಗಾರದ ಬಳೆ ಕೈಗೆ ನಿಜವಾದ ಅಲಂಕಾರವಲ್ಲ; ದಾನವೇ ಅದಕ್ಕೆ ಉತ್ತಮೋತ್ತಮ ನಾಗರಿಕ ಭೂಷಣ. ಪರಾನುಕಂಪಸ್ವಭಾವವುಳ್ಳ ಸತ್ವಶಾಲಿಗಳಾದವರ ದೈಹಿಕ, ಭೌತಿಕ ಮತ್ತು ಆತ್ಮೀಯ ಸಂಪತ್ತುಗಳೆಲ್ಲ ಪರೋಪಕಾರಕ್ಕಾಗಿಯೇ ಎಂಬುದನ್ನು ಮನೋವಾಕ್ಕಾಯ ಕರ್ಮಗಳಿಂದ ಅನುಸರಿಸಿ ತೋರಿದ ಬಲಿಯ ಆತ್ಮಾಗ್ನಿ, ಆತ್ಮದ ಅಮರಜ್ಯೋತಿ ಅನನ್ಯಯವೂ ಅಸದೃಶವೂ ಆಗಿದೆ. ಅವನ ರಾಜ್ಯದಲ್ಲಿ ದಾನವನ್ನು ಸ್ವೀಕರಿಸುವ ಒಬ್ಬ ಪ್ರಜೆಯೂ ಇದ್ದಿಲ್ಲವಂತೆ; ಎಲ್ಲರೂ ದಾನಮಾಡುವ ಶಕ್ತಿ, ಆಸಕ್ತಿಗಳನ್ನುಳ್ಳವರೇ ಇದ್ದರಂತೆ! ಇಂಥ ಆದರ್ಶ ರಾಜ್ಯವು ರಾಮರಾಜ್ಯಕ್ಕೂ ಧರ್ಮರಾಜ್ಯಕ್ಕೂ ಮಿಗಿಲಲ್ಲವೇ? ಈ ಪರೋಪಕಾರ, ಪರಹಿತ ಬುದ್ಧಿ, ಪರಸುಖಕಾರಕತೆ ತುಂಬಿ ತುಳುಕುವ ಬಲಿಯ ಪ್ರೇಮ ಜ್ಯೋತಿ ಪ್ರತಿಯೊಂದು ಮನೆಯ, ಕುಟುಂಬದ, ಗೃಹಸ್ಥ–ಗೃಹಿಣಿಯ ಹಣತೆಯಲ್ಲಿ ಉರಿಯಲೆಂಬುದೇ ದೀಪಾವಳಿಯ ಅಗ್ನ್ಯಾರಾಧನೆಯ ಮುಖ್ಯ ಅರ್ಥ. ಗೃಹಸ್ಥನು ತನ್ನ ಅರ್ಧಾತ್ಮವೆನಿಸಿದ ಅರ್ಧಾಂಗಿಗೆ ಆರ್ಜಿಸಿದ ಐಶ್ವರ್ಯವನ್ನು ಈ ರೀತಿ ವಿನಿಯೋಗ ಮಾಡಬೇಕೆಂದು ತನ್ನ ತ್ಯಾಗಬುದ್ಧಿಯನ್ನು ದೀಪಜ್ಯೋತಿಯ ರೂಪದಿಂದ ಕೊಡುತ್ತಾನೆ. ತನ್ನ ಅರ್ಧಾತ್ಮವೂ ಅರ್ಧಾಂಗನೂ ಎನಿಸಿದ ಪತಿಯ ಈ ತ್ಯಾಗ ವೀರತೆಯ ಬೆಳಕನ್ನು ಮೆಚ್ಚಿ ಆನಂದದಿಂದ ತದನುಕರಣಶೀಲಳಾಗಿ ಪತ್ನಿ ಸಹಜೀವಿಗಳಿಗೆ, ಸಮಾಜಕ್ಕೆ, ರಾಷ್ಟ್ರಕ್ಕೆ ಇಂಥ ನಿಷ್ಕಾಮ ಕರ್ಮದಿಂದ ಸೇವೆ ಸಲ್ಲಿಸುತ್ತಾಳೆ ಎಂಬುದೇ ಹಿಂದು ಸಂಸ್ಕೃತಿಯ, ಧರ್ಮದ, ನಾಗರಿಕತೆಯ ಒಳಗಿನ ತಿರುಳು. ಭೌತಿಕ ಪ್ರಪಂಚದಲ್ಲಿ ಗಂಡಸು ಆರ್ಜಿಸುವುದಲ್ಲಿ ಸಮರ್ಥನಿರುವುದು ಅನುಭವವೇದ್ಯವಾಗಿದೆ. ಅಂಥ ಆರ್ಜಿಸಿದ ಸಂಪತ್ತನ್ನು ವೃದ್ಧಿಮಾಡಿ, ಪೋಷಿಸಿ, ರಕ್ಷಿಸಿ, ಪಾತ್ರಾಪಾತ್ರವಿವೇಕದಿಂದ ಸದ್ವಿನಿಯೋಗ ಮಾಡಿ ತನ್ನ ಮತ್ತು ತನ್ನ ಪ್ರಿಯತಮನ ಬಾಳಿನ ಸಾರ್ಥಕತೆಯನ್ನು ಸಾಧಿಸುವುದು ಪ್ರಿಯತಮೆಯ ಕರ್ತವ್ಯ. ಈ ಸಂಪತ್ತಿನ ಆರ್ಜನಶಕ್ತಿ ಅಗ್ನಿ. ಅವನು ಪುರುಷಶಕ್ತಿ, ಅದನ್ನು ಪುರುಷನು ಸ್ತ್ರೀಗೆ ಬಲಿದೀಯುತ್ತಾನೆ; ಅದನ್ನು ಸ್ವೀಕರಿಸುವ ಸ್ತ್ರೀ ಕುಟುಂಬವೆಂಬ ಸಾಮಾಜಿಕ ಆರ್ಥಿಕ ಮತ್ತು ರಾಜಕೀಯ ಘಟಕದಲ್ಲಿ (unit) ಬಳಸಿ ವ್ಯಕ್ತಿಜೀವನ ಹೇಗೆ ರಾಷ್ಟ್ರಜೀವನದಲ್ಲಿ ದೀಪದ ಬೆಳಕಿನಂತೆ ಹಬ್ಬುತ್ತದೆ ಎಂಬುದನ್ನು ತೋರಿಸುತ್ತಾಳೆ. ಪ್ರಜಾರೂಪದಿಂದ, ಅರ್ಥರೂಪದಿಂದ, ವಿದ್ಯಾರೂಪದಿಂದ, ಸೌಜನ್ಯ–ಸೌಂದರ್ಯ ರೂಪದಿಂದ, ಮೈತ್ರಿ ಕರುಣಾದಿ ಚತುರ್ಮುಖವಾದ ಆತ್ಮಯೋಗದ ರೂಪದಿಂದ ಗೃಹಸ್ಥನು ಗೃಹಿಣಿಯ ದ್ವಾರಾ ರಾಷ್ಟ್ರಜೀವನಪೋಷಕನಾಗುತ್ತಾನೆ ಮತ್ತು ಗೃಹಿಣಿ ತನ್ನ ಔಚಿತ್ಯಜ್ಞತೆಯಿಂದ ಗೃಹಸ್ಥನ ಈ ದಿವ್ಯ ಗುಣಕ್ಕೆ ಪೋಷಕಳೂ ಧಾರಕಳೂ ವಿತರಣ ಕರ್ತ್ರಿಯೂ ಆಗುತ್ತಾಳೆ ಎಂಬುದು ಅಗ್ನಿಯ ಪರಮಾರ್ಥ, ಸಾರ್ಥಕ ಅರ್ಥ, ವಿಶ್ವರೂಪಗಳಲ್ಲಿ ನಿತ್ಯವಾದ ಏಕರೂಪ!



ಶ್ರೀ. ಬಾಳ ಗಂಗಾಧರ ಖೇರ
(ಮುಖ್ಯಮಂತ್ರಿ)



ಶ್ರೀ. ಮುರಾರಜಿ ದೇಸಾಯಿ
(ಗೃಹಮಂತ್ರಿ)



ಗವ್ಹರ್ನರರಾದ
ರಾಜಾ ಸರ್ ಮಹಾರಾಜ ಸಿಂಗರು



ಶ್ರೀ. ವೈಕುಂಠಭಾಯಿ ಮೆಹತಾ
(ಹಣಕಾಸು)




ಡಾ. ಎಂ. ಡಿ. ಡಿ. ಗಿಲ್ಡರ
(ಆರೋಗ್ಯ)

ಮಂತ್ರಿ ಮಂಡಲ



ಶ್ರೀ . ಎಂ. ಪಿ. ಪಾಟೀಲ
(ಕೃಷಿ ಮತ್ತು ಅರಣ್ಯ)




ಶ್ರೀ- ದಿನಕರರಾವ ದೇಸಾಯಿ
(ಕಾಯದೆ ಮತ್ತು ಪೂರೈಕೆ)



ಶ್ರೀ. ಗುಲಝಾರಿಲಾಲ ನಂದಾ
(ಕೂಲಿಕಾರ)

★



ಶ್ರೀ. ಎಲ್. ಎಂ. ಪಾಟೀಲ
(ಅಬಕಾರಿ)



ಶ್ರೀ. ಜಿ. ಡಿ. ತಪಾಸೆ
(ಉದ್ಯೋಗ ಮತ್ತು ಹಿಂದುಳಿದ ವರ್ಗಗಳು)



ಶ್ರೀ. ಜಿ. ಡಿ. ವರ್ತಕ
(ಸ್ಥಾನಿಕ ಸ್ವರಾಜ್ಯ)

★

ಯುಕ್ತರಾಷ್ಟ್ರ ಸಂಘದ ಸ್ವರೂಪದರ್ಶನ



ಲೇಕ ಸಕ್ಸೆಸ್ಸಿನಲ್ಲಿ ರಾಷ್ಟ್ರಸಂಘದ ಕಟ್ಟಡದ ಎದುರಿಗೆ ಇರುವ ಧ್ವಜಸ್ತಂಭಗಳು. ಭಾರತದ ತ್ರಿವರ್ಣ ಚಕ್ರ ಧ್ವಜವೂ ಈ ಚಿತ್ರದಲ್ಲಿದೆ.

ಲೇಖಕರು :— ಶ್ರೀ. ದ. ಪ. ಕರಮರಕರ

ಅಮೇರಿಕೆಯ ಹಿರಿಯ ಪಟ್ಟಣವಾದ ನ್ಯೂಯಾರ್ಕಿನಿಂದ ೨೦ ಮೈಲು ದೂರ ಲೇಕ ಸಕ್ಸೆಸ ಎಂಬ ಸಣ್ಣ ಹಳ್ಳಿಯಿದೆ. ಆ ಹಳ್ಳಿಯ ಹತ್ತರ ಹಂಬಚೌಕಾದ ಎತ್ತರವಿಲ್ಲದ ದೊಡ್ಡ ತಾತ್ಪೂರ್ತಿಕ ಸ್ವರೂಪದ ಕಟ್ಟಡವಿದೆ. ಮೊದಲು ಯುದ್ಧ ಸಾಮಗ್ರಿಯ ಕೆಲಸಕ್ಕೆ ಮೀಸಲಾದ ಆ ಕಟ್ಟಡವು ಈಗ ಜಗತ್ತಿನ ಶಾಂತಿರಕ್ಷಣೆಗೆ ಮೀಸಲಾಗಿದೆ. ಎದುರಿನಲ್ಲಿ ಜಗತ್ತಿನ ರಾಷ್ಟ್ರಗಳ ಧ್ವಜಗಳೆಲ್ಲವೂ ದುಂಡಾಗಿ ಧ್ವಜ ಸ್ತಂಭಗಳ ಮೇಲೆ ಹಾರಾಡುತ್ತವೆ. ಆ ಕಟ್ಟಡವೂ ಅದರ ಸುತ್ತ ಮುತ್ತಲಿನ ಪ್ರದೇಶವೂ ಮೊದಲು ಸಂಯುಕ್ತ ಸಂಸ್ಥಾನಗಳಿಗೆ ಸೇರಿದ್ದರೂ ಈಗ ೨ ವರುಷಗಳಿಂದ ಅಂತರ್‌ರಾಷ್ಟ್ರೀಯ ಅಧಿಕಾರಕ್ಕೆ ಮಾತ್ರ ಸೇರಿದ್ದಾಗಿವೆ. ಅದುವೆ ಯುಕ್ತ ರಾಷ್ಟ್ರ ಸಂಘದ (United Nations) ಮುಖ್ಯ ಕಚೇರಿ.

ಯುಕ್ತರಾಷ್ಟ್ರ ಸಂಘ ಸ್ಥಾಪನೆ

ಜಗತ್ತಿನಲ್ಲಿ ಶಾಂತಿ ಸಮೃದ್ಧಿಗಳನ್ನು ಸ್ಥಿರಗೊಳಿಸುವದಕ್ಕಾಗಿ ಇದೇನು ಮೊದಲ ಸಂಸ್ಥೆಯಲ್ಲ. ೧೯೧೯ ರಲ್ಲಿ ಮೊದಲನೆಯ ಮಹಾಯುದ್ಧವು ಕೊನೆಗಂಡ ನಂತರ ಅಮೇರಿಕೆಯ ಪ್ರೆಸಿಡೆಂಟ ವಿಲ್ಸನ ಇವರ ಪ್ರೇರಣೆಯಿಂದ ರಾಷ್ಟ್ರಸಂಘವೊಂದು ಹುಟ್ಟಿತು. ಆ ಸಮಯಕ್ಕೆ ಆ ಕಲ್ಪನೆಗೆ ಅಮೇರಿಕೆಯ ಬೆಂಬಲ ಬಲುಮಟ್ಟಿಗೆ ದೊರೆಯಲಿಲ್ಲ. ಅದರ ಮುಖ್ಯ ಕಚೇರಿಯು ಜಿನಿವಾದಲ್ಲಿತ್ತು. ಪ್ರೆಸಿಡೆಂಟ ವಿಲ್ಸನ್‌ರೇ ಈ ಅಂತರ್‌ರಾಷ್ಟ್ರೀಯ ಸಂಸ್ಥೆಯ ಉತ್ಪಾದಕರಾದುದರಿಂದ ಈ ಸಂಸ್ಥೆಯು ಮೊದಲು ಕೆಲಸ ಪ್ರಾರಂಭ ಮಾಡಿದ ಕಟ್ಟಡಕ್ಕೆ "ವಿಲ್ಸನ್ ಮಂದಿರ"(Palais Wilson)ಎಂಬ ನಾಮಕರಣವೂ ಆಗಿತ್ತು. ಜಿನಿವಾ ಸರೋವರದ ಆ ದಡಕ್ಕೆ "ವಿಲ್ಸನ್ ದಡ"ವೆಂಬ ಅಭಿಧಾನವೂ ಬಂದಿತು. ಆ ರಾಷ್ಟ್ರ ಸಂಘವು ಹಾಗೂ ಹೀಗೂ ಎರಡನೆಯ ಮಹಾಯುದ್ಧದ ವರೆಗೆ ಕೆಲಸವನ್ನು ಮಾಡಿತು. ಅದಕ್ಕಾಗಿ ದೊಡ್ಡ ದೊಡ್ಡ ಸಭಾಮಂದಿರಗಳುಳ್ಳ ಆಧುನಿಕ ಸಲಕರಣೆಗಳಿಂದ ಸುಸಜ್ಜಿತವಾದ ಬೇರೆ ಬೇರೆ ರಾಷ್ಟ್ರಗಳಿಂದ ತಂದ ಕಲ್ಲು ಕಟ್ಟಿಗೆಗಳಿಂದ ಕಟ್ಟಿದ "ರಾಷ್ಟ್ರಗಳ ಅರಮನೆ" Palais de Nations ಎಂಬ ನಾಮಾಭಿಧಾನವನ್ನು ಹೊಂದಿದ ಅರಮನೆಯು ಜಿನಿವಾದಲ್ಲಿ ಪಥಿಕರ ಕಣ್ಣಿಗೆ ಹಬ್ಬವನ್ನುಂಟುಮಾಡುತ್ತದೆ. ಆದರೆ ಇಂದು ಸಂಯುಕ್ತ ಸಂಸ್ಥಾನಕ್ಕಿರುವ ಮಹತ್ವಕ್ಕನುಸರಿಸಿ ಮತ್ತು ಯುದ್ಧಾಸಕ್ತ ಯುರೋಪಿಗೆ ಸಹಾಯವನ್ನು ನೀಡಲು ಸಾಮರ್ಥ್ಯ ಇರುವ ಆ ದೇಶದ ಲಹರಿಗನುಗುಣವಾಗಿ ಪ್ರಬಲವಾದ ಕಾರಣಗಳಿಲ್ಲದೆ ದ್ವಿತೀಯ ಮಹಾ ಯುದ್ಧದ ನಂತರ ಹುಟ್ಟಿದ ರಾಷ್ಟ್ರಸಂಘದ ಹೊಸ ಅವತಾರಕ್ಕೆ ಅಮೇರಿಕೆಯಲ್ಲಿಯೆ ಗುಡಿಯು ಏರ್ಪಡಿಸಲ್ಪಡುತ್ತಲಿದೆ. ಸದ್ಯದ ಮಟ್ಟಿಗೆ ಹರಕು–ಮುರುಕಾದ ಬಿಡಾರದಲ್ಲಿದ್ದರೂ ಯುಕ್ತರಾಷ್ಟ್ರಸಂಘಕ್ಕಾಗಿ ಹೊಸ ಕಟ್ಟಡವನ್ನು ನ್ಯೂಯಾರ್ಕ ಪಟ್ಟಣದಲ್ಲಿಯೆ ಕಟ್ಟಿಸುವ ಯೋಜನೆ ಈಗಾಗಲೆ ಪ್ರಾರಂಭವಾಗಿದೆ. ಇದಕ್ಕಾಗಿ ಬೇಕಾಗುವ ಜಾಗವನ್ನು ಜಗತ್ತಿನಲ್ಲಿಯ ಸಿರಿವಂತಿಕೆಯ ಮೇಲ್ಮಟ್ಟವನ್ನು ಮುಟ್ಟಿದ ರಾಕಫೆಲರರೆಂಬ ವ್ಯಾಪಾರಸ್ಥರು ದಾನವಾಗಿ ಕೊಟ್ಟಿರುವರು. ೩೯ ಅಂತಸ್ತಿನ ಭವ್ಯವಾದ ಕಟ್ಟಡಕ್ಕೆ ಬೇಕಾಗುವ ಕೋಟಿಗಟ್ಲೆ ರೂಪಾಯಿಗಳನ್ನು ಒದಗಿಸಿಕೊಡಲು ಅಮೇರಿಕೆಯ ಸರಕಾರವು ಸಮ್ಮತಿ ಕೊಟ್ಟಿದೆ.

ಲೇಕ ಸಕ್ಸೆಸಿನ ಕಾರ್ಯಾಲಯದಲ್ಲಿ ದಿನಾಲು ದುಡಿಯುವ ಜನರು ನಾಲ್ಕು ಸಾವಿರದಷ್ಟು ಇರುವರು. ಯುಕ್ತರಾಷ್ಟ್ರ ಸಂಘದಿಂದ ಜಗತ್ತಿಗೆ ಶಾಂತಿ ದೊರೆಯಲಿ ಬಿಡಲಿ, ಈ ಕಾರ್ಯಾಲಯದಲ್ಲಿ ದುಡಿಯುವ ಈ ಜನರಿಗೆ ಉಪಜೀವನವು ದೊರೆಯುತ್ತಲಿದೆ. ಇದು ಮಾತ್ರ ನಿಜ. ಇಲ್ಲಿ ಎಲ್ಲ ರಾಷ್ಟ್ರಗಳ ಕಾರ್ಯಕರ್ತರಿರುವರು. ಕಾರ್ಯಾಲಯದ ಮುಖ್ಯಸ್ಥರು ಟ್ರಿಗ್ವಿ ಲೀ ಎಂಬವರು ನಾರ್ವೆಯವರು; ವಿಭಾಗಗಳ ಮುಖ್ಯಸ್ಥರಲ್ಲಿ ಅಮೇರಿಕಾ, ಚೀನ, ರಶಿಯಾ, ಇಂಗ್ಲಂಡ, ಫ್ರಾನ್ಸ ಈ ದೇಶಗಳಿಗೆ ಪ್ರಾತಿನಿಧ್ಯವಿದೆ. ಯುಕ್ತರಾಷ್ಟ್ರ ಸಂಘದ ಆಶ್ರಯದಲ್ಲಿ ಕಾರ್ಯಮಾಡುವ ಜಾಗತಿಕ ಆರೋಗ್ಯ ಸಂಸ್ಥೆ, ಜಾಗತಿಕ ನಿಧಿ, ಜಾಗತಿಕ ಬ್ಯಾಂಕು, ಜಾಗತಿಕ ಶಿಕ್ಷಣ ಸಂಸ್ಥೆ, ಜಾಗತಿಕ ವ್ಯಾಪಾರ

ಶ್ರೀ ದತ್ತಾತ್ರೇಯ ಕರಮರಕರರು ಕರ್ನಾಟಕದ ಕಾಂಗ್ರೆಸ್ ಮುಂದಾಳುಗಳಲ್ಲಿ ಒಬ್ಬರು. ಕಾಂಗ್ರೆಸ್ಸು ಹೂಡಿದ್ದ ಸ್ವಾತಂತ್ರ್ಯ ಸಂಗ್ರಾಮದಲ್ಲಿ ಕಲಿತನದಿಂದ ಕಾದಿ ಸ್ವಾತಂತ್ರ್ಯ ಸಂಪಾದನೆಗೆ ನೆರವಾದವರಲ್ಲಿ ಒಬ್ಬರು. ಕಾಂಗ್ರೆಸ್ಸು ಹೋರಾಡಿದ ಕೇಂದ್ರ ಶಾಸನ ಸಭೆಯ ಆಯ್ಕೆಯಲ್ಲಿ ಆರಿಸಿ ಬಂದು ಶಾಸನ ಸಭೆಯಲ್ಲಿ ತಮ್ಮ ಬುದ್ಧಿಶಕ್ತಿ, ಭಾಷಣವೈಖರಿಗಳಿಂದ ಕರ್ನಾಟಕದ ಕೀರ್ತಿಯನ್ನು ಹೆಚ್ಚಿಸಿದವರು. ಹಿಂದುಸ್ತಾನ ಸರಕಾರದ ಪರವಾಗಿ ಜಿನಿವಾ, ಹವಾನಾ ವ್ಯಾಪಾರಿ ಪರಿಷತ್ತುಗಳಿಗೆ ಹೋಗಿ ಪ್ರಶಂಸನೀಯ ಕಾರ್ಯ ಮಾಡಿ ಬಂದವರು. ಇವರು 'ಯುಕ್ತರಾಷ್ಟ್ರ ಸಂಘದ ಸ್ವರೂಪ ದರ್ಶನ' ಎಂಬ ತಮ್ಮ ಈ ಲೇಖದಲ್ಲಿ ನಿಜವಾಗಿಯೂ ಈ ಅಂತರ್‌ರಾಷ್ಟ್ರೀಯ ಸಂಘದ ಸ್ವರೂಪ ದರ್ಶನ ಮಾಡಿಸಿ ಕೊಟ್ಟಿದ್ದಾರೆ.

ಸಂಸ್ಥೆ, ಮುಂತಾದ ಸಂಸ್ಥೆಗಳಲ್ಲಿ ಪ್ರಮುಖ ಸ್ಥಾನಗಳು ಬಹು ಪ್ರಮಾಣದಲ್ಲಿ ಇಂಗ್ಲೀಷರಿಗೂ ಅಮೇರಿಕನರಿಗೂ ಮೀಸಲಾಗಿರುವವು. ದುಡಿಯುವ ಅಧಿಕಾರಿಗಳಲ್ಲಿಯೂ ಕಾರ್ಯಕರ್ತರಲ್ಲಿಯೂ ಎಲ್ಲ ರಾಷ್ಟ್ರಗಳಿಗೆ ಆಸ್ಪದವಿದ್ದರೂ ಬಹ್ವಂಶದಿಂದ ಪಾಶ್ಚಾತ್ಯರಿಗೆ ಪ್ರಾಶಸ್ತ್ಯವು ದೊರೆತಿದೆ.

ಯುಕ್ತ ರಾಷ್ಟ್ರ ಸಂಘದಲ್ಲಿ ಎಲ್ಲರನ್ನೂ ಸಮಬುದ್ಧಿಯಿಂದ ಸೇರಿಸಿಕೊಳ್ಳಬೇಕೆಂಬ ತತ್ವವಿರುವದು ಸಾಹಜಿಕವಿದೆ. ಏಕೆಂದರೆ ವಿಶ್ವಶಾಂತಿಯೆ ಈ ಸಂಸ್ಥೆಯ ಗುರಿ. ಈ ಸಂಸ್ಥೆಗೆ ಈ ಬರಹದಲ್ಲೆಲ್ಲ ಅರ್ಥಕ್ಕನುಗುಣವಾಗುವಂತೆ "ಯುಕ್ತರಾಷ್ಟ್ರಸಂಘ" ವೆಂದು ಉಲ್ಲೇಖಿಬಂದಿದ್ದರೂ ಇದರ ಹೆಸರು "ಒಕ್ಕಟ್ಟಾದ ರಾಷ್ಟ್ರಗಳು" (United Nations) ಎಂದು. ಮಹಾಯುದ್ಧವು ನಡೆದ ಕಾಲಕ್ಕೆ ೧೯೪೨ ನೆ ಇಸ್ವಿಯ ಜಾನೇವರಿ ೧ನೇ ತಾರೀಖಿನ ದಿನ ೨೬ ರಾಷ್ಟ್ರಗಳು ಜರ್ಮನಿ-ಜಪಾನಗಳೊಡನೆ ಹೋರಾಡಲು ಆಣೆಮಾಡಿ ಒಕ್ಕಟ್ಟಾದ ರಾಷ್ಟ್ರಗಳೇ ಈ ಸಂಸ್ಥೆಗೆ ಉಗಮಸ್ಥಾನದಂತಾದವು. ವಿಶ್ವಶಾಂತಿಗಾಗಿ ಹೊರಟ ಈ ಸಂಸ್ಥೆಯ ಉಗಮವು ಯುದ್ಧದ ಬೇಗೆ ಪ್ರಖರವಾಗಿದ್ದಾಗಲೆ ಆಯಿತು. ಮುಂದೆ ೧೯೪೫ ರಲ್ಲಿ ಸಾನ-ಫ್ರಾನ್ಸಿಸ್ಕೋದಲ್ಲಿ ೫೦ ರಾಷ್ಟ್ರಗಳ ಪ್ರತಿನಿಧಿಗಳು ಸೇರಿ ಆ ಮೊದಲೇ ಚೀನ, ರಶಿಯಾ, ಅಮೇರಿಕೆ, ಇಂಗ್ಲಂಡಗಳ ಪ್ರತಿನಿಧಿಗಳು ಸೇರಿ ನಿರ್ಣಯಿಸಿದ ಮಾತುಗಳ ತಳಹದಿಯ ಮೇಲೆ "ಯುಕ್ತರಾಷ್ಟ್ರ ಸಂಘದ ಸನದಿನ" ಕರಡನ್ನು ಸಿದ್ಧಪಡಿಸಿದರು. ಆ ಕರಡನ್ನು ಪ್ರಮುಖ ರಾಷ್ಟ್ರಗಳು ಮನ್ನಿಸಿದ ನಂತರ ೧೯೪೫ ಅಕ್ಟೋಬರದಲ್ಲಿ ಯುಕ್ತ ರಾಷ್ಟ್ರ ಸಂಘವು ಅಸ್ತಿತ್ವದಲ್ಲಿ ಬಂದಿತು.

ಯುಕ್ತರಾಷ್ಟ್ರ ಸಂಘದ ಕಾರ್ಯಕ್ಷೇತ್ರ

ಯುಕ್ತರಾಷ್ಟ್ರ ಸಂಘವು ಹುಟ್ಟಿ ಮೂರೇ ವರ್ಷಗಳಾಗಿದ್ದರೂ ಅದರ ಚಟುವಟಿಕೆಗಳು ಅನೇಕ ವಿಧವಾಗಿ ಬೆಳೆದಿವೆ. ಅಂತರ ರಾಷ್ಟ್ರೀಯ ಶಾಂತಿಯನ್ನು ಕಾಯ್ದುಕೊಳ್ಳುವದೂ ರಾಷ್ಟ್ರಗಳಲ್ಲಿ ಪರಸ್ಪರ ಸೌಹಾರ್ದವನ್ನು ಬೆಳೆಯಿಸುವದೂ ಜಗತ್ತಿನ ಆರ್ಥಿಕ ಸಾಮಾಜಿಕ ಸಾಂಸ್ಕೃತಿಕ ಪ್ರಶ್ನೆಗಳನ್ನು ಬಿಡಿಸುವದೂ ಮಾನವ ಹಕ್ಕುಗಳಿಗೂ ಮೂಲಭೂತ ಸ್ವಾತಂತ್ರ್ಯಗಳಿಗೂ ಬಾಧೆಯಾಗದಂತೆ ನೋಡಿಕೊಳ್ಳುವದೂ ಇವೆಲ್ಲ ಗುರಿಗಳನ್ನು ಸಾಧಿಸುವ ಕಾರ್ಯದಲ್ಲಿ ಸಹಾಯಕ ಕೇಂದ್ರವಾಗುವದೂ ಇವೇ ಯುಕ್ತರಾಷ್ಟ್ರ ಸಂಘದ ಗುರಿಗಳಾಗಿವೆ. ಯುಕ್ತ ರಾಷ್ಟ್ರಸಂಘಕ್ಕೆ ಸದ್ಯಕ್ಕೆ ೫೮ ಸಭಾಸದರಾಷ್ಟ್ರಗಳಿರುವವು. ಇವೆಲ್ಲ ಸಭಾಸದ ರಾಷ್ಟ್ರಗಳು ಕೂಡಿ ಸಾಮಾನ್ಯ ಸಭೆಯಾಗುವದು. ಈ ಸಭೆಯು ವಾಡಿಕೆಯಾಗಿ ವರುಷಕ್ಕೊಮ್ಮೆ ಸೇರಿ ಅದರೆದುರಿಗೆ ಬಂದ ಎಲ್ಲ ಪ್ರಶ್ನೆಗಳನ್ನು ಕುರಿತು ವಿಚಾರ ಮಾಡಿ ರಾಷ್ಟ್ರಗಳಿಗೆ ಆದೇಶವನ್ನು ಕೊಡುವದು. ಆದರೆ ಯುಕ್ತರಾಷ್ಟ್ರ ಸಂಘದ ಮಹತ್ವದ ಮತ್ತು ನಿರಂತರವಾಗಿ ಕಾರ್ಯಮಾಡಬಲ್ಲ ರಾಜಕೀಯ ಅಂಗಸಂಸ್ಥೆಯೆಂದರೆ "ಭದ್ರತಾ ಮಂಡಲ". ಈ ಮಂಡಲದಲ್ಲಿ ಬ್ರಿಟನ, ಸಂಯುಕ್ತ-ಸಂಸ್ಥಾನ, ಚೀನ, ರಶಿಯಾ, ಫ್ರಾನ್ಸ ಈ ರಾಷ್ಟ್ರಗಳು ಸ್ಥಿರ ಸಭಾಸದರಿದ್ದು ಉಳಿದ ಆರು ರಾಷ್ಟ್ರಗಳು ಸರತಿಯಿಂದ ಆರಿಸಲ್ಪಡುವವು. ರಾಷ್ಟ್ರಗಳ ಮತಭೇದವನ್ನು ವಿಚಾರಿಸುವದು, ಶಾಂತಿಭಂಗವನ್ನು ತಡೆಯುವದು, ನಿರ್ಣಯಗಳನ್ನು ಮೀರಿ ನಡೆದವರ ವಿರುದ್ಧ ಆರ್ಥಿಕ ಕ್ರಮಗಳನ್ನು ಕೈಕೊಳ್ಳುವದು, ಆಕ್ರಮಕರ ವಿರುದ್ಧ ದಂಡೋಪಾಯವನ್ನು ಕೈಕೊಳ್ಳುವದು ಮುಂತಾದ ಮಹತ್ವದ ಕಾರ್ಯಗಳು ಭದ್ರತಾಮಂಡಲಕ್ಕೆ ಒಪ್ಪಿಸಲ್ಪಟ್ಟಿವೆ. ಭದ್ರತಾಮಂಡಲದ ಅಧೀನವಾಗಿಯೆ ಸದ್ಯಕ್ಕೆ ಸೈನಿಕ ಸಮಿತಿ, ಅಣುಶಕ್ತಿ ಸಮಿತಿ, ಯುದ್ಧ ಸಾಮಗ್ರಿ ನಿಯಾಮಕ ಸಮಿತಿಗಳು ಕೆಲಸ ಮಾಡುತ್ತವೆ.

ರಾಜಕೀಯ ಕಾರ್ಯಗಳಿಗಾಗಿ ಭದ್ರತಾಮಂಡಲವಿರುವಂತೆ, ಆರ್ಥಿಕ ಸಾಮಾಜಿಕ ಅಭಿವೃದ್ಧಿ ಕಾರ್ಯಗಳಿಗಾಗಿ "ಆರ್ಥಿಕ-ಸಾಮಾಜಿಕ" ಮಂಡಲದ ಏರ್ಪಾಡಾಗಿದೆ. ಈ ಸಮಿತಿಯಲ್ಲಿ ೧೮ ರಾಷ್ಟ್ರಗಳು ಸೇರ್ಪಡೆಯಾಗಿರುವವು. ಮೊದಲಿನ ಎರಡು ವರುಷಗಳಲ್ಲಿಯೂ ಹಿಂದುಸ್ತಾನದ ಪ್ರತಿನಿಧಿಗಳಾದ ಸರ್ ರಾಮಸ್ವಾಮಿ ಮುದಲಿಯಾರರು ಅಧ್ಯಕ್ಷರಾಗಿ ಒಳ್ಳೆ ದಕ್ಷತೆಯಿಂದ ಕಾರ್ಯವನ್ನು ನಿರ್ವಹಿಸಿದರು. ಈ ಸಲ ಮತ್ತೆ ಹಿಂದುಸ್ತಾನಕ್ಕೆ ಸಭಾಸದತ್ವವು ಬಂದಿದೆ. ಜಗತ್ತಿನ ಆರ್ಥಿಕ-ಸಾಮಾಜಿಕ ಅಭಿವೃದ್ಧಿಗಾಗಿ ಯೋಗ್ಯ ಕಾರ್ಯಕ್ರಮಗಳನ್ನು ಸೂಚಿಸುವದೇ ಈ ಸಮಿತಿಯ ಮುಖ್ಯ ಕಾರ್ಯವಾಗಿದೆ. ಈ ಸಮಿತಿಗೆ ಅಧೀನವಾಗಿ ಆರ್ಥಿಕ ಉಪಸಮಿತಿ, ಸಂಚಾರ ಸಮಿತಿ, ಅರ್ಥಸಮಿತಿ, ಅಂಕೆಸಂಖ್ಯೆ ಸಮಿತಿ, ಜನಸಮಿತಿ, ಸಾಮಾಜಿಕ ಸಮಿತಿ, ಮಾನವ ಹಕ್ಕುಗಳ ಸಮಿತಿ, ಸ್ತ್ರೀಯರ ಸ್ಥಾನಮಾನ ಸಮಿತಿ, ಮಾದಕ ಪದಾರ್ಥ ಸಮಿತಿ ಈ ರೀತಿ ಅನೇಕ ಉಪಸಮಿತಿಗಳು ಕಾರ್ಯ ಮಾಡುತ್ತವೆ. ಇದು ಅಲ್ಲದೆ ಯುರೋಪಕ್ಕಾಗಿಯೂ ಪೂರ್ವದೇಶಗಳಿಗಾಗಿಯೂ ಆರ್ಥಿಕ ಸಮಿತಿಗಳು ಏರ್ಪಡಿಸಲ್ಪಟ್ಟಿವೆ. ಜಗತ್ತಿನಲ್ಲಿ ಬೇರೆ ಕಡೆಗೆ ಚರ್ಚೆ ನಿಲ್ಲಲಿ ಬಿಡಲಿ



ಅಂತರ ರಾಷ್ಟ್ರೀಯ ಪರಿಷತ್ತುಗಳು ನಡೆದಾಗ ಕೆಲವು ಸಲ ಸಂತೋಷ ಕೂಟಗಳು ನಡೆಯುವದುಂಟು. ಜಿನಿವಾದಲ್ಲಿ ವ್ಯಾಪಾರಿ ಪರಿಷತ್ತಿನ ಅಧ್ಯಕ್ಷರು ಕೊಟ್ಟ ಸಂತೋಷ ಕೂಟದ ದೃಶ್ಯವಿದು. ಚಿತ್ರದಲ್ಲಿ ಹಿಂದೀ ಪ್ರತಿನಿಧಿ ಶ್ರೀ ಕರಮರಕರರೂ ಸತ್ತಾರ ಶೇಟರೂ ಹಬೀಬ ರಹಿಮತುಲ್ಲಾರೂ ಅವರ ಪತ್ನಿಯವರೂ ಇರುವರು. ಹಣ್ಣಿನ ರಸ ಸೇವಿಸುತ್ತ ಹರಟೆ ನಡೆದಿದೆ

ಯುಕ್ತರಾಷ್ಟ್ರ ಸಂಘದ ಅಂಗಸಂಸ್ಥೆಗಳಲ್ಲಿ ಚರ್ಚೆಗೆ ಅಂತವೂ ಇಲ್ಲ ಪಾರವೂ ಇಲ್ಲ. ಯುಕ್ತರಾಷ್ಟ್ರ ಸಂಘದಲ್ಲಿ ಕೃತಿಗೆ ಕೊರತೆ ಯಿರಬಹುದು. ಮಾತಿಗೂ ಚರ್ಚೆಗೂ ಮಾತ್ರ ಕೊರತೆಯಿಲ್ಲ. ಮೇಲ್ಕಾಣಿಸಿದ ಸಮಿತಿಗಳಲ್ಲದೆ ಯುದ್ಧದ ಬವಣೆಗೆ ಸಿಕ್ಕ ರಾಷ್ಟ್ರಗಳ ಲ್ಲಿಯ ಬಾಲಕರಿಗಾಗಿ ಅಂತರಾಷ್ಟ್ರೀಯ ನಿಧಿಯ ಕಾರ್ಯವೂ ಈ ಆರ್ಥಿಕ ಸಾಮಾಜಿಕ ಮಂಡಲದ ನೇತೃತ್ವದಲ್ಲಿಯೆ ನಡೆಯಿತು.

ಇಷ್ಟರಿಂದಲೆ ಯುಕ್ತರಾಷ್ಟ್ರ ಸಂಘದ ಸಂಘಟನೆಯು ಮುಗಿಯ ಲಿಲ್ಲ. ರಾಷ್ಟ್ರ ಸಂಘದ ಆಶ್ರಯದಲ್ಲಿಯೇ ಅದರ ಸಹಕಾರದಿಂದ ಕಾರ್ಯ ಮಾಡುವ ಅನೇಕ ಸಹಕಾರಿ ಸಂಸ್ಥೆಗಳೂ ಹುಟ್ಟಿವೆ. ಈ ಸಂಸ್ಥೆಗಳು ಒಂದೊಂದು ಉದ್ದೇಶವನ್ನು ಮುಂದಿಟ್ಟುಕೊಂಡು ಆ ಉದ್ದೇಶ ಪೂರ್ತಿಗಾಗಿ ತಮ್ಮ ತಮ್ಮ ಘಟನೆಯಂತೆ ಸ್ವತಂತ್ರವಾಗಿ ಕಾರ್ಯಮಾಡುತ್ತವೆ. ಅಂತರ್ರಾಷ್ಟ್ರೀಯ ಕೂಲಿಕಾರ ಸಂಸ್ಥೆ, ಆಹಾರ ಕೃಷಿಸಂಸ್ಥೆ, ಶೈಕ್ಷಣಿಕ ಶಾಸ್ತ್ರೀಯ ಸಾಂಸ್ಕೃತಿಕ ಸಂಸ್ಥೆ, ಅಂತರ ರಾಷ್ಟ್ರೀಯ ವೈಮಾನಿಕ ಸಂಸ್ಥೆ, ಅಂತರ್ರಾಷ್ಟ್ರೀಯ ನಿಧಿಸಂಸ್ಥೆ, ಅಂತರ ರಾಷ್ಟ್ರೀಯ ಬೆಳವಣಿಗೆಯ ಬ್ಯಾಂಕು, ಜಾಗತಿಕ ಅಂಚೆಸಂಸ್ಥೆ, ಅಂತರ ರಾಷ್ಟ್ರೀಯ ಸಂದೇಶ ವಾಹಕ ಸಂಸ್ಥೆ, ಜಾಗತಿಕ ಆರೋಗ್ಯ ಸಂಸ್ಥೆ, ಅಂತರರಾಷ್ಟ್ರೀಯ ವ್ಯಾಪಾರ ಸಂಸ್ಥೆ, ಇವುಗಳ ಮುಖಾಂತರವಾಗಿ ಜಗತ್ತಿನಲ್ಲಿ ಬೇರೆ ಬೇರೆ ಕ್ಷೇತ್ರದಲ್ಲಿ ಕಾರ್ಯ ಮಾಡಬೇಕೆಂಬ ಯೋಜನೆಯನ್ನು ಯುಕ್ತರಾಷ್ಟ್ರ ಸಂಘವು ಕೈಕೊಂಡಿದೆ. ತನ್ನ ಕಾರ್ಯಗಳಲ್ಲಿ ಸಹಕಾರವಾಗಲೆಂದು ಸುಮಾರು ೬೦ ಅಂತರ ರಾಷ್ಟ್ರೀಯ ಸಂಸ್ಥೆಗಳ ಸಹಾಯ ಸಲಹೆಗಳನ್ನು ಈ ಸಂಘವು ಕೋರು ತ್ತದೆ. ರಾಷ್ಟ್ರರಾಷ್ಟ್ರಗಳ ನಡುವೆ ತಿಕ್ಕಾಟವಾದರೆ. ಅದನ್ನು ಬಗೆ ಹರಿಸಲು ಒಂದು ಅಂತರರಾಷ್ಟ್ರೀಯ ನ್ಯಾಯಾಲಯವು ಏರ್ಪಡಿಸ ಲ್ಪಟ್ಟಿದೆ. ಅದಕ್ಕೆ ೧೫ ನ್ಯಾಯಾಧೀಶರು ಆರಿಸಲ್ಪಡುತ್ತಾರೆ. ಅಂತರ ರಾಷ್ಟ್ರೀಯ ಕಾನೂನಿಗನುಸಾರವಾಗಿ ತನಗೆ ಒಪ್ಪಿಸಿದ ವಿಷಯಗಳ ತೀರ್ಮಾನ ಮಾಡುವದೇ ಈ ನ್ಯಾಯಾಲಯದ ಮುಖ್ಯ ಕಾರ್ಯ ವಾಗಿದೆ.

ಮೇಲೆ ಹೇಳಿದಂತೆ ಯುಕ್ತರಾಷ್ಟ್ರ ಸಂಘದ ... ನಿರ್ವಹಿಸಲು ಭದ್ರತಾಮಂಡಲ ವಿಭಾಗ, ಆರ್ಥಿಕ ವಿಭಾಗ, ಸಾಮಾ ಜಿಕ ವಿಭಾಗ, ವಿಶ್ವಸ್ತ ಪ್ರದೇಶ ವಿಭಾಗ, ಮಾಹಿತಿ ವಿಭಾಗ, ಸಭಾ ವ್ಯವಸ್ಥೆಯ ವಿಭಾಗ, ಆಡಳಿತೆಯ ವಿಭಾಗ ಹೀಗೆ ಎಂಟು ವಿಭಾಗ ಗಳಿವೆ. ಈ ಅಂತರರಾಷ್ಟ್ರೀಯ ಸಂಸ್ಥೆಯ ೧೯೪೮ ರ ವೆಚ್ಚಕ್ಕಾಗಿ ಮೂವತ್ತುಕೋಟಿ ರೂಪಾಯಿಗಳಿಗೆ ಮೇಲ್ಪಟ್ಟು ವ್ಯವಸ್ಥೆಯಾಗಿತ್ತು.

ತೊಡಕಿನ ಪ್ರಶ್ನೆಗಳು

ಈ ಸಂಘದೆದುರಿಗೆ ಈ ಮೂರು ವರ್ಷಗಳಲ್ಲಿ ಅನೇಕ ತೊಡಕಿನ ಪ್ರಶ್ನೆಗಳು ಬಂದವು. ಅವುಗಳಲ್ಲಿ ಮಹತ್ವದ ಪ್ರಶ್ನೆಗಳಿಗೆ ಸಮಾಧಾನ ವಾದ ಬಿಡುಗಡೆಯು ದೊರೆಯದೆ ಹೋಯಿತು. ಇವುಗಳಲ್ಲಿ ಪ್ರಮುಖ ವಾಗಿ ಪಾಲಿಸ್ತಾಯಿನದ ಸಮಸ್ಯೆ ಒಂದಾಗಿದೆ. ಪ್ರಾಚೀನ ಯಹುದೀ ಕ್ಷೇತ್ರವಾದ ಪಾಲಿಸ್ತಾಯಿನವನ್ನು ತಮ್ಮ ರಾಷ್ಟ್ರವಾಗಿ ನಿರ್ಮಿಸಬೇಕೆಂದು ಯಹುದಿಗಳು ಆಗ್ರಹಪಡುತ್ತಿದ್ದಾರೆ. ಸದ್ಯಕ್ಕೆ ಬಹು ಸಂಖ್ಯರಿರುವ ಅರಬರು ಅವರನ್ನು ವಿರೋಧಿಸುತ್ತಾರೆ. ಕಳೆದ ವರುಷದ ವರೆಗೆ ಈ ಪ್ರದೇಶವು ಬ್ರಿಟಿಶರ ಅಧೀನವಿತ್ತು. ಅವರ ಕರಾರಿನ ಅವ ಧಿಯು ಮುಗಿದದ್ದರಿಂದ ಅಲ್ಲಿಂದ ಬ್ರಿಟಿಶರು ಹೊರಬಿದ್ದರು. ಅಂದಿ ನಿಂದ ಅರಬರಿಗೂ ಯಹುದಿಗಳಿಗೂ ಕದನವುಂಟಾಗಿ ಆಗಿನಿಂದ ಹರಿ ಯುತ್ತ ಬಂದ ನೆತ್ತರದ ಹರಿಯು ಇನ್ನೂ ನಿಲ್ಲಲೊಲ್ಲದು. ಈ ಜಟಿಲ ಪ್ರಶ್ನೆಯು ಇನ್ನೂ ಯುಕ್ತರಾಷ್ಟ್ರಸಂಘದೆದುರಿಗೆ ಬಗೆಹರಿಯದೆ ಹಾಗೆಯೆ ಉಳಿದಿದೆ. ಇದರಿಂದ ಯುಕ್ತರಾಷ್ಟ್ರಸಂಘದ ಪ್ರತಿಷ್ಠೆಗೆ ಒಳ್ಳೆ ಧಕ್ಕೆ ತಗಲಿದ್ದು ರಾಜಕೀಯ ಕ್ಷೇತ್ರಗಳಲ್ಲಿ ಯುಕ್ತರಾಷ್ಟ್ರ ಸಂಘವು ಜನರ ಅಪಹಾಸಕ್ಕೆ ಗುರಿಯಾಗಿದೆ. "ತನ್ನೆದುರಿಗಿರುವ ಪ್ರಶ್ನೆಗಳನ್ನು ಸರಿಯಾಗಿ ಬಿಡಿಸಲು ಬರದ ಭದ್ರತಾಮಂಡಲವು ಅಭದ್ರವಾಗಿದೆ" ಎಂದು ಸರದಾರ ವಲ್ಲಭಭಾಯಿ ಪಟೇಲರು ಯಥಾರ್ಥವಾಗಿಯೇ ಮೊನ್ನೆ ನುಡಿದಿರುವರು.

ರಾಜಕೀಯ ಕ್ಷೇತ್ರದಲ್ಲಿ ಯುಕ್ತರಾಷ್ಟ್ರಸಂಘವು ಬಹ್ವಂಶದಿಂದ ಅಯಶಸ್ವಿಯಾಗಿರುವದಕ್ಕೆ ಮುಖ್ಯವಾದ ಕಾರಣ ಗಳಲ್ಲಿ ರಶಿಯಾಕ್ಕೂ ಉಳಿದ ರಾಷ್ಟ್ರಗಳಿಗೂ ಇರುವ ತಿಕ್ಕಾಟವೂ ಒಂದು ಮುಖ್ಯ ಕಾರಣವಾ ಗಿದೆ. ಜರ್ಮನಿಯನ್ನು ರಸಾತಳಕ್ಕೆ ಮೆಟ್ಟಿದ ಕ್ಷಣವೇ ಗೆದ್ದ ರಾಷ್ಟ್ರಗಳಲ್ಲಿ ಒಡಕುಂಟಾಯಿತು. ಒಂದು ಕಡೆ ಸಮಾಜವಾದಿ ರಶಿಯಾ ಇನ್ನೊಂದೆ ಡೆಗೆ ಬಂಡವಲವಾದಿ ಅಮೇರಿಕಾ ಹೀಗೆ ಕುಸ್ತಿಗೆ ಪ್ರಾರಂಭವಾಯಿತು. ರಶಿಯಾದ ಕಡೆಗೆ ೪—೫ ರಾಷ್ಟ್ರಗಳು, ಉಳಿದ ರಾಷ್ಟ್ರಗಳು ಅಮೇರಿಕೆಯ ಕಡೆಗೆ, ಹೀಗೆ ಎಲ್ಲ ಯುದ್ಧಗಳು ನಡೆಯುತ್ತವೆ. ಯುರೋಪೀಯ ಆರ್ಥಿಕ ಸಮಿತಿಯ ಚರ್ಚೆ ನಡೆದಾಗ ಅಮೇರಿಕಾ, ಇಂಗ್ಲಂಡ ಮತ್ತು ಫ್ರಾನ್ಸದ ಪ್ರತಿನಿಧಿಗಳು ಒತ್ತಟ್ಟಿಗೆ, ರಶಿಯಾದ ಪ್ರತಿನಿಧಿಯು ಇನ್ನೊಂದೆಡೆಗೆ. ಇವರ ನಡುವೆ ನಡೆದ ಕಠೋರ ಕಲಹವನ್ನು ನಾನು ಪ್ರೇಕ್ಷಕ ಸ್ಥಳದಿಂದ ನಿರೀಕ್ಷಿಸುತ್ತಲಿದ್ದೆ. ಮಾತಿನಲ್ಲಿ ಸೌಹಾರ್ದದ ಒಂದು ಚಿನ್ಹವೂ ಕಂಡುಬರಲಿಲ್ಲ.



ಜಿನಿವಾದ "ರಾಷ್ಟ್ರಮಂದಿರ"ದ ಮುಖ್ಯ ಸಭಾಗೃಹದ ದೃಶ್ಯ. ಇದು ವ್ಯಾಪಾರಿ ಪರಿಷತ್ತು ನಡೆದಾಗಿನ ಚಿತ್ರ. ಹಿಂದೀ ಸದಸ್ಯರನ್ನು ಇದರಲ್ಲಿ ನೋಡಬಹುದು.


ರಶಿಯಾದ ಪ್ರತಿನಿಧಿ ವಿಶಿನ್ಸ್ಕಿಯು ನೇರವಾಗಿ ಭೇದಿಸುವ ಭಾಷಣಗಳನ್ನು ವೃತ್ತಪತ್ರಗಳಲ್ಲಿ ಓದುಗರೂ ಓದಿರಬಹುದು.

ಈ ಜಗಳಗಳ ದವಡೆಯಲ್ಲಿ ಸಿಕ್ಕಿರುವ ಯುಕ್ತರಾಷ್ಟ್ರ ಸಂಘದಿಂದ ಜಗತ್ತಿಗೆ ಹಿತವಾದೀತೇ ಎಂಬುದೊಂದು ಕೂಟಪ್ರಶ್ನೆಯಾಗಿದೆ. ಸದ್ಯಕ್ಕೆ ಯುದ್ಧದ ಸಂಭವವು ಕಾಣದಿದ್ದರೂ ದಿನಾಲು ನಡೆದ ವಿಚಾರಕಲಹಗಳಿಂದ ಜಗತ್ತಿಗಿನ್ನು ಶಾಂತಿಯುಂಟಾಗಬಹುದೇ? ಎಂಬ ಪ್ರಶ್ನೆಯು ನಮ್ಮ ಮುಂದೆ ತಲೆದೋರುತ್ತದೆ. ಅಂತರರಾಷ್ಟ್ರೀಯ ಚದುರಂಗದಾಟದಲ್ಲಿ ಎಲ್ಲ ರಾಷ್ಟ್ರಗಳು ತಮ್ಮ ತಮ್ಮ ಹಿತವನ್ನು ಸಾಧಿಸಬಯಸುತ್ತವೆ. ಅಮೇರಿಕೆಯು ತನ್ನ ಸದ್ಯದ ಸಂಪದಭಿವೃದ್ಧಿಯನ್ನು ನಿರಾತಂಕವಾಗಿ ಬೆಳೆಸಿಕೊಂಡು ಹೋಗಬೇಕೆಂದೂ ಇಂಗ್ಲಂಡ, ಫ್ರಾನ್ಸ, ಬೆಲ್ಜಿಯಂ, ಹಾಲಂಡ ಮುಂತಾದ ಹೆರವರ ನಾಡುಗಳನ್ನು ಆಕ್ರಮಿಸಿರುವ ರಾಷ್ಟ್ರಗಳು ಪರಶೋಷಣದ ತಮ್ಮ ಕಾರ್ಯವು ಅಬಾಧಿತವಾಗಿ ಸಾಗಬೇಕೆಂದೂ ದಕ್ಷಿಣ ಅಮೇರಿಕೆಯ ರಾಷ್ಟ್ರಗಳೂ,ಮಧ್ಯಪೂರ್ವ ಅರಬೀ ರಾಷ್ಟ್ರಗಳೂ ತಮ್ಮಲ್ಲಿ ಔದ್ಯೋಗೀಕರಣವಾಗಿ ಸಂಪದಭಿವೃದ್ಧಿಯಾಗಬೇಕೆಂದೂ ರಶಿಯಾ ದೇಶವು ಸಮಾಜವಾದವು ಬೆಳೆಯಬೇಕೆಂದೂ ಹೀಗೆ ಬೇರೆ ಬೇರೆ ರಾಷ್ಟ್ರಗಳು ತಮ್ಮ ತಮ್ಮ ಉದ್ದೇಶಸಾಧನೆಗಾಗಿ ಹಗಲಿರುಳು ಹೋರಾಡುತ್ತವೆ. ಈ ಹೋರಾಟದ ಕೊನೆಯ ಫಲಿತಾಂಶವು ಏನಾಗುವದೋ, ಸದ್ಯಕ್ಕೆ ಮಾತ್ರ ರಾಜಕೀಯ ರಂಗದಲ್ಲಿ ಒಮ್ಮತದ ನಿರ್ಣಯವಾಗುವದೇ ಜಡವಾದ ಮಾತಾಗಿದೆ.


ಹವಾನಾ ಪರಿಷತ್ತಿನ ಫಲಶ್ರುತಿ

ರಾಜಕಾರಣದ ಹೊರಗಿನ ಕ್ಷೇತ್ರದಲ್ಲಿ ಮಾತ್ರ ಎಷ್ಟೋ ಸಲ ಒಮ್ಮತದ ನಿರ್ಣಯಗಳಾಗುತ್ತವೆ. ಇದು ನಿಜವಾದ ಲಾಭವೆನ್ನಬೇಕು. ಜಿನಿವಾದಲ್ಲಿ ನಾಲ್ಕು ತಿಂಗಳು, ಹವಾನಾದಲ್ಲಿ ಮೂರು ತಿಂಗಳು ಹಗಲಿರುಳು ಚರ್ಚೆ ಮಾಡಿ ೫೫ ರಾಷ್ಟ್ರಗಳು ಅಂತರ್‌ರಾಷ್ಟ್ರೀಯ ವ್ಯಾಪಾರದ ಬೆಳವಣಿಗೆಗಾಗಿ ಒಂದು ಸನದು ಸಿದ್ಧಮಾಡಿದವು. ಅದರಂತೆಯೆ ಆರೋಗ್ಯದ ವಿಷಯದಲ್ಲಿಯೂ ಆಹಾರದ ವಿಷಯದಲ್ಲಿಯೂ ಅಂತರರಾಷ್ಟ್ರೀಯ ದೃಷ್ಟಿಯಿಂದ ನಿರ್ಣಯಗಳಾದವು. ಅಂತರರಾಷ್ಟ್ರೀಯ ಕೂಲಿಕಾರ ಮಂಡಲದಲ್ಲಿ ಕೂಲಿಕಾರರ ಹಿತದ ಅನೇಕ ನಿರ್ಣಯಗಳಾಗಿ ಅವನ್ನು ಅನೇಕ ರಾಷ್ಟ್ರಗಳು ಅಮಲಿನಲ್ಲಿಯೂ ತಂದವು. ಇದೂ ಅಲ್ಲದೆ ಯುಕ್ತರಾಷ್ಟ್ರಸಂಘದ ಆರ್ಥಿಕ ವಿಭಾಗದವರು ಅನೇಕ ಉಪಯುಕ್ತ ಪುಸ್ತಕಗಳನ್ನು ಪ್ರಸಿದ್ಧಿಸಿದರು. ಇವೆಲ್ಲ ಮಾತುಗಳನ್ನು ಜಮೆಯ ಕಡೆಗೆ ಹಿಡಿಯಲು ಅಡ್ಡಿಯಿಲ್ಲ.

ಇತ್ತೀಚಿನ ೨-೩ ವರ್ಷಗಳಿಂದ ಹಿಂದುಸ್ತಾನವೂ ಈ ಅಂತರರಾಷ್ಟ್ರೀಯ ಪರಿಷತ್ತುಗಳಲ್ಲಿ ಸ್ವತಂತ್ರ ರೀತಿಯಿಂದ ಭಾಗವಹಿಸುತ್ತ ಬಂದಿದೆ. ರಾಮಸ್ವಾಮಿ ಮುದಲಿಯಾರ, ವಿಜಯಾಲಕ್ಷ್ಮಿ ಪಂಡಿತ ಮುಂತಾದ ಪ್ರತಿನಿಧಿಗಳು ನಮ್ಮ ನಾಡಿಗೆ ತಮ್ಮ ಕಾರ್ಯದಿಂದ ಕೀರ್ತಿಯನ್ನು ತಂದುಕೊಟ್ಟಿದ್ದಾರೆ. ದಿನದಿನಕ್ಕೆ ಹಿಂದುಸ್ತಾನಕ್ಕೆ ಅಂತರರಾಷ್ಟ್ರೀಯ ಕ್ಷೇತ್ರದಲ್ಲಿ ಮೆಲ್ಲಮೆಲ್ಲಗೆ ಪ್ರಾಮುಖ್ಯತೆ ಬರಹತ್ತಿದೆ. ಅಂತರ್‌ರಾಷ್ಟ್ರೀಯ ಪರಿಷತ್ತುಗಳಿಂದ ಲಾಭವೆಷ್ಟೆ ಆಗಲಿ, ಹಾನಿಯನ್ನು ತಪ್ಪಿಸುವದಕ್ಕಾದರೂ ನಾವು ನಮ್ಮವರಲ್ಲಿಯ ತಜ್ಞರನ್ನು ಕಳಿಸಿ ನಮ್ಮ ಹಿತಸಂಬಧಗಳು ಸುರಕ್ಷಿತವಾಗುವಂತೆ ಪ್ರಯತ್ನಿಸುವದು ಅತ್ಯವಶ್ಯವಾಗಿದೆ. ಜಗತ್ತಿನ ಪ್ರಮುಖ ರಾಷ್ಟ್ರಗಳಲ್ಲಿಯ ಒಡಕು ವಿಕೋಪಕ್ಕೆ ಹೋಗುವಾಗ ಹಿಂದುಸ್ತಾನದಂತಹ ನಿಃಸ್ಪೃಹ ರಾಷ್ಟ್ರವು ಜಗತ್ತಿಗೆ ಯೋಗ್ಯವಾದ ದಾರಿಯನ್ನು ತೋರುವದು ಜಗತ್ತಿನ ದೃಷ್ಟಿಯಿಂದ ಅತ್ಯಂತ ಉಪಕಾರಿಯಾಗಿದೆ. ಒಂದಿಲ್ಲೊಂದು ದಿನ ತಪ್ಪಿತಸ್ಥ ರಾಷ್ಟ್ರಗಳನ್ನು ಸರಿಯಾದ ಧಾರಿಗೆ ತರುವ ಸಾಮರ್ಥ್ಯವುಳ್ಳ ಅಂತರ್‌ರಾಷ್ಟ್ರೀಯ ಸಂಸ್ಥೆಯು ಸ್ಥಿರವಾಗಿ ನಿಲ್ಲಾವದಾದರೆ ಅದಕ್ಕಾಗಿ ಈಗಿನ್ನ ಸಂಸ್ಥೆಗಳ ಮುಖಾಂತರವಾಗಿಯೆ ಪ್ರಯತ್ನಿಸಬೇಕು. ಈ ಪ್ರಯತ್ನವು ವಿಫಲವಾದರೆ ಅಣು ಬಾಂಬಿನಂತಹ ವಿನಾಶಕ ಅಸ್ತ್ರಗಳಿಂದ ಜಗತ್ತೇ ನಾಶವಾಗುವ ಸಮಯವು ಒದಗುವದು ಅನಿವಾರ್ಯವಾಗುವದು.



ಶ್ರೀ. ಓಮಂಡೂರ ರಾಮಸ್ವಾಮಿ ರೆಡ್ಡಿ
(ಮುಖ್ಯ ಮಂತ್ರಿ)



ಡಾ. ಟಿ. ಎಸ್. ಎಸ್. ರಾಜನ್
(ಆಹಾರ)



ಶ್ರೀ. ಕಳಾ ವೆಂಕಟರಾವ್
(ಕಂದಾಯ)



ಗವರ್ನರರಾದ ಸರ್ ಕೃಷ್ಣಕುಮಾರಸಿಂಹಜೀ
(ಭಾವನಗರ ಮಹಾರಾಜರು)



ಶ್ರೀ. ಎ. ಬಿ. ಶೆಟ್ಟಿ
(ಆರೋಗ್ಯ)



ಶ್ರೀ. ಬಿ. ಗೋಪಾಲ ರೆಡ್ಡಿ
(ಹಣಕಾಸು)

ಮಂತ್ರಿಮಂಡಲ



ಶ್ರೀ. ಕೆ. ಮಾಧವ ಮೆನನ್ (ಕೃಷಿ)



ಶ್ರೀ. ಅವಿನಾಶಲಿಂಗಂ ಚೆಟ್ಟಿ
(ಶಿಕ್ಷಣ)




ಶ್ರೀ. ವಿ. ಕೂರ್ಮಯ್ಯ
(ಗ್ರಾಮ ಮತ್ತು ಹರಿಜನೋದ್ಧಾರ)



ಶ್ರೀ. ಚಂದ್ರಮೌಳಿ (ಸ್ಥಾನಿಕಸ್ವರಾಜ್ಯ)



ಶ್ರೀ. ಗುರುಪಾದಂ
(ಫಿರ್ಕಾ ಅಭಿವೃದ್ಧಿ)



ಶ್ರೀ. ಭಕ್ತವತ್ಸಲಂ
(ಸಾರ್ವಜನಿಕ ಕಾಮಗಾರಿ)



ಶ್ರೀ. ಸೀತಾರಾಮ ರೆಡ್ಡಿ
(ಉದ್ಯೋಗ ಮತ್ತು ಕೂಲಿಕಾರ)

ಅಂತರ್‌ರಾಷ್ಟ್ರೀಯ ರಂಗ
ಮತ್ತು
ಹಿಂದುಸ್ಥಾನ

[ಲೇಖಕರು — ಶ್ರೀ. ರಂಗನಾಥ ದಿವಾಕರ]

ನವ ವೈಜ್ಞಾನಿಕ ಶೋಧ, ಉದ್ಯೋಗೀಕರಣ, ರಾಜಕೀಯ ಬಲ ಇವುಗಳ ಬೆಳವಣಿಗೆ ಆಗುತ್ತ ಹೋದಂತೆ ಯುರೋಪ ಖಂಡವು ಹೋದ ನಾಲ್ಕು ಶತಮಾನಗಳಲ್ಲಿ ಜಗತ್ತಿನಲ್ಲಿ ಇತರ ಖಂಡಗಳಿಗಿಂತ ಪ್ರಬಲವಾಯಿತು. ಯುರೋಪದ ರಾಷ್ಟ್ರಗಳು ತಮ್ಮಷ್ಟಕ್ಕೆ ತಾವೆ ಸ್ವತಂತ್ರರೂ ಸುಸಂಸ್ಕೃತರೂ ಆಗಿ ಬಾಳುವುದರಲ್ಲಿ ಸಮಾಧಾನ ಪಡೆಯದೆ ಆಕ್ರಮಣಶೀಲವಾದವು. ಇಡೀ ಜಗತ್ತನ್ನೆ ವ್ಯಾಪಿಸಿದವು, ಇತರ ಖಂಡಗಳಲ್ಲಿಯ ರಾಷ್ಟ್ರಗಳನ್ನು ಗೆದ್ದವು, ಇಲ್ಲವೆ ಅವುಗಳ ಮೇಲೆ ತಮ್ಮ ಆರ್ಥಿಕ ಮುಂತಾದ ವರ್ಚಸ್ಸನ್ನು ಸ್ಥಾಪಿಸಿದವು. ಈ ರೀತಿ ಜಾಗತಿಕ ರಾಜಕಾರಣ, ಅರ್ಥಕಾರಣ ಮುಂತಾದವುಗಳ ಕೇಂದ್ರವು ಯುರೋಪಖಂಡದಲ್ಲಿಯೆ ಮನೆಮಾಡಿತು. ಎರಡನೆ ಮಹಾಯುದ್ಧದ (೧೯೩೯–೪೫) ಕೊನೆಯ ವರೆಗೆ ಇದೇ ಪರಿಸ್ಥಿತಿ ಇತ್ತೆಂದು ಹೇಳಬಹುದು. ಇಷ್ಟೇ ಅಲ್ಲ, ಹೋದ ಸುಮಾರು ಒಂದು ಶತಮಾನದಲ್ಲಿ ಲಂಡನ್ ಪಟ್ಟಣವೇ ಜಾಗತಿಕ ರಾಜಕಾರಣದ ಕೇಂದ್ರವಾಗಿತ್ತೆಂದು ಹೇಳಿದರೂ ಅಡ್ಡಿ ಇಲ್ಲ.

ಆದರೆ ಎರಡನೆ ಮಹಾಯುದ್ಧದ ಪರಿಣಾಮವಾಗಿ ಈ ಪರಿಸ್ಥಿತಿಯಲ್ಲಿ ಬದಲಾವಣೆಯಾಗಿದೆ. ಮೊದಮೊದಲು ಇಂಗ್ಲಂಡ, ಫ್ರಾನ್ಸ, ರಶಿಯಾ, ಚೀನ, ಮತ್ತು ಅಮೇರಿಕೆಯ ಸಂಯುಕ್ತ ಸಂಸ್ಥಾನಗಳು, ಇವು ಹಲವು ಕಾಲ ಏಕಮತದಿಂದ ಜಗತ್ತಿನ ರಾಜಕಾರಣವನ್ನು ನಡೆಸಲು ಪ್ರಯತ್ನಪಟ್ಟವು. ಆದರೆ ಚೀನವು ತನ್ನ ಆಂತರಿಕ ಜಗಳ ಹಾಗೂ ಯಾದವೀ ಯುದ್ಧ ಇವುಗಳ ಮೂಲಕ ಈ ವಿಷಯದಲ್ಲಿ ನೆಲಕ್ಕೆ ಕುಪ್ಪಳಿಸಿತು. ಈ ಭಾರವು ಅದಕ್ಕೆ ಸಹನವಾಗದೆ ಹೋಯಿತು. ಸ್ಥಿರ ಹಾಗೂ ಸುವ್ಯವಸ್ಥಿತ ರಾಜ್ಯದ ಅಭಾವ ಹಾಗೂ ಯುದ್ಧದ ಪರಿಣಾಮಗಳಿಂದ ಪೂರ್ಣ ಮುಕ್ತವಾಗಲು ಅಸಾಮರ್ಥ್ಯ ಇವುಗಳ ಮೂಲಕ ಫ್ರಾನ್ಸವು ಕೂಡ ದುರ್ಬಲ ರಾಷ್ಟ್ರವೇ ಎನಿಸುವದು.

ಸ್ವಾತಂತ್ರ್ಯ ಸಿದ್ಧಿಯ ನಂತರ ಜಾಗತಿಕ ವಿಷಯಗಳಲ್ಲಿ ಭಾರತದ ಸ್ಥಾನಮಾನ ಹೆಚ್ಚಾಗಿದೆ. ಆದರೆ ಪ್ರಬಲ ರಾಷ್ಟ್ರಗಳು ಇಬ್ಬಣವಾದ ಇಂದಿನ ದಿನಗಳಲ್ಲಿ, ಅದೂ ಅಂತರ್‌ರಾಷ್ಟ್ರೀಯ ವ್ಯವಹಾರದಲ್ಲಿ ಅನುಭವ ಕಡಿಮೆಯಾಗಿರುವ ನಮಗೆ ನಿಶ್ಚಿತವಾದ ಧೋರಣೆಯನ್ನು ಹಿಡಿಯುವದು ಕಠಿನವೆನಿಸಿದೆ. ಹೀಗಿದ್ದರೂ ನಾವು ಆ ರಂಗದಿಂದ ಕಾಲ್ದೆಗೆಯದೆ ಜಗತ್ತಿನಲ್ಲಿ ಶಾಂತಿ ಸೌಹಾರ್ದಗಳನ್ನು ಹೆಚ್ಚಿಸಲು ಮತ್ತು ನಮ್ಮ ಶೀಲ ಸಾಮರ್ಥ್ಯದಿಂದ ನಮ್ಮ ಪ್ರಭಾವವನ್ನು ಸ್ಥಾಪಿಸಿ ತೋರಿಸಲು ಈಗ ಪ್ರಯತ್ನಿಸಲೇ ಬೇಕು. ಇಲ್ಲದೆ ಬೆಕ್ಕಿನ ಬಿಡಾರ ಬೇರೆಯೆಂದು ಸುಮ್ಮನಿದ್ದರೆ ಕರ್ತವ್ಯಚ್ಯುತರಾದಂತಾಗುವದೆಂದು ಈಚೆಗೆ ಅಂತಃಪಾರ್ಲಿಮೆಂಟರಿ ಸಮ್ಮೇಲನದ ಸಂಬಂಧದಲ್ಲಿ ವಿದೇಶಗಳಲ್ಲಿ ಸಂಚರಿಸಿ ಬಂದ ಶ್ರೀ. ದಿವಾಕರ ರಂಗರಾಯರು ಪ್ರತಿಪಾದಿಸಿದ್ದಾರೆ.

ಇಂಗ್ಲಂಡು ತನಗೆ ಎಷ್ಟೇ ಪೆಟ್ಟು ಬಿದ್ದಿದ್ದರೂ ಬಹಳ ಜಾಣತನದಿಂದ, ಸಹನದಿಂದ, ಮುತ್ಸದ್ದಿತನದಿಂದ ಮೆಲ್ಲಗೆ ಸಾವರಿಸುತ್ತ ತನ್ನ ಸ್ಥಾನವನ್ನು ಹಿಡಿದುಕೊಂಡು ನಿಂತಿದೆ. ಯುದ್ಧಪೂರ್ವದ ಪ್ರಥಮ ಸ್ಥಾನವು ಹೋಗಿದ್ದರೂ ಅದು ಇನ್ನೂ ರಾಜಕಾರಣದ ಮಟ್ಟಿಗೆ ಯುರೋಪ ಖಂಡದ ಪೂರ್ತಿ, ರಶಿಯವೊಂದನ್ನು ಬಿಟ್ಟರೆ, ಇತರ ರಾಷ್ಟ್ರಗಳಿಗಿಂತ ಬಲಿಷ್ಠ ಸ್ಥಾನದಲ್ಲಿಯೆ ಇದೆ. ಹಿಂದುಸ್ಥಾನ ಮುಂತಾದ ಸ್ಥಾನಗಳನ್ನು ಬಿಟ್ಟಾದರೂ ತನ್ನ ಯುರೋಪಿಯನ್ ರಾಜಕಾರಣದಲ್ಲಿಯ ಸ್ಥಾನವನ್ನು ಕಾಯ್ದುಕೊಳ್ಳುವ ಜಾಣತನವನ್ನು ಬ್ರಿಟನ್ ತೋರಿಸಿದೆ ಎಂದು ಹೇಳಲು ಅಡ್ಡಿ ಇಲ್ಲ. ಜರ್ಮನಿಯನ್ನು ಮೊದಲು ಎದುರಿಸುವ, ಬಳಿಕ ಸೋಲಿಸುವ, ಕಾರ್ಯದಲ್ಲಿ ಅತುಲ ಪರಾಕ್ರಮವನ್ನು ತೋರಿಸಿ ಜಗತ್ತಿನಲ್ಲಿ ಬಹಳ ದೊಡ್ಡ ಸ್ಥಾನವನ್ನು ಪಡೆದಿದೆ. ಆದರೆ ಅದರ ವರ್ಚಸ್ಸು ಇನ್ನು ಜಾಗತಿಕ ರಾಜಕಾರಣದಲ್ಲಿ ಅಷ್ಟೊಂದಿಲ್ಲ ಎಂದೇ ಹೇಳಬೇಕಾಗುವದು. ಪೂರ್ವ ಯುರೋಪದಲ್ಲಿ ಮಾತ್ರ ರಶಿಯದ ಕೈಹಿಡಿಯುವವರು ಈಗ ಯಾರೂ ಇಲ್ಲ. ಪಶ್ಚಿಮ ಯುರೋಪದಲ್ಲಿಯೂ ತನ್ನ ವರ್ಚಸ್ಸನ್ನು ಬೀರಲು ಅದು ಯತ್ನಿಸುತಿರುವದು. ಅದು ಎಷ್ಟರ ಮಟ್ಟಿಗೆ ಸಾಧ್ಯ ಇದು ಇನ್ನೂ ನೋಡತಕ್ಕ ವಿಷಯವಾಗಿದೆ. ಅಮೇರಿಕದ ಸಂಯುಕ್ತ ಸಂಸ್ಥಾನಗಳು ಮಾತ್ರ ಇಡೀ ಜಗತ್ತಿನಲ್ಲಿ ಸದ್ಯಕ್ಕೆ ಅತ್ಯಂತ ವರ್ಚಸ್ಸುಳ್ಳ ರಾಷ್ಟ್ರವಾಗಿ ಬಿಟ್ಟಿವೆ. ರಶಿಯಾ ಮತ್ತು ಪೂರ್ವ ಯುರೋಪ ಈ ಎರಡು ಭಾಗಗಳನ್ನು ಬಿಟ್ಟರೆ ಅಮೇರಿಕೆಯ ವರ್ಚಸ್ಸು ಎಲ್ಲೆಲ್ಲಿಯೂ ದೃಗ್ಗೋಚರವಾಗುವದು. ಆ ದೇಶದ ಆರ್ಥಿಕ ಸಹಾಯದ ಅಪೇಕ್ಷೆ, ಅದೇ ರೀತಿ ಯಂತ್ರಸಾಮಗ್ರಿಯ ಅಪೇಕ್ಷೆ, ಪ್ರಸಂಗವಶಾತ್ ಯುದ್ಧವಾದ ಪಕ್ಷದಲ್ಲಿ ಶಸ್ತ್ರಾಸ್ತ್ರಗಳ ಪೂರೈಕೆ ಹೀಗೆ ಒಂದಲ್ಲ ಎರಡಲ್ಲ ಅನೇಕ ರೀತಿಯಿಂದ ಅಮೇರಿಕೆಯ ಸಂಯುಕ್ತ ಸಂಸ್ಥಾನಗಳನ್ನು ಅನೇಕ ರಾಷ್ಟ್ರಗಳು ಅವಲಂಬಿಸಿವೆ ಎಂದು ಹೇಳಬಹುದು.

ಹಿಂದುಸ್ಥಾನದ ಸ್ಥಾನಮಾನಗಳೇನು ?

ಅಂತರ್‌ರಾಷ್ಟ್ರೀಯ ರಂಗವು ಈ ಪ್ರಕಾರದ್ದಿರುವಾಗ ಅದರಲ್ಲಿ ಹಿಂದುಸ್ಥಾನದ ಸ್ಥಾನವೇನು? ಅದನ್ನು ಚನ್ನಾಗಿ ತಿಳಿದುಕೊಂಡು ಭದ್ರಪಡಿಸುವದು ನಮ್ಮ ನವರಾಷ್ಟ್ರದ ಕರ್ತವ್ಯವಾಗಿದೆ.

ಹಿಂದುಸ್ಥಾನವು ಆಕಾರದಿಂದ, ಜನಸಂಖ್ಯೆಯಿಂದ, ಬಹಳ ದೊಡ್ಡ ರಾಷ್ಟ್ರವಾದರೂ ಅಂತರ್‌ರಾಷ್ಟ್ರೀಯ ರಂಗದಲ್ಲಿ ಅದು ತೀರ ಹೊಸದು, ಅದಕ್ಕೆ ಹಳೆಯ ವರ್ಚಸ್ಸೆಂಬುದು ಏನೂ ಇಲ್ಲ. ೧೫–೮–೪೭ರ ಪೂರ್ವದಲ್ಲಿ ಅದೊಂದು ಬ್ರಿಟಿಶರ ಬಗಲುಕೂಸಾಗಿ ಉಪಯೋಗಿಸಲಾಗುತ್ತಿತ್ತು. ಈಗ ಒಂದು ವರುಷದಲ್ಲಿ ಮಾತ್ರ ಅದು ತಲೆಯೆತ್ತಿ

ಅಲ್ಲಿ ಇಲ್ಲಿ ಸ್ವತಂತ್ರ ಹಾಗೂ ಸ್ವಂತ ಧ್ವನಿಯಿಂದ ಮಾತನಾಡುತಿದೆ. ಹಲವರು ಆಶ್ಚರ್ಯದಿಂದ, ಕೆಲವರು ಕುತೂಹಲದಿಂದ, ಅನೇಕರು ಅಪೇಕ್ಷೆಯಿಂದ ಹಿಂದುಸ್ತಾನದತ್ತ ನೋಡುತ್ತಿರುವರು. ಈಗಾಗಲೆ ಅಂತರ್‌ರಾಷ್ಟ್ರೀಯ ರಂಗದಲ್ಲಿ ಅಮೇರಿಕಾ ಹಾಗೂ ರಶಿಯಾ ಎಂಬ ಎರಡು ಪಂಗಡಗಳು ಆದಂತೆ ಆಗಿಬಿಟ್ಟಿವೆ. ಆದುದರಿಂದ ಹಿಂದುಸ್ತಾನವು ಯಾವ ಗುಂಪಿಗೆ ಸೇರುವದು ಎಂಬುವದನ್ನು ಇಡೀ ಜಗತ್ತೇ ನಿರೀಕ್ಷಿಸುತ್ತಲಿದೆ. ಆದರೆ ಈ ವರೆಗೆ ಹಿಂದುಸ್ತಾನವು ಯಾವ ಪಂಗಡಕ್ಕೂ ಸೇರದೆ ತನ್ನ ವ್ಯಕ್ತಿತ್ವವನ್ನು ಪ್ರತ್ಯೇಕವಾಗಿಟ್ಟುಕೊಂಡು ಆಯಾ ಪ್ರಶ್ನೆಗಳ ಬಗ್ಗೆ ತಕ್ಕದಾದ ರೀತಿಯಿಂದ ಕೆಲಸ ಮಾಡುತ್ತ ಬಂದಿರುವದು. ಯುದ್ಧವು ಒದಗಿದರೂ ನಾವು ತಟಸ್ಥವಾಗಿಯೆ ಉಳಿಯುವೆವು ಎಂದು ಘಂಟಾಘೋಷವಾಗಿ ನಾವು ಹೇಳುತ್ತ ಬಂದಿದ್ದೇವೆ. ಇದು ಸರ್ವಥಾ ಯೋಗ್ಯವೇ ಇದೆ. ಇನ್ನು ನಮ್ಮ ಅಸ್ತಿತ್ವ, ಭದ್ರತೆ, ಘಟನೆ, ನಮ್ಮ ಸುತ್ತುಮುತ್ತಲಿನ ಪರಿಸ್ಥಿತಿ ಇವೆಲ್ಲವುಗಳನ್ನು ಚನ್ನಾಗಿ ನೋಡಿಕೊಳ್ಳದೆ ನಮ್ಮ ರಾಷ್ಟ್ರಕ್ಕೆ ತಕ್ಕದಾದ ಸಾಮರ್ಥ್ಯವನ್ನು ಉಂಟುಮಾಡಿಕೊಳ್ಳದೆ, ಯಾವದೊಂದು ಗುಂಪಿಗೆ ಕೂಡಿಕೊಂಡರೆ ಅದರಿಂದ ಬಹಳ ದೊಡ್ಡ ಹಾನಿಯಾಗುವ ಸಂಭವವು ಇರುವದು. ಆದುದರಿಂದ ನಮ್ಮ ಕಡೆಗೆ ಬನ್ನಿ ಎಂದು ಪಕ್ಷಪಂಗಡಗಳು ನಮ್ಮನ್ನು ಎಷ್ಟು ಎಳೆದಾಡಿದರೂ ನಾವು ನಮ್ಮ ಮಾರ್ಗದಿಂದ ನೇರವಾಗಿ ಸಾಗುತಿರುವದೆ ಜಾಣತನವು.

ಮೇಲಾಗಿ ಪ್ರಾರಂಭಕ್ಕೆಯೆ ನಮಗೆ ಈ ರಂಗದಲ್ಲಿ ಯಾವ ಅಡಚಣಿಗಳಿವೆ ಹಾಗೂ ಯಾವ ತೊಂದರೆಗಳು ಎದುರಾಗಿವೆ ಇವುಗಳ ಆಕಲನವೂ ನಮಗೆ ಅವಶ್ಯವಿರುವದು. ಮೊದಲನೆ ಮಾತೆಂದರೆ ಇಂಡಿಯಾದ ವಿಭಜನೆ ಆದುದರಿಂದ ಎಲ್ಲೆಲ್ಲಿಯೂ ನಮಗೆ ನೀವು ಇಂಡಿಯಾದವರೋ ಪಾಕಿಸ್ತಾನದವರೋ ಎಂಬ ಪ್ರಶ್ನೆ ಕಟ್ಟಿಟ್ಟದ್ದೇ! ಇದಲ್ಲದೆ ಪಾಕಿಸ್ತಾನದ ಮಿತ್ರರು ಎಲ್ಲೆಲ್ಲಿಯೂ ಹಿಂದುಸ್ತಾನವು ತನಗೆ ವಿರುದ್ಧವಿರುವದು ಎಂಬ ಪ್ರಚಾರವನ್ನು ಎಡೆಬಿಡದೆ ನಡೆಸಿರುವರು. ಕಾಶ್ಮೀರ ಹಾಗೂ ಹೈದ್ರಾಬಾದ ಈ ಎರಡು ಪ್ರಶ್ನೆಗಳನ್ನೆತ್ತಿ ಹಿಂದುಸ್ತಾನದ ವಿರುದ್ಧ ಮತ್ತಷ್ಟು ಪ್ರಚಾರಕಾರ್ಯವನ್ನು ಮಾಡಲು ಬ್ರಿಟಿಶ್ ಟೋರಿ ಪಾರ್ಟಿಯವರು ಹಾಗೂ ಹಣ ಪಡೆದವರು ಹಲವರು ಸನ್ನದ್ಧರಾಗಿ ಆ ಕಾರ್ಯವನ್ನು ನಡೆಸಿರುವರು! ನಾವು ಇನ್ನೂ ಯಾವ ಗುಂಪಿಗೂ ಸೇರದೆ ಇದ್ದುದರಿಂದ ಹಿಂದುಸ್ತಾನವು ರಶಿಯಕ್ಕೆ ಅನುಕೂಲ ಎಂದು ಹಲವು ಅಮೇರಿಕನ್ನರು ಹೇಳುವರು. ನಾವು ಇನ್ನೂ ಬ್ರಿಟಿಶರ ಕಂಕುಳದೊಳಗಿಂದ ಪಾರೇ ಆಗಿಲ್ಲ ಎಂದು ರಶಿಯನ್ನರು ಹೇಳುತಿರುವರು! ಹೀಗೆ ಒಂದಲ್ಲ, ಎರಡಲ್ಲ ಅನೇಕ ಅಡಚಣಿಗಳ ಮೂಲಕ ನಾವು ಜಾಗತಿಕ ರಂಗದಲ್ಲಿ ಬಹಳ ಎಚ್ಚರದಿಂದಲೂ ಜಾಣತನದಿಂದಲೂ ಹೆಜ್ಜೆ ಇಡಬೇಕಾಗಿದೆ.

ಕೂಪ ಮಂಡೂಕವೃತ್ತಿ ಸಲ್ಲದು

ನಮಗೆ ಆ ಜಾಗತಿಕ ರಂಗವೇ ಬೇಡ, ಆ ಅಂತರ್‌ರಾಷ್ಟ್ರೀಯ ಗೊಂದಲವೇ ಬೇಡ, ನಮ್ಮಷ್ಟಕ್ಕೆ ನಾವೇ ಇದ್ದರಾಯಿತು, ನಮ್ಮ ಕೆಲಸ ಮಾಡಿದರಾಯಿತು, ಎಂದು ಹೇಳುವವರೂ ಹಲವರು ನಮ್ಮಲ್ಲಿರುವರು. ಅವರೂ ಒಂದು ಬಗೆಯಾಗಿ ನಮಗೆ ಅಡಚಣಿರೂಪವಾಗಿಯೇ ಇರುವರು. ನಮಗೆ ಸ್ವಾತಂತ್ರ್ಯ ದೊರೆಯದೆ ಇದ್ದಾಗ ಆ ವಿಚಾರ ಸರಣಿಯು ಯೋಗ್ಯವಿದ್ದಿರಬಹುದು. ಆದರೆ ಸಾತಂತ್ರ್ಯವು ದೊರೆತ ಬಳಿಕ, ಅಂತರ್‌ರಾಷ್ಟ್ರೀಯ ರಂಗದಲ್ಲಿ ಹಿಂದುಸ್ತಾನಕ್ಕೆ ಒಂದು ಸ್ಥಾನವು ದೊರೆತ ಬಳಿಕ, ನಮ್ಮಷ್ಟಕ್ಕೆ ನಾವೇ ಇರುವ, ಎಂಬ ಕೂಪ ಮಂಡೂಕ ವೃತ್ತಿಯನ್ನು ತಾಳುವದು ಯೋಗ್ಯವೂ ಅಲ್ಲ, ಸಾಧ್ಯವೂ ಇಲ್ಲ. ಈಗ ಜಗತ್ತೆಂಬುದು ತೀರ ಸಂಕೋಚವಾಗಿದೆ. ಎಂದು ಹೇಳಬಹುದು. ರಾಷ್ಟ್ರ ರಾಷ್ಟ್ರಗಳಲ್ಲಿಯ ದೂರವು ದಿನೇ ದಿನೇ ಕಡಿಮೆಯಾಗುತ್ತ ನಡೆದಿದೆ. ವಾಹನಸಾಧನಗಳು ಹೆಚ್ಚುತ್ತಲಿವೆ. ಸುದ್ದಿಗಳಂತೂ ಪ್ರತಿಕ್ಷಣಕ್ಕೂ ಎಲ್ಲೆಲ್ಲಿಯೂ ಸುತ್ತುತಲಿವೆ. ಆದುದರಿಂದ ಯಾವ ರಾಷ್ಟ್ರವೂ ಈಗ ಪ್ರತ್ಯೇಕವಾಗಿ ತನ್ನದೇ ಆದ ಅಸ್ತಿತ್ವವನ್ನು ಇಟ್ಟುಕೊಂಡು ಹೋಗುವದು ಸಾಧ್ಯವಿಲ್ಲ. ಕ್ರಿಯೆ-ಪ್ರತಿಕ್ರಿಯೆ ಇವು ಅಪರಿಹಾರ್ಯವಾಗಿರುವವು. ಮೇಲಾಗಿ ನಾವು ಭಾಗವಹಿಸದಿದ್ದರೂ ಅಂತರ್‌ರಾಷ್ಟ್ರೀಯ ರಂಗದಲ್ಲಿ ನಡೆಯುವ ಕಾರ್ಯಕಲಾಪಗಳು ನಮ್ಮನ್ನು ಬಾಧಿಸದೆ ಬಿಡವು. ಆದುದರಿಂದ ಎಲ್ಲ ಅಂತರ್‌ರಾಷ್ಟ್ರೀಯ ಚಟುವಟಿಕೆಗಳಲ್ಲಿಯೂ ಯೋಗ್ಯವಾದ ಭಾಗವಹಿಸಿ ನಾವು ನಮ್ಮ ಹಿತಸಂರಕ್ಷಣೆಯಾಗುವಂತೆ ನೋಡಿಕೊಳ್ಳುವದು ನಮ್ಮ ರಾಷ್ಟ್ರದ ಕರ್ತವ್ಯವೆ ಆಗಿದೆ. ಶನಿಮಂಗಳಯುತಿಯಾಗುತಿದ್ದರೆ ತೆಂಗಿನಕಾಯಿ ಒಡೆಯುವ ನಾವು, ಅಥವಾ ಗ್ರಹಣ ಹಿಡಿದರೆ ನದೀಸ್ನಾನ ಮಾಡುವ ನಾವು ಅಂತರ್‌ರಾಷ್ಟ್ರೀಯ ಸಭೆ ಸಮಿತಿಗಳಲ್ಲಿ ಭಾಗವಹಿಸದಿರುವದೆಂದರೆ ಮಹಾಮೂರ್ಖತನವೇ ಸೈ!

ಜಾಗತಿಕ ಶಾಂತಿಗೆ ಸಹಾಯ

ಇನ್ನೂ ಒಂದು ಮಹತ್ವದ ಸಂಗತಿಯನ್ನು ನಾವು ಲಕ್ಷದಲ್ಲಿಟ್ಟುಕೊಳ್ಳುವದು ಅವಶ್ಯ. ಅದಾವದೆಂದರೆ ಬರಬರುತ್ತ ಜಗತ್ತು ಒಂದೇ ನಿಯಂತ್ರಣಕ್ಕೆ ಅಧೀನವಾಗುವ ಅವಶ್ಯಕತೆಯು ಹೆಚ್ಚಾಗುತ್ತ ನಡೆದಿದೆ. ಒಂದೇ ಜಾಗತಿಕ ರಾಜ್ಯದ ಸ್ಥಾಪನೆ ಈ ಹೊತ್ತಿಲ್ಲ ನಾಳೆ ಆಗದೆ ಹೋದರೆ ಜಗತ್ತೆಲ್ಲ ನಷ್ಟವೇ ಆಗುವ ಸಂದರ್ಭ ಉಂಟಾಗುತ್ತಿದೆ. ಅಣು ಬಾಂಬು ಮುಂತಾದವುಗಳ ಶೋಧವು ಈ ಮಾತುಗಳನ್ನು ಸ್ಪಷ್ಟಗೊಳಿಸುತಿದೆ. ಹೀಗಿರುವಾಗ ಹಳೆಯದಾದ, ಅನುಭವಿಯಾದ, ಸುಸಂಸ್ಕೃತವಾದ, ಬುದ್ಧಿಶಾಲಿಯಾದ, ಸಮರ್ಥವಾದ ಹಿಂದುಸ್ತಾನವು ಜಾಗತಿಕ ಶಾಂತಿ ಸ್ಥಾಪನೆಯ ಹಾಗೂ ಇತರ ಅಂತರರಾಷ್ಟ್ರೀಯ ಪ್ರಯತ್ನಗಳಲ್ಲಿ ಸಹಾಯಕವಾಗುವದು ಅದರ ಆದ್ಯ ಕರ್ತವ್ಯವಿರುವದು. ಆ ಕೆಲಸವನ್ನು ಹಿಂದೀಯರು ಮಾಡದೆ ಹೋದರೆ ಕರ್ತವ್ಯಚ್ಯುತಿಯ ದೋಷವು ಹಿಂದುಸ್ತಾನದ ಪಾಲಿಗೆ ಬರುವದು.

ಹೀಗೆ ಅನೇಕ ಮಹತ್ವದ ಕಾರ್ಯಗಳ ಮೂಲಕ ಹಿಂದುಸ್ತಾನವು ಅಂತರ್‌ರಾಷ್ಟ್ರೀಯ ರಂಗದಲ್ಲಿ ನಡೆದಿರುವ ಎಲ್ಲ ಚಟುವಟಿಕೆಗಳಲ್ಲಿಯೂ ಯಥಾಯೋಗ್ಯವಾದ ಭಾಗವನ್ನು ವಹಿಸಿಯೇ ತೀರಲಿಕ್ಕೆ ಬೇಕು. ಇಲ್ಲದಿದ್ದರೆ ಅಂಗಳದಲ್ಲಿ ನಡೆದ ಆಟವನ್ನು ನೋಡದೆ ಬಾಗಿಲು ಮುಚ್ಚಿಕುಳಿತುಕೊಂಡಷ್ಟು ಮೂರ್ಖತನವು ನಮ್ಮ ಪಾಲಿಗೆ ಬರುವದು. ನಾವು ನಮ್ಮ ಯೋಗ್ಯವಾದ ಪಾತ್ರವನ್ನು ವಹಿಸುವದರಿಂದಲೆ ನಮ್ಮ ಬಗ್ಗೆ ನಡೆದ ಅಪಪ್ರಚಾರಾದಿಗಳು ನಷ್ಟವಾಗಿಹೋಗುವವು. ನಮ್ಮ ಹಾಗೂ ಇತರ ರಾಷ್ಟ್ರಗಳ ಸಂಬಂಧವು ಹೆಚ್ಚೆಚ್ಚು ಬಂದು ನಮ್ಮ ಹೃದ್ಗತವು, ಶೀಲಸಾಮರ್ಥ್ಯಗಳು, ಸಂಸ್ಕೃತಿ ಸದಾಚಾರಗಳು ಅವರಿಗೆ ತಿಳಿಯುವವು. ಪರಸ್ಪರ ವಿಚಾರ ಆಚಾರಗಳ ವಿನಿಮಯ, ಸಹಾಯ ಸಲಹೆಗಳ ಕೊಡುಕೊಳ್ಳುವಿಕೆ ಇವು ನಡೆಯುವವು.

ಇನ್ನು ಸದ್ಯಕ್ಕೆ ನಡೆದ ಅಂತರರಾಷ್ಟ್ರೀಯ ಚಟುವಟಿಕೆಗಳಲ್ಲಿ ಎಲ್ಲಕ್ಕೂ ಎದ್ದು ಕಾಣಿಸುವಂತಹದೆಂದರೆ ಯುಕ್ತ ರಾಷ್ಟ್ರ

ಸಂಘ (ಯು. ಎನ್. ಓ.). ಅದರ ಅಂಗವಾಗಿ ಭದ್ರತಾ ಮಂಡಲ (ಸೆಕ್ಯುರಿಟಿ ಕೌನ್ಸಿಲ್) ಇತ್ಯಾದಿಗಳು ಇರುವವು. ಈಚೆಗೆ ಪ್ಯಾರಿಸದಲ್ಲಿ ನಡೆಯುತಿರುವ ಅಧಿವೇಶನದಲ್ಲಿ ಅಣು ಬಾಂಬಿನ ಸಮಿತಿಯೊಂದು ರಚಿತವಾಗಿದೆ. ಅದಕ್ಕೆ ಹಿಂದುಸ್ತಾನದವರಷ್ಟೇ ಅಲ್ಲ, ಕರ್ನಾಟಕದವರೇ ಆದ ಶ್ರೀ ಜಿನಗಲ್ಲು ನರಸಿಂಗರಾಯರು ಅಧ್ಯಕ್ಷರಾಗಿರುವರು. ಇವೆಲ್ಲ ನಮಗೆ ಒಳ್ಳೆ ಅಭಿಮಾನದ ಸಂಗತಿಗಳಲ್ಲವೆ? ಅಂದಬಳಿಕ ಈ ಅಂತರ್ ರಾಷ್ಟ್ರೀಯ ಚಟುವಟಿಕೆಗಳಲ್ಲಿ ನಾವು ಭಾಗವಹಿಸಿ ಎಷ್ಟೋ ಮಹತ್ವದ ಮಾತುಗಳನ್ನು ಮಾಡುವದು ಜಾಗತಿಕ ಶಾಂತಿಗೆ ಸಹಾಯ ಮಾಡುವದು ಸಾಧ್ಯವೆಂಬುದು ಸಿದ್ಧವಾಗುವದಿಲ್ಲವೆ?

ಇಂಟರಪಾರ್ಲಮೆಂಟರಿ ಯೂನಿಯನ್

ಅದೇ ರೀತಿ ಈ ಶಾಂತಿಸಾಧನೆಯ ಕೆಲಸವನ್ನು ಈಗ ೫೯ ವರುಷ ಮಾಡುತ್ತ ಬಂದ ಇಂಟರ-ಪಾರ್ಲಿಮೆಂಟರಿ ಯೂನಿಯನ್ ಎಂಬ ಸಂಸ್ಥೆಯು ಅತ್ಯಂತ ಮಹತ್ವದ್ದಿರುವದು. ಆ ಸಂಸ್ಥೆಯ ೩೭ ನೆ ಪರಿಷತ್ತಿನ ಅಧಿವೇಶನಕ್ಕಾಗಿಯೆ ಡಾ. ಕೇಸಕರ ಹಾಗೂ ನಾನು ಪ್ರತಿನಿಧಿಗಳಾಗಿ ಹೋಗಿದ್ದೆವು. ಆ ಸಂಸ್ಥೆಯು ಆಯಾ ಪಾರ್ಲಿಮೆಂಟುಗಳ ಮುಖಾಂತರ ಸತತ ಶಾಂತಿಯ ಬಗ್ಗೆ ಯತ್ನಿಸುತ್ತ ಬಂದಿದೆ. ಈಗಿನ 'ಯು.ಎನ್.ಓ' ಸಹ ಅಂಶತಃ ಅದರ ಪ್ರಯತ್ನಗಳ ಫಲವೇ ಎಂದು ಹೇಳಿದರೆ ತಪ್ಪಾಗಲಿಕ್ಕಿಲ್ಲ. ಅದರ ಕೇಂದ್ರ ಕಚೇರಿಯು ಜಿನೀವಾದಲ್ಲಿಯೆ ಇದೆ. ಅದೇ ಪ್ರಕಾರವಾಗಿ ಅಂತರ್ ರಾಷ್ಟ್ರೀಯ ಶ್ರಮಜೀವಿಗಳ ಸಂಘಟನೆಯೂ ಜಿನೀವಾದಲ್ಲಿದೆ. ಅದು ಬಹಳ ಉಪಯುಕ್ತವಾದ ಕೆಲಸವನ್ನು ಮಾಡುತಲಿದೆ. ಅದರಲ್ಲಿ ಈಗ ೨೦೦ ಜನ ನಿತ್ಯ ದುಡಿಯುತಲಿದ್ದಾರೆ. ಹಾಗೂ ಜಗತ್ತಿನಲ್ಲಿಯ ಶ್ರಮಜೀವಿಗಳ ಸುಖದುಃಖಗಳ ವಿಚಾರವನ್ನು ಮಾಡುತಲಿದ್ದಾರೆ.

ಹೀಗೆ ಅಂತರ್‌ರಾಷ್ಟ್ರೀಯ ರಂಗದಲ್ಲಿ ಅನೇಕ ಚಟುವಟಿಕೆಗಳು ನಡೆಯುತಲಿವೆ. ಇನ್ನೂ ಹೆಚ್ಚಾಗಿ ನಡೆಯುವವು. ಅವೆಲ್ಲ ಸ್ವತಂತ್ರ ಹಿಂದುಸ್ತಾನಕ್ಕೆ ಮುಕ್ತದ್ವಾರವಿರುವವು. ಹಿಂದೀಯರು ಈಗ ವೈಜಲ್ಲುಬಿಟ್ಟು ಅವೆಲ್ಲವುಗಳಲ್ಲಿ ಭಾಗ ವಹಿಸುವದು ಅತ್ಯವಶ್ಯ. ಕೇವಲ ಭಾಗವಹಿಸುವದೇ ಒಂದು ದೊಡ್ಡ ಕೆಲಸ ಎಂದು ಮಾತ್ರ ನಾವು ಭ್ರಮೆಗೊಳ್ಳಬಾರದು. ಆಯಾ ಚಟುವಟಿಕೆಗಳಲ್ಲಿ ಭಾಗವಹಿಸಿ ನಾವು ಹಿಂದೀಯರೆಂಬ ದೃಷ್ಟಿಯಿಂದ ವಿಶಿಷ್ಟವಾದ ಆಚಾರವಿಚಾರ, ಸಹಾಯ ಸಲಹೆ, ಸೂಚನೆ ಉಪಸೂಚನೆ ಮುಂತಾದವುಗಳನ್ನು ಮಾಡುವದು ಅತ್ಯವಶ್ಯ. ಇಲ್ಲಿಂದ ಅಲ್ಲಿಯ ವರೆಗೆ ಹೋಗಿ ಕೈ ಬೀಸುತ್ತ ತಿರುಗಿಬಂದರೆ ಅದು ಕೇವಲ ಕಾಲ ಹಾಗೂ ಹಣ ಇವುಗಳ ದುರುಪಯೋಗವಾಗುವದು. ಆದುದರಿಂದ ಹಿಂದುಸ್ತಾನದ ತರುಣರು, ಸುಶಿಕ್ಷಿತರು, ಯೋಗ್ಯತೆಯುಳ್ಳವರು, ಜಾಗತಿಕ ಪ್ರಶ್ನೆಗಳ ಅಭ್ಯಾಸವನ್ನು ಹೆಚ್ಚೆಚ್ಚು ಮಾಡಿ ಜಾಗತಿಕ ಸಮಸ್ಯೆಗಳಿಗೆ ಹೊಸಹೊಸ ಉಪಾಯಗಳನ್ನು ಹೇಳುವ ಸಾಮರ್ಥ್ಯವನ್ನು ಪಡೆಯಬೇಕು. ಹಿಂದುಸ್ತಾನವು ಇತರ ರಾಷ್ಟ್ರಗಳಿಂದ ಬಹಳ ಕಲಿಯತಕ್ಕದ್ದಿದ್ದರೂ ಇತರ ರಾಷ್ಟ್ರಗಳಿಗೂ ಹಲವು ಮಾತುಗಳನ್ನು ನಾವು ಹಿಂದೀಯರು ಕಲಿಸುವದು ಸಾಧ್ಯವೆಂಬುದನ್ನು ಸಿದ್ಧಮಾಡಿಕೊಡುವ ಹೊಣೆ ನಮ್ಮ ಮೇಲೆ ಇದೆ. ಸ್ವಾತಂತ್ರ್ಯದೊಡನೆ ಸಾಗಿಬಂದ ಅನೇಕ ಹೊಣೆಗಳಲ್ಲಿ ಇದೂ ಒಂದು ಎಂಬದನ್ನು ಅರಿತು ನಾವು ಆ ರೀತಿ ವರ್ತಿಸಿದರೆ ಸ್ವಾತಂತ್ರ್ಯವನ್ನು ಸಾರ್ಥಕಗೊಳಿಸಿ ನಮ್ಮ ಪೂರ್ವ ಪುರಾತನ ಸಂಸ್ಕೃತಿಯ ಶ್ರೇಷ್ಠತೆಯನ್ನು ಪ್ರಸ್ಥಾಪಿಸಿದ ಶ್ರೇಯಕ್ಕೆ ಪಾತ್ರರಾಗುವೆವು.



ಹಂಪೆಯ ವಿರೂಪಾಕ್ಷ ದೇವಾಲಯದ ಬಲಪೌಳಿಯ ದೃಶ್ಯ

— ಚಿತ್ರ: ನ್ಯಾಶನಲ್ ಸ್ಟುಡಿಯೋ, ಹು

* ಇಂದಿನ ವಿವಾಹ ಮತ್ತು ದಾಂಪತ್ಯಜೀವನ *

ಲೇ:— **ಕುಮಾರಿ ಕೃಷ್ಣಾ,** ಬಿ. ಎ.

ಹಿಂದುಸ್ತಾನದಲ್ಲಿ ಪುರಾತನ ಕಾಲದಿಂದಲೂ ಅವಿಭಕ್ತ ಕೌಟುಂಬಿಕ ಜೀವನಪದ್ಧತಿಯು ನಡೆದುಬಂದಿದೆ. ಇಂಥ ಮನೆಗಳಲ್ಲಿ ಎಲ್ಲ ಅಧಿಕಾರವು ಹಿರಿಯರ ಕೈಯಲ್ಲಿಯೆ ಇರುವದುಂಟು. ಚಿಕ್ಕವರ ಅಭಿಪ್ರಾಯಕ್ಕೆ ಅಲ್ಲಿ ಸ್ಥಾನವೆ ಇರುತ್ತಿರಲಿಲ್ಲ. ಚಿಕ್ಕವರ ಸಂಗೋಪನ, ಶಿಕ್ಷಣ, ಮುಂತಾದ ಕರ್ತವ್ಯಗಳೊಡನೆ ಅವರ ವಿವಾಹ ಕೂಡ ಹಿರಿಯರ ಕರ್ತವ್ಯವೆ ಆಗಿತ್ತು. ತಮ್ಮ ಮನೆತನಕ್ಕೆ ವಧುವಿನ ಮನೆತನವು ಸರಿ ಹೊಂದುವದೊ ಎಂದಷ್ಟೆ ನೋಡಿ, ವಧೂವರರ ಚಿಕ್ಕಂದಿನಲ್ಲಿಯೆ ಅವರ ಮದುವೆ ಮಾಡಿಕೊಡಲಾಗುತ್ತಿತ್ತು. ತಮ್ಮ ಅಭಿಪ್ರಾಯ ವ್ಯಕ್ತಗೊಳಿಸುವ ವಯಸ್ಸೆ ವಧೂವರರಿಗೆ ಇರುತ್ತಿದ್ದಿಲ್ಲ: ಇದ್ದರೂ ಹಿಂದೂ ಸಮಾಜದ ರೂಢಿಯ ಪ್ರಕಾರ ಹಿರಿಯರ ಅಭಿಪ್ರಾಯಕ್ಕೆ ತಲೆಬಾಗಬೇಕಾಗುತ್ತಿತ್ತು. ಅವರಿಗೆ ಯಾವ ತರಹದ ಸ್ವಾತಂತ್ರ್ಯವೆ ಇರುತ್ತಿರಲಿಲ್ಲ. ಹೀಗಾಗಿ ವ್ಯಕ್ತಿವಿಕಾಸವೆ ಆಗುತ್ತಿರಲಿಲ್ಲ.

ಬದಲಾದ ಪರಿಸ್ಥಿತಿ

ಇಂಥ ಪರಿಸ್ಥಿತಿಯು ಸುಮಾರು ೧೯೩೦ ರ ವರೆಗೆ ಇತ್ತು. ತರುವಾಯ ಆರ್ಥಿಕ ಸ್ಥಿತಿಯು ಬದಲಾವಣೆಯಿಂದ ಹುಡುಗರು ದುಡಿಯಲು ಹೊರಗೆ ಹೋಗಬೇಕಾಗಿ ಬಂತು. ಹಾಗೂ ವಿದೇಶಿ ಶಿಕ್ಷಣದ ಪ್ರಭಾವವು ಹುಡುಗರ ಮೇಲೆ ಬೀಳಹತ್ತಿ ಅವರಿಗೆ ವಿಭಕ್ತ ಕೌಟುಂಬಿಕ ಪದ್ಧತಿಯಲ್ಲಿಯೆ ವಿಶ್ವಾಸ ಬೆಳೆಯಹತ್ತಿತು. ಇದರಿಂದ ಸಾವಕಾಶವಾಗಿ ಅವಿಭಕ್ತ ಕೌಟುಂಬಿಕ ಪದ್ಧತಿಯು ಶಿಥಿಲವಾಯಿತು.

ಬದಲಾದ ಆರ್ಥಿಕ ಪರಿಸ್ಥಿತಿಯ ಮೂಲಕ ಹುಡುಗರ ಹೊಟ್ಟೆ ತುಂಬುವ ಪಾಡು ಇಲ್ಲದ ಸಮಯದಲ್ಲಿ ಮದುವೆಯಾಗಿ ಇನ್ನೊಬ್ಬ ವ್ಯಕ್ತಿಯ ಹೊಟ್ಟೆ ಹೇಗೆ ತುಂಬಬೇಕು ಎಂಬ ವಿಚಾರದಿಂದ ಹುಡುಗರು ನೌಕರಿ ದೊರೆಯುವ ವರೆಗೆ ಮದುವೆಯಾಗಲು ನಿರಾಕರಿಸಹತ್ತಿದರು. ಇದರಿಂದ ಹುಡುಗರ ಮದುವೆಯಾಗುವ ವಯಸ್ಸಿನ ಅಂಕಿಯು ಬೆಳೆಯಹತ್ತಿತು. ಪರಿಣಾಮವಾಗಿ ಬಾಲಿಕೆಯರು ಹೆಚ್ಚು ವಯಸ್ಸಿನ ವರೆಗೆ ಅವಿವಾಹಿತರಾಗಿ ಉಳಿದರು. ಮನೆಯಲ್ಲಿ ಅವಿವಾಹಿತರಾದ ವಯಸ್ಸಿಗೆ ಬಂದ ಬಾಲಿಕೆಯರನ್ನು ಸುಮ್ಮನೆ ಮನೆಯಲ್ಲಿ ಇಟ್ಟುಕೊಳ್ಳುವದಕ್ಕಿಂತ ತಾಯಿತಂದೆಗಳು ಅವರನ್ನು ಶಾಲೆಗೆ ಕಳಿಸಿದರು. ಹುಡುಗಹುಡಿಗೆಯರು ವಯಸ್ಸಿಗೆ ಬಂದವರೂ ಶಿಕ್ಷಿತರೂ ವಿದೇಶಿ ಪ್ರಭಾವಕ್ಕೆ ಒಳಗಾದವರೂ ಆಗಿದ್ದರಿಂದ ತಮಗೆ ಒಪ್ಪಿಗೆ ಇದ್ದ ವ್ಯಕ್ತಿಯನ್ನು ಮದುವೆಯಾಗಬೇಕೆಂಬ ವಿಚಾರವು ಅವರಲ್ಲಿ ಬಲಿತಿತು. ಹುಡುಗನು ಆರ್ಥಿಕ ದೃಷ್ಟಿಯಿಂದ ಸ್ವತಂತ್ರನಾಗಿರುವದರಿಂದ ವಿವಾಹದಲ್ಲಿ ಅವನ ಅಭಿಪ್ರಾಯಕ್ಕೆ ಬೆಲೆ ಬರತೊಡಗಿದೆ. ವಧೂವರರ ಪರಸ್ಪರ ಭೆಟ್ಟಿಮಾಡಿಸುವದು, ಅವರೀರ್ವರು ಮದುವೆಯಾಗಲು ಒಪ್ಪಿದರೆ ಮದುವೆಗಾಗಿ ಹಣ ಕೂಡಿಸುವದು, ಮದುವೆ ಮಾಡಿಕೊಡುವದು— ಇಷ್ಟೆ ಹಿರಿಯರ ಕರ್ತವ್ಯವೆಂಬ ವಿಚಾರವು ನಮ್ಮ ಸಮಾಜದಲ್ಲಿ ಪ್ರಾಬಲ್ಯ ತಾಳಹತ್ತಿದೆ.

" ಪ್ರೇಮ ವಿವಾಹ " ದ ಭ್ರಮನಿರಸನ

ಆದರೆ ವಧೂವರರ ಪರಸ್ಪರ ಜ್ಞಾನಕ್ಕಾಗಿ ಅವಶ್ಯವಿರುವ ಪೂರ್ವಸಿದ್ಧತೆಗೆ ನಮ್ಮ ಸಮಾಜದಲ್ಲಿ ಇನ್ನೂ ವಿಶೇಷ ಅವಕಾಶ ದೊರೆಯುವದಿಲ್ಲ. ಸ್ತ್ರೀ ಪುರುಷರು ಒಂದೆಡೆ ಕೂಡಲು ಆಸ್ಪದವಿಲ್ಲ. ಅವರ ಮಿಲನವಾದರೂ ಅದು ಗೌಣವೆಂದು ಭಾವಿಸಲಾಗುತ್ತದೆ. ಹೀಗಾಗಿ ನಮ್ಮ ವೈವಾಹಿಕ ಜೀವನದಲ್ಲಿ ' ಪ್ರೇಮ 'ದ ಪ್ರಶ್ನೆಯೆ ಉದ್ಭವಿಸುವದಿಲ್ಲ.

ಪರಸ್ಪರ ಮಿಲನಕ್ಕೆ ಆಸ್ಪದವಿಲ್ಲದ್ದರಿಂದ ನಮ್ಮಲ್ಲಿ ಪ್ರೇಮವಿವಾಹಗಳು ತೀರ ಕಡಿಮೆ. ವಧೂವರರಿಗೆ ವಿವಾಹದ ಮೊದಲು ಪರಸ್ಪರರ ಜ್ಞಾನವಿರಬೇಕು: ಎಂದರೆ ಅವರ ಭಾವೀ ಜೀವನವು ಸುಖಿಯಾಗುವದೆಂದು ಹೇಳಲಾಗುತ್ತಿದೆ. ಇದು ಏನೋ ನಿಜ. ಆದರೆ ನಮ್ಮಲ್ಲಿ ಇನ್ನೂ ಯಾವ ಕೊರತೆ ಇದೆ ಎಂದು ಹೇಳಲು ಬರುವದಿಲ್ಲ. ಹುಡುಗ--ಹುಡುಗಿಯರು ತಮ್ಮ ನಿಜ ಸ್ವಭಾವದ ಅರಿವನ್ನು ಪರಸ್ಪರರಿಗೆ ಮಾಡಿಕೊಡುವದಿಲ್ಲ. ಅವರ ಸ್ವಭಾವದಲ್ಲಿ ಒಂದು ತರಹದ ಆಡಂಬರವಿದೆ; ಕೃತ್ರಿಮತೆ ಇದೆ. ದುರ್ಗುಣಗಳನ್ನು ಬಚ್ಚಿಟ್ಟು ಇದ್ದುದಕ್ಕಿಂತ ಹೆಚ್ಚು ಯೋಗ್ಯರೆಂದು ತೋರಿಸುವ ಹಂಬಲವೂ ಇದೆ. ಮದುವೆಯ ತರುವಾಯ ನಿಜ ಗುಣಗಳು ಹೊರಬಿದ್ದು ಭ್ರಮೆಯು ದೂರವಾಗಿ ಹಲವಾರು ಸಲ ವಿಷಾದಕ್ಕೆ ಕಾರಣವಾಗುವ ಸಂಭವವಿರುತ್ತದೆ. ಹೀಗಾಗಿ ಅನೇಕ ಪ್ರೇಮವಿವಾಹಗಳು ಸುಖಿಯಾಗದಿದ್ದುದನ್ನು ನಾವು ಕಾಣುತ್ತೇವೆ.

ಮನುಷ್ಯನು ಮದುವೆಯಾಗುತ್ತ ಬಂದುದು ಪ್ರಜೋತ್ಪಾದನಾರ್ಥವಾಗಿ–ಇದೇ ವಿವಾಹದ ಅಂತಿಮ ಗುರಿ. ಈಗಲೂ ಮನುಷ್ಯನು ಇದಕ್ಕಾಗಿಯೆ ಮದುವೆಯಾಗುತ್ತಾನೆ. ಎಲ್ಲ ಧರ್ಮಗಳು ಕೂಡ ಇದೇ ಮಾತನ್ನು ಒತ್ತಿ ಹೇಳಿವೆ. ಹಿಂದೂ ವಿವಾಹದಲ್ಲಿ प्रजोत्पादनार्थं तुभ्यमहं संप्रददे । ಎಂದು ಹೇಳಲಾದರೆ ಬಾಯಬಲು Go and multiply ಎಂದು ಹೇಳಿದೆ.

ವಿವಾಹ ಮತ್ತು ಕೌಟುಂಬಿಕ ಜೀವನಕ್ಕೆ ಮನುಷ್ಯನ ಜೀವನದಲ್ಲಿ ಅತಿ ಮಹತ್ವದ ಸ್ಥಾನವಿದೆ: ಅದು ಸಂಬಂಧಪಟ್ಟ ವ್ಯಕ್ತಿಗಳ ಸುಖಕ್ಕೆ ಸಂಬಂಧಪಟ್ಟಿದೆ ಮಾತ್ರವಲ್ಲದೆ ಅವರ ಬಾಲಕರ ಸುಖಕ್ಕೂ ಸಂಬಂಧಪಟ್ಟಿದೆ. ಮೊದಲಿನ ಅವಿಭಕ್ತ ಕೌಟುಂಬಿಕ ಜೀವನ ಪದ್ಧತಿಯಲ್ಲಿ ಈಗಿನ ತರುಣ—ತರುಣಿಯರಿಗೆ ಸುಖವಿಲ್ಲ. ಮೊದಲೇ ಹೇಳಿದಂತೆ ಅಲ್ಲಿ ಚಿಕ್ಕವರ ಸ್ವತಂತ್ರ ವಿಚಾರಕ್ಕೆ, ಭಾವನೆಗೆ ಆಸ್ಪದವೆ ಇರುವದಿಲ್ಲ. ಮೊದಲಿಂದಲೂ ಹಿರಿಯರು ಹಾಕಿಕೊಡುತ್ತ ಬಂದ ಮಾರ್ಗದಲ್ಲಿಯೆ ನಡೆಯಬೇಕಾಗುತ್ತದೆ. ಜೀವನದಲ್ಲಿ ಹೊಸತನವೆ ಇರುವದಿಲ್ಲ. ಅನೇಕ ಅವಿಭಕ್ತ ಕುಟುಂಬಗಳು ಸುಖಿಯಾಗಿವೆಯೆಂದು

ಕುಮಾರಿ ಲೀಲಾ ಗುಂಜೀಕರರು ಆಧುನಿಕ ಸುಸಂಸ್ಕೃತ ಸಮಾಜದ ದಾಂಪತ್ಯ ಸಮಸ್ಯೆಯನ್ನು ಅಭ್ಯಸಿಸಿ, ದಾಂಪತ್ಯವನ್ನು ಸುಖಾವಹವಾಗಿ ಮಾಡುವ ಮಾರ್ಗಗಳನ್ನು ಹುಡುಕುವ ಕಾರ್ಯದಲ್ಲಿ ನಿರತರು. 'ಕೃಷ್ಣಾ' ಎಂಬ ಗುಪ್ತ ನಾಮದಿಂದ ''ಕರ್ಮವೀರ''ದಲ್ಲಿ ಅವರು ಹಲ ಲೇಖಗಳನ್ನು ಬರೆದಿದ್ದಾರೆ. ಬದಲಾದ ಪರಿಸ್ಥಿತಿಯಲ್ಲಿ ಇಂದು ದಂಪತಿಗಳು ಹೇಗೆ ನಡೆದುಕೊಳ್ಳಬೇಕೆಂಬದೇ ಅವರೀ ಲೇಖದ ವಿಷಯ.

ಯಾರಾದರೂ ವಾದಿಸಬಹುದು. ಆದರೆ ಇಂಥ ಮನೆತನಗಳ ಎಷ್ಟೋ ವ್ಯಕ್ತಿಗಳು ತಮ್ಮ ಭಾವನೆಗಳನ್ನು ಹತ್ತಿಕ್ಕಬೇಕಾಗುತ್ತದೆ. ಇದು ನಿಜ ಸುಖವಲ್ಲ.

ವಿಭಕ್ತ ಕುಟುಂಬದಲ್ಲಿ ಗೃಹಿಣಿಯ ಹೊಣೆ

ಕಾರಣ, ಈಗಿನ ವಾತಾವರಣಕ್ಕೆ ವಿಭಕ್ತ ಕುಟುಂಬ ಪದ್ಧತಿಯೆ ಲೇಸು. ಈಗ ಇದೇ ಪದ್ಧತಿಯು ಹಲವಾರು ಕಾರಣಗಳಿಂದ ಪ್ರಚಾರದಲ್ಲಿ ಬರಹತ್ತಿದೆ. ಇಂಥ ಕುಟುಂಬವು ಪ್ರೀತಿ ಮತ್ತು ಹಿತೈಕ್ಯ (Common interests) ದ ಮೂಲಕ ಸುಖವಾಗಿ ಬಾಳುತ್ತದೆ. ಪ್ರತಿ ವ್ಯಕ್ತಿಯು ಗೃಹಕಾರ್ಯದ ಸಂಬಂಧದ ತನ್ನ ಹೊಣೆಯನ್ನು ಆಸ್ಥೆಯಿಂದ ನಿರ್ವಹಿಸುತ್ತಾನೆ.

ಇನ್ನು ಗೃಹಕಾರ್ಯದ ಹೊಣೆಯ ಬಗ್ಗೆ ಹೇಳುವದಾದರೆ ಮೊದಲಿನ ಸ್ತ್ರೀಯರಿಗಿಂತಲೂ ಈಗಿನ ಸ್ತ್ರೀಯರ ಮೇಲೆಯೇ ಹೆಚ್ಚಾಗಿ ಹೊಣೆ ಬೀಳುತ್ತದೆ ಎಂದು ಹೇಳಬಹುದು. ಕೇವಲ ಮನೆಯೊಳಗಿನ ಕೆಲಸವನ್ನು ಸಾಗಿಸಿಕೊಂಡು ಹೋಗುವದು ಆಗಿನ ಸ್ತ್ರೀಯರ ಕರ್ತವ್ಯವಾಗಿತ್ತು. ಆದರೆ ಇಂದಿನ ಯುಗದಲ್ಲಿ ಸ್ತ್ರೀಯು ಮನೆಯೊಳಗಿನ ಕೆಲಸವನ್ನು ಸಾಗಿಸುವದಲ್ಲದೆ ಪೇಟೆ-ಕೋಟೆ, ವಿಶಿಷ್ಟ ರೀತಿಯಲ್ಲಿ ಬಾಲಕರ ಪಾಲನೆ ಮುಂತಾದ ಮನೆಗೆ ಸಂಬಂಧಿಸಿದ ಎಲ್ಲ ಕೆಲಸಗಳನ್ನು ನೋಡಿಕೊಂಡು ಹೋಗುತ್ತಾಳೆ. ಗಂಡಸು ಕೇವಲ ಹೊರಗೆ ದುಡಿದು ಹಣ ದೊರಕಿಸಿದರೆ ಆಯಿತು. ಈಗಿನ ಪತ್ನಿಯು ಗೃಹಕಾರ್ಯದಲ್ಲಿಯೇ ಆಗಲಿ ಪತಿಯ ಮಾನಸಿಕ ಹಾಗೂ ಸಾಮಾಜಿಕ ಜೀವನದಲ್ಲಿಯೆ ಆಗಲಿ ಮೊದಲಿನ ಸ್ತ್ರೀಯರಿಗಿಂತ ಎಷ್ಟೋ ಮಟ್ಟಿಗೆ ಶ್ರೇಷ್ಠಳಿದ್ದಾಳೆಂದು ಹೇಳಬಹುದು. ತನ್ನ ಪತ್ನಿಗೆ ಮನಸು ಎಂಬ ಒಂದು ವಸ್ತು ಇದೆ, ಅವಳಿಗೂ ವಿಚಾರಗಳಿವೆ ಎಂಬ ಅರಿವು ಗಂಡಸಿಗೂ ಆಗಹತ್ತಿದೆ. ಈರ್ವರೂ ಪ್ರತಿಕಾರ್ಯದಲ್ಲಿ ಪರಸ್ಪರರ ಅಭಿಪ್ರಾಯ ಪಡೆಯುತ್ತಾರೆ, ಪರಸ್ಪರರ ಮನಸು ನೋಯದಂತೆ ಜಾಗರೂಕತೆಯನ್ನು ವಹಿಸುತ್ತಾರೆ. ಪರರಿಂದ ಕುಟುಂಬದಲ್ಲಿ ಒಂದು ತರಹದ ಸುಖವಾದ ವಾತಾವರಣವು ಹರಡಿ ಅದರ ಪ್ರಭಾವವು ಮನೆಯ ಮಕ್ಕಳ ಮೇಲೂ ಬೀಳುತ್ತದೆ.

ಗಂಡಹೆಂಡಿರಲ್ಲಿ ಮೇಲು ಕೀಳಿನ ಪ್ರಶ್ನೆಯೆ ಉದ್ಭವಿಸುವದಿಲ್ಲ. ಯಾವ ದಂಪತಿಗಳಲ್ಲಿ ಈ ಪ್ರಶ್ನೆಯು ಉದ್ಭವಿಸುವದೊ ಅವರು ಎಂದಿಗೂ ಸುಖಿಯಾಗಲಾರರು. ಈರ್ವರ ಸ್ಥಾನವೂ ಅಷ್ಟೆ. ಗಂಡನು ರಾಜನಾದರೆ ಹೆಂಡತಿಯು ರಾಣಿ, ಹೆಂಡತಿಯು ದಾಸಿಯಾಗಿದ್ದರೆ ಗಂಡನು ದಾಸ.

ವಿಭಕ್ತ ಕುಟುಂಬಪದ್ಧತಿ ಲೇಸೆಂದು ಹೇಳುವದರರ್ಥ ತಮ್ಮ ಬಂಧುಬಳಗವನ್ನು ಮರೆತು ಬಿಡಬೇಕೆಂದಲ್ಲ. ಹೊತ್ತು ವೇಳೆಯಲ್ಲಿ ಅವರಿಗೆ ಸಹಾಯ ಸಲ್ಲಿಸಬೇಕು. ಎಂದರೆ ಪರಸ್ಪರ ಪ್ರೀತಿಯು ಸ್ಥಿರವಾಗಿ ಉಳಿಯುವದು. ಬಂಧು ಬಳಗದವರು ಮದುವೆಯಾಗಿ ಮನೆಗೆ ಬಂದ ಹುಡುಗಿಗೆ ತಕ್ಕ ಮರ್ಯಾದೆಯನ್ನು ಸಲ್ಲಿಸಬೇಕು. ಅವಳು ಕೂಡ ತನ್ನ ಅತ್ತೆಯ ಮನೆಯವರ ಕೂಡ ಪ್ರೇಮದಿಂದ ವರ್ತಿಸಿ. ಪತ್ನಿ, ಮಾತೆ, ಸೊಸೆ, ಸಮಾಜದ ಘಟಕ, ಮುಂತಾದ ದೃಷ್ಟಿಯಿಂದ ತನ್ನ ಹೊಣೆಯನ್ನು ಯೋಗ್ಯರೀತಿಯಿಂದ ನಿರ್ವಹಿಸಬೇಕು. ಇದರಲ್ಲಿ ಅವಳ ಕಲ್ಯಾಣ, ಅವಳ ಸಂಸಾರದ ಕಲ್ಯಾಣ, ಅವಳ ದೇಶದ ಕಲ್ಯಾಣ.

ಚೆನ್ನಾಗಿ ಬೆಳೆದ ಮಂಗಲಗುಣವುಳ್ಳ ವಧು ಜನರಲ್ಲಿ ತನ್ನ ಗೆಳೆಯನನ್ನು ತಾನೇ ಆರಿಸಿಕೊಳ್ಳುತ್ತಾಳೆ--ವೇದ.

ಯನ್ಮನಸಾ ವ್ಯಾಯತಿ ತದ್ವಾಚಾ ವದತಿ ।
ಯದ್ವಾಚಾ ವದತಿ ತತ್ ಕರ್ಮಣಾ ಕರೋತಿ ।
ಯತ್ ಕರ್ಮಣಾ ಕರೋತಿ ತದಭಿ ಸಂಪದ್ಯತೇ । – ಶ್ರುತಿ.

ಇಂದಿನ ನಮ್ಮ ಸಂಕಲ್ಪ ಮತ್ತು ಕೃತಿ

ಲೇ:— ಶ್ರೀ ಶಂ. ಬಾ. ಜೋಶಿ

ಸ್ವರಾಜ್ಯವನ್ನು ಹಾರಯಿಸಿ, ಇಂದು 'ಕೀಲೋತ್ಪಾಟೀ ವಾನರ' ನಂತೆ ತಮ್ಮ ಪಾಡು ಆಗಿದೆಯೆಂದು ಮಿಡುಕಾಡುವವರನ್ನು ಈಗ ಊರೂರಿಗೂ ಕಾಣಬಹುದಾಗಿದೆ. ಸ್ವಾತಂತ್ರ್ಯವು ದೊರೆತೊಡನೆ ತಮಗೆಲ್ಲ ಶಾಂತಿ ಸೌಖ್ಯದ ಸುಫಲಗಳು ಒಮ್ಮೆಲೆ ಅನುಭವಿಸಲಿಕ್ಕೆ ಸಿಕ್ಕುವುವೆಂದು ಎಣಿಕೆಯಲ್ಲಿದ್ದ ಹಲವರಿಗೆ, ಅದೆಲ್ಲವೂ ಕೇವಲ ಕನವರಿಕೆಯಂತಾಯಿತಲ್ಲ, ಎಂಬ ನಿರಾಶೆ. ಈ ನಿರಾಶೆಯ ಭರದಲ್ಲಿ ಹಿಂದಣ ಬ್ರಿಟಿಶ ರಾಜ್ಯವೇ ಲೇಸಾಗಿದ್ದಿತೆಂದು ನಿಡುಸುಯ್ಯುವರಿಗೂ ಕೊರತೆಯಿಲ್ಲ!

ಇದರಂತೆ, ಇನ್ನೊಂದು ತೆರನಾಗಿ ಕೊರಗುತ್ತಿರುವ ಜನಸಾಮಾನ್ಯರ ವರ್ಗವೊಂದುಂಟು. ಗಾಂಧಿಯು ನಮ್ಮ ಪುರಾತನ ಧರ್ಮ ಸಂಪ್ರದಾಯಗಳನ್ನೆಲ್ಲ ಬುಡಮೇಲು ಮಾಡಲು, ನಾಶಗೊಳಿಸಲು ಬಂದ ಒಬ್ಬ ಅಸುರನೆಂದೆನ್ನುವವರೆಗೂ ತಾತ್ವಿಕ ದ್ವೇಷವು ತಲೆಗೇರಿ ಕಡುನುಡಿವ ಸನಾತನಿಗಳೂ ಅಪರೂಪವಲ್ಲ. ಹಿಂದಕ್ಕೆ ಬುದ್ಧನು ಹುಟ್ಟಿ ವೈದಿಕ ಧರ್ಮವನ್ನು ಮಣ್ಣುಗೂಡಿಸುವ ಹೊಂಚು ಹಾಕಿದ; ಈಗ ಗಾಂಧಿಯು ಮಾಡಿದ್ದೂ ಅದಕ್ಕಿಂತ ಬೇರೆಯಲ್ಲ. ಮಹಾತ್ಮಾಜೀ ಎಂಬ ಮೋಹಕ ಹೆಸರಿನ ಆವರಣದಲ್ಲಿ ಅವನ ಉಪದೇಶದ ದೂರಗಾಮಿ ಪರಿಣಾಮಗಳ ಅರಿವು ಯಾರಿಗೂ ಉಂಟಾಗಲಿಲ್ಲ. ಸ್ವರಾಜ್ಯದ ಹುಚ್ಚಿನಿಂದ ಗಾಂಧೀಜಿಯನ್ನು ಅನುಸರಿಸುವ ಭರದಲ್ಲಿ ನಾವು ನಮ್ಮ ಸನಾತನ ಧರ್ಮಕ್ಕೆ ಎರವಾಗುವ ಹೊತ್ತುಬಂದಿದೆ! ೪೦೦೦—೬೦೦೦ ವರುಷಗಳಿಂದ ಅವ್ಯಾಹತವಾಗಿ ನಡೆಯುತ್ತ ಬಂದ ವರ್ಣಾಶ್ರಮ ಧರ್ಮವು,–ಯಾವುದು ಭಾರತೀಯ ಸಂಸ್ಕೃತಿಯ ತಿರುಳೆಂದು ಪಾಶ್ಚಾತ್ಯ ಪಂಡಿತರು ಕೂಡ ಒಪ್ಪಿಕೊಂಡಿರುವರೊ ಅದು,–ಹೇಳಹೆಸರಿಲ್ಲದಂತಾಗುವ ಗಂಡಾಂತರವು 'ಆ' ಎಂದು ಬಾಯ್ದೆರೆದು ನಮ್ಮೆದುರು ನಿಂತಿದೆ! ಏಕೆಂದರೆ ಜಾತಿಭೇದಗಳನ್ನು ನಾಶಮಾಡದೆ ನಮಗೆ ಸ್ವರಾಜ್ಯವೇ ದಕ್ಕಲಾರದಂತೆ!

ಸಂಕಲ್ಪ ಶುದ್ಧಿ ಬೇಕು

ಈ ತೆರನಾದ ಒಂದಿಲ್ಲೊಂದು ಬಗೆಯ ಸಂಘರ್ಷಣವು ಮನಸಿನಲ್ಲಿ ತಾಂಡವವಾಡಿ ಬಹುಜನರು ತಲ್ಲಣಗೊಳ್ಳುತ್ತಿರುವರೆಂಬುದನ್ನು ಅಲ್ಲಗಳೆವಲ್ಲಿ ಅರ್ಥವಿಲ್ಲ. ಈ ತಳಮಳವು ಭ್ರಾಂತಿಯುಕ್ತವಾದುದು; ಆದುದರಿಂದ ಬೇಗನೆ ಹೋಗಲೇಬೇಕು. ಹೋಗಲೂ ಬಹುದು, ಇದೆಲ್ಲವೂ ನಿಜವಾದರೂ ಜನಮನದಲ್ಲಿ ಬ್ರಿಟಿಶ ರಾಜ್ಯವೇ ಲೇಸೆಂಬ ಬಗೆಯ ವಿಚಾರವು ಕ್ಷಣಹೊತ್ತಾದರೂ ಮತ್ತೆ ತಲೆದೋರುವುದು, ಆ ಜನಗಳ ಹೃದಯ ಮತ್ತು ಬುದ್ಧಿಗಳ ದೌರ್ಬಲ್ಯದ, ಅನಾರೋಗ್ಯದ ಸೂಚಕವೆಂದು ಒಪ್ಪಲೇಬೇಕಷ್ಟೆ? ಜನರು ತಮ್ಮ ಸ್ವರಾಜ್ಯಕ್ಕಿಂತಲೂ ಪರಕೀಯ ಸು-ರಾಜ್ಯವೇ ಕಲ್ಯಾಣಕರವೆಂದು ಬಗೆಯುವುದಾಗಲಿ, ಈ ಸ್ವಾತಂತ್ರ್ಯ ಬಂದು ಧರ್ಮವು ಹಾಳಾಯ್ತು, ಜಾತಿಸಂಕರವುಂಟಾಯ್ತು ಎಂದು ಸಂಭ್ರಾಂತರಾಗಿ ಕಸಿವಿಸಿಗೊಳ್ಳುವುದಾಗಲಿ ಅವರಲ್ಲಿ ಹಾಗೆಯೆ ಒಳಗೊಳಗೇ ಉಳಿದುಕೊಂಡರೆ ನಮ್ಮ ನಾಡಿನ ಸ್ವಾತಂತ್ರ್ಯದ ಅಡಿಗಲ್ಲೇ ಅದಿರುತ್ತದೆಯೆಂಬಲ್ಲಿ ಸಂದೇಹವಿಲ್ಲ.

ಆದುದರಿಂದ, ಈಗ ಪಡೆದುಕೊಂಡ ಸ್ವಾತಂತ್ರ್ಯವನ್ನು ಉಳಿಸಿಕೊಳ್ಳಬೇಕೆಂದು ನಿಜವಾಗಿಯೂ ಎನಿಸುತ್ತಿದ್ದವರು ಜನಸಾಮಾನ್ಯರ ಮನದಲ್ಲಿ ಬೇರುಬಿಡುತ್ತಿರುವ ಮೇಲಣ ಸ್ವರೂಪದ ಮುಳ್ಳುಗಳ್ಳಿಯನ್ನು ಆಮೂಲಾಗ್ರ ನಾಶಮಾಡುವುದು ಮೊದಲನೆಯ ಕೆಲಸವಾಗಿದೆ. ಹೆದರಿಕೆ ಬೆದರಿಕೆಗಳಿಂದ ಈ ಭಾವನೆಯನ್ನು ತಳ್ಳಿಬಿಡುವುದು ಯುಕ್ತವೂ ಅಲ್ಲ; ಸಾಧ್ಯವೂ ಇಲ್ಲ. ಜ್ಞಾನಾಗ್ನಿಯಿಂದ ಮಾತ್ರ ವಿಷವೃಕ್ಷದ ಬೇರುಗಳನ್ನು ಕೂಡ ಸುಟ್ಟುಬಿಡುವುದು ಸಾಧ್ಯವಾಗಿದೆ.

ಮಾನವನ ಮನೋಭಾವವು ಎಂತಹದೊ ಅಂತಹ ಕಾರ್ಯವು ಅವನಿಂದ ಒದಗುತ್ತಿರುತ್ತದೆ. ಈ ಮನೋಭಾವವೆ ದೃಢವಾಗಿ ಸಂಕಲ್ಪವೆನಿಸುತ್ತದೆ. ಭಾವನೆ—▷ ಸಂಕಲ್ಪ—▷ ಕೃತಿ ಇವು ಒಂದರೊಳಗಿಂದ ಒಂದು ಕೊನರಿ ಗೊನೆಬರುವುವು. ಆದಕಾರಣ ಕರ್ಮಶುದ್ಧಿಗೆ ಸಂಕಲ್ಪವು ಪವಿತ್ರವಾಗಿರುವುದು ಅವಶ್ಯ; ಸಂಕಲ್ಪದ ಪಾವಿತ್ರ್ಯಕ್ಕೆ ಭಾವನೆಗಳು ಉದಾತ್ತವಾಗಿರುವುದು ಅವಶ್ಯ.

ಮನುಷ್ಯನು ಮೊದಲು ತನಗೆ ಏನೋ ಎನಿಸಿದಂತೆ ಬಯಸುವನು. ಬಯಸಿದುದನ್ನು ಪಡೆದುಕೊಳ್ಳಲು ಹೆಣಗುವನು, ಹೋರುವನು; ಕೋರಿ, ಹೋರಿ ಪಡೆದುಕೊಂಡುದರ ಸಿಹಿ-ಕಹಿಗಳು ತಿಳಿದಂತೆ ಆತನ ತಿಳಿವಳಿಕೆಯು ಹೆಚ್ಚುವುದು; ತಿಳಿವಳಿಕೆಯು ಹೆಚ್ಚಿದಂತೆ ತನ್ನ ಎನಸಿಕೆಗಳನ್ನು ಮಾರ್ಪಡಿಸಿಕೊಳ್ಳಲಾರಂಭಿಸುವನು. ಆದುದರಿಂದ

ಎನಸಿಕೆ—▷ ಬೇಳ್ಕೆ—▷ ಮಾಳ್ಕೆ—▷ ತಿಳಿವು

ಇದು ಮಾನವನಲ್ಲಿ ಜ್ಞಾನೋದಯವಾಗುವ ಕ್ರಮವೆಂದು ಹೇಳಬಹುದು. (ಭಾವನೆ—ಸಂಕಲ್ಪ—ಕೃತಿ—ಜ್ಞಾನ).

ನಿನ್ನಿನ ಸಂಕಲ್ಪದ ಫಲ ಇಂದಿನ ಕೃತಿ. ಇಂದಿನ ಸಂಕಲ್ಪ ನಾಳಿನ ಫಲ. ಆದಕಾರಣ, ನಮ್ಮ ಜನಗಳು ಈಗ ದೊರೆತ ಸ್ವಾತಂತ್ರ್ಯವು ಯಾವುದೇ ನೆವದಿಂದಾಗಲಿ, ನಿರುಪಯುಕ್ತ ಅಥವಾ ನಿರರ್ಥಕವೆಂಬ ಭಾವನೆಗೆ ಎಡೆಗೊಟ್ಟರೆ ಮುಂದೇನು ಗತಿ!

ಸ್ವಾತಂತ್ರ್ಯದೊರೆತು ಇನ್ನೂ ವರ್ಷವಾಗಿದೆಯಷ್ಟೆ, ಈಗಾಗಲೆ ಹಲವರು ಅಸಂತುಷ್ಟರಾಗಿ ಇದಕ್ಕಿಂತ ಬ್ರಿಟಿಶ ರಾಜ್ಯವೇ ಒಳಿತಾಗಿತ್ತೆಂದು ಗೊಣಗುಟ್ಟುವದು ಕೇಳಿಬರುತ್ತಿದೆ. ಇದು ಭಾರತದ ಭಾವೀ ಅಭ್ಯುದಯಕ್ಕೆ ಅತ್ಯಂತ ಘಾತಕವಾದ ಮನೋವೃತ್ತಿ. ಸುರಾಜ್ಯಕ್ಕಾಗಿ ಸ್ವರಾಜ್ಯವನ್ನು ಬಿಟ್ಟುಕೊಡುವದು ಎಂದಿಗೂ ಸಲ್ಲದು. ಇಂದಿನ ನಮ್ಮ ಸಂಕಲ್ಪವೇ ನಾಳಿನ ನಮ್ಮ ಭಾಗ್ಯದ ಬೀಜ. ಅದರಿಂದ ಪ್ರತಿನಾಗರಿಕನೂ ಗೊಣಗುವದನ್ನು ಬಿಟ್ಟು ಸ್ವತಂತ್ರ ನಾಗರಿಕನ ಕರ್ತವ್ಯದಲ್ಲಿ ತತ್ಪರನಾಗಬೇಕು . . . ಎಂದು ಕನ್ನಡ ನಾಡಿನ ಉತ್ತಮ ವಿಚಾರಪರ ಲೇಖಕರಾದ ಶ್ರೀ ಶಂ. ಬಾ. ಜೋಶಿಯವರು ಇಲ್ಲಿ ಪ್ರತಿಪಾದಿಸಿದ್ದಾರೆ.

ಸ್ವರಾಜ್ಯಕ್ಕಿಂತ ಸು-ರಾಜ್ಯ ಮೇಲಲ್ಲ

ಇಂದಿನ ಸ್ವರಾಜ್ಯಕ್ಕಿಂತಲೂ ಹಿಂದಿನ ಬ್ರಿಟಿಶ ರಾಜ್ಯವೇ ಹಿತಕರವಾಗಿತ್ತೆಂಬ ಅಪವಿತ್ರವಾದ, ವಿಚಾರವು ಕನಸಿನಲ್ಲಿ ಕೂಡ ಮನಸಿಗೆ ಸೋಂಕಬಾರದು. ಎಷ್ಟೇ ಸು-ರಾಜ್ಯವಾಗಿದ್ದರೂ ಅದು ಪರಕೀಯರದಾಗಿದ್ದರೆ, ಎಷ್ಟೇ ಅವ್ಯವಸ್ಥಿತವಾಗಿರುವ ಸ್ವರಾಜ್ಯದ ಪಾಸಂಗಕ್ಕೂ ಅದು ಬಾರದು. ಹಂಗಿನ ಅರಮನೆಗಿಂತ ತಂಗುಳಿನ ಗುಡಿಸಲೇ ಮಿಗಿಲೆಂದು ಸ್ವಾಭಿಮಾನಿಗಳಾದ ಮಾನವಂತರೆಲ್ಲರೂ ಒಪ್ಪತಕ್ಕ ಮಾತಾಗಿದೆ. ಅಕ್ಕರೆ, ಕಕ್ಕುಲತೆಯ ಲವಲೇಶವೂ ಇಲ್ಲದ ಖಾನಾವಳಿಯ ಸವಿಗೂಳಿಗಿಂತಲೂ ಮನೆಯವರು ನಲ್ಮಾತುಗಳಿಂದ ಆದರ ಪ್ರೀತಿಗಳಿಂದ ಉಣಬಡಿಸುವ ಸಾಮಾನ್ಯ ಊಟದಿಂದಲೂ ಜೀವವು ತೃಪ್ತಿಗೊಳ್ಳುತ್ತದೆ. ಈ ಕಾರಣದಿಂದಲೇ, 'ಸ್ಮಶಾನಶಾಂತಿಯ ಪರಕೀಯರ ಸುರಾಜ್ಯಕ್ಕಿಂತಲೂ ಅಶಾಂತಿಯಲ್ಲಿರಬೇಕಾದರೂ ಸ್ವರಾಜ್ಯವೇ ನಮಗಿರಲಿ' ಎಂದು ಮಹಾತ್ಮಾಜಿಯವರು ತಮ್ಮ ಲೇಖನಗಳಲ್ಲಿ ಹಲವು ಬಾರಿ ಈ ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದಾರೆ. ಬ್ರಿಟಿಶರು ಮಜ್ಜಿಗೆಯನ್ನು ನಮಗೆ ಉಣಬಡಿಸಿ, ತಮ್ಮ ಬಿಳಿಯರ ಬಳಗಕ್ಕೆಲ್ಲ ಬೆಣ್ಣೆಯನ್ನೇ ಮೀಸಲಾಗಿರಿಸಿ ಅವರಿಗೆ ಎಲ್ಲವನ್ನೂ ಹಂಚುತ್ತಲಿದ್ದರು. ಇಂಗ್ಲಂಡಿಗೆ ಹೊನ್ನಿನ ಹೊಳೆ ಹರಿಯುತ್ತಲಿತ್ತು. ಈಗ ಪರದೇಶಕ್ಕೆ ಹೊರಟ ಸುವರ್ಣದ ಹೊಳೆಯು ಹರಿಗಡಿದಿತು. ನಮ್ಮ ದೇಶದ ಯಾವ ಪಕ್ಷದವರೇ ತಿನ್ನಲಿ, ಯಾವ ಜಾತಿಯವರೆ ಅಧಿಕಾರದಲ್ಲಿರಲಿ, ಅವರೆಲ್ಲ ನಮ್ಮ ರಾಷ್ಟ್ರದವರೇ ಆಗಿರುವುದರಿಂದ ಸಂಪತ್ತು ನಮ್ಮ ರಾಷ್ಟ್ರದ ಹೊರಗೆ ಹೋಗುವ ಸಂಭವವಿಲ್ಲ. ನಮ್ಮ ರಾಷ್ಟ್ರದಲ್ಲಿಯೆ ಉಳಿಯುವ ಸಂಪತ್ತಿನ ಲಾಭವು ಒಂದಿಲ್ಲೊಂದು ಬಗೆಯಿಂದ ಉಳಿದವರಿಗೂ ದೊರೆಯದೆ ಇರುವುದು ಸಾಧ್ಯವೆ ಇಲ್ಲ.

ಗಿಡನೆಟ್ಟ ಮರುದಿನವೆ ಅದು ಫಲಬಿಡುತ್ತಿರುವುದಿಲ್ಲ. ಆದಕಾರಣ ಸ್ವರಾಜ್ಯವೃಕ್ಷಕ್ಕೂ ಸುಫಲಗಳು ಬರಲು ಕೆಲವೊಂದು ಕಾಲವು ಬೇಡವೆ? ಗಿಡ ಹಚ್ಚಿ ವರ್ಷವಾಗುವುದರೊಳಗಾಗಿ ಹಣ್ಣು ಬಿಡಲೊಲ್ಲದೆಂದು ಕಿತ್ತಿಹಾಕುವ ವಿಚಾರಗಳು ತಲೆಯಲ್ಲಿ ಸುಳಿಯುವುದು ಅವಿಚಾರದ—ದುರ್ದೈವಿಯ ಲಕ್ಷಣವಲ್ಲವೆ? ಪ್ರಾಮಾಣಿಕತನ, ದೇಶಾಭಿಮಾನ, ತ್ಯಾಗ, ಸೇವೆಗಳ ನೀರು-ಗೊಬ್ಬರ ಹಾಕಿ ಸ್ವಾತಂತ್ರ್ಯವೃಕ್ಷವನ್ನು ಸಂವರ್ಧಿಸುವ ಕೆಲಸಕ್ಕೆ ಅಣಿಯಾಗುವುದನ್ನು ಬಿಟ್ಟು, ಅವಿವೇಕಿಗಳಂತೆ ವಿಪರೀತ ಭಾವನೆಗಳಿಗೆ ಇಂಬುಗೊಟ್ಟು ಆದರ ಚಂಡಿ ಚಿವುಟುವುದು ನ್ಯಾಯವಾದೀತೆ?

ಸ್ವರಾಜ್ಯದ ಆಡಳಿತದಲ್ಲಿ ಅನುಭವವಿಲ್ಲದ ನಮ್ಮ ಜನ ಅಡಿಗಡಿಗೆ ತಪ್ಪುಗಳನ್ನು ಮಾಡುತ್ತಿದ್ದಾರೆ. ಬ್ರಿಟಿಶರಂತೆ ರಾಜ್ಯತಂತ್ರಜ್ಞರು ನಮ್ಮವರಲ್ಲವೆಂದು ಗೊಣಗುವವರು ಕೆಲರುಂಟು. ಆದರೆ ಮಾಡಿ ಅನುಭವ ಪಡೆಯದೆ ತಿಳಿವಳಿಕೆ ಬರುವ ಸಂಭವವಾದರೂ ಉಂಟೆ? ತಪ್ಪುಗಳಾಗುತ್ತವೆಂದು ಏನನ್ನೂ ಮಾಡಲು ಹವಣಿಸದೆ, ಅಥವಾ ಮಾಡಲು ಅವಕಾಶವನ್ನೆ ಕೊಡದೆ ಇದ್ದರೆ ಆ ಜನಗಳು ಎಂದೆಂದಿಗೂ ಅಜ್ಞಾನದಲ್ಲಿಯೆ ಕೊಳೆಯಬೇಕಾದೀತಲ್ಲವೆ? ಹಾಗಾದರೆ ಜಗತ್ತಿನ ಪ್ರಳಯಕಾಲದ ವರೆಗೂ ಬ್ರಿಟಿಶರೇ ನಮ್ಮನ್ನಾಳಬೇಕೆಂದು ಈ ಟೀಕಾಕಾರರ ಅಭಿಪ್ರಾಯವೊ?

ಸ್ವಾತಂತ್ರ್ಯದ ವ್ಯಾಖ್ಯೆಯೇನು?

ಸ್ವಾತಂತ್ರ್ಯದ ವ್ಯಾಖ್ಯೆಯನ್ನು ಒಂದೆಡೆಗೆ ಮಹಾತ್ಮಾಜೀಯವರು ಬಹಳ ಸುಂದರವಾಗಿ ಒಡನುಡಿದಿದ್ದಾರೆ. ತಪ್ಪುಗಳನ್ನು ಮಾಡುವ ಹಕ್ಕು, ಎಂದರೇ ಸ್ವಾತಂತ್ರ್ಯ. ಅಂತಃಸಾಕ್ಷಿಯಾಗಿ-ಪ್ರಾಮಾಣಿಕತನದಿಂದ ಕೆಲಸಗಳನ್ನು ನೆರವೇರಿಸುವಾಗ ಆದ ತಪ್ಪು ತಪ್ಪಲ್ಲ. ಅದು ನಮಗೆ ಇನ್ನೂ ಹೆಚ್ಚಿನ ತಿಳಿವಳಿಕೆಯನ್ನು ಪಡೆಯಲಿಕ್ಕೆ, ಪರಿಣತರಾಗುವುದಕ್ಕೆ ಬಂದ ಮೂಕ ಎಚ್ಚರಿಕೆ. ಆದ ತಪ್ಪುಗಳಿಂದ ಜಾಗ್ರತರಾಗಿ, ಹೆಚ್ಚುಹೆಚ್ಚಿನ ಎಚ್ಚರದಿಂದ, ದಕ್ಷತೆಯಿಂದ ಕೆಲಸಗಳನ್ನು ಮಾಡುತ್ತ ಹೋದಂತೆ ನಮ್ಮ ಕಾರ್ಯದಲ್ಲಿ ಯಶಸ್ಸು ದೊರೆಯಲೆಬೇಕು; ಸುಖ-ಸಮಾಧಾನಗಳು ಸಿಕ್ಕಲೆಬೇಕು. ಇನ್ನೊಬ್ಬರ ಕೃಪೆಯ ಭಿಕ್ಷೆಯಿಂದ ಜೀವಿಸುವ ಮಾನವರಿಗೆ ಸ್ವಾವಲಂಬಿಯ ಸ್ವಾತಂತ್ರ್ಯ ಸುಖದ ಕಲ್ಪನೆಯು ಬಾರದು. ಪಂಜರದಲ್ಲಿ ಒಡೆಯನಿಂದ ಹಣ್ಣುಗಳನ್ನು ಪಡೆದು ಸಂಭ್ರಮೆಯಲ್ಲಿರುವ ಗಿಳಿಗೆ, ತನ್ನ ರೆಕ್ಕೆಗಳಿಂದಲೆ ಮರದಿಂದ ಮರಕ್ಕಲೆದು ಇನಿವಣ್ಗಳನ್ನು ಸವಿದು ತಣಿದಾಗ ಉಂಟಾಗುವ ಶಾಂತಿಸೌಖ್ಯದ ಕಲ್ಪನೆಯೂ ಬಾರದು. ಪಾರತಂತ್ರ್ಯದ ಕಗ್ಗತ್ತಲೆಯಲ್ಲಿ ನೂರಾರು ವರುಷ ಇರಬೇಕಾಗಿದ್ದವರಿಗೆ ಒಮ್ಮೆಲೆ ಹೊರಗೆ ಬಂದು ಸ್ವಾತಂತ್ರ್ಯಸೂರ್ಯನ ಹೊಂಬೆಳಕನ್ನು ಕಾಣುವಾಗ ಕಣ್ಣುಕುಕ್ಕಿದಂತಾಗಿ ನಮ್ಮನ್ನು ಇಷ್ಟು ಬೆಳಕಿನಲ್ಲಿ ಏಕೆ ತಂದು ನಿಲ್ಲಿಸಿದರೆಂದು ಗೊಣಗುಟ್ಟುವವರಂತಾಗಿದೆ, ನಮ್ಮ ನಾಡಿನ ಸಂಕುಚಿತ ದೃಷ್ಟಿಯ ಹಲವು ಜನಗಳ ಪಾಡು!

ಮಗು ನಡೆಯನ್ನು ಕಲಿವಾಗ, ತಳರಡಿಗಳನ್ನಿಕ್ಕುವಾಗ ಬೀಳುವುದೆಂದು ಅದಕ್ಕೆ ನಡೆಯಗೊಡಲಾಗದೆ? ಇನ್ನೊಬ್ಬರ ಹೆಗಲ ಮೇಲೇರಿ ಜೀವನ ಸಾಗಿಸುವವನ ಬಾಳು ಬಾಳೆ? ಬ್ರಿಟಿಶರ ಮಾಯಾವಿ

ರಾಜ್ಯದಾಡಳಿತಕ್ಕೆ ಮನಸೋತ ಪರಾವಲಂಬಿಗಳು ಮೇಲಣ ಮಾತನ್ನು ವಿಚಾರಿಸಿನೋಡಲಿ. ಅವರಿಗೂ ಬ್ರಿಟಿಶರಿದ್ದುದೇ ಚೆನ್ನಾಗಿದ್ದಿತೆಂಬ ವಿಚಾರದ ಹೇಸಿಕೆಯುಂಟಾಗದೆ ಇರದು.

ಮೈಗಳ್ಳನಾಗುವದು ಬೇಡ

ಮನುಷ್ಯನು ಬಹುಬೇಗನೆ ಮೈಗಳ್ಳನಾಗುತ್ತಾನೆ; ಮೈಗಳ್ಳತನವು ನೆಲೆಗೊಂಡಂತೆ ಜೀವಗಳ್ಳತನವೂ ಬಂದು ಸೇರುವುದು. ಪರಿಶ್ರಮ ಬೇಡ, ತಪಸ್ಸು ಬೇಡ. ಕೆಲಸಮಾಡುವವರಿಗೆ 'ಕೆಲಸಿಗರು' ಎಂದೆಂಬ ಕೆಟ್ಟ ಚಟ ನಮ್ಮನ್ನು ಅಂಟಿಕೊಂಡಿದೆ! ಇದೆಲ್ಲವೂ ಪರಾವಲಂಬಿಗಳ ಮನೋವೃತ್ತಿಯ ಪ್ರದರ್ಶನವು.

ರಾಜ್ಯಭಾರದ ಹೊಣೆಗಾರಿಕೆಯನ್ನು ಹೊತ್ತು ಮೈನುಗ್ಗಾಗಬಾರದು, ದಣಿವು ತಟ್ಟಬಾರದೆಂದು ಕೆಲರು 'ಬ್ರಿಟಿಶರೆ ಲೇಸೆಂದರು; ಅದರಂತೆ, ಸ್ವಂತದ ಪರಿಶ್ರಮದಿಂದ ಸತ್ಯಾಸತ್ಯತೆಯ ಯುಕ್ತಾ-ಯುಕ್ತ ವಿಚಾರ ಮಾಡುವ ಕಷ್ಟಗಳು ಬೇಡವೆಂದು ಇನ್ನು ಹಲವರು ರೂಢಿ-ಸಂಪ್ರದಾಯಗಳ ಯಾಂತ್ರಿಕ ಚಕ್ರದಲ್ಲಿ ಸಿಲುಕಿಕೊಂಡು ಅವು ತಿರುಗಿಸುವಂತೆ ಸುತ್ತುತಿರುಗುತ್ತ ಕಾಲಹರಣ ಮಾಡುವುದೆ ಸುಖಕರವೆಂದು ಬಗೆದಿರುವರು. ಅದರಿಂದ ತನ್ನ ದಣಿವು ಉಳಿಯುವುದೆಂದು ಇವರ ಗ್ರಹಿಕೆ.

ಆದರೆ, ರೂಢಿ ಸಂಪ್ರದಾಯಗಳೆಂದರೇ ಧರ್ಮವಲ್ಲ, ಧರ್ಮವು ಜೀವನದೊಡನೆ ಅವಿಗಲಿತವಾಗಿ ಬೆರೆತುಕೊಂಡಿರುತ್ತದೆ. ರೂಢಿ-ಸಂಪ್ರದಾಯಗಳೆಂದರೆ ಜೀವನಗಂಗೆಯಲ್ಲಿ ಮಿಂದು ನಲಿದಾಡಲು ಅದರ ಅಡಿಯಲ್ಲಿ ಕಟ್ಟಿದ ಘಟ್ಟ (ಘಾಟ) ಗಳು. ನದಿಯು ಕಾಲಕಾಲಕ್ಕೆ ತನ್ನ ಪ್ರವಾಹವನ್ನು ಬದಲಿಸುತ್ತಿರುವುದು ಲೋಕದಲ್ಲೆಲ್ಲ ಅನುಭವದ ಸಂಗತಿಯಾಗಿದೆ. ಆದುದರಿಂದ ಧರ್ಮಾತ್ಮರು ಒಮ್ಮೆ ಕಟ್ಟಿಸಿದ ಘಟ್ಟಗಳು ಸದಾ ಕಾಲದಲ್ಲೂ ಜನರಿಗೆ ಉಪಯುಕ್ತವಾಗಿಯೇ ಉಳಿಯುವುವೆಂಬದು ನಿಶ್ಚಿತವಿಲ್ಲ. ಗಂಗೆಯ ಪಾತ್ರವು ಬದಲಾದಂತೆ ಮತ್ತೆ ಪ್ರವಾಹದ ಹತ್ತಿರಕ್ಕೆ ಹೊಸ ಘಟ್ಟಗಳನ್ನು ಕಟ್ಟಿಕೊಂಬುವುದು ಕರ್ತವ್ಯವಾಗಿದೆ.

ಒಂದು ಕಾಲದ ಪರಿಸ್ಥಿತಿ ಇನ್ನೊಂದು ಕಾಲಕ್ಕೆ ಉಳಿದಿರುವುದಿಲ್ಲ. ಆದುದರಿಂದ ದೇಶ-ಕಾಲಕ್ಕೆ ಅನುಗುಣವಾಗಿ ಜೀವನ ರೀತಿಗಳು ಮಾರ್ಪಡದೆ ಗತಿಯಿಲ್ಲ. ಆ ಜೀವನ ರೀತಿಗೆ ಅನುಸರಿಸಿ ಹೊಸ ರೂಢಿ-ಸಂಪ್ರದಾಯಗಳು ತಾವಾಗಿಯೆ ತಲೆದೋರುತ್ತವೆ.

ಕಾಲಾನುಸಾರ ಬದಲಾವಣೆ ಅವಶ್ಯ

ಆತ್ಮವು ಅಮರ; ದೇಹವು ಕಾಲಕಾಲಕ್ಕೆ ಬದಲಾಗುವುದೆಂದು ನೆರೆನಂಬಿರುವ ಭಾರತೀಯರು ಧರ್ಮದ ದೇಹವೆನಿಸುವ ಆಚಾರ ಎಂದರೆ ರೂಢಿ ಸಂಪ್ರದಾಯಗಳೂ ಕಾಲಕಾಲಕ್ಕೆ ಬದಲಾಗುವುದು ಅನಿವಾರ್ಯವೆಂದು ಗ್ರಹಿಸಲು ಇಷ್ಟು ಕಷ್ಟವಾಗಬೇಕೆ? ಧರ್ಮವು ಸನಾತನ; ನಿತ್ಯ; ನಿಜ. ಸತ್ಯ, ಅಹಿಂಸೆ, ದಯೆ, ಪ್ರೀತಿ, ತ್ಯಾಗ, ತಪಸ್ಸು ಇಂತಿವೆಲ್ಲ ಅಮರ. ಆದರೆ ಈ ನಿತ್ಯ ಗುಣಗಳು ವ್ಯಕ್ತವಾಗುವ ರೀತಿ ಪರಿಸ್ಥಿತಿಗನುಗುಣವಾಗಿ ಕಾಲಕಾಲಕ್ಕೆ ಮಾರ್ಪಡುವುದು ಮಾರ್ಪಡಲೇಬೇಕು. ಅದನ್ನು ತಪ್ಪಿಸಬೇಕೆನ್ನುವುದೂ ದೇಹವು ಹಣ್ಣಾಗಲದಂತಾದರೂ ಅದನ್ನು ಉಳಿಸಿಕೊಳ್ಳಲೇಬೇಕೆಂದು ಯೋಗಾದಿ ಸಾಧನಗಳ ಮೂಲಕ ಒದ್ದಾಡುವುದೂ ಎರಡೂ ಒಂದೇ. ಈ ಬಗೆಯ ಕಾಲವಂಚನೆಯಲ್ಲಿ ನಮ್ಮ ಆತ್ಮವಂಚನೆಯೆ ವ್ಯಕ್ತವಾಗುತ್ತದೆ. 'ವಾಸಾಂಸಿ ಜೀರ್ಣಾನಿ ಯಥಾ ವಿಹಾಯ, ನವಾನಿ ಗೃಹ್ಣಾತಿ' .... ಎಂಬ ಗೀತಾವಚನವನ್ನು ನಿತ್ಯವೂ ಪಠಿಸುವವರು ನಿರ್ಜೀವ ಆಚಾರ-ರೂಢಿ ಸಂಪ್ರದಾಯಗಳನ್ನು ಮಾತ್ರ ಇನ್ನೂ ಉಳಿಸಿಕೊಳ್ಳಬೇಕೆಂದು ಹಂಬಲಿಸುವುದು ನಗೆಗೀಡುವಂತಹದಾಗಿದೆ. ಹೊಸತಾಗಿದ್ದಾಗ ಅದು ಎಷ್ಟೇ ಪ್ರೀತಿಯ ಬಟ್ಟೆಯಾಗಿದ್ದರೂ ಹರಿದೊಡನೆ ಅಥವಾ ಉಪಯೋಗಕ್ಕೆ ಬಾರದಾಗುತ್ತಲೆ ಅದನ್ನು ಬಿಟ್ಟುಕೊಡಲೇ ಬೇಕಷ್ಟೆ?

ಇಂದ್ರ, ಅಗ್ನಿ, ವರುಣರ ಬದಲು ಗಿರಿಯ ವೆಂಕಟ, ಉಡುಪಿ ಕೃಷ್ಣ, ಶ್ರೀಶೈಲ ಮಲ್ಲಿಕಾರ್ಜುನ, ತುಳಜಾಪುರ ಭವಾನಿ ನಮ್ಮ ಇಷ್ಟದೇವತೆ ಕುಲದೇವತೆಗಳಾದರು; ಹೆಸರು, ರೀತಿ ಬದಲಾದರೂ ಪೂಜಾ-ಪ್ರಾರ್ಥನೆಗಳು ಉಳಿದುಕೊಂಡೇ ಇವೆಯಷ್ಟೇ? ಹಳೆಯ ದೇವರ ಬದಲು ಹೊಸ ದೇವರು ಬಂದರು. ಸಂಸ್ಕೃತದ ಭಾಷೆಯ ಸ್ಥಳದಲ್ಲಿ ದೇಶೀಯ ಮಾತುಗಳು ನುಸುಳಿಕೊಂಡವು. ತೊಗಲು, ತೊಗಟೆ, ನಾರುಗಳಿಂದ ಉಡುಪು ಮಾಡಿಕೊಳ್ಳುತ್ತಿದ್ದವರು ನೂಲು, ರೇಶ್ಮೆಗಳಿಂದ ಬಟ್ಟೆಗಳನ್ನು ಸಿದ್ಧಪಡಿಸಿಕೊಳ್ಳುತ್ತಿಲ್ಲವೆ? ಆದರೂ ಕೃಷ್ಣಾಜಿನ, ನಾರಿನ ವಸ್ತ್ರಗಳ ವಿಷಯದ ಪಕ್ಷಪಾತವು ಪೂರ್ಣ ಹೋಗಿಲ್ಲವೆಂಬುದು ನಿಜ. ನೂಲಿನ ಬಟ್ಟೆಯು (ಚಿಗರೆ) ಚರ್ಮ, ನಾರಿನವುಗಳಷ್ಟು ಮಡಿ, ಪವಿತ್ರವಲ್ಲವಂತೆ! 'ದಕ್ಷಿಣಾ-ಪಥವು ಅಯಜ್ಞೀಯ ಭೂಮಿ' 'ಆರ್ಯಾವರ್ತದಲ್ಲಿಯೆ ವಾಸವಾಗಿರತಕ್ಕದ್ದು' ಎಂದು ಶಾಸ್ತ್ರಹೇಳುತ್ತಲೆ ನರ್ಮದೆಯ ದಕ್ಷಿಣಕ್ಕೆ ಬಂದು ನೆಲಸಲಿಲ್ಲವೆ? ಕಾಶಿಯಲ್ಲಿ ಸತ್ತರೆ ಸ್ವರ್ಗವೆಂಬ ಪಕ್ಷಪಾತವು ನಮ್ಮ ನಾಣ್ಣುಡಿಗಳಲ್ಲಿ ವ್ಯಕ್ತವಾಗುತ್ತಿದ್ದರೂ 'ದಕ್ಷಿಣ ಕಾಶಿಗಳನ್ನು' ಇಲ್ಲಿಯೆ ನಿರ್ಮಿಸಿಕೊಂಡುದು ಯಾತರ ದ್ಯೋತಕ? ಸಂತತಿ

ನಷ್ಟವಾಗುವ ಕಾಲಕ್ಕೆ ದತ್ತಕ ಪುತ್ರನಿಗಿಂತಲೂ ನಿಯೋಗ-ಪುತ್ರನೇ ಒಳಿತೆಂದು ಶಾಸ್ತ್ರವು ಹೇಳುತ್ತಿದ್ದರೂ ನಿಯೋಗವು ಪಾಪಕರ್ಮವೆಂಬಂತೆ ಈಗ ಜನರು ಅದನ್ನು ತ್ಯಜಿಸಿಲ್ಲವೆ? ಪೂರ್ವಸಂಪ್ರದಾಯ ರೂಢಿಗಳೆಲ್ಲವೂ ಶ್ರೇಷ್ಠವೆಂದೆಂಬ ನಂಬುಗೆ ಇದ್ದವರು ಹಳೆಯ ಇಂತಹ ಧರ್ಮ ನಿಯಮಗಳನ್ನು ಅನುಸರಿಸಲು ಒಪ್ಪುವರೆ?

ಬದಲಾವಣೆಯು ಸರಿಯಾದ ರೀತಿಯಲ್ಲಿ ಕಾಲಕಾಲಕ್ಕೆ ಆಗುತ್ತಿದ್ದರೆ ಅದುವೆ ಜೀವಂತತನದ ಲಕ್ಷಣ. ನಿರ್ಜೀವ ವಸ್ತುಗಳು ಅಥವಾ ಪಶುಗಳು ಇಷ್ಟವಾದ ಕಾಲಿಕ ಬದಲಾವಣೆಗಳನ್ನು ಮಾಡಿಕೊಳ್ಳಲು ಆರವು. ಇದು ಮನುಷ್ಯನಿಗೇ ಸಾಧ್ಯ. ಅದರಲ್ಲೂ ಬಂದ ಅನುಭವದಿಂದ ತನ್ನ ಯುಕ್ತಿಯುಕ್ತ ವಿಚಾರದಿಂದ ಭಾವನೆಗಳನ್ನು ಪರಿಶುದ್ಧಗೊಳಿಸಿಕೊಳ್ಳಲು ಸಮರ್ಥರಾದ, ಸಕಾಲಕ್ಕೆ ಪವಿತ್ರವಾದ ಧೀರೋದಾತ್ತವಾದ ಸಂಕಲ್ಪಗಳನ್ನು ಮಾಡುವ ಇಚ್ಛಾಶಕ್ತಿಯ ಕೃತಿವೀರರೇ ಲೋಕದಲ್ಲಿ ಮಹಾತ್ಮರೆನಿಸುವರು. ಇಂತಹ ಜನಾಂಗವೆ ಪ್ರಪಂಚದಲ್ಲಿ ಮಿಗಿಲೆನಿಸಿ ಕಾಲನ ತಲೆಯನ್ನೂ ಮೆಟ್ಟಿ ಮರೆಯಬಲ್ಲದು.

ಇಜಿಪ್ತ, ಅಸೀರಿಯಾ, ಬಾಬಿಲೋನಿಯಾ, ಗ್ರೀಸ, ರೋಮಾದಿ ಜನಾಂಗಗಳು ನಷ್ಟವಾದರೂ ಭಾರತೀಯರು ಇನ್ನೂ ತಲೆಯೆತ್ತಿಕೊಂಡು ಮೆರೆಯುತ್ತಿರುವುದರ ರಹಸ್ಯವಾದರೂ ಇದೇ.

"ಯೋ ಯತ್‌ಶ್ರದ್ಧಃ ಸ ಏವ ಸಃ" ಬೇಳ್ವೆಯಂತಹ ಫಲ, ಏನನು ಬೇಡುವೆವೊ ಅದುವೆ ಕೆಲಕಾಲದ ಅವಧಿಯಲ್ಲಿ ಕೈಗೆ ಬರುವುದು. ಆಗ ಮಿಡುಕಾಡುವ ಪ್ರಸಂಗವು ಬರಬಾರದಾಗಿದ್ದರೆ ಬಯಸುವಾಗ, ಬೇಡುವಾಗಲೆ ಜೋಕೆ! ಎಚ್ಚರಗೇಡಿಗಳಾಗಿ ಏನಾದರೂ ಬಯಸುವುದು; ಬಳಿಕ ಮಿಡುಕಾಡುವುದು; ಇದು ಅವಿವೇಕಿಗಳಾದ ಅವಿಚಾರಿಗಳ ರೀತಿ. ವಿಚಾರಿಗಳೆಂಬವರು, ತಮ್ಮ ಜ್ಞಾನದ ಬೆಂಬಲದಿಂದ ಮುಂಗಂಡು ಭಾವನೆಗಳನ್ನು ಸರಿಪಡಿಸಿಕೊಳ್ಳುವರು; ಲೋಕಕಲ್ಯಾಣಕಾರಿಯಾದ ಸಂಕಲ್ಪಗಳನ್ನು ಮಾಡುವರು. ಇಂತಹ ಸತ್‌ಸಂಕಲ್ಪಕ್ಕೆ ಸತ್‌ಫಲಗಳು ಬರಲೇ ಬೇಕು. ಲೋಕದಲ್ಲಿ ಇಂತಹರ ಕೃತಿ ಅಜರಾಮರವಾಗಲೇ ಬೇಕು. ಮಹಾತ್ಮಾಜಿಯವರ ದಿವ್ಯ ಜೀವನವೆ ಇದಕ್ಕೆ ಸಾಕ್ಷಿ.

ಇಂದಿನ ಸಂಕಲ್ಪವು ನಾಳಿನ ಫಲ. ಆದಕಾರಣ ಇಂದು ನಾವು ಪಡೆದುಕೊಂಡ ಸ್ವಾತಂತ್ರ್ಯವು ಭಾರತದ ಶಾಂತಿ ಸೌಖ್ಯಕ್ಕೆ ಪ್ರಪಂಚದ ಕಲ್ಯಾಣಕ್ಕೆ ಕಾರಣವಾಗಬೇಕಿದ್ದರೆ ಅದಕ್ಕೆ ಪೋಷಕವಾದ ಸಂಕಲ್ಪಗಳನ್ನೇ ಮಾಡಬೇಕಲ್ಲದೆ ಅದಕ್ಕೆ ಹಾನಿ ತಟ್ಟುವ ಯಾವ ಹೀನ ಕಲ್ಪನೆಗೂ ಬುದ್ಧಿಭಾವನೆಗಳಲ್ಲಿ ಸ್ವಲ್ಪವೂ ಎಡೆಗುಡದಿರುವುದು ನಮ್ಮೆಲ್ಲರ ಕರ್ತವ್ಯವಾಗಿಲ್ಲವೆ?

ಶೃಂಖಲೆಗಳು ಚಿನ್ನದವಾದರೂ ಅವು ಕಬ್ಬಿಣದ ಸರಪಳಿಗಳಷ್ಟೇ ಸ್ವಾಭಿಮಾನಿಗೆ ಅಪಮಾನಕರವಾದವುಗಳು. ಆ ಅಪಮಾನ ಶೃಂಖಲೆಯಲ್ಲಿದೆ ಹೊರತು ಆಯಾ ಧಾತುವಿನಲ್ಲಿಲ್ಲ.... ಉಣ್ಣಲು, ತಿನ್ನಲು, ಉಸಿರಾಡಿಸಲು ಪ್ರತಿಯೊಂದು ದೇಶವು ಯೋಗ್ಯವಿದ್ದಂತೆ ಅದು ತನ್ನ ರಾಜ್ಯವನ್ನು ನಡೆಸಲು, ಅದು ಹೇಗೆಯೆ ನಡೆಸಲಿ, ಯೋಗ್ಯವೆ ಇರುವದು.

—ಮ. ಗಾಂಧಿ.

ಸಾಮಾನ್ಯರೊಳಗೊಬ್ಬ

ಋಷಿಯೆಂದು ಎನ್ನನುಚ್ಚಶಿಖರದೊಳಿರಿಸಿ
ಪೂಜಿಸದಿರಿ; ನಾನೂ ನಿಮ್ಮೊಳಗೊಬ್ಬ.
ನಾನಿರಿಸಿಕೊಂಡಿರುವ ಗೊತ್ತುಗುರಿಗಳು ಮನುಜ-
ಕುಲಕೆಲ್ಲ ಸಲ್ಲುವವು—ಒಳ್ಳೆ ಬಾಳ್ವೆಗೆ ಹಾದಿ.
ಸತ್ಯದಾ ತಳಹದಿಯ ಮೇಲೆ ನೆಲೆಯಾಗಿರುವ
ಗುರಿಗಳಿವು—ಬ್ರಹ್ಮಚರ್ಯಾಹಿಂಸೆ ಎಂಬಿವು.
ಜೀವನದ ಕಡಲ ಕಡೆಕಡೆದು ಪಡೆದಿರುವೆನ್ನೈ
ಈ ಎರಡು ರತ್ನಗಳ.

ದಕ್ಷಿಣಾಫ್ರಿಕೆಯಲ್ಲಿ
ನ್ಯಾಯವಾದುದನು ಸಾಧಿಸಲೋಸುಗವೆ ನಾನು
ಸಿದ್ಧತೆಯ ಕೈಕೊಂಡೆ; ಮನವ ಹಿಡಿತದಿ ತಂದೆ.
ಹಿರಿಯ ಕಾರ್ಯದೊಳೆಲ್ಲ ಅರಿಯಾಗಿ ಮುಂಬರುವ
ಇಂದ್ರಿಯಗಳನು ಮೊದಲು ಹಣಿದು ಸಮಮಾಡಿದೆನು.
ಹಿಂದುವೇ ಇರಲಿ, ಈಸಾಯಿಯೇ ಇರಲಿ
ಆವುದೇ ಧರ್ಮವನು ಅನುಸರಿಸುವವನಿರಲಿ,
ಅನಿಬರೂ ಮೂಲದಲಿ ಮಾನವರೆ ಎಂದೆಂಬ
ಬಾಂಧವ್ಯ - ಭಾವನೆಯ ಬಲಪಡಿಸಲೆಳ್ಸಿಸಿದೆ.
ಪಾಪ ಮಾಡುವರ ಕಂಡಾನು ಕೋಪಿಸಲಿಲ್ಲ.
ದಂಡಿಸಲು ನಾನಾರು? ನಾನೂ ಜಾರಿದುದುಂಟು
ತಿಳಿಯದೆ ಹಿಮಾಲಯದ ಗಾತ್ರದಾ ತಪ್ಪುಗಳ
ಎಸಗಿದುದುಂಟು; ಒಪ್ಪುವೆನು ತಪ್ಪಿದೆನು ಎಂದು
ಪರಿಪೂರ್ಣನಿಹೆನೆಂಬ ಒಣಹೆಮ್ಮೆಯೆನಗಿಲ್ಲ
ಹಟಮಾರಿತನಮಾಡಿ ತಪ್ಪನೆಂದಿಗೂ ಎತ್ತಿಹಿಡಿಯಲಾರೆ.
ಪಾಪವನು ಕಂಡು ಅದ ಕಳೆಯಲಿಕೆ ಯತ್ನಿಸುವೆ
ಪಾಪವನು ದ್ವೇಷಿಸುವೆ; ಆದರದನೆಸಗಿದನೊ-
ಳೆನಿತು ವೈರವ ಕಾಣೆ; ಅವನೆನಗೆ ಬಂಧು.
ಸಾಮಾನ್ಯಮನುಜನಿಗೂ ನನಗೂ ಅಂತರವೇನು?
ಬುದ್ಧಿಯಲಿ ಮುಂದಿಲ್ಲ. ನಾ ಮಾಡುತಿಹ ಕೆಲಸ
ಎಂಥ ಸಾಮಾನ್ಯನಿಗೂ ಸುಲಭಸಾಧ್ಯ.
ಆದರವನಿರಬೇಕು ನಿಶ್ಚಿತನು, ಶ್ರಮಜೀವಿ
ಗೆದ್ದೇ ತೀರುವೆನೆಂಬ ದೃಢನಂಬಿಗೆಯು ಬೇಕು
ನಂಬಿಗಿಲ್ಲದ ಯತ್ನ ತಳವಿರದ ಸಾಗರದ
ತಳ ಕಾಣಹೊರಟಂತೆ.

— ಪಿ. ಟಿ. ಕುಲಕರ್ಣಿ, ಸಾಂಗಲಿ.

ಬೇರಾವ ತಾಪಗಳ ನೂರಾರು ಕೊಡು ವಿಧಿಯೆ
ಸೈರಿಸುವೆನೆಲ್ಲ ಮಾತಿಲ್ಲದಲೆ ನಾನು
ಅರಸಿಕಗೆ ಕವಿತೆಯನು ತಿಳಿವೇಳ್ವುದನು ಶಿರದಿ
ಬರೆಯದಿರು, ಬರೆಯದಿರು, ಬರೆಯದಿರು ನೀನು

—ಸಂಸ್ಕೃತದಿಂದ

ಭಾಷೆಯ ಏಕರೂಪತೆ ಮತ್ತು ಪ್ರಮಾಣ

ಲೇಖಕರು: ಶ್ರೀ ಮು. ಮರಿಯಪ್ಪ ಭಟ್ಟರು, ಎಂ. ಎ.

ಪ್ರತಿಯೊಂದು ಸುಶಿಕ್ಷಿತ ವರ್ಗದವರ ಗ್ರಂಥಸ್ಥ ಭಾಷೆಯಲ್ಲೊಂದು ಏಕರೂಪತೆ (**uniformity**) ಇರಬೇಕು. ಅದರಲ್ಲೊಂದು ಪ್ರಮಾಣ (**standard**) ಇರಬೇಕು. ಇಲ್ಲವಾದರೆ ಆ ಭಾಷೆ ಅದನ್ನಾಡುವ ಎಲ್ಲ ಪ್ರಾಂತಗಳಲ್ಲಿ ಜನಪ್ರಿಯವಾಗದು, ಭಾಷೆಯ ಸಾಮರಸ್ಯವು ತಪ್ಪಿಹೋಗುವುದು; ಪ್ರಾಂತ ಭೇದಗಳು ಮತ್ತಷ್ಟು ಅಧಿಕವಾಗುವುವು; ರೀತಿಯು ಮಾಯವಾಗಬಹುದು.

ಇಂದು ಇಂಗ್ಲಿಷ ಭಾಷೆಯನ್ನು ಪರಿಶೀಲಿಸಿದರೆ, ನಮಗೆ ಒಂದಿಷ್ಟು ಪ್ರಯೋಜನವಾಗದಿರದು. ಅದರಲ್ಲಿ ಪಾಣಿನಿಯ ವ್ಯಾಕರಣ ಭಾರವಿಲ್ಲ; ಲೇಖಕರಿಗೆ ಯಥೇಷ್ಟ ಸ್ವಾತಂತ್ರ್ಯವುಂಟು; ಆ ಭಾಷೆಯೊಳಗೆ ಅಸಂಖ್ಯಾತ ಅನ್ಯದೇಶ್ಯ ಶಬ್ದಗಳು ತುಂಬಿ ತುಳುಕುತ್ತವೆ; ಆದರೂ ಅದರಲ್ಲೊಂದು ಸ್ವಾಭಾವಿಕವಾದ ಶಿಸ್ತು ಕಾಣುತ್ತದೆ; ಏಕರೂಪತೆ ಮತ್ತು ಪ್ರಮಾಣ ಎಂಬೆರಡು ಗುಣಗಳು ಆ ಭಾಷೆಗೆ ಕಳೆ ಕಟ್ಟಿವೆ. ಎಲ್ಲಿಂದೆಲ್ಲಿಗೂ ಆ ಭಾಷೆಯಲ್ಲಿ ಈ ಗುಣರತ್ನಗಳನ್ನು ಕಾಣಬಹುದು. ಜಗತ್ತಿನ ಎಲ್ಲೆಡೆಗಳಲ್ಲಿಯೂ ಇಂಗ್ಲಿಷನ್ನು ಪ್ರಸಿದ್ಧಿಗೆ ತಂದು ಒಂದು ಜಾಗತಿಕ ಭಾಷೆಯ ಅಂತಸ್ತಿಗೆ ಅದನ್ನು ಏರಿಸಲು ಈ ಗುಣಗಳೇ ಬಹಳ ಮಟ್ಟಿಗೆ ಕಾರಣಗಳೆಂದರೆ ಪ್ರಾಯಃ ತಪ್ಪಾಗದು. ನಮ್ಮಲ್ಲಿ ಧಾರವಾಡ ಕನ್ನಡ, ಮೈಸೂರ ಕನ್ನಡ; ಮಂಗಳೂರ ಕನ್ನಡಗಳೆಂಬ ಭೇದಗಳಿರುವಂತೆ, ಇಂಗ್ಲಿಷಿನಲ್ಲಿಯೂ ವೇಲ್ಸಿನ ಇಂಗ್ಲಿಷ, ಸ್ಕಾಟ್ಲೆಂಡ ಇಂಗ್ಲಿಷ ಇತ್ಯಾದಿ ಪ್ರಾಂತಿಕ ಭೇದಗಳಿವೆ. ಆದರೆ ಈ ಪ್ರಾಂತಿಕ ಭೇದಗಳನ್ನು ಅವರು ಗ್ರಂಥಸ್ಥ ಭಾಷೆಯಲ್ಲಿ ಕಾಣಿಸುವುದಿಲ್ಲ. ಗ್ರಂಥಸ್ಥ ಭಾಷೆಯು ಸರ್ವತ್ರ ರೂಢಿಯಲ್ಲಿರುವ ಏಕರೂಪತೆಯ ಪ್ರಮಾಣ ಶಬ್ದಗಳನ್ನೊಳಗೊಂಡಿದೆ. ಇದೊಂದು ದೊಡ್ಡ ಗುಣದಿಂದ ಭಾಷೆಯ ವ್ಯಾಪಕತ್ವವು ಹೆಚ್ಚುವುದು, ಭಾಷೆಯಲ್ಲಿ ವಿಪುಲ ಗ್ರಂಥ ನಿರ್ಮಾಣಕ್ಕೆ ಅವಕಾಶವಾಗುವುದು. ಈ ರಹಸ್ಯವನ್ನು ಇಂಗ್ಲೀಷ ಭಾಷಾವೇತ್ತರು ತಿಳಿದಿರುವರು.

ಈ ಗುಣಗಳು ನಮ್ಮ ಕನ್ನಡ ಭಾಷೆಯಲ್ಲಿ ಎಷ್ಟರ ಮಟ್ಟಿಗೆ ಉಂಟೆಂಬುದನ್ನು ಒಂದಿಷ್ಟು ಗಮನಿಸುವುದು ಪ್ರಸ್ತುತ ಲೇಖನದ ಉದ್ದೇಶ. ಸುಮಾರು ಇಪ್ಪತ್ತು ವರ್ಷಗಳಿಂದ ಗ್ರಂಥಸ್ಥ ಕನ್ನಡದಲ್ಲಿ ಮೇಲೆ ಹೇಳಿದ ಗುಣಗಳು ಹೆಚ್ಚುತ್ತಾ ಬಂದುಂಟೆಂಬುದು ಸಂತೋಷದ ವಿಷಯ. ಆದರೂ ಇದು ಸಾಲದು. ಏಕರೂಪತೆ ಪ್ರಮಾಣಗಳ ಶಿಸ್ತನ್ನು ನಾವಿನ್ನಷ್ಟು ಗಮನಿಸಬೇಕು. ಇದರಿಂದ ಭಾಷೆಯ ಬೆಳವಣಿಗೆ ಅಥವಾ ಪ್ರಗತಿಗೆ ಯಾವ ತೊಡಕೂ ಇಲ್ಲ. ಈ ಸಂದರ್ಭದಲ್ಲಿ ಲೇಖಕರ ಕರ್ತವ್ಯವೇನು? ಅಖಿಳ ಕರ್ನಾಟಕದಲ್ಲಿ ಬಳಕೆಯಲ್ಲಿರುವ ಶಬ್ದಗಳನ್ನು ಮಾತ್ರ ಗ್ರಂಥಗಳಲ್ಲಿ ಅಥವಾ ಲೇಖನಗಳಲ್ಲಿ ಉಪಯೋಗಿಸತಕ್ಕದ್ದು. ಆಗ ಭಾಷೆಯ ಪ್ರಮಾಣವನ್ನು ಪರಿಪಾಲಿಸಿದಂತಾಯಿತು. ಮಾತ್ರವಲ್ಲ---ಅಂತಹ ಶಬ್ದಗಳಲ್ಲಿ ಏಕರೂಪತೆಯಿರಬೇಕು. ಇತ್ತ ಗಮನಿಸಿ--ತಕ್ಕದ್ದು, ತಕ್ಕುದು, ತಕ್ಕದು; ಬಂದದೆ, ಬಂದಿಡೆ; ಹೋಗುವದು, ಹೋಗುವುದು; ನೋಡುತ್ತಾನೆ, ನೋಡುತಾನ; ಬಂದಿದಾನೆ, ಬಂದಿದ್ದಾನೆ, ಬಂದಿರುತಾನೆ, ಬಂದಿರುತ್ತಾನೆ; ಕಡಿಮೆ, ಕಡಮೆ; ಇತ್ಯಾದಿ ಒಂದೇ ಶಬ್ದದ ವಿವಿಧ ರೂಪಗಳನ್ನು ಕಾಣಬಹುದು. ಇಂಗ್ಲಿಷಿನಲ್ಲಿ ಹೀಗಿರುವುದಿಲ್ಲ--ಒಂದು · ಶಬ್ದವನ್ನು ನಿಶ್ಚಯವಾದ ಅಕ್ಷರ ಸಂಯೋಜನೆಯಿಂದ (spelling) ಏಕರೀತಿಯಲ್ಲಿ ಜಗತ್ತಿನಲ್ಲೆಲ್ಲಾ ಬರೆಯುವರು. ನಾವೇಕೆ ಹಾಗೆ ಮಾಡಬಾರದು? ಹಾಗೆ ಮಾಡದಿರುವುದೊಂದು ಕೊರತೆಯಲ್ಲವೆ? ಈ ಕೊರತೆಯನ್ನು ಹೋಗಲಾಡಿಸಿದರೆ ನಮ್ಮ ಭಾಷೆಯಲ್ಲಿ ಏಕರೂಪತೆ ಬರುವುದು.

ಇನ್ನು ಪ್ರಮಾಣವನ್ನು ಕೆಡಿಸುವ ಕೆಲವು ಉದಾಹರಣೆಗಳನ್ನು ನೋಡೋಣ:-- ಕೆಳಗೆ ಕೊಟ್ಟ ಉದಾಹರಣೆಗಳು ತಪ್ಪಾದ ಶಬ್ದಗಳು ಅಥವಾ ಪ್ರಯೋಗಗಳೆಂದು ಯಾರೂ ಭಾವಿಸಬಾರದು. ಒಂದೊಂದು ಪ್ರಾಂತದಲ್ಲಿ ಅವು ರೂಢಿಯಲ್ಲಿವೆ; ಆದರೆ ಕನ್ನಡ ನಾಡಿನ ಎಲ್ಲೆಡೆಗಳಲ್ಲಿ ಅವುಗಳು ಆ ಅರ್ಥಗಳಲ್ಲಿ ಬಳಕೆಯಲ್ಲಿಲ್ಲದಿರುವುದರಿಂದ ಎಲ್ಲರಿಗೂ ಸುಲಭವಾಗಿ ಅರ್ಥವಾಗಲಿಕ್ಕಿಲ್ಲ. ಧಾರವಾಡದವರು "ತಿಂಡಿ" ಎಂಬ ಶಬ್ದವನ್ನು "ತುರಿಕೆ" ಎಂಬರ್ಥದಲ್ಲಿ ಉಪಯೋಗಿಸುತ್ತಾರೆ. "ಕಾಳಜಿ" ಎಂಬ ಶಬ್ದವನ್ನು "ಕಾತರತೆ, ಚಿಂತೆ" ಇತ್ಯಾದಿ ಅರ್ಥಗಳಲ್ಲಿ ಪ್ರಯೋಗಿಸುತ್ತಾರೆ. ಈ ಶಬ್ದ ಮಂಗಳೂರು ಮೈಸೂರು ಪ್ರಾಂತಗಳಲ್ಲಿ ರೂಢಿಯಲ್ಲಿಲ್ಲ. ಇನ್ನು "ನೆಟ್ಟಗೆ" ಎಂಬುದನ್ನು "ಚೆನ್ನು" ಎಂಬರ್ಥದಲ್ಲಿ ಉಪಯೋಗ ಮಾಡುತ್ತಾರೆ. ಇದೂ ಅನೇಕರಿಗೆ ತಿಳಿಯದು. ತುಪಾಕಿಯಿಂದ ಅಥವಾ ಗುಂಡಿನಿಂದ ಹೊಡೆಯುವದಕ್ಕೆ "ಗೋಳೀಬಾರು" ಎನ್ನುತ್ತಾರೆ. ಇದೂ ಸರ್ವತ್ರ ಗೊತ್ತಾಗದ ಶಬ್ದ. ಹೀಗೆಯೇ ಮಂಗಳೂರವರು ಅಗಲಕಿರಿದೆಂಬಲ್ಲಿ "ಸಪೂರ" ಎನ್ನುವರು. ಕೆಲವರು "ಉಗುಳು" ಎಂಬುದಕ್ಕೆ "ತುಪ್ಪು" ಎನ್ನುವರು. ಮೈಸೂರವರು (ಗ್ರಂಥಗಳಲ್ಲಿ ಕೂಡ) "ಹುಚ್ಚು" ಎಂಬಲ್ಲಿ "ಪೈತ್ಯ" (ಪಿತ್ತಸಂಬಂಧವಾದ) ಎಂಬುದಾಗಿ ನುಡಿಯುವರು. ನುಡಿಗಟ್ಟುಗಳಲ್ಲಿಯೂ ಕೆಲವು ಇಂತಹ ಭೇದಗಳನ್ನು ಕಾಣಬಹುದು. ಧಾರವಾಡ ಪ್ರಾಂತದಲ್ಲಿ "ಅವನು ಮಾತಾಡ್ಲಿಕ್ಕೆ ಹತ್ತಿದ್ದಾನೆ" ಎಂಬುದಾಗಿ "ಅವನು ಮಾತನಾಡಲಿಕ್ಕೆ ಮೊದಲು ಅಥವಾ ಪ್ರಾರಂಭ ಮಾಡಿದ್ದಾನೆ" ಎಂಬರ್ಥದಲ್ಲಿ ಹೇಳುವುದುಂಟು. ಮಂಗಳೂರು ಪ್ರಾಂತದವರು (ಧಾರವಾಡ ಪ್ರಯೋಗ ಅರಿಯದವರು) ಇದನ್ನು ಕೇಳಿದರೆ, "ಅವನು ಮಾತನಾಡಲು ಯಾವುದೋ ಒಂದು ವೇದಿಕೆ

ಶ್ರೀ ಮರಿಯಪ್ಪ ಭಟ್ಟರು ಮದ್ರಾಸ್ ವಿಶ್ವವಿದ್ಯಾಲಯದ ಕನ್ನಡ ಶಾಖೆಯ ಮುಖ್ಯಾಧಿಕಾರಿಗಳು. ಮದ್ರಾಸ ನಗರದ ಕನ್ನಡ ಚಟುವಟಿಕೆಗಳಲ್ಲಿ ಪ್ರಮುಖ ಭಾಗವನ್ನು ವಹಿಸಿ ಅಲ್ಲಿ ಕನ್ನಡದ ಜ್ಯೋತಿಯನ್ನು ಪ್ರೋಜ್ಜ್ವಲವಾಗಿರಿಸುತಿದ್ದಾರೆ. ಕನ್ನಡ ಗ್ರಾಂಥಿಕ ಭಾಷೆಯಲ್ಲಿಯೂ ಇಂದು ಉಳಿದಿರುವ ಪ್ರಾದೇಶಿಕ ಛಾಯೆಯಿಂದ ಭಾಷೆಯ ಪ್ರಗತಿಗೆ ಆಗಿರುವ ಆತಂಕವನ್ನು ವಿವರಿಸಿ ಅವರು ಇಲ್ಲಿ ವ್ಯಕ್ತಗೊಳಿಸಿರುವ ವಿಚಾರಗಳು ಗಮನಾರ್ಹವಾಗಿವೆ.

ಯನ್ನೇರಿದ್ದಾನೆ" ಎಂಬ ತಪ್ಪಾದರ್ಥವನ್ನು ಮಾಡುವುದು ಸಂಭವವಿದೆ. ಮೇಲೆ ಕಾಣಿಸಿದ ಶಬ್ದಗಳ ಪ್ರಯೋಗ ಸಾಧುವಿದ್ದರೂ ಎಲ್ಲೆಡೆ ಅವುಗಳು ರೂಢಿಯಲ್ಲಿಲ್ಲದಿರುವುದರಿಂದ, ಭಾಷೆಯ ಪ್ರಮಾಣಕ್ಕೆ ಭಂಗ ತಂದೊಡ್ಡುವಂಥವುಗಳನ್ನು ಗ್ರಂಥಗಳಲ್ಲಿ ಉಪಯೋಗಿಸುವುದು ಒಳಿತಲ್ಲ. ಇಲ್ಲವಾದರೆ ಇತರ ವಿಚಾರಗಳಲ್ಲಿ ಅತ್ಯುತ್ತಮವೆನಿಸಿದ ಕೆಲವು ಗ್ರಂಥಗಳು ಆ ಪ್ರಾಂತಿಕ ಪ್ರಯೋಗಗಳನ್ನರಿಯದವರ ಪಾಲಿಗೆ ಬೀಗ ಮುದ್ರೆಯ ಗಂಟುಗಳೇ ಸರಿ. ಮಾತ್ರವಲ್ಲ, ಇದರಿಂದ ಅನಾವಶ್ಯಕವಾಗಿ "ಧಾರವಾಡ ಕನ್ನಡ," "ಮಂಗಳೂರ ಕನ್ನಡ," "ಮೈಸೂರ ಕನ್ನಡ"ಗಳೆಂಬ ಒಳಭೇದಗಳೂ ಅಧಿಕವಾಗಿ, ಕೆಲವು ವೇಳೆ ಪರಸ್ಪರ ಘರ್ಷಣೆಗೂ ಹೆಮ್ಮೆ ಅಸೂಯೆಗಳಿಗೂ ಕಾರಣವಾಗಬಹುದು.

ಸಾರಾಂಶ- ಪ್ರತಿಯೊಬ್ಬ ಲೇಖಕನೂ ಭಾಷಾಪ್ರಮಾಣ ಏಕರೂಪತೆಗಳನ್ನು ಪರಿಪಾಲಿಸುವುದು ತನ್ನ ಆದ್ಯ ಪವಿತ್ರ ಕರ್ತವ್ಯವೆಂಬುದನ್ನು ಎಂದೆಂದಿಗೂ ಮರೆಯಲಾಗದು. ಆಗ ಭಾಷೆಯು ಕ್ಲಿಷ್ಟವಾಗದು, ಅರ್ಥವು ಸುಲಭವಾಗಿ ಸ್ಫುರಿಸುವುದು, ಶೈಲಿಯು ಸುಂದರವಾಗುವುದು, ಲೇಖನಗಳು ಜನಪ್ರಿಯವಾಗುವುವು; ನುಡಿಯು ಹಿಗ್ಗುವುದು. ಕರ್ನಾಟಕ ಏಕೀಕರಣಕ್ಕೂ ಕನ್ನಡದ ಸರ್ವತೋಮುಖವಾದ ಅಭಿವೃದ್ಧಿಗೂ ಈ ಕರ್ತವ್ಯ-ಪರಿಪಾಲನೆ ಒಂದಿಷ್ಟು ನೆರವಾಗದೆ?

ಒಲಿದ ಎದೆ

ನನ್ನದೆಲ್ಲ ನಿನಗೆ ಎಂಬು
ದೆನ್ನ ಬಾಳ ಪಲ್ಲ ।
ನಿನ್ನ ಗೆಳೆತನಕ್ಕೆ ಮಿಗಿಲು
ಜಗದೊಳಾವುದಿಲ್ಲ ।। ೧ ।।

ಅನ್ಯರನ್ನು ದೂರಲಾರೆ
ನನ್ನ ತಪ್ಪುಗಳಿಗೆ ನಾ ।
ನಿನ್ನದೆಲ್ಲ ನನಗೆ ಚೆಂದ
ನೀನೆ ನನ್ನ ಜೀವನ ।। ೨ ।।

ನಿನ್ನ ಧ್ಯಾನದಲ್ಲೆ ಲೀನೆ
ನೀನೆ ನನಗೆ ಪಾವನ ।
ನೀನೆ ನನ್ನ ಬಾಳ ಬೆಳಕು
ಎಂಬುದೆನ್ನ ಭಾವನ ।। ೩ ।।

ನಾನು ಹೂವು ನೀನು ಹಣ್ಣು
ನನ್ನ ಫಲಿಸುವಾತನೇ ।
ದುಂಬಿ ಜೇನಿನಂತೆ ನಮ್ಮ
ಬಾಳು, ನಲಿಸುವಾತನೇ ।। ೪ ।।

ದೇಹವೆರಡು ಭಾವವೊಂದು
ನನ್ನ ನಿನ್ನ ಬಾಳಿನ ।
ತಾಳಲಯಗಳೊಂದು, ಬೇಳೆ-
ಯೆರಡರಂತೆ ಕಾಳಿನ ।। ೫ ।।

ಎದೆಗೆ ಎದೆಗೆ ಭಾವಬಂಧ
ಬೆಸೆದ ನೀನೆ ತಾರಕ ।
ನೀನೆ ನನ್ನ ತಪ್ತವಾದ
ಹೃದಯಕಮೃತಪೂರಕ ।। ೬ ।।

ಏಕಜೀವರಾದೆವಿಂದು
ಬೇಕು ಬೇಡವೆಲ್ಲವೂ ।
ಏಕವಾದವೆಮ್ಮೊಳೆರೆಯ
ಇಲ್ಲವೊಂದು ಹೊಲ್ಲವೂ ।। ೭ ।।

ಒಂದೆ ಉಸಿರು ಒಂದೆ ಬಸಿರು
ಒಂದೆ ಒಲಿದ ಎದೆಗಳು ।
ಒಂದೆ ನಾನು ನೀನು ಚೆಂದ
ಚಿಲ್ಲಿ ಹರಿವ ಮುದದೊಳು ।। ೮ ।।


—ರಮಾದೇವಿ ಕಾನಕಾನಹಳ್ಳಿ

ನಿನ್ನ ದಾನವಜಸ್ರ, ಎನ್ನಯ
ಪಡೆವ ಕೈ ಕಿರಿದು;
ಸುರಿವೆ ನೀ ಸುರಿಸುರಿವೆ, ಯುಗಗಳು
ಸರಿಯುತಿವೆ, ನಾ ಪಡೆವೆ, ಇನ್ನೂ
ಇಲ್ಲಿ ಇಂಬಿಹುದು.

—ರವೀಂದ್ರನಾಥ ಠಾಕೂರ.




ಶ್ರೀ. ಕೆ. ಚೆಂಗಲರಾಯ ರೆಡ್ಡಿ (ಮುಖ್ಯಮಂತ್ರಿ)




ಶ್ರೀ. ಟಿ. ಮರಿಯಪ್ಪ (ಗೃಹ)



ಶ್ರೀ. ಎಚ್. ಸಿದ್ದಯ್ಯ (ಕೃಷಿ)



ಶ್ರೀ. ಕೆ. ಟಿ. ಭಾಷ್ಯಂ (ಕೂಲಿಕಾರ)



ಶ್ರೀ. ಎಚ್. ಸಿ. ದಾಸಪ್ಪ (ಹಣಕಾಸು)



ಶ್ರೀ. ಮಹಮ್ಮದ ಶರೀಫ್ (ಆರೋಗ್ಯ)



ಶ್ರೀ. ಆರ್. ಚನ್ನಿಗರಾಮಯ್ಯ
(ಹಿಂದುಳಿದ ವರ್ಗಗಳು)



ಶ್ರೀ. ಡಿ. ಎಚ್. ಚಂದ್ರಶೇಖರಯ್ಯ
(ಶಿಕ್ಷಣ)



ಶ್ರೀ. ಪಿ. ಸುಬ್ಬರಾಮ ಶೆಟ್ಟಿ
(ಮುನಿಸಿಪಾಲಟಿ, ಮುಜರಾಯಿ)

ತಾಯಿಯ ಪ್ರಿಯತಮ

ಲೇಖಕರು: **ಶ್ರೀಕೃಷ್ಣ ಪಾಟೀಲ, ಬೆಳಗಾವಿ**

ನಿರಾಶೆಯಲ್ಲಿಯೆ ಆಶೆಯ ಪ್ರತಿಬಿಂಬವನ್ನು ಕಂಡು ವಿಲಾಸಿನಿಯು ಗಂಡನ ಮನೆಗೆ ಬಂದಳು. ಗಂಡನು ದುಷ್ಟನಲ್ಲ, ದುಂದುಗಾರನಲ್ಲ, ಕುರೂಪಿಯಲ್ಲ, ಕುಡುಕನಲ್ಲ, ಅವಿವೇಕಿಯಲ್ಲ, ಹುಂಬನಲ್ಲ. ಇದೆಲ್ಲವನ್ನು ವಿಲಾಸಿನಿಯು ಅರಿತಿದ್ದಳು. ಮದುವೆಯ ಮೊದಲೂ ಮನಗಂಡಿದ್ದಳು. ಆದರೆ ತಂದೆಯ ಪ್ರಬಲ ದುರಾಗ್ರಹಕ್ಕೆ ಮದುವೆಯಾದಳು. ಮುಂದೆ ಈ ಒಲ್ಲದ ಸಂತೆಯನ್ನು ಹರಡಿ ತಾನೂ ತನ್ನ ತಂದೆಯೂ ಹೊಡೆದಾಡಿ ಲೌಕಿಕರಿಂದ ಛೀ ಥೂ ಗಳನ್ನೆತ್ತಿಕೊಳ್ಳಬಾರದೆಂದು ಗಂಡನ ಮನೆಗೆ ಬಂದಳು.

ಬೆಳಗಾವಿಯ ನಗರವಾಸಿಗಳೆಲ್ಲ— ಇವನು ಈಕೆಯ ಗಂಡನೆಂದು ಸಂಬೋಧಿಸುತ್ತಿದ್ದ ಸಮಯದಲ್ಲಿ ತಾನು ಸುಮ್ಮನೆ ಕಿವಿ ಮುಚ್ಚಿಕೊಂಡು ನಡೆದರೆ ಆದೀತೇ! ಮೇಲುಬುದ್ಧಿಗೆ ಹೊಂದಿಕೆಯಾಗುವಂತೆ ಗಂಡನೆಂದು ತಿಳಿದಳು. ಮನೆಯಲ್ಲಿಯೂ ಹಾಗೆಯೆ ನಡೆದಳು.

ಬೆಳಗಿನಲ್ಲಿ ಎದ್ದು ಚಹ ಮಾಡಿಕೊಡುವದು, ಕಚೇರಿಯ ಸಮಯಕ್ಕೆ ಅಡುಗೆಯನ್ನು ಮಾಡುವದು, ಬಡಿಸುವದು, ಸಂಜೆಗೆ ಹಾಸುಗೆಯನ್ನು ಹಾಸುವದು; ಸರಿ, ಹೆಂಡತಿಗೆ ಒಪ್ಪುವ ಎಲ್ಲ ಕೆಲಸವನ್ನು ಮಾಡುವಳು. ಹೆಂಡತಿಯೆನಿಸಿಕೊಂಡ ಮೇಲೆ ಇದೆಲ್ಲವೇನು ಮಹತ್ತು!

ತಂದೆಯು— ವಿಲಾಸಿನಿಯು ಗಂಡನ ಮನೆಗೆ ಹೋದ ಮೇಲೆ ಹಾಲಿನ ಗಡಿಗೆಯನ್ನೆಲ್ಲಿ ಒಡೆಯುವಳೋ! ಎಂದು ಹೆದರಿಕೊಂಡಿದ್ದನು. ಹೊರಗೆ ಎಷ್ಟು ಆಢ್ಯತೆಯನ್ನು ತೋರಿಸಿದರೂ ಹೃದಯದಲ್ಲಿ ಸಾವಿರ ಕೊಂಡಿಯ ಚೇಳು ಸದಾ ಕಡಿಯುತ್ತಿದ್ದಿತು. ವಿಲಾಸಿನಿಯ ಎದುರು ನಿಂತು— ಈಗ ನಿನ್ನ ಬಾಳುವೆಯು ಒಳ್ಳೆಯದೇ? ಎಂದು ಕೇಳಿರಲಿಲ್ಲ. ಕೇಳುವ ಪ್ರಸಂಗವೂ ಬಂದಿರಲಿಲ್ಲ. ಉತ್ತರವು ರುಚಿ ಇರಲಿ, ಅರುಚಿ ಇರಲಿ. ಪರೀಕ್ಷಿಸಲು ಹೋಗಲಿಲ್ಲ. ಅದಕ್ಕೆ ಮಾನಸಿಕ ದೌರ್ಬಲ್ಯವೆಂದರೂ ಸರಿ, ಅಥವಾ ವಿಲಾಸಿನಿಯ ಮುಖದ ಮೇಲೆ ಮಡುಗೊಂಡ “ಗುಂ”ಭಾವನೆಯಾದರೂ ಸರಿ. ಅವನು ಕೇಳದಿದ್ದುದೇ ಒಳ್ಳೆಯದು.

ಒಂದೆರಡು ವರುಷ ಬಾಳುವೆಯನ್ನು ಮಾಡಿರಬೇಕು. ವಿಲಾಸಿನಿಯು ತಾಯಿಯಾದಳು. ವಿನಯಾ ಆಕೆಯ ಏಕಮಾತ್ರ ಪುತ್ರಿ.

ವಿನಯಾ ಹುಟ್ಟಿದ ಮೇಲೆ ತಂದೆಯು ತನ್ನ ಸಾಶಂಕಹೃದಯವನ್ನು ತೊಳೆದುಕೊಂಡು- ವಿಲಾಸಿನಿಯು “ಧರ್ಮಪತ್ನಿ” ಎಂದು ಕರೆದನು. ಮುಂದೆ ವಿನಯಾ ನಾಲ್ಕು ವರುಷ ದೊಡ್ಡವಳಾಗುವಷ್ಟರಲ್ಲಿ ತಂದೆ ತೀರಿದ, ಆರು ವರುಷ ದೊಡ್ಡವಳಾಗುವಷ್ಟರಲ್ಲಿ ಅಜ್ಜ ತೀರಿದ.

ಗಂಡ ಸತ್ತ ಮೇಲೆ ವಿಲಾಸಿನಿಯು ಅತ್ತಳೋ, ನಕ್ಕಳೋ ಎಂಬುದನ್ನು ನಿರ್ಣಯಿಸುವದು ಲೌಕಿಕ ದೃಷ್ಟಿಯಿಂದ ಅನ್ಯಾಯವಾದುದು.

ವಿನಯಾ ಇಂದಿಗೆ ಹದಿನಾರು ವರುಷದ ಹರಯುದವಳು. ವಿಲಾಸಿನಿಯು ಜೀವ ಅಟ್ಟಿಸಿಕೊಂಡು ಮಗಳನ್ನು ಬೆಳೆಸಿದಳು. ಅವಳ ಅರಿವೆ-ಅಂಚಡಿಗೆ, ಊಟ-ಉಪಚಾರಕ್ಕೆ ಎಷ್ಟು ಮಾತ್ರವೂ ಕಡಿಮೆ ಮಾಡಲಿಲ್ಲ. ಅಲ್ಪಸ್ವಲ್ಪ ಸಾಲೆಯನ್ನು ಕಲಿಸಿದಳು. ವಿನಯಾ ಮ್ಯಾಟ್ರಿಕ್ ವರೆಗೆ ಓದಿದರೂ ಮುಂದಿನ ನಾಲ್ಕು ವರುಷದ ವಿದ್ಯೆಯನ್ನು ಸಹ ಮನೆಯಲ್ಲಿ ತಾಯಿಯ ಪರಾಮರಿಕೆಯಲ್ಲಿ ಕಲಿತಳು. ವಿನಯಾ ತಾಯಿಯನ್ನು ದೇವರಂತೆ ಕಂಡುಬಂದುದಕ್ಕೆ ಇದೆಲ್ಲ ಭಾಗ್ಯ ಅವಳ ಪಾಲಿಗೆ ದೇವರು ಕೊಟ್ಟ ಸೊತ್ತಾಗಿ ಕಂಡಿತು.

ತಾಯಿ—ಮಗಳು ಕೂಡಿ ಅನೇಕ ಸಲ ಸಿನೇಮಾಕ್ಕೆ, ಪೇಟೆಗೆ, ತಿರುಗಾಡಲಿಕ್ಕೆ ಹೋಗುತ್ತಿದ್ದರು. ಇಬ್ಬರ ನಿಲುವಿಕೆ ಅಷ್ಟೇ, ಮೈಬಣ್ಣ ಅಂಥದೇ. ದೇಹಗಾತ್ರ ಸಹ ಒಂದೇ. ಮುಖದ ಮೇಲಿನ ಮೂಗು, ಕಣ್ಣು, ಹಣೆ, ಕೆನ್ನೆ, ಗದ್ದಗಳೆಲ್ಲ ಒಂದೇ ಒಂದು. ಹೆಜ್ಜೆ ಇಡುವ. ಕೈಬೀಸುವ, ನಿಂತಾಗ ಮತ್ತು ನಡೆವಾಗ ತಲೆಯನ್ನು ಎತ್ತಿ ಹಿಡಿವ ಕ್ರಮವೂ ಒಂದೇ ತರದವು. ಇವಳು ತಾಯಿ, ಇವಳು ಮಗಳು ಎಂಬದು ಅರಿಯದವರಿಗೆ ತಿಳಿಯದ ವಿಷಯ. ಹೆಣ್ಣುತನದ ಪರೀಕ್ಷೆಯನ್ನು ಬಲ್ಲವರು ಅಕ್ಕ ತಂಗಿಯರೆಂದೂ ಹೆಣ್ಣು ಕಾಣದವರು ಅವಳಿಗಳೆಂದೂ ಹೇಳುವ ವಿಷಯ. ಇಬ್ಬರ ರೂಪಗಳಲ್ಲಿ ಅಷ್ಟು ಹೋಲಿಕೆಯಿದ್ದಿತು.

ವಿಲಾಸಿನಿಯು ಮೂವತ್ತು ಮೂವತ್ತೆರಡು ವರುಷದವಳಾದರೂ ತನ್ನ ಕನ್ನೆತನದ ಸೌಂದರ್ಯಕ್ಕೆ ಚ್ಯುತಿಯನ್ನು ತಂದುಕೊಂಡಿರಲಿಲ್ಲ. ಕ್ರಮಬದ್ಧ ಜೀವನದಲ್ಲಿ ಬೇನೆ-ಬೇಸರಿಕೆಗಳು ಇಣಿಕಿಕ್ಕಿರಲಿಲ್ಲ, ಗಂಡ ಸತ್ತ ಮೇಲಿನ ನಿಷ್ಠುರ ಬ್ರಹ್ಮಚರ್ಯದಿಂದ ದೇಹ ಇನ್ನಷ್ಟು ಹುರಿಕಟ್ಟಾಗಿದ್ದಿತು. ಈ ಹುರಿಕಟ್ಟಿನಲ್ಲಿ ಅವಳ ತಾಯತನದ ಗಾಂಭೀರ್ಯ ಎಲ್ಲಿಯೋ ಮುಳುಗಿ ಹೋಗಿದ್ದಿತು.

— ೨ —

ತಾಯಿಯ ಕಷ್ಟವನ್ನು ಒಂದಿಷ್ಟು ಕಡಿಮೆ ಮಾಡುವ ಸಲುವಾಗಿ ವಿನಯಾ ರೇಶನಿಂಗ ಆಫೀಸಿನಲ್ಲಿ ಒಂದು ಕೆಲಸವನ್ನು ಹಿಡಿದಳು. ತಿಂಗಳೂ ಕೈತುಂಬ ಹಣ, ಮನೆಯಲ್ಲಿ ಇಬ್ಬರೇ. ಇದರಿಂದ ವಿಲಾಸಿನಿಯು ಮನೆಯನ್ನು ಅರಮನೆಯ ಆಡಂಬರಕ್ಕೆ ತಿರುಗಿಸಿದಳು. ಮನೆಯಲ್ಲಿ ತಾಯಿ ಮಗಳು ಕುರ್ಚಿಯ ಮೇಲೆ ಕುಳಿತು ಸುಖಸಂಕಥಾವಿನೋದಗುಟ್ಟುತ್ತಿದ್ದರೆ ವಸಂತ ಮಾಸದ ತಳಿತ ಮಾಮರದಲ್ಲಿ ಕುಳಿತು ಚಪ್ಪರಿಸುವ ಗಿಳಿಗಳನ್ನು ಜ್ಞಾಪಿಸಬೇಕು.

(ಶ್ರೀ ಪಾಟೀಲರು “ಕರ್ಮವೀರ”ದ ಓದುಗರಿಗೇನೂ ಅಪರಿಚಿತರಲ್ಲ. ಈಚೆಗೆ ಉದಯಿಸಿದ ಕನ್ನಡ ಕಥಾಲೇಖಕರಲ್ಲಿ ಇವರ ಸಾಧನೆ ಹುಲುಸಾಗಿಯೂ ಇದೆ. ಅದರ ಯೋಗ್ಯತೆಯೂ ಹಿರಿದಾಗಿದೆ. ಮನಸ್ಸಿನ ವಿಚಿತ್ರ ವ್ಯಾಪಾರಗಳ ಸೂಕ್ಷ್ಮ ಚಿತ್ರಣದಲ್ಲಿ ಇವರ ಕೈ ಚನ್ನಾಗಿ ಪಳಗಿದೆ. ಕಥನಕಲೆಯ ಶಾಸ್ತ್ರೀಯ ಅಂಶಗಳನ್ನು ಅವರು ಸಾಕಷ್ಟು ಅಭ್ಯಸಿಸಿದ್ದಾರೆ.)

ವಿನಯಾ ತನ್ನ ಆಫೀಸಿನಲ್ಲಿಯ ಛಾಯಾಶಂಕರನ ಪರಿಚಯ ಮಾಡಿಕೊಂಡಳು. ಪರಿಚಯ ಮಾಡಿಕೊಳ್ಳಲಿಕ್ಕೆ ಒಂದು ಕಾರಣ ವಿದ್ದಿತು.

ಛಾಯಾಶಂಕರನು ತನಗೂ ಪೂರ್ವದಲ್ಲಿ ಸೇರಿದ ನೌಕರಿ ಯುವ; ಅನುಭವಸ್ಥ. ವಿನಯಾ ತನ್ನ ಕೆಲಸದಲ್ಲಿ ಬಂದ ಅಡೆ ತಡೆ ಗಳನ್ನು ಅವನಿಂದ ನಿವಾರಿಸಿಕೊಂಡು ನೌಕರಿಯನ್ನು ಸಂಬಾಳಿಸುತ್ತ ಬಂದಿದ್ದಳು. ಛಾಯಾಶಂಕರನು—ವಿನಯಾ ತನಗೆ ವಿಧೇಯಳು; ಅವಳಿಗೆ ಮಾಡಿದ ಉಪಕಾರಕ್ಕಾಗಿ ತನ್ನದೊಂದು ಪ್ರತಿಫಲಾಪೇಕ್ಷೆಯ ವಿಶೇಷ ದುರುದ್ದೇಶವನ್ನು ಸಾಧಿಸಬೇಕು; ಇತ್ಯಾದಿ ಆಶಿಸಿದವನಲ್ಲ. ತಾನು, ತನ್ನ ಟೇಬಲು, ಅದರ ಮೇಲೆ ಹರಹಿದ ಕಾಗದ, ಕೆಲಸ. ಆಯಿತು ಇಷ್ಟೇ ಅವನಿಗೆ ಕಾಣುವ ವಸ್ತು. ಆಫೀಸಿನಲ್ಲಿ ಒಬ್ಬರ ಸಂಗಡ ಹರಟೆ— ತಮಾಷೆ ಮಾಡಿದವನಲ್ಲ. ಸುಖ—ದುಃಖದ ಸಂಗತಿ ಹೇಳಿಕೇಳಿದವನಲ್ಲ. ಹೀಗಾಗಿ ವಿನಯಾ ಅವನನ್ನು ನಿರಾಶಾ ವಾದಿಗಳ ಮಾಲಿಕೆಯಲ್ಲಿ ಹಾಕಿ ನಿಷ್ಪಾಪ ಕರ್ಮಯೋಗಿಯೆಂದು ದೃಢಪಡಿಸಿಕೊಂಡಿದ್ದಳು. ಹರಯದ ಹುರಿಕಟ್ಟಿನ ಚೌಕಟ್ಟಿನಲ್ಲಿ ಮೆರೆವ ಛಾಯಾಶಂಕರನ ಜೀವನ ವಿನಯಳಿಗೆ ಒಂದು ಸೋಜಿಗ ವಾಯಿತು. ಹೆಚ್ಚಿನ ಸಂಗತಿಯನ್ನು ಅರಿಯಬೇಕೆಂದು ಎಷ್ಟು ಪ್ರಯ ತ್ನಿಸಿದರೂ ವ್ಯರ್ಥ.

ಒಂದಿನ ಆಫೀಸಿನ ಕೆಲಸ ಮುಗಿದ ಮೇಲೆ ವಿನಯಾ ಛಾಯಾ ಶಂಕರನ ಬೆನ್ನು ಹತ್ತಿ— "ಶಂಕರಜೀ ನಾಳೆ ಸೂಟಿ!" ಎಂದಳು.

"ಅಹುದು," ಶಂಕರನು ಉತ್ತರಿಸುತ್ತ ಮುಂದೆ ನಡೆದನು.

ವಿನಯಳಿಗೆ ಮಾತು ಮುಂದುವರಿಸುವದು ತಿಳಿಯಲಿಲ್ಲ. ಕೊನೆಗೆ —"ಶಂಕರಜೀ, ಒಂದಿಷ್ಟು ತಡೆಯಿರಿ," ಎಂದಳು.

ಶಂಕರನು ಮಾತಿಲ್ಲದೆ ನಿಂತನು.

"ನಾಳೆ ನಮ್ಮ ಮನೆಗೆ ಬರುವಿರಾ? ನನ್ನ ತಾಯಿಯು ನಿಮ್ಮನ್ನು ಕಾಣಬೇಕೆಂದಿರುವಳು."

"ಆಗದು. ದಯವಿರಲಿ," ಮುಂದೆ ಸಾಗಿದನು.

"ಕೆಲಸವುಂಟೇ?" ಹಿಂಬಾಲಿಸುತ್ತ ಕೇಳಿದಳು.

"ನನಗೆ ತಿಳಿಯದು."

"ಇಂಥ ನಿರಾಶಾವಾದಿಗಳನ್ನು ನಾನು ನೋಡಿರಲಿಲ್ಲ." ನಿರುಪದ್ರವಿ ತರುಣರನ್ನು ಮೂದಲಿಸುವ ತರುಣಿಯರಂತೆ ನುಡಿ ದಳು.

"ಆಫೀಸಿನ ಕೆಲಸದಲ್ಲಿ ಇಂದು ತೊಂದರೆ ಇರಲಿಲ್ಲವಷ್ಟೇ."

"ನಿಮ್ಮತನ ನನ್ನ ಕೆಲಸದಲ್ಲಿ ನೂರು ತೊಂದರೆಯನ್ನೊ ಡ್ಡಿತು."

"ಈ ಆಗಸದ ಆಚೆಗೇನಿದೆ? ಅದು ಸಹ ನಿಮಗೆ ತೊಂದರೆಯನ್ನು ಕೊಡುತ್ತಿರಬಹುದು."

"ಶಂಕರಜೀ, ಎಂಥ ಮಾತು!" ವಿನಯಾ ಅವಾಕ್ಕಾದಳು.

ಛಾಯಾಶಂಕರನು ಇಳಿಮುಖದಿಂದ ಹೆಜ್ಜೆಹಾಕುತ್ತಿದ್ದನು. ತನ್ನ ಪಕ್ಕದಲ್ಲಿ ತಾರುಣ್ಯಭರಿತಳಾದ, ಸುಕುಮಾರ ಶರೀರಿಣಿಯಾದ, ತನ್ನನ್ನೇ ನಂಬಿಕೊಂಡು ಆಡುತ್ತ ಬರುವ ವಿನಯಳ ಬಗ್ಗೆ ಪ್ರಜ್ಞೆ ಯಿದ್ದಿತೋ, ಇಲ್ಲವೊ! ಸಂಶಯ! ಮುಂದೆ ನಡೆದನು.

"ಶಂಕರಜೀ, ನಿಮ್ಮ ಕೋಣೆ ಇಲ್ಲಿಯೆ ಇದೆಯೇ?"

ಶಂಕರನು ಈಗ ಗಟ್ಟಿಯಾಗಿ ನಿಂತನು. ಮುಖದಲ್ಲಿ ತುಂಬಿ ಸೂಸುವ ನಿರಾಶಾವಾದಿತ್ವವು ಕಣ್ಣಲ್ಲಿ ಹಸಿಗೂಡಿ ನಿಂತು—

"ನಿಮ್ಮ ದಾರಿ ಅದು ವಿನಯಾ," ಎಂದನು.

"ಅಹುದು." ಮುಖದಲ್ಲಿ ಹುಸಿನಗೆಯು ಇಣಿಕಿಕ್ಕಿತು.

"ಹೋಗಬೇಕು."

"ಇಲ್ಲ. ನಿಮ್ಮ ಕೋಣೆಯನ್ನು ನೋಡಬೇಕೆಂದಿರುವೆ" ದನಿಯಲ್ಲಿ ತಾರುಣ್ಯದ ಹಟವಿದ್ದಿತು.

"ನನ್ನ ಕೋಣೆ!"

"ಅಹುದು. ನಾಳೆ ನಾನು ನನ್ನ ತಾಯಿಯನ್ನು ನಿಮ್ಮ ಕೋಣೆಗೆ ಕರೆತರಬೇಕೆಂದಿರುವೆ."

"ವಿನಯಾ!" ಕಣ್ಣಲ್ಲಿ ಕೋಪದ ಆವಿಷ್ಕಾರ ಕಂಡಿತು.

"ನಾನು ಹಾಗೆ ಮಾಡಬೇಕೆಂದು ನಿಶ್ಚಯಿಸಿರುವೆ."

"ವಿನಯಾ!!"

"ನಿಮ್ಮಲ್ಲಿ ಸಿಟ್ಟು ಉಂಟೆಂದು ಈಗ ತಿಳಿದೆ."

"ನಾನು ಮನುಷ್ಯನೆಂಬುದಕ್ಕೆ ನೀವು ಸಂಶಯಪಡುತ್ತಿರ ಬಹುದು."

ವಿನಯಾ ಕೆಲ ಹೊತ್ತು ಮೌನದಿಂದಿದ್ದು —"ನಿಮ್ಮನ್ನು ಮನುಷ್ಯರನ್ನಾಗಿ ಮಾಡಬೇಕೆಂದಿರುವೆ!" ಹಟದ ತುಂಟ ನಗೆಯು ಗುಳಿಬಿದ್ದ ಕೆನ್ನೆಗಳಲ್ಲಿ ಕಂಡಿತು.

ವಿನಯಳ ಹಟಕ್ಕೆ ಛಾಯಾಶಂಕರನು ಇನ್ನೂ ಸೋತಿರಲಿಲ್ಲ. ಆದರೆ ಅವಳ ಇರುಕಿನಲ್ಲಿ ಸಿಕ್ಕೆನೆಂದು ಚಡಪಡಿಸಿದನು. ಮುಂಗಾಣ ದವನಾಗಿ ಕೋಣೆಯ ದಾರಿಯನ್ನು ಬಿಟ್ಟು ಸ್ಟೇಶನದ ಬೈಲ ಕಡೆಗೆ ಹೊರಟನು. ವಿನಯಾ ಬೆನ್ನು ಹತ್ತಿದಳು. ದಾರಿಗುಂಟ ಅವಳೇ ಮಾತಾಡಿದಳು.

"ಶಂಕರಜೀ, ನೀವು ಜೀವನವಾದಿಗಳಲ್ಲವೇ?" ಎಂದು ಕೇಳಿದಳು.

ಶಂಕರನು ಆಕೆಯ ಮುಖವನ್ನು ನೋಡಿದನು.

"ನಾವೆಲ್ಲರು ಜೀವನಾನುಗಾಮಿಗಳು. ಆಶೆ ಇಲ್ಲವೆ ನಿರಾಶೆ ಯನ್ನು ಅಂಟಿಕೊಂಡವರು ಈ ಮಾತಿಗೆ ಹೊರಗಿಲ್ಲ," ಎಂದು ಪ್ರಶ್ನಿ ಸಿದಳು.

ಶಂಕರನು ಮತ್ತೆ ಆಕೆಯ ಮುಖವನ್ನು ನೋಡಿದನು.

"ಇಷ್ಟಸಿದ್ಧಿಯ ಅಪೂರ್ಣತೆಯಿಂದ ಮಾನವನು ನಿರಾಶಾ ವಾದಿಯಾಗುವದು ಕ್ವಚಿತ್ತಾದುದು."

ಶಂಕರನ ಸುಪ್ತ ಸಂಗತಿಗೆ ಒಂದು ಬಾಣವು ತಗಲಿದಂತಾ ಯಿತು.

"ಪ್ರಯತ್ನವಾದಿಗಳು ಇದನ್ನು ನಂಬುವದಿಲ್ಲ ಶಂಕರಜೀ!"

"ವಿನಯಾ ನೀವು ಹೀಗೆಲ್ಲ ಮಾತಾಡಬೇಡಿರಿ."

"ಹೆದರುವಿರಾ?"

"ವಿನಯಾ!" ದನಿಯಲ್ಲಿ ಕಂಪನವಿದ್ದಿತು.

"ಸ್ತ್ರೀಯರಿಗೆ ಹೆದರುವಿರಾ?"

"ವಿನಯಾ, ನೀವು ಸ್ತ್ರೀಯೆಂದು ನನ್ನನ್ನು ಎಚ್ಚರಿಸುವದು ನಾಚಿಕೆಗೇಡು."

"ಈ ಮಾತಿಗೆ ನಾನು ಉತ್ತರ ಕೊಡಬಯಸುವದಿಲ್ಲ."

ಅಷ್ಟರಲ್ಲಿ ಅವರು ಬೈಲಿಗೆ ಬಂದರು. ಹಸಿರು ಹುಲ್ಲಮೇಲೆ ಕುಳಿ ತರು. ವಿನಯಾ ಮಾತು ಮುಂದುವರಿಸುತ್ತ—

"ಶಂಕರಜೀ, ನನ್ನ ತಾಯಿ ಮತ್ತು ನಾನು ಅನೇಕ ದುಃಖದ ದಿನಗಳನ್ನು ಕಂಡಿರುವೆವು. ಕಷ್ಟದ ಕಹಿ-ಕಷಾಯವನ್ನು ಕುಡಿದಿರು

ವೆವು. ಕಷ್ಟಪಡುವವರನ್ನು ಕಂಡರೆ ಸ್ವಾಭಾವಿಕವಾಗಿ ನನ್ನಲ್ಲಿ ಮರುಕ. ನನ್ನ ತಾಯಿಯ ಮುಂದೆ ನಿಮ್ಮ ಸ್ವಭಾವದ ಸಂಬಂಧ ಅನೇಕ ಸಲ ಹೇಳಿರುವೆ. ನಿಮ್ಮ ಇಂದಿನ ಜೀವನದಂತೆ ಆಕೆ ಸಹ ೮-೧೦ ವರುಷ ಕಳೆದುದುಂಟು. ನಾನು ಅದನ್ನು ಅರಿಯದ ಶಿಶು. ಅದೆಲ್ಲ ಒಂದು ಬಗೆಯ ಸಾಧನೆಯೆಂದು ಆಕೆಯ ಅರ್ಥ. ನಿಮ್ಮನ್ನು ಕಾಣಬೇಕೆಂದು ಆಕೆಯು ಅನೇಕ ದಿನಗಳಿಂದ ಆಶಿಸಿದ್ದುಂಟು. ನಾನು ಅಷ್ಟೇ ಸಾರೆ ಮರೆತಿರುವೆ. ಈಗ ನಾಳೆ ಸೂಟಿಯಿದೆ.

"ವಿನಯಾ, ನಿಮ್ಮ ತಾಯಿಯ ಮುಂದೆ ನನ್ನ ಪ್ರದರ್ಶನದಿಂದ ಲಾಭವೇನು?"

"ಲಾಭದ ಆಶೆಯನ್ನಿಟ್ಟುಕೊಂಡಿಲ್ಲ. ಶಂಕರಜೀ!" ಮಾತಿನಲ್ಲಿ ದಯಾಂಕುರವಿದ್ದಿತು.

"ಈಗಾಗಲೆ ನಾನು ಬಹಳ ಮಾತಾಡಿದೆ, ವಿನಯಾ."

"ಶಂಕರಜೀ, ನಿಮಗೆ ಹಾನಿಯಾಗದಂತೆ ನೊಡಿಕೊಳ್ಳುವೆ."

"ನನ್ನ ಜೀವನವ್ಯಾಪಾರದಲ್ಲಿ ಇನ್ನು ಮುಂದೆ ಹಾನಿಯಾಗುವಂಥದನ್ನೇನೂ ನಾನು ಇಟ್ಟುಕೊಂಡಿಲ್ಲ, ವಿನಯಾ!'

ವಿನಯಾ ಬೆಕ್ಕಸ ಬೆರಗಾದಳು. ಶಂಕರಜಿಯ ನಿರಾಶಾವಾದಿತ್ವದ ಒಂದು ಎಳೆಯು ಸಿಕ್ಕಂತಾಯಿತು. ಮುಖವನ್ನು ಕಣ್ಣು ಪಿಳಿಕಿಸದೆ ನೋಡುತ್ತ ನಿಂತಳು. ಶಂಕರನು ಗುಟ್ಟು ಬಯಲಾಯಿತೆಂದು ತಿಳಿದನು.

"ವಿನಯಾ, ನಾನು ನಾಳೆ ಬರುವೆ. ಇಂದಿನ ಮಟ್ಟಿಗೆ ನನ್ನನ್ನು ಬಿಡು," ಎಂದು ಹೇಳಿ ಪಾರಾಗಿ ಹೋದನು.

"ಆ ಮಾತಿನಿಂದ ವಿನಯಾ ಅನೇಕ ಬಗೆಯಾಗಿ ವಿಚಾರಿಸಿದಳು. ಶಂಕರಜಿಯ ಜೀವನವು ಯಾವುದೋ ಒಂದು ಆಘಾತದಿಂದ ಹೀಗಾಗಿದೆ ಎಂದು ನಿಶ್ಚಯಿಸಿದಳು. ಪ್ರೇಮಭಂಗವು ಕಾರಣವಿದ್ದೀತೇ ಎಂದು ಸಂಶಯಪಟ್ಟಳು. ಶಂಕರಜಿಯ ಒಂಟಿ ಬಾಳು ಸಾಧಾರವಾಗಿ ಕಣ್ಣಮುಂದೆ ನಿಂತಷ್ಟು ಸಾರೆ ಇದೇ ಗಟ್ಟಿಯೆಂದುಕೊಂಡಳು. ಆದರೆ ಅವಳಾರು? ತಿಳಿಯದ ವಿಷಯ. ಸೂರ್ಯ ಒಡೆದು ಸಾವಿರ ಹೋಳಾದರೂ ಶಂಕರಜಿಯು ಬಾಯಿ ಬಿಡರೆಂದು ದೃಢವಾಯಿತು.

— ೩ —

ಶಂಕರಜಿ ಮರುದಿನ ವಿಶೇಷ ಆಡಂಬರವಿಲ್ಲದೆ ಬಂದನು. ವಿನಯಾ ಸ್ವಾಗತಿಸಿ ತನ್ನ ಕೋಣೆಯಲ್ಲಿ ಕುಳ್ಳಿರಿಸಿದಳು. ಈ ಪ್ರಸಂಗದಲ್ಲಿ ತಾನು ಗೆದ್ದೆನೆಂದು ಗೆಲುವಿನ ಅಳಿ ನಗೆಯು ತುಟಿಯ ಮೇಲೆ ಸುಳಿದಾಡುತ್ತಿದ್ದಿತು.

"ಶಂಕರಜೀ, ನಮ್ಮ ಆಫೀಸಿನಲ್ಲಿ ನೀವೊಬ್ಬರೆ ನನಗೆ ವಿಶೇಷ ಸ್ನೇಹಿತರು. ಅದರ ಪ್ರದರ್ಶನಕ್ಕೆ ಇಂಥ ಪ್ರಸಂಗಗಳು ಬೇಕಲ್ಲವೇ? ನಿಮ್ಮ ಸ್ನೇಹ ನನ್ನ ತಾಯಿಗೂ ತಿಳಿಯಲೆಂದು ನನ್ನಾಶೆ," ಎಂದು ನಾಚುತ್ತ ಬಳುಕುತ್ತ ನುಡಿದಳು.

"ಅದಕ್ಕೆ ನನ್ನ ಅನುಮೋದನದ ಅವಶ್ಯಕತೆ ಇದೆಯೆಂದು ಬಯಸುವಿರಾ?" ಯಂತ್ರದಂತೆ ಮಾತಾಡಿದನು.

ಹೀಗೆ ಮುರಿದು ಆಡುವ ಮಾತುಗಳಿಂದ ವಿನಯಾ ಬೇಸರಗೊಳ್ಳದೆ ಮೂಲವನ್ನರಿಯಬೇಕೆಂದು ಇನ್ನಷ್ಟು ತರ್ಕಿಸಹತ್ತಿದಳು.

ವಿಲಾಸಿನಿಯು ಚಹಾ ತಂದಿಟ್ಟು ಒಂದು ಕುರ್ಚಿಯ ಮೇಲೆ ಕುಳಿತಳು.

"ತಾಯೀ, ಇವರೆ ಶಂಕರಜೀಯುವರು."

ತಾಯಿಯು—"ನಮಸ್ತೆ!" ಎಂದಳು.

"ನಮಸ್ತೆ!" ಶಂಕರಜಿಯು ನುಡಿದು ಮುಖವನ್ನು ನೋಡಿದನು.

ನೋಡಿದ ಮರೆಗೆ ಒಂದು ಕೋಲ್ಮಿಂಚು ಸೆಳೆದು ಅದೃಶ್ಯವಾದಂತೆ ಉಭಯತರಿಗೆ ಭಾಸವಾಯಿತು. ವಿನಯಳಿಗೆ ತಿಳಿಯಲಿಲ್ಲ.

"ತಾಯಿ, ನಾನು ಹೇಳಿದಂತೆ ಇವರ ಸ್ವಭಾವವುಂಟೆಂದು ತಿಳಿಯಬೇಡ. ಅದೆಲ್ಲ ಅವರು ಕೊಂಡುತಂದ ಆಗಂತುಕ ನಟನೆ." ಎಂದು ವಿನಯಾ ನಗುತ್ತ ನುಡಿದರು.

ಛಾಯಾಶಂಕರನು ಇಬ್ಬರ ಮುಖವನ್ನು ನೋಡಿದನು. ವಿಲಾಸಿನಿಯು ಸುಮ್ಮನಿದ್ದಳು.

"ಶಂಕರಜೀ, ನೀವು ಇಲ್ಲಿಯೇ ಇರುವಿರಾ?" ವಿಲಾಸಿನಿಯು ಕೇಳಿದಳು.

"ಈಗ ನಾಲ್ಕು ವರುಷದಿಂದ," ಶಂಕರನು ನುಡಿದನು.

"ಮನೆಯಲ್ಲಿ ನೀವೇ ಅಡಿಗೆಯನ್ನು ಮಾಡಿಕೊಳ್ಳುತ್ತಿರಬೇಕು?"

"ಹಾಗೆನ್ನ ಬಹುದು,"

"ನೀವು ಇನ್ನೂ ಅವಿವಾಹಿತರೇ?"

ವಿನಯಾ ನಾಚಿಕೊಂಡು ಮುಖ ತಿರುಗಿಸಿದಳು.

"ನೀವು ಅರಿತ ಸಂಗತಿಯು ನಿಜವಾದುದು."

"ತಾಯೀ, ನೀನು ಬಹಳ ಪ್ರಶ್ನೆ ಕೇಳಿದೆ. ಶಂಕರಜಿಯಾದರೂ ನಿನ್ನ ಜತೆಗೆ ಬಹಳ ಮಾತಾಡಿದರು." ಕೆಂಗಲ್ಲದಿಂದ ಇಷ್ಟು ನುಡಿಯ ಬೇಕಾದರೆ ವಿನಯಳಿಗೆ ಸಾಕುಸಾಕಾಯಿತು.

ಶಂಕರನು ಕಲ್ಲುಗೊಂಬೆಯಂತೆ ಕುಳಿತಿದ್ದನು.

"ವಿನಯಾ, ಇವರು ಇನ್ನೂ ಎಷ್ಟೋ ಮಾತಾಡಬಲ್ಲರು," ಎಂದು ತಾಯಿ ನಕ್ಕಳು.

"ನಾನು ಹೋಗುವೆನು. ನಿಮ್ಮಿಬ್ಬರಿಂದಲೂ ಉಪಕೃತ," ಶಂಕರನು ಎದ್ದು ನಿಂತನು.

"ಶಂಕರಜೀ, ನಿಮಗೆ ಹಾನಿಯಾಗಿಲ್ಲವಷ್ಟೇ!' ವಿನಯಾ ತುಂಬು ನಗೆಯಿಂದ ಕೇಳಿದಳು.

"ಹಾಗಲ್ಲ. ನಿಮಗೆ ಲಾಭವಿಲ್ಲವಷ್ಟೇ? ಎಂದು ಕೇಳು," ತಾಯಿ ಅಂದಳು.

"ಎರಡೂ ಒಂದೇ, ತಾಯೀ!"

ತಾಯಿಮಗಳು ನಗಹತ್ತಿದರು. ಶಂಕರಜೀಯ ಮುಖವು ತೊಳೆದಂತೆ ಸ್ವಚ್ಛವಾಯಿತು.

"ನಾನು ಹೋಗುವೆ," ಎಂದು ಅವನು ಹೊರಟನು.

"ಶಂಕರಜೀ, ನೀವು ಮೇಲಿಂದಮೇಲೆ ಬರುತ್ತಿರಬೇಕು," ತಾಯಿ ಅಂದಳು.

ಅವನು ನಿರುತ್ತರನಾಗಿ ಸಾಗಿಬಿಟ್ಟನು.

— ೪ —

ಈ ಪ್ರಸಂಗವು ಶಂಕರಜಿಯ ಜೀವನದಲ್ಲಿ ಸಾಕಷ್ಟು ಬದಲಾವಣೆಯನ್ನು ಮಾಡಿತು.

ವಿನಯಳ ಪ್ರೇಮಯುಕ್ತ ಮಾತುಗಳು, ವಿಲಾಸಿನಿಯ ಗೌರವಯುತ ಪರಿಚಯವು ಶಂಕರಜಿಯ ನೈರಾಶ್ಯವನ್ನು ದಿನೇ ದಿನೇ ಕಡಿಮೆ ಮಾಡಹತ್ತಿದವು. ವಾರದಲ್ಲಿ ಒಂದೆರಡು ಸಾರೆ ವಿನಯಳ ಮನೆಗೆ ಹೋಗಿ—ಬರಹತ್ತಿದನು. ಹರಟೆಯ ಓಘದಲ್ಲಿ ರಾತ್ರಿ

ಯಾದರೆ ಅವರ ಮನೆಯಲ್ಲಿಯೆ ಊಟಮಾಡಿ, ಸಿನೇಮಾವನ್ನು ನೋಡಿ ಮನೆಗೆ ಮಲಗಲಿಕ್ಕೆ ಬರಹತ್ತಿದನು. ಇಷ್ಟು ಅಲ್ಪಾವಧಿಯಲ್ಲಿ ಶಂಕರಜಿಯ ಜೀವನ ಮಾರ್ಪಾಟಾದುದು ವಿನಯಳಿಗೆ ಆಶ್ಚರ್ಯವಾಗಿ ಕಂಡಿತು. ಆ ಆಶ್ಚರ್ಯ ತೃಪ್ತಿಗೆ ಬೇರೊಂದು ಅನುಕೂಲಾರ್ಥವನ್ನು ಕಲ್ಪಿಸಿದಳು. ಶಂಕರಜಿಯನ್ನು ಮಾನವನನ್ನಾಗಿ ಮಾಡಬೇಕೆಂದು ನಿಶ್ಚಯಿಸಿಕೊಂಡ ಬಹುಭಾಗ ಸಾರ್ಥಕವಾಯಿತೆಂದು ತಿಳಿದಳು.

ಒಂದಿನ ನಡುವಿನ ಬಿಡುವಿನಲ್ಲಿ ವಿನಯಾ ಮತ್ತು ಶಂಕರಜಿಯವರು ಚಹ ಕುಡಿಯುತ್ತ ತಮ್ಮ ಆಫೀಸಿನಲ್ಲಿ ಕುಳಿತಿದ್ದರು. ವಿನಯಾ ಮಾತು ಬಿಚ್ಚಿ—"ಶಂಕರಜೀ !" ಎಂದಳು.

"ಏನು ?"

"ಸಿಟ್ಟಾಗಬಾರದು ನನ್ನ ಪ್ರಶ್ನೆಗೆ. ಹಾಗೆ ಮೊದಲೇ ವಿನಂತಿಸುವೆ."

"ಆಗಬಹುದು."

ವಿನಯಾ ಕೇಳಲಿಕ್ಕೆ ಸಂಕೋಚಪಟ್ಟಳು.

"ಏನು ? ಕೇಳಬಹುದು."

"ನಿಮ್ಮ ಮದುವೆಯಾಗಿದ್ದಿತೇ ?" ಮಾತಿನಲ್ಲಿ ಭಯದ ಅಂಶವಿದ್ದಿತು.

"ಇಲ್ಲ." ಸರಳವಾಗಿ ನುಡಿದನು.

"ಮದುವೆಗಾಗಿ ಪ್ರಯತ್ನಿಸಿದರಾ ?"

"ಇಲ್ಲ."

"ನೀವು ಯಾರನ್ನಾದರೂ ಪ್ರೀತಿಸಿದಿರಾ ?"

"ಆ ಮಾತನ್ನು ಮರೆತು ಬಹಳ ದಿನಗಳಾಗಿವೆ ಇಂದಿಗೆ."

"ಆಜನ್ಮ ಬ್ರಹ್ಮಚಾರಿಯಾಗಿರಬೇಕೆಂದು ಗೊತ್ತು ಮಾಡಿಕೊಂಡಿರುವಿರಾ ?"

"ಹಾಗೆ ನಾನು ಪ್ರತಿಜ್ಞೆಮಾಡಿದಂತೆ ಲಕ್ಷದಲ್ಲಿಲ್ಲ."

"ಮದುವೆಯಾಗುವಿರಾ ?" ತುಟಿಕಡಿದಳು.

"ನೀವು ಮದುವೆಯಾಗುವಿರಾ ? ಎಂಬ ಪ್ರಶ್ನದ ಉತ್ತರವೆ ನನ್ನದೆಂದು ಹೇಳಿದರೆ ನಿಮಗೆ ಅರ್ಥವಾದೀತೇ ?"

ವಿನಯಾ ತೀರ ನಾಚಿಕೊಂಡಳು. ಮುಖದ ಮೇಲೆ ಮುತ್ತುಗಟ್ಟಿದ ಬೆವರ ಹನಿಗಳನ್ನು ಒರಸಿಕೊಂಡಳು. ತನ್ನ ಪ್ರಶ್ನೆ ಸಾಹಸದ್ದೆಂದು ತರ್ಕಿಸಿದಳು. ಅಪ್ರತಿಭಳಾಗಿ ಸುಮ್ಮನೆ ಕುಳಿತಳು. ಕೆಲಹೊತ್ತು ಮೌನ. ಕಡೆಗೆ ಶಂಕರಜಿಯು ಮಾತು ಮುಗಿಸುವಂತೆ—

"ವಿನಯಾ, ನಿಮ್ಮ ಪ್ರಶ್ನೆ ಮುಗಿದರೂ ಬುದ್ಧಿಯ ಮತ್ತು ನಾಲಿಗೆಯ ಚಾಪಲ್ಯ ಆರಿಲ್ಲವೆಂದುಕೊಳ್ಳುವೆನು. ಉಳಿದಿದ್ದರೆ ಕೇಳಬೇಕು."

"ಶಂಕರಜೀ, ನಾನು ಸೋತೆನು. ಸೋತೆನು."

"ಇಲ್ಲ. ನಿಮ್ಮ ಮುಂದಿನ ನೂರು ಪ್ರಶ್ನೆಗಳನ್ನು ಸಹ ನಾನು ಉತ್ತರಿಸಬೇಕೆಂದಿರುವೆ. ಕೇಳಬೇಕು."

"ನನಗೆ ಸಾಕು ಶಂಕರಜೀ !"

"ಇಲ್ಲ. ನಾನೇ ಹೇಳುವೆ."

"ಏನು ?"

"ಇಂದಿನ ಚರ್ಚೆಯ ನಿರ್ಣಯವನ್ನು ನಿಮ್ಮ ತಾಯಿಯ ಕೈಯಲ್ಲಿ ಹಾಕಬಹುದು."

"ಹೀಗೇ !" ಕಣ್ಣರಳಿಸಿ ನಿಂತಳು.

"ಅಹುದು."

"ಕುರೂಪಿ, ಅಂಗಹೀನೆ, ತಿಳಿಗೇಡಿಯಾದ ಒಂದು ಕನ್ನೆಯನ್ನು ನಿಮಗಾಗಿ ನನ್ನ ತಾಯಿಯು ಹುಡುಕಿದರೆ ಸಮ್ಮತಿಸುವಿರಾ?"

"ಸಮ್ಮತಿಸಬೇಕು."

"ಇಷ್ಟು ಪರಾಧೀನರೇ ?"

"ನಿಮ್ಮ ತಾಯಿಯು ಅಷ್ಟು ಕೀಳೆಂದು ನಾನು ಎಂದಿಗೂ ತಿಳಿಯಲಾರೆ."

"ಇಷ್ಟು ಸ್ವಲ್ಪ ಸಮಯದಲ್ಲಿ ನನ್ನ ತಾಯಿಯ ಸ್ವಭಾವ ಪರೀಕ್ಷೆಯಿಂದ ಇಷ್ಟು ಗಟ್ಟಿಮುಟ್ಟಾದ ಅಭಿಪ್ರಾಯಕ್ಕೆ ಬರುವದು ನನಗೆ ಆಶ್ಚರ್ಯವನ್ನುಂಟುಮಾಡುವದು, ಶಂಕರಜೀ . . ."

"ಇದಕ್ಕೆ ಉತ್ತರವನ್ನು ಕೊಡಬಯಸಿದರೆ ವಿಷಯಾಂತರವಾಗುವದೆಂದು ಸುಮ್ಮನಿರುವೆ."

ವಿನಯಳಿಗೆ ಹರ್ಷೋನ್ಮಾದವಾಯಿತು. "ಶಂಕರಜೀ, ಇಂದಿಗೆ ನೀವು ಪೂರ್ಣ ಮಾನವರು !" ಎಂದು ಹತ್ತಾರು ಸಾರೆಯಾದರೂ ಬಾಯೊಳಗೇ ನುಡಿದಳು. ಅವನ ಪಾದವನ್ನು ಮುಟ್ಟಿ ಧೂಳಿಯನ್ನು ಹಣೆಗೆ ಹಚ್ಚಿಕೊಳ್ಳಬೇಕೆಂದು ಮನಸು ಅದೆಷ್ಟೋ ಬಗೆಯಾಗಿ ಭಾವಿಸಿತು. ಆದರೆ ಆಕೆಯ ಸಂಯಮೀ ಸಂಸ್ಕಾರವು ಹಿಂದೆಳೆದು ನಿಲ್ಲಿಸಿತು. ಮುಖ ಮಾತ್ರ ನಗೆಯನ್ನು ಬಿಗಿಹಿಡಿದು ಇಷ್ಟಗಲವಾಗಿ ತುಂಬಿನಿಂತಿತು. ಗಂಟೆ ಬಾರಿಸಲು ಇಬ್ಬರೂ ತಮ್ಮ ಕೆಲಸಗಳಿಗೆ ತೆರಳಿದರು.

ಶಂಕರಜೀಯು ಪೂರ್ಣ ಮಾನವನಾದ ಶ್ರೇಯಸ್ಸಿನ ಬಹುಭಾಗ ತನ್ನದೆಂದು ವಿನಯಾ ತಿಳಿದಳು. ಅವಳ ಸಂತೋಷ, ಆನಂದ ಮೇರೆ ಮೀರಿ ಮಹಾಪೂರಕ್ಕಿಟ್ಟುಕೊಂಡು ಹುಚ್ಚು ಹೊಳೆಯಾಗಿ ಹರಿಯಬಯಸಿತು. ತಾಯಿಯ ಮುಂದೆ ಶಂಕರಜಿಯ ಮಾತು, ಸ್ವಭಾವ, ಸರಳಮನಸು, ಪ್ರಗಲ್ಭವಿಚಾರ, ಮೇಲೆ ಕೊಂಕುನುಡಿಯ ಜಾಣ್ಮೆ ಎಷ್ಟು ಹೊಗಳಿದರೂ ಕಡಿಮೆ. ಅವನನ್ನು ಎಷ್ಟು ಬಗೆಯಾಗಿ ಗೌರವಿಸಿದರೂ ಕಡಿಮೆ, ತೃಪ್ತಿಯಿಲ್ಲ. ಈ ಅತೃಪ್ತಿಪ್ರಸಂಗಗಳಲ್ಲಿ ತಾಯಿಯ ಮೇಲೆ ಹರಿಹಾಯುವಳು, ಶಂಕರಜಿಯ ಜೊತೆಗೆ ಛಲಹಿಡಿಯುವಳು, ನಗುವಳು, ಮುನಿಯುವಳು, ಲಲ್ಲೆಯಾಡುವಳು, ಹಾಡಿಕೊಳ್ಳುವಳು. ಆದರೆ ವಿಲಾಸಿನಿಗೆ ಇದೆಲ್ಲ ಆಶ್ಚರ್ಯ. ಗಂಭೀರ ಸ್ವಭಾವದ ಶಂಕರಜಿಯು ಇದೆಲ್ಲವನ್ನು ಮೋನಿಯಾಗಿ ನೋಡುತ್ತಿದ್ದನೇ ಹೊರತು ಒಳಿತು ಕೆಡಕುಗಳನ್ನು ನುಡಿದವನಲ್ಲ.

— ೫ —

ಒಂದು ಶನಿವಾರ ಶಂಕರನು ಬರಲಿಕ್ಕೆ ತಡವಾಗುವದೆಂದು ಹೇಳಿಕಳಿಸಿದನು. ಮನೆಯಲ್ಲಿ ತಾಯಿ—ಮಗಳು ಮಾತಾಡುತ್ತ ಕುಳಿತಿದ್ದರು.

"ತಾಯೀ, ಶಂಕರಜಿಯವರು ಇನ್ನೂ ಬರಲಿಲ್ಲವಲ್ಲ," ಬೇಕೆಂತಲೇ ವಿನಯಾ ಕೇಳಿದಳು.

"ಅಹುದು," ತಾಯಿ ಬೇರೊಂದು ವಿಚಾರದಲ್ಲಿದ್ದಳು.

"ಈಗ ನಾಲ್ಕು ಹೊಡೆಯಿತಲ್ಲವೇ ?"

"ಹೊಡೆಯಿತೋ ಇಲ್ಲವೋ ನಿನಗೂ ಗೊತ್ತಾಗಿರಬೇಕು ವಿನಯಾ." ಕೆಲಹೊತ್ತು ಮೌನದಲ್ಲಿ ಕಳೆಯಿತು.

"ಅವರ ಸ್ವಭಾವ ವರ್ಣಿಸುವಂಥದು ತಾಯಿ. ನಿನ್ನ ಅಭಿಪ್ರಾಯವೇನು ?" ವಿನಯಾ ಕೇಳಿದಳು.

"ಅಹುದು," ತಾಯಿ ಮುಖವನ್ನು ಕಿವುಚಿದಳು.

"ಅವರು ಹೀಗಾಗಬಹುದೆಂದು ನಾನು ತಿಳಿದಿರಲಿಲ್ಲ."

" ಹೂ . . . "

" ಅವರಿಗೆ ವಯಸ್ಸು ಎಷ್ಟಾಗಿರಬೇಕೆಂದು ತರ್ಕಿಸುವಿ, ತಾಯಿ ?"

ತಾಯಿ ಮೌನವನ್ನು ಮುರಿಯಲಿಲ್ಲ.

" ರೇಶನಿಂಗ ಆಫೀಸಿನಲ್ಲಿ ನಾನು ಮೊದಲ ಸಲ ಕಂಡದ್ದಕ್ಕೂ ನಮ್ಮ ಮನೆಗೆ ಬಂದ ದಿನಕ್ಕೂ ಐದು ವರುಷ ಚಿಕ್ಕವರಾಗಿ ಕಂಡರು. ಮತ್ತು ನಿನ್ನೆ ನಿನ್ನ ಸಂಗಡ ಚೇಷ್ಟೆಯಾಡುತ್ತ ನಗುವ ಮುಂದಿನ ಮುಖವನ್ನು ನೋಡಿ ನೆನೆದರೆ ಮತ್ತೂ ಐದು ವರುಷ ಚಿಕ್ಕವರಾದಂತೆ ಎನಿಸುವದು. ಇನ್ನೊಂದಿಷ್ಟು ದಿನ ಕಳೆದರೆ ಇನ್ನೂ ಸಣ್ಣವರಾಗ ಬಹುದಲ್ಲವೇ ?'' ತನ್ನ ವಿಮರ್ಶಾಶಕ್ತಿಯನ್ನು ತಾಯಿ ಕೊಂಡಾಡ ಬಹುದೆಂದು ಬಯಸಿ ನುಡಿದಳು.

" ವಿನಯಾ, ಒಂದು ಮಾತು ಹೇಳಬೇಕೆಂದಿರುವೆ."

" ಏನು ?" ಉತ್ಸುಕತೆಯಿಂದ ವಿನಯಾ ಕೇಳಿದಳು.

'' ಶಂಕರಜೀಯವರ ಸಂಬಂಧ ನೀನು ಬಹಳ ಮಾತಾಡು ತ್ತಿರುವೆ."

" ಅಂದರೇನಮ್ಮ !" ಮುಖದಲ್ಲಿ ಮುಗುಳುನಗೆ ತುಂಬಿ ಬಂದಿತು.

" ಅದಕ್ಕೆ ನಾನೊಂದು ಅರ್ಥಮಾಡಿಕೊಂಡಿರುವೆ."

" ಏನದು ?" ತುಟಿಗಳನ್ನು ಒರಸುತ್ತ ಕೇಳಿದಳು.

" ಅದರರ್ಥ ಹೇಳಬೇಕೆಂತೇನಿಲ್ಲ. ನಾನೂ ಹೆಂಗುಸಿರುವೆ.''

" ತಾಯೀ ಇದೇನು ನನಗೆ ತಿಳಿಯದು," ಮುಖ ಕೆಂಪೇರಿತು.

" ನಿನ್ನಲ್ಲಿಯ ಮೊದಲಿನ ತಾಳ್ಮೆಯನ್ನೇ ನಾನು ಇಂದಿಗೂ ಕಾಣಬೇಕೆಂದಿರುವೆ."

" ನಾನು ತಾಳ್ಮೆಗೆಟ್ಟಿಲ್ಲ, ತಾಯೀ !" ತೇಲುಗಣ್ಣಿನಿಂದ ನುಡಿದಳು.

" ಅದನ್ನೇ ನಾನು ಬಯಸುವದು."

" ನಾನು ತಪ್ಪಿದರೆ ತಿಳಿಹೇಳು," ಶಿಷ್ಯಳಂತೆ ನುಡಿದಳು.

" ನಿನ್ನ ತಾಳ್ಮೆ—ಸಹನೆ ನಿನ್ನ ಸ್ವಾಧೀನದಲ್ಲಿರಲಿ. ಮತ್ತೆ ಹೇಳುವೆ.''

" ಆಗಲಮ್ಮ !'' ಗಟ್ಟಿಯಾಗಿ ನಕ್ಕಳು.

" ಶಂಕರಜೀ ಒಳ್ಳೆಯವರು."

" ಹ !" ನಗೆಯ ಮುಖದಿಂದ ಹೂಗುಟ್ಟಿದಳು.

'' ಅವರನ್ನು ಮಾನವರನ್ನಾಗಿ ಮಾಡಿದ ಅಧಿಕ ಶ್ರೇಯಾಂಶ ನಿನಗಿದೆ."

'' ಇದು ಮಗಳ ವರ್ಣನೆ.''

'' ಅವರ ಕಲ್ಯಾಣವನ್ನು ಬಯಸುವಿ.''

ವಿನಯಾ ಚಿಂಗನೆದ್ದು ಕುರ್ಚಿಯ ಹಿಂದೆ ನಿಂತು ಕೈಯಲ್ಲಿಯ ಬಳೆಗಳನ್ನು ಹಿಂದೆ—ಮುಂದೆ ಸರಿಸಹತ್ತಿದಳು.

'' ನೀನು ತಾಳ್ಮೆಯಿಂದಿರಬೇಕೆಂದು ನನ್ನ ಆಜ್ಞೆ.''

'' ಆಗಲಮ್ಮ !'' ನಗುತ್ತ ಬಂದು ಕುಳಿತಳು.

'' ಹೋಗು, ಇನ್ನೊಮ್ಮೆ ಹೇಳುವೆ." ತಾಯಿಯು ಎದ್ದು ನಿಂತಳು.

'' ಏನು ಹೇಳಮ್ಮ. ನಾನು ಕೇಳಲು ನನ್ನ ಎಲ್ಲ ಸಹನೆಯನ್ನು ಸಂಗ್ರಹಿಸಿರುವೆ."

'' ಇಲ್ಲ. ನಾನು ಇನ್ನೊಮ್ಮೆ ಹೇಳುವೆ," ಎಂದು ವಿಲಾಸಿನಿ ಎರಡು ಹೆಜ್ಜೆ ಇಟ್ಟಳು.

'' ಇಲ್ಲ ತಾಯೀ ! ನೀನು ಹೇಳಬೇಕು,'' ಎಂದು ವಿನಯಾ ಆಗ್ರಹ ಪಡಿಸಿದಳು. ತಾಯಿಯು ನುತ್ತೆ ತನ್ನ ಕುರ್ಚಿಯ ಮೇಲೆ ಕುಳಿತಳು.

'' ವಿನಯಾ . . . . ''

''ಏನಮ್ಮ!"

ವಿಲಾಸಿನಿಯು ಮಾತಾಡಲು ಹಿಂದೆ- ಮುಂದೆ ನೋಡಹತ್ತಿದಳು. ಮಗಳು ತವಕಗೊಂಡು ಚಾತಕ ಪಕ್ಷಿಯಂತೆ ಬಾಯಿ ತೆರೆದಿದ್ದಳು,

''ವಿನಯಾ! '' ತಾಯಿ ಗುರಿಯಿಲ್ಲದವರಂತೆ ಕರೆದಳು.

''ತಾಯೀ, ನೀನೇ ತಾಳ್ಮೆಯನ್ನು ಕಳೆದುಕೊಳ್ಳುತ್ತಿರುವೆಯಲ್ಲ? ''

''ವಿನಯಾ, ಶಂಕರಜಿಯವರು ನಿನ್ನ ಕಲ್ಪವೃಕ್ಷಕ್ಕೆ ಎಷ್ಟು ನೀರು ಸುರಿದು ಬೆಳೆಸುತ್ತ ಬಂದಿರುವರು?"

''ಅದರ ನಿರ್ಣಯವನ್ನು ನಿನ್ನ ಕೈಯಲ್ಲಿ ಹಾಕಿರುವರು."

''ಅದು ಅವರು ಪಾಲಿಸುತ್ತ ಬಂದ ಧರ್ಮ."

''ನೀನು ನಿರ್ಣಯವನ್ನು ಹೇಳು ತಾಯೀ! ''

''ಅದನ್ನು ಈಗ ಕೇಳಬೇಡ. ಇನ್ನೊಂದು ತುಸು ದಿನ ಹೋಗಲಿ. ''

''ತಾಯೀ, ನನ್ನನ್ನು ಹೀಗೆ ಅಂಧಕಾರದಲ್ಲಿ ನೂಕಬೇಡ. ಹೇಳು."

''ವಿನಯಾ . . , !'' ಮಾತಿನಲ್ಲಿ ಆವೇಗ ತುಂಬಿತ್ತು.

''ತಾಯೀ . . . !'' ದನಿಯಲ್ಲಿ ಉನ್ಮಾದ ಬೆರೆತಿತ್ತು.

ಐದಾರು ನಿಮಿಷ ಮೌನದಲ್ಲಿ ಕಳೆಯಿತು. ಯಾರೂ ಮಾತಾಡಲಿಲ್ಲ. ತಾಯಿ- ಮಗಳ ಮುಖದ ಮೇಲೆ ನೂರಾರು ಗಂಭೀರ ಪ್ರಸಂಗಗಳು ಸುಂಟರ ಗಾಳಿ ಸುಳಿಸುಳಿದು ಮಾಯವಾದಂತೆ ಕಂಡು ಬರುತ್ತಿದ್ದವು. ತಾಯಿಯು ಕೊನೆಗೆ ಉಕ್ಕಿನ ಹೃದಯವನ್ನು ನಿರ್ಮಿಸಿಕೊಂಡು—

''ಶಂಕರಜೀಯವರು ನನ್ನ ಬಾಲ್ಯ ಸ್ನೇಹಿತರು. ನಿನಗೆ ಗೊತ್ತಿರಲಿಕ್ಕಿಲ್ಲ ವಿನಯಾ. ''

''ಇಲ್ಲ ತಾಯಿ! '' ವಿನಯಾ ಬೆರಗುಗೊಂಡಳು.

''ಅವರು ನನ್ನ ಪ್ರೇಮಪಾತ್ರರು.

''ತಾಯೀ . . . ವಿನಯಳ ಮುಖವು ಬಿಳುಪೇರಿತು. ಥೊಪ್ಪನೆ ಕುಳಿತಳು.

''ನೀನು ಅವರ ಮಗಳ ಹಾಗೆ ತಿಳಿಯಿತೇ, ವಿನಯಾ? ''

ಈ ಮಾತುಗಳು ವಿನಯಳಿಗೆ ಕೇಳಿದುವೋ ಇಲ್ಲವೋ? ಶಂಕರಜೀಯು ಒಳಗೆ ಬಂದನು. ಕುರ್ಚಿಯ ಮೇಲೆ ಕುಳಿತು-''ಇದೇನು?'' ಎಂದು ಕೇಳಿದನು.

''ಇವಳು ನಿಮ್ಮ ಮಗಳು ಶಂಕರಜೀ! '' ಎಂದು ವಿಲಾಸಿನಿಯು ನುಡಿದಳು.

ಶಂಕರಜಿಯು ವಿನಯಳ ಬಳಿಗೆ ಹೋಗಿ—'' ವಿನಯಾ, ಮಗು—ಏಳು, '' ಎಂದು ಬೆನ್ನ ಮೇಲೆ ಕೈಯಾಡಿಸಹತ್ತಿದನು.

ಕಂಬನಿದುಂಬಿದ ಕಣ್ಣುಗಳಿಂದ, ಅದರುವ ತುಟಿಗಳಿಂದ, ಬಿಳುಪೇರಿದ ಕೆನ್ನೆಗಳಿಂದ, ಜೋಲುಬಿದ್ದ ಕೂದಲು- ತಲೆ- ಕೈಗಳಿಂದ ವಿನಯಾ ಸಾವಕಾಶವಾಗಿ ಏಳುತ್ತ—'' ತಂದೇ! '' ಎಂದು ನುಡಿದು ಕಾಲುಗಳನ್ನು ಹಿಡಿದಳು.

ಶಂಕರಜೀ ತಲೆಯ ಮೇಲೆ ಕೈಯಾಡಿಸುತ್ತಲೇ ಇದ್ದನು.

ನಿರೀಕ್ಷೆ

ನಿನ್ನ ಬರವನೆ ಕಾದು ಕುಳಿತೆನು
ಕಳೆದು ಹೋದವು ತಿಂಗಳು;
ಹೃದಯದಾಸೆಯು ಪೂರ್ಣವಾಗದೆ
ಮ್ಲಾನವಾಗಿವೆ ಕಂಗಳು.

ಸವಿಯ ಸಂಗವ ಬಯಸಿ ಅರಸಿರೆ
ಎದುರು ಬಂದುದು ನೀನೆಯೆ;
ಚೆಲುವ ದರ್ಶನ ಎದೆಯ ಪುಳಕಿಸಿ
ಸೊಗವನೂಡಿತು ಅಂದೆಯೆ!

'ಏಕೊ ದಿಟ್ಟಿಸಿ ನೋಡುತಿರುವಳು'
ಎಂದುಕೊಂಡೆನು ಮೊದಲಲಿ;
ಹೃದಯಗನ್ನಡಿ ಒಲವ ಬಿಂಬಿಸೆ
ಅರ್ಥವರಿತೆನು ಮನದಲಿ.

ಅಂದು ಬನದೆಡೆ ಸಾಗುತಿರೆ ನಾ
ಕರೆದು ಸನಿಹವ ಸೇರಿದೆ
ಪಕ್ಷಿಕೂಟವ ಕಂಡು ನಲಿದಿರೆ
ಕೈಯ ಚುಂಬಿಸಿ ಓಡಿದೆ.

ಅಸ್ತಸೂರ್ಯನ ಸೊಬಗ ಸವಿಯುತ
ನದಿಯ ತೀರದಿ ಕುಳಿತಿರೆ,
ಬೆರಗುಗೊಂಡೆನು ಅರಿಯದೊಲು ನೀ
ಬಂದು ಗಾನವ ಉಸುರಿರೆ!

ಬಿಸಿಲು ಏರಿರೆ ಮರದ ನೆರಳಲಿ
ದಣಿದು ಮಲಗುತ ನಿದ್ರಿಸೆ;
ಬೈದು ನಕ್ಕೆನು, ಹೂವಿನಿಂದಲಿ
ನೀನು ಹೊಡೆಯುತ ಎಬ್ಬಿಸೆ!

ಸವಿ-ವಸಂತದ ಹಾದಿ ಕಾಯುತ
ಒಲವನಲ್ಲಿಗೆ ತಡೆದೆವು;
ಸನ್ನಿವೇಶದ ದಾಸರಾಗಿಯೆ
ಬೇರೆ ಊರಿಗೆ ನಡೆದೆವು.

ಕಳೆದುಹೋಯಿತು ಸುಮಧುಮಾಸವು
ಒಲಿದ ಎದೆಗಳು ಕೂಡದೆ;
ಶಿಶಿರ ಬಂದಿತು ಮಳೆಗೆ ಮುನ್ನವೆ
ಹೃದಯತೃಪ್ತಿಯ ಹಾಡದೆ.

ಕಾಲ ಸಂದಿತು; ಎಂದು ಬರುವೆಯೊ
ಮನವ ಮೀಟಿದ ರೂಪವೆ;
ಕಾಯುತಿರುವೆನು ನಲವ ಹರಿಸಲು;
ಬರುವವರೆಗೂ ತಾಪವೆ.

—ವಸುದೇವ ಭೂಪಾಲಂ

ಮತವಳರ ಸಮಸ್ಯೆ

ಎಲ್ಲ ಧ್ಯೇಯಕು ಇಹುದೊ ಅದರ ಪಡಿಛಾಯೆ?
ಬೆಳಕಿನಲ್ಲಿಯೆ ಕುದುರುವಿದು ಎಂಥ ಮಾಯೆ!
ದೇಶಭಕ್ತಿಯ ನೆರಳು ಮತವಾಗಬೇಕೆ?
ನಮ್ಮಾತ್ಮಹನುಮನನು ಇದು ತುಡುಕಿತೇಕೆ?

ಆವ ದೇಶದ ಹುಚ್ಚು ಆವ ದೇಶಕ್ಕೆ?
ಆವ ಕಾಲದ ನೆಚ್ಚು ಆವ ಕಾಲಕ್ಕೆ?
ಅಣುವೊಡೆದೊಡೇ ಸಾಕು ಪ್ರಳಯವಪ್ಪುದಲ,
ಮನವೊಡೆದೊಡೇವೇಳ್ವೆ—ಮಾನವತೆ ವಿಫಲ!

ವೇದ ಹುಟ್ಟಿದ ನಾಡು ಕಾಡುಪಾಲಾಯ್ತು,
ಹೆಸರಾಂತ ತಕ್ಷಶಿಲೆ ತಕ್ಷಕನಿಗಾಯ್ತು;
ಆಗಬಾರದು, ಆಯ್ತು; ಇನ್ನೇಕೆ ಮಾತು?
ಉಳಿದುದನು ರೂಢಿಸುವ ಹೋದುದನು ಹೂತು.

ಪರರು ಬಿಟ್ಟರು ನಮ್ಮ ಜ್ವರ ಬಿಡುವ ತೆರದಿ
ಪಥ್ಯವಿರಬೇಕಣ್ಣ ಈಗಳೆಚ್ಚರದಿ;
ನೆಟ್ಟ ಕೂರಸಿಯನ್ನು ಹೊರಗೆಳೆದೆವೆಂದು,
ರಕ್ತ ಹರಿದರು ಜೀವ ಉಳಿವುದೋ ಎಂದು.

ಎಂತಾದರೂ ನೋವು ಕಡೆಗಾಣಲೆಂದು,
ವಿಕಲಾಂಗವಾದರೂ ಅದುವೆ ಲೇಸೆಂದು—
ಈ ಗಾಯ ಮಾಗಲ್ಕೆ ನಿಡುಗಾಲ ಬೇಕು,
ನಮ್ಮೆಲ್ಲರೊಮ್ಮತದ ಸಹಕಾರ ಬೇಕು.

ಒಂದು ಶಾಪವು ಕಳೆಯಿತಿನ್ನೊಂದು ಶಾಪ
ನಮಗೆ ತಟ್ಟದೆ ಇರಲಿ—ಹಾಕದಿರಿ ಧೂಪ
ಮತವಳರ ಕೋಪಕ್ಕೆ; ತೋರಿರನುತಾಪ;
ಈ ನಾಡಿನೈಸಿರಿಗೆ ಹೊರತಿವರು—ಪಾಪ!

—ಶ್ರೀ ಪು. ತಿ. ನರಸಿಂಹಾಚಾರ್ಯ

ಪ್ರಿನ್ಸಿಪಾಲ್ ಗೋಕಾಕರು ಕಂಡ

ಸತೀತ್ವದ ಚತುರ್ಮುಖಗಳು

ರವಿವಾರ ಮುಂಜಾನೆ ಹಾಯಾಗಿ ಕುಳಿತಿದ್ದೆ. ಅಂದು ರವಿವಾರ, ಅಂತೇ ಭಾವನಾಸ್ವಾತಂತ್ರ್ಯದ ದಿನ. ಇಷ್ಟು ಹೊತ್ತಿಗೆ ಹೀಗೆ ಮಾಡಬೇಕೆಂಬ ನಿಯಮವಿಲ್ಲ. ಇಂಥ ಕೆಲವು ಕಾಗದ-ಪತ್ರಗಳನ್ನೇ ತಲೆಯಲ್ಲಿ ತುಂಬಿಕೊಂಡು ಅವುಗಳ ಉತ್ತರವನ್ನು ತಯಾರಿಸಬೇಕೆಂಬ ಕಟ್ಟಳೆಯಿಲ್ಲ. ಯಂತ್ರ-ತಂತ್ರಗಳ ದಿನವಲ್ಲ ಅದು. ಮಂತ್ರದ ದಿನ. ಫೈಲುಗಳ 'ಢೀಗಿ' ನ ಕೆಳಗೆ ಸಿಕ್ಕಬಿದ್ದ ಚಿತ್ತವೃತ್ತಿ ಅಂದು ಮತ್ತೆ ಚೇತರಿಸಿಕೊಳ್ಳುವದು, ಯಂತ್ರಾರೂಢವಾದ ಮನಸ್ಸು ಅಂದು ಸಿದ್ಧಾರೂಢವಾಗುವದು. ಹಾಸಿಗೆಯ ಮೇಲೆ ಎದ್ದು ಕುಳಿತು—ಬೇಕಾದರೆ ಹಾಗೆಯೇ ತಾಸುಗಟ್ಟಲೆ ಧೇನಿಸುತ್ತ ಕುಳಿತುಕೊಳ್ಳಬಹುದು. ಒಂದು ಗುಟುಕಿಗೇ ದಿನಾಲು ಚಹದ ಕಪ್ಪನ್ನು ತೆರವು ಮಾಡುವದರ ಬದಲು ಅಂದು ಚಹದ ಹನಿಹನಿಯನ್ನು ಸವಿನೋಡುತ್ತ ಊಟದ ಟೇಬಲ್ಲಿಗೆ ಕುಳಿತುಬಿಡಬಹುದು. ಆಕಾಶದ ಉದ್ಯಾನದಲ್ಲಿ ನಸಕು ಮೊಗ್ಗೆಬಿಟ್ಟು ಸೂರ್ಯನಾಗಿ ಅರಳುವ ತನಕ ಅದರ ಎಲ್ಲ ಲೀಲೆಯನ್ನು ನಿದಾನವಾಗಿ ನೋಡಬಹುದು. ಮನೆಮುಂದಿನ ತೋಟದಲ್ಲಿ ತಿರುಗಾಡುತ್ತ ಮನವನ್ನು ತುಂಬಿಕೊಳ್ಳಬಹುದು. ಎಷ್ಟಂದರೂ ರವಿವಾರ ರವಿಯ ವಾರವಲ್ಲ; ಕವಿಯ ವಾರ. ವಾರದಲ್ಲಿಯ ಆರು ದಿನಗಳು 'ಮನೆ' ತುಂಬಿಸಿಕೊಳ್ಳುವ ದಿನಗಳು. ಆದರೆ ರವಿವಾರವು 'ಮನ' ತುಂಬಿಸಿಕೊಳ್ಳುವ ದಿನ. . . .

ರವಿವಾರ ನಾನು 'ಜಿಲೆಟ್' ಹಿಡಿಯಬೇಕೋ ಬೇಡವೋ ಎಂಬುದನ್ನೇ ಒಂದು ಕಾಲು ಗಂಟೆ ವಿಚಾರ ಮಾಡುತ್ತೇನೆ. ಅಂದು ಮೋರೆಗೂದಲಿಗೂ ಏಕೆ ಸ್ವಾತಂತ್ರ್ಯವನ್ನು ಕೊಡಬಾರದು? ಆದರೆ ವಿಚಾರವೆಲ್ಲ ಕೊನೆಗೆ ದಿನದ ಕರ್ಮದಲ್ಲಿಯೇ ಮುಗಿಯುತ್ತದೆ. ಯಾವುದೋ ಸಭೆಯಿರುತ್ತದೆ, ಯಾರೋ ಚಹಕ್ಕೆ ಕರೆದಿರುತ್ತಾರೆ, ಯಾರನ್ನೋ ನಾನು ಚಹಕ್ಕೆ ಕರೆದಿರುತ್ತೇನೆ. ಮಂದಿಯ ಎದುರು ಕಪಾಳಕ್ಕೆ ಕೈ ಹೋಗುವದು ಬೇಡವೆಂದು 'ಜಿಲೆಟ್'ದೆದುರು ತಲೆ ಬಾಗಬೇಕಾಗುತ್ತದೆ. ಇಲ್ಲಿ ಮಾತ್ರ ದೈನಂದಿನದ ಯಾಂತ್ರಿಕತೆ ರವಿವಾರವನ್ನು ನಸುವೆ ಅಂಟಿಕೊಂಡಿದೆ.

ಆದರೂ ಒಂದು ಸೂಕ್ಷ್ಮ ಭೇದವಿದೆ. ದಿನಾಲು ಹತ್ತು ನಿಮಿಷಗಳಲ್ಲಿ ಮುಗಿಯುವ ಆಯುಷ್ಕರ್ಮ ರವಿವಾರ ನಿದಾನವಾಗಿ ನಡೆದಿರುತ್ತದೆ. ರವಿವಾರ ಕೆಲವೊಂದು ಸ್ನೇಹಿತರು ನನ್ನೆಡೆಗೆ ಬರದೆ ಇರುವದಿಲ್ಲ. ಅವರು ಬಂದು ನಗುತ್ತಾರೆ, ಕೆಲೆಯುತ್ತಾರೆ; ನಾನೂ ನಗುತ್ತೇನೆ. ಕೈಯಲ್ಲಿಯ ಜಿಲೆಟ್ ಕೈಯಲ್ಲಿಯೇ ಇರುತ್ತದೆ. ಒಬ್ಬ ಸ್ನೇಹಿತನು ಹೋಗಿ ಇನ್ನೊಬ್ಬನು ಬರುತ್ತಾನೆ. ಆದರೆ ಒಂದು ಕಪಾಳದಿಂದ 'ಜಿಲೆಟ್' ಇನ್ನೊಂದು ಕಪಾಳಕ್ಕೆ ಹೋಗಿರುವದಿಲ್ಲ........

ಅಂದು ಮುಂಜಾನೆ ಜಿಲೆಟ್ ಹಿಡಿದು ಕುಳಿತುಕೊಂಡಿದ್ದೆ. ರತಿಲಾಲನು ಬಂದ. ರತಿಲಾಲನು ಬಂದಾಗ ರವೀಂದ್ರ—ಮಹಾತ್ಮಾಜಿ-ಶ್ರೀಅರವಿಂದರ ಹೊರತು ಮಾತಿಲ್ಲ. ಈ ತ್ರಿಮೂರ್ತಿಗಳಲ್ಲಿ ಅಷ್ಟು ಶ್ರದ್ಧೆ ಅವನಿಗೆ. 'ಅವರ' ಸ್ಫೂರ್ತಿಯಿಂದ ತನ್ನಲ್ಲಿ ಅರಳಿದ ಕನಸುಗಳನ್ನು ರತಿಲಾಲನು ಬಣ್ಣಿಸುತ್ತಾನೆ. ಅದನ್ನು ಕೇಳುವದೇ ಒಂದು ಹಬ್ಬ. ಉತ್ಸವಮೂರ್ತಿಯಂತೆ ಸದಾ ರತಿಲಾಲನು ಕುಲುಕುಲು ನಗುತ್ತಿರುತ್ತಾನೆ. ಅವನನ್ನು ನೋಡುವದೇ ಕಣ್ಣಿಗೊಂದು ಪಾರಣೆ.

ಆದರೆ ಇಂದು ಮುಂಜಾನೆ ಬಂದಾಗ ಅದೇಕೋ ರತಿಲಾಲನ ಮೊಗವು ಕಂದಿತ್ತು. ಪ್ರತಿ ರವಿವಾರದ ಉಲ್ಲಾಸ ಅವನ ಮೊಗದಲ್ಲಿ ಸುಳಿದಿರಲಿಲ್ಲ. ಬಂದು ಕುಳಿತವ ಹಾಗೆಯೇ ಧೇನಿಸುತ್ತ ಕುಳಿತುಬಿಟ್ಟ, ಮಾತನಾಡಲಿಲ್ಲ. ಕೆಲವು ನಿಮಿಷಗಳಾದ ಮೇಲೆ ನಾನೇ ಜಿಲೆಟ್‌ದ ಕೆಲಸ ನಿಲ್ಲಿಸಿ ಮೋರೆ ಎತ್ತಿ ಕೇಳಿದೆ: "ಏಕೆ, ರತಿಲಾಲ! ಇವತ್ತು ಸುಂದಾಗಿದ್ದೀರಿ? ಮನೆಯಲ್ಲಿ ಎಲ್ಲ ಸೌಖ್ಯವೆ? ನಿರುಪಮಾದೇವಿ ಕ್ಷೇಮವಾಗಿದ್ದಾರಷ್ಟೆ?"

ರತಿಲಾಲನು ಮೆಲ್ಲನೆ ತನ್ನ ಭಾವಸಮಾಧಿಯಿಂದ ಎಚ್ಚರಗೊಂಡ. ಆ ಮೇಲೆ ಗಂಭೀರನಾಗಿ ನನ್ನ ಟೇಬಲ್ಲಿನ ಮೇಲಿನ ಒಂದು ಪುಸ್ತಕವನ್ನು ಕೈಯಲ್ಲಿ ತೆಗೆದುಕೊಂಡು, "ಇದ್ದಾರೆ. ಹೆಣ್ಣಿನ ಮನಸ್ಸಿನ ರೀತಿಯೇ ಒಂದು ಒಡೆಯಲಾರದ ಒಗಟು," ಎಂದು ಪ್ರಯಾಸದಿಂದ ನುಡಿದ.

ಈ ಮಾತು ಅನಿರೀಕ್ಷಿತವಾಗಿತ್ತು. ನನ್ನ ಜಿಲೆಟ್ ನಿದಾನವಾಗಿ ತನ್ನ ಕೆಲಸವನ್ನು ಸಾಗಿಸಿತ್ತು. ನಾನು ಒಮ್ಮೆಲೆ ಮೋರೆಯನ್ನು ಮೇಲೆತ್ತಿ ನೋಡಿದೆ. ರವಿವಾರದ ನಿದಾನತೆಯ ಮೇರೆಯನ್ನು ಮೀರಿದ್ದಕ್ಕಾಗಿ ಜಿಲೆಟ್ ನನ್ನ ಕಪೋಲವನ್ನು ಒಂದೆಡೆಗೆ ರಕ್ತಮಯವಾಗಿಸದೆ ಬಿಡಲಿಲ್ಲ.

"ಅದೇಕೆ, ರತಿಲಾಲ್! ಹೆಣ್ಣೇಕೆ ಅಂಥ ಒಗಟು?" ಎಂದು ನಾನು ಆತುರನಾಗಿ ಪ್ರಶ್ನಿಸಿದೆ. ರತಿಲಾಲನ ಮನಸ್ಸಿನಂತಹ ಪ್ರಶಾಂತ ಸರೋವರವನ್ನು ಕದಡುವ ಗದೆಯಾವುದು?

ಅದು ರತಿಲಾಲನು ಅಪ್ಪಿತಪ್ಪಿ ನುಡಿದ ಮಾತಾಗಿರಲಿಲ್ಲ. ಅವನ ಹೃದಯದ ಆಳದಿಂದ ಆ ಮಾತು ಹೊರಬಂದಿತ್ತು. ಅವನು ಮತ್ತೆ ಸಾವಕಾಶವಾಗಿ ಹೇಳಿದ: "ಶ್ರೀ ಅರವಿಂದರು ಚಿತ್‌ಶಕ್ತಿಯಾದ ಆದಿಮಾತೆಯ ಚತುರ್ಮುಖಗಳನ್ನು ತಮ್ಮ ಪುಟ್ಟ ಹೊತ್ತಿಗೆಯಲ್ಲಿ ಬಣ್ಣಿಸಿದ್ದಾರಲ್ಲ! ಸತಿಗೂ ಆ ಚತುರ್ಮುಖಗಳಿರುತ್ತವೆ. ಮಹಾಸರಸ್ವತಿ, ಮಹಾಲಕ್ಷ್ಮಿ, ಮಹಾಕಾಳಿ, ಮಾಹೇಶ್ವರಿ,—ಈ ನಾಲ್ವರಿಯನ್ನೂ ಸತಿಯಲ್ಲಿ ಕಾಣಬಹುದು. ಆದರೆ ಮಹಾಕಾಳಿಯಾಗಿ ಅವಳಿತ್ತ ದರ್ಶನವನ್ನು ಅರಗಿಸಿಕೊಳ್ಳುವದು ಕಷ್ಟ."

ಪ್ರಿನ್ಸಿಪಾಲ ವಿನಾಯಕರಾವ ಗೋಕಾಕರ ಪರಿಚಯಮಾಡಿಕೊಡಹೋದರೆ ಪುನರುಕ್ತಿದೋಷಬರಬಹುದಾದರೂ ಆಸ್ವಯಂಪ್ರಭರ ಸಾಹಿತ್ಯವಿದ್ಯೆಯನ್ನು ಈಗೀಗ ಪರಿಚಯ ಮಾಡಿಕೊಳ್ಳುತ್ತಿರುವವರಿಗಾಗಿ, ಅವರು ಆಂಗ್ಲ ಕನ್ನಡ ಭಾಷೆಗಳಲ್ಲಿ ತಜ್ಞರು, ಕಾವ್ಯ ನಾಟಕಾದಿಗಳನ್ನು ಬರೆದು ಹೆಸರಾದವರು ಮತ್ತು ವಿಮರ್ಶೆಯಲ್ಲಿ ಅವರದು ಎತ್ತಿದ ಕೈ, ಅಲ್ಲದೆ ಲಘು ಲೇಖನಗಳಲ್ಲಿ ಸರಸಪ್ರೌಢಿಯುಳ್ಳವರು ಎಂಬುದನ್ನು ಪ್ರಸ್ತುತ ಲೇಖನದಲ್ಲಿ ಕಾಣಬಹುದು ಎಂದು ಹೇಳಬಹುದು. ಸತಿಯರೊಂದು ಒಗಟೆಂಬ ಆಧುನಿಕ ಕುಕಲ್ಪನೆಯನ್ನು ಪರಿಹರಿಸಿ, ಸತೀತ್ವದ ಚತುರ್ಮುಖಗಳನ್ನು ಓದುಗರಿಗೆ ಸರಳವಾಗಿ ಇಲ್ಲಿ ಅವರು ಸಾಕ್ಷಾತ್ಕರಿಸಿ ಕೊಟ್ಟಿದ್ದಾರೆ.

ಆಗ ನನ್ನ ಕಣ್ಣು ನಿಚ್ಚಳವಾದವು. ಜಿಲೆಟ ಮತ್ತೆ ತನ್ನ ಕೆಲಸವನ್ನು ಮುಂದೆ ಸಾಗಿಸಿತು. 'ನಿಜ' ಎಂದು ಮತ್ತೆ ಕನ್ನಡಿಯಲ್ಲಿ ನಾನು ನೋಡಹತ್ತಿದೆ. ನಿರುಪಮಾ ದೇವಿಯವರಂತಹ ಸೌಜನ್ಯ—ವಿನಯಪೂರ್ಣ ಮೂರ್ತಿಯನ್ನು ನಾನು ಇನ್ನೊಂದೆಡೆಗೆ ನೋಡಿಲ್ಲ. ಆದರೆ ಯಾರಿಗೆ ಗೊತ್ತು? ಇರಬಹುದು. ಮಹಾಕಾಳಿಯ ಅವತಾರವನ್ನು ಎತ್ತುವದರಲ್ಲಿಯೂ ನಿರುಪಮಾ ದೇವಿಯವರು ನಿರುಪಮವಾಗಿರಬಹುದು. ....

ಇಷ್ಟು ಮಾತನಾಡಿದ ಮೇಲೆ ರತಿಲಾಲನಿಗೂ ಸಮಾಧಾನವಾಗಿತ್ತು. ನನ್ನ ಹಾಗು ಅವನ ಸಂಭಾಷಣೆ ಸಾಂಕೇತಿಕವಾದುದು. ಒಂದು ಸಿದ್ಧಾಂತದಲ್ಲಿ ತನಗೆ ಹೇಳಲಿರುವ ಸಿಹಿ-ಕಹಿಗಳನ್ನೆಲ್ಲ ತುಂಬಿಬಿಟ್ಟು ಮತ್ತೆ ಸುಮ್ಮನಾಗುವದು ರತಿಲಾಲನ ಮನೋವೃತ್ತಿ. ಸಿದ್ಧಾಂತಗಳ ಚರ್ಚೆಯನ್ನು ಅವನು ತಾಸುಗಟ್ಟಲೆ ನಡೆಯಿಸಬಲ್ಲ. ಆದರೆ ತನ್ನ ವೈಯಕ್ತಿಕ, ವ್ಯಾವಹಾರಿಕ ಜೀವನದ ಬಗ್ಗೆ ಹೇಳಬೇಕಾದಾಗ ಬಹಳವಾದರೆ ಒಂದು ಪ್ರಮೇಯವನ್ನು ಪ್ರಸ್ಥಾಪಿಸಿ ಅವನು ಸುಮ್ಮನಾಗಿಬಿಡುವ. ....

ನನ್ನ 'ಜಿಲೆಟ್' ಹೆಚ್ಚು ದಕ್ಷತೆಯಿಂದ ಕಾರ್ಯಪ್ರವೃತ್ತವಾಯಿತು. ಮೋರೆ ತೊಳೆದುಕೊಂಡು ನಾವಿಬ್ಬರೂ ಚಹ ಕುಡಿದೆವು. ಬಳಿಕ ನಾನು ರತಿಲಾಲನನ್ನು ತೋಟದೊಳಗೆ ಕರೆದುಕೊಂಡು ಹೋದೆ. ಅಲ್ಲಿಯ ಬಗೆಬಗೆಯ ಹೂವನ್ನು ನೊಡಿದೆವು. ಸಸ್ಯ-ಸೃಷ್ಟಿಯಲ್ಲಿ ಹೆಣ್ಣು-ಗಂಡಿನ ಪ್ರಶ್ನೆ ಜಟಿಲವಾಗಿರುವದಿಲ್ಲ. ಇಲ್ಲಿ ಎಲ್ಲ ದೇವ-ನಿಯಮಿತ. ಕೆಲವೊಂದು ಸಸ್ಯಪ್ರಕಾರಗಳಲ್ಲಿ ಹೆಣ್ಣು-ಗಂಡು ಒಂದನ್ನೊಂದು ನೋಡಿರಲಾರದು ಸಹ! ದೇವದೂತನಾದ ಮಾರುತನು ಗಂಡಿನಿಂದ ಕುಂಕುಮವನ್ನೊಯ್ದು ಹೆಣ್ಣಿನ ಹಣೆಗೆ ಹಚ್ಚುತ್ತಾನೆ. ಹೀಗೆ ಸಸ್ಯಸಂಸಾರ ಸಾಗಿರುತ್ತದೆ. ಮಾನವೀಯ ರೀತಿ ಬೇರೆಯಾಗಿರಬಹುದು. ಆದರೆ ಅಲ್ಲಿಯೂ ಕಾಣದ ಕೈಯ ಕೈವಾಡವನ್ನು ನಾವು ಕಾಣಬೇಕಲ್ಲವೆ? ಹೀಗೆಯೇ ಮಾತನಾಡಿದೆವು. ರತಿಲಾಲನ ಗಾಂಭೀರ್ಯ ತುಸು ಹಗುರಾದಂತೆ ಕಂಡಿತು. ಹೋಗುವಾಗ ನಾನು ರತಿಲಾಲನಿಗೆ ಹೇಳಿದೆ: "ಜೀವನವು ಭಗವದ್ಗೀತೆಯಂತೆ; ಹನ್ನೊಂದನೆಯ ಅಧ್ಯಾಯದ ವಿರಾಟದರ್ಶನವೇ ಇಲ್ಲಿಯ ಕಡೆಯ ಮಾತಲ್ಲ. ಇನ್ನೂ ಮುಂದೆ ಅಧ್ಯಾಯಗಳಿರುತ್ತವೆ."

ರತಿಲಾಲನು ಹೋದ ಮೇಲೂ ಹಾಗೆಯೇ ವಿಚಾರಪರನಾಗಿ ನಾನು ಕೆಲವು ಹೊತ್ತು ತೋಟದಲ್ಲಿ ಸುಳಿದಾಡಿದೆ. ಆಮೇಲೆ ಸ್ನಾನಕ್ಕೆಳಿದೆ. ಆದರೆ ಸ್ನಾನಗೃಹದಲ್ಲಿಯೂ ರತಿಲಾಲನ ಸಿದ್ಧಾಂತ ನನ್ನ ಮನಸ್ಸಿನಿಂದ ಮರೆಯಾಗಲಿಲ್ಲ. ಎಂಥ ಅನುಭವಪೂರ್ಣವಾದ ಮಾತು ಅದು! ಅದಕ್ಕೆ ಎಷ್ಟು ಪೈಲುಗಳಿದ್ದವು! ಅದು ಅಕ್ಷರಶಃ ಸತ್ಯವಾದುದು. ಸಹಧರ್ಮಿಣಿಯು ಮಹಾಲಕ್ಷ್ಮಿಯಾಗಿ ಮನೆಗೆ ನಡೆದುಬರುತ್ತಾಳೆ. ಅವಳ ಹೆಜ್ಜೆ—ಹೆಜ್ಜೆಗೂ ಗಂಡಿನ ಹೃದಯ ಪುಲಕಿತವಾಗುತ್ತದೆ. ಆಕಾಶದಲ್ಲಿ ಹೋದಲ್ಲೆಲ್ಲ ತಾರೆಗಳನ್ನು ಸೂರೆಮಾಡುತ್ತ ಬರುವ ನಿಶಾದೇವಿಯಂತೆ ಮಹಾಲಕ್ಷ್ಮಿ ಮನೆಗೆ ಬರುತ್ತಾಳೆ. ಅವಳು ತರುವ ಹೃದಯಸಂಪತ್ತು ಅನುಪಮವಾದುದು. ಸಾಮರಸ್ಯದ ತವರಾಗಿ ಸಾಮಗಾನದ ರಹಸ್ಯವನ್ನು ತಿಳಿಸುವ ದೇವಿಯಾಕೆ. ಆಕೆ ಇರದೆ ಮನೆ ತುಂಬದು; ಮನವೂ ತುಂಬದು. ಗಂಡಿಗೆ ಇನ್ನೆಲ್ಲಿಯೂ ಲಭಿಸದ ಚೆಲುವನ್ನು, ಆನಂದವನ್ನು, ಸೊಗಸನ್ನು ತರುವ ಪವಾಡವಾಕೆ. ಅವಳ ಒಂದೊಂದು ನುಡಿಗೆ ಗಂಡಿನ ಹೃದಯವು ಕಂಪಾನುಕಂಪವಾಗುತ್ತದೆ. ಅವಳ ಒಂದೊಂದು ಉಸಿರಿಗೆ, ಒಂದೊಂದು ಕಿರಣಕ್ಕೆ, ಅವನ ಸ್ವಪ್ನ ಸಾಮ್ರಾಜ್ಯದಲ್ಲಿಯ ಕುಸುಮಗಳು ವಿಕಸಿತವಾಗುತ್ತವೆ. ಅವನ ಹೃದಯಾಂತರದಲ್ಲಿ ಮೂಡಿದ ಸ್ಫೂರ್ತಿ ಆಕೆ. ಇಂಥ ಮಿಲನ, ಐಕ್ಯ, ಇನ್ನೆಲ್ಲಿಯೂ ಅಸಾಧ್ಯ. ದೇವ, ಹೃದಯ, ಆತ್ಮ,—ಎಲ್ಲವೂ ಬೆರೆತು ಒಂದೇ ಸತ್ಯವಾಗಿ ನಿಲ್ಲುವವು. ಗಂಡು ದುಃಖದಲ್ಲಿದ್ದಾಗ ಮೊರೆ ಹೋಗುವದು,—ಈ ಗೃಹಲಕ್ಷ್ಮಿಗೆ.

ಹೀಗೆ ಮನೆಗೆ ಬಂದ ಮಹಾಲಕ್ಷ್ಮಿ ಅಲ್ಲಿ ನೆಲಿಸಿ ಮಹಾಸರಸ್ವತಿಯಾಗುತ್ತಾಳೆ. ಮನೆಯು ಚೊಕ್ಕಟವಾಗಿ ಸ್ವರ್ಗದಲ್ಲಿಯ ಒಂದು ಮಹಲಾಗುತ್ತದೆ. ಸಣ್ಣಪುಟ್ಟ ಮಾತುಗಳಲ್ಲಿಯೂ ಎಂಥ ಪೂರ್ಣತೆಯು ಎದ್ದು ಕಾಣುತ್ತದೆ! ರತಿಲಾಲನ ಮನೆಯಲ್ಲಿ ಈ ಪೂರ್ಣತೆಯು ಕಣ್ಣಿಗೆ ಬಿದ್ದಿತ್ತು. ಹೂವಿನ ಪಾತ್ರೆಯಲ್ಲಿಯ ವಿಧವಿಧದ ಹೂವು, ನಡುಮನೆಯ ಓರಣ, ಅಡಿಗೆಯ ರುಚಿ, ಉಡುಪಿನ ಸೊಗಸು, ಊಟವಾದ ಮೇಲಿನ ಹಿತವಚನ, ಸಂಗೀತ,—ನೂತನ ಸೃಷ್ಟಿಯ ಬ್ರಾಹ್ಮೀ ದೇವಿಯಾಗಿ ಸಂಸಾರಸೂತ್ರಗಳನ್ನು ಸತಿಯು ಕೈಯಲ್ಲಿ ತೆಗೆದುಕೊಳ್ಳುತ್ತಾಳೆ. ದೇವನ ಸೃಷ್ಟಿಯಂತೆ ಪೂರ್ಣವಾದ ಪ್ರತಿಸೃಷ್ಟಿಯನ್ನು ನಿರ್ಮಿಸುತ್ತಾಳೆ. ಊಟಕ್ಕೆ ಕೂಡುವ ತಾಟಿನ ಕಲಾಯಿ ಹೋಗಿದೆಯೆ? ಅದರ ಜಾಗದಲ್ಲಿ ಶಬ್ದವಿಲ್ಲದೆ ತೋಟದೊಳಗಿನ ಕುಡಿಬಾಳೆಯೆಲೆ ಬಂದು ಕೂತಿರುತ್ತದೆ. ಬಂದ ಅತಿಥಿಗಳಿಗೆ ಶರಬತ್ತು ಕೊಡಬೇಕೆಂದರೆ ನಿಂಬೆ ಹಣ್ಣು ತೀರಿವೆಯೆ? ಮಾವಿನ ಹೋಳು ಅದರ ಬದಲು ಸಿದ್ಧವಾಗಿರುತ್ತವೆ. ಆಕೆಯ ಹಸ್ತ ಅಮೃತಹಸ್ತ, ಕೈಯ್ಯಲ್ಲಿಯ ಪಾತ್ರೆ; ಅಕ್ಷಯಪಾತ್ರೆ. ಮನೆಯ ತೋಟ ಪ್ರತಿ ನಂದನ ವನ. ಯಾವುದಕ್ಕೂ ಕಡಮೆಯಿಲ್ಲ, ಸಕಲ ಸೃಷ್ಟಿಯ ಐಶ್ವರ್ಯವನ್ನೆಲ್ಲ ಮನೆಯ ಗಣಿಯಿಂದ ಅಗೆದು ತರಬಹುದು. ಯಾವ ನ್ಯೂನತೆಯೂ ಅಲ್ಲಿ ಕಂಡುಬರಲಾರದು. ತಾನು ಹಿಡಿದ ಹೃದಯದ ವೀಣೆಯ ಒಂದೊಂದು ತಂತಿಯನ್ನು ಸಹಜವಾಗಿ ಮೀಟುವಾಗ ಸಹ ಒಂದೂ ಅಪಶ್ರುತಿಯಿಲ್ಲ ಈ ಮಹಾಸರಸ್ವತಿಯ ಸೋಂಕಿನಲ್ಲಿ.

ಮತ್ತೆ ಮಹಾ ಸರಸ್ವತಿಯು ಮಾಹೇಶ್ವರಿಯೂ ಅಹುದು. ಅವಳ ಜಾಣ್ಮೆ ದೈವದತ್ತವಾದುದು. ಗಂಡು ದಂಗುಬಡಿದು ಕುಳಿತಾಗ ಹೆಣ್ಣು ಹೃದಯವು ಮಾತ್ರ ಅವನಿಗೆ ದಾರಿ ತೋರಬಲ್ಲದು. ಜಟಿಲ ವ್ಯವಹಾರಿಕ ಸಮಸ್ಯೆಗಳು ಗಂಡನ್ನು ದಿಙ್ಮೂಢವಾಗಿಸಿದರೂ ಸತಿಯು ಲೀಲಾಮಾತ್ರವಾಗಿ ಆ ಸಮಸ್ಯೆಗಳನ್ನು ಬಿಡಿಸಬಲ್ಲಳು. ಅಲ್ಲದೆ ಜಗತ್ತಿನಲ್ಲಿಯ ಅವ್ಯಕ್ತ ಶಕ್ತಿಗಳು ಅವಳ ಅಂಕಿತದಲ್ಲಿ, ಗಂಡಿನ ಭವಿಷ್ಯ ಅವಳ ಸ್ವಪ್ನದರ್ಶನಗಳಲ್ಲಿ ನಿಚ್ಚಳವಾಗಿ ಕಾಣುವದು. ಬರುವ ತೊಂದರೆಗಳ ಪೂರ್ವಸೂಚನೆಯನ್ನು ಕೊಟ್ಟು ಸತಿಯು ಗಂಡನನ್ನು ಎಚ್ಚರಿಸುವಳು. ಒದಗಲಿರುವ ಶುಭವನ್ನು ತಿಳಿಸಿ ಅವನನ್ನು ಹುರಿದುಂಬಿಸುವಳು. ಅವನ ಪ್ರಗತಿ ಕುಂಠಿತವಾಗದಂತೆ ಪರಾಶಕ್ತಿಯಾಗಿ ಉಚ್ಚ ಚಿನ್ಮಯತೆಗೆ ಅವನನ್ನು ಕರೆದೊಯ್ಯುವಳು. . . .

ಆದರೆ ಈ ಮಹಾಮಾಯೆ ಮಹಾಕಾಳಿಯಾದರೆ? ದುರ್ಗೆಯ ಅವತಾರ ಮಾನವನಲ್ಲಿದ್ದ ಸುಷುಪ್ತ ಶಕ್ತಿಯನ್ನು ಪ್ರಕಟಗೊಳಿಸುವ ದಕ್ಕಂತೆ. ಆದರೆ ಆ ವಿರಾಡ್ದರ್ಶನವನ್ನು ಅರ್ಜುನನಂಥ ವೀರನು ಸಹ ಅರಗಿಸಲಾರ. ರತಿಲಾಲನ ಗಾಂಭೀರ್ಯವೂ ಅರ್ಜುನನ ಗಾಂಡೀವವೂ ಈ ವಿಷಯದಲ್ಲಿ ಒಂದೇ ಎಂದು ಹೇಳಬೇಕು. ಮಹಾಕಾಳಿಯು ಗಂಡಿನ ಭಕ್ತಿಯನ್ನು ಜಾಗ್ರತಗೊಳಿಸುವ ವಿಧಾನಗಳು ಅನೇಕವಾಗಿವೆ. ಉಪವಾಸ ಮಲಗಿಬಿಡುವದು, ತಿಂಗಳುಗಟ್ಟಲೆ

ಮೌನವ್ರತವನ್ನು ಪಾಲಿಸುವದು, ಅರ್ಭಟದಿಂದ ಒದರಾಡುವದು, ಒಂದು ಮಾತಿಗೆ ಇನ್ನೊಂದರ ಸಂದರ್ಭವನ್ನು ಪವಣಿಸಿ ಹಂಗಿಸುವದು,—ಈ ಸತ್ಯಾಗ್ರಹಕ್ಕೆ ವಿಜಯವು ಕಟ್ಟಿಟ್ಟದ್ದೇ! ಆದರೆ ಅದರಿಂದಾದ ಗಂಡಿನೆದೆಯ ತಲ್ಲಣವನ್ನು ಬಣ್ಣಿಸುವರಾರು? ಸಾ:ಕ್ರೇಟೀಸನ ಸಹಧರ್ಮಿಣಿ ಸದಾ ಮುಸುಗುಟ್ಟುವ ಮಹಾಕಾಳಿಯಾಗಿದ್ದಳಂತೆ! ಒಂದು ದಿನ ಮನೆಯೆಲ್ಲ ಮೋಡಗವಿದು ಗುಡುಗು-ಮಿಂಚಿಗೆ ಪ್ರಾರಂಭವಾಗಿತ್ತು. ಇದರ ಅಭ್ಯಾಸವಾಗಿ ಇದರಿಂದ ತನ್ನ ಅಂತಃಶಕ್ತಿಯನ್ನು ದೆಳಿಸಿಕೊಂಡಿದ್ದ ಸಾ:ಕ್ರೆಟೀಸ್ ಶಾಂತನಾಗಿ ಹೊರಗೆ ಕುಳಿತಿದ್ದ. ಕೊನೆಗೆ ಅವನ ನಿಶ್ಚಿಂತ ವೃತ್ತಿ ಸಹನವಾಗದ ಅವನ ಸಹಧರ್ಮಿಣಿ ಒಂದು ಕೊಡ ನೀರು ತಂದು ಅವನ ತಲೆಯ ಮೇಲೆ ಸುರುವಿದಳಂತೆ. ಆಗ ಸಾ:ಕ್ರೆಟೀಸ್ ಶಾಂತ ನಗೆಯನ್ನು ನಕ್ಕು, "ಇಲ್ಲಿಯವರೆಗೆ ಮೋಡಗವಿದು ಗುಡುಗಿತ್ತು. ಇನ್ನು ಮಳೆಯಾಗದೆ ಇರಲಾರದೆಂದು ಭಾವಿಸಿಯೇ ಇದ್ದೆ," ಎಂದನಂತೆ. ಆ ಶಕ್ತಿಯಿದ್ದರೆ ರತಿಲಾಲನೂ ಸಾ:ಕ್ರೆಟೀಸನಾಗುತ್ತಿದ್ದ. ಅದಿಲ್ಲವೆಂದೇ ಅವನು ಗಂಭೀರನಾಗಿದ್ದ.

ಗೀತೆಯ ಹದಿನೆಂಟು ಅಧ್ಯಾಯಗಳಲ್ಲಿ ಒಂದು ಅಧ್ಯಾಯದಲ್ಲಿ ಮಾತ್ರ ವಿಶ್ವರೂಪದರ್ಶನವು ಬರುತ್ತದೆ. ಅದಕ್ಕೇ ಭಯಭೀತನಾಗಿ ಮಣಿದು

"ತೇನೈವ ರೂಪೇಣ ಚತುರ್ಭುಜೇನ ಸಹಸ್ರಬಾಹೋ ಭವ ವಿಶ್ವಮೂರ್ತೇ" ಎಂದು ಅರ್ಜುನನು ಬೇಡಿಕೊಂಡ. ಆದರೆ ಹೆಜ್ಜೆ ಹೆಜ್ಜೆಗೆ ಮಹಾಕಾಳಿಯು ಪ್ರಕಟಳಾದರೆ? ಆಗೇನು ಮಾಡುವದು? ಇದೆಲ್ಲ ನನ್ನ ಅಂತಃಶಕ್ತಿಯ ಅಭಿವೃದ್ಧಿಗಾಗಿ ಎಂಬ ಶ್ರದ್ಧೆಯೊಂದನ್ನುಳಿದು ಇನ್ನಾವ ಕೈ ಕಾಯಬಹುದು?

ಈ ಅವತಾರವನ್ನು ಅರಗಿಸಿಕೊಂಡಾಗ ಮಾತ್ರ ಸತಿಯ 'ಆನಂದಮಯಿ' ಅವತಾರವನ್ನು ಕಾಣಬಹುದು. ಆದರೆ ಇದನ್ನು ಅರಗಿಸಿಕೊಳ್ಳುವ ಬಗೆ ಹೇಗೆ? ಮಹಾಸರಸ್ವತಿ, ಮಹಾಲಕ್ಷ್ಮಿ, ಮಾಹೇಶ್ವರಿಯರನ್ನು ನೆನೆಸಿ, "ಅವರು ಯಾವ ತಾಣದಲ್ಲಿ ಕಂಡರೋ ಅಲ್ಲಿಯೇ ಮಹಾಕಾಳಿಯೂ ಪ್ರಕಟಳಾದಳು; ಹೀಗಾಗಿದ್ದು ಅಂತಃಶಕ್ತಿಯ ಅಭಿವೃದ್ಧಿಗಾಗಿ ಮಹಾಕಾಳಿ ಮತ್ತೆ ಮಹಾ ಲಕ್ಷ್ಮಿ ಆಗಬಹುದು," ಎಂದು ಎದುರು ನೋಡದೆ ಬೇರೆ ಗತಿ ಏನು?. . . .

ಹೀಗೆಯೇ ನನ್ನ ಸ್ನಾನ-ಧ್ಯಾನಗಳು ನಡೆದಿದ್ದವು. ಇದು, ಎಷ್ಟು ಹೊತ್ತು ಮುಂದುವರಿಯುತ್ತಿತ್ತೋ ಹೇಳಲಾಗುವದಿಲ್ಲ. ಆದರೆ ಇಷ್ಟರಲ್ಲಿಯೇ ನನಗೆ ಗೊತ್ತಿದ್ದ ಒಂದು ಕೈ ಬಾಗಿಲ ತಟ್ಟಿ ನನಗೆ ಗೊತ್ತಿದ್ದ ಒಂದು ದನಿ ನುಡಿಯಿತು: "ಏಳ್ರಿನ್ನ! ಎಷ್ಟು ಹೊತ್ತು ಸ್ನಾನ ಮಾಡೋದು! ಆಫೀಸು ಇಲ್ಲಾಂತ ಅಗಸ್ತ್ಯನ ಸ್ನಾನ ನಡಸೀರೇನು ಇವತ್ತ! ಮೈ ತೊಳಕೋಬೇಕು ನಾನು, ಅಡಿಗ್ಗೆ ಹೊತ್ತಾತು!"

ನನ್ನ ಮೈ ಜುಮ್ಮೆಂದಿತು. ರತಿಲಾಲನ ಭಾಗ್ಯ—ದುರ್ಭಾಗ್ಯಗಳನ್ನು ತೂಗುತ್ತ ಕುಳಿತಿದ್ದ ನಾನು ಇದೇನು ಮಾಡಿದೆ! ನನ್ನ ಅಜಾಗರೂಕತೆಯಿಂದ ನನ್ನ ಮಹಾಸರಸ್ವತಿಯೂ ಮಹಾಕಾಳಿಯಾಗಿ ಪಲ್ಲಟಗೊಂಡರೆ! ....

ಲಗುಬಗೆಯಿಂದ ಎದ್ದು ಸ್ನಾನಗೃಹದಿಂದ ಹೊರಗೆ ಬಂದಾಗ ಅದೇ ಅಂಚೆಯವನು ಬಂದು ಒಂದು ಪತ್ರವನ್ನು ಇಟ್ಟು ಹೋಗಿದ್ದ. ಅದು **ಕರ್ಮಯೋಗಿ**ಯ ಸಹಸಂಪಾದಕರದು. "ಆಧುನಿಕ ಸಾಹಿತ್ಯಗಳಲ್ಲಿ ಹೆಂಗಸು ಗಂಡಸನ್ನು ಕಾಣುವ ದೃಷ್ಟಿ" ಎಂಬ ವಿಷಯದ ಮೇಲೆ ಒಂದು ಲೇಖವನ್ನು ಬರೆದು ಕಳಿಸಬೇಕಾಗಿ ಒಲುಮೆಯ ಒತ್ತಾಯ ಮಾಡಿದ್ದರು. ಆದರೆ "ಗಂಡಸು ಹೆಂಗಸನ್ನು ಕಾಣುವ ದೃಷ್ಟಿ"ಯ ಬಗ್ಗೆ ಇಡಿ ಬೆಳಗೆಲ್ಲ ಧೇನಿಸಿದ ನನಗೆ "ಹೆಂಗಸು ಗಂಡಸನ್ನು ಕಾಣುವ ದೃಷ್ಟಿ" ಯು ಒಮ್ಮೆಲೆ ಹೇಗೆ ಹೊಳೆಯಬೇಕು? ಮೇಲಾಗಿ ಇಂದು ರವಿವಾರ. ರವಿವಾರವೇಕೆ **ಕರ್ಮಯೋಗಿ**ಯ ಗುಡುಗು? ಆದರೆ ಭಾವನೆಗೆ ಇರಬೇಕಾದ ಸ್ಥಳ **ಕರ್ಮಯೋಗಿ**ಯಲ್ಲಿದ್ದ ಮೇಲೆ ರವಿವಾರದಲ್ಲಿಯೂ ಉಚಿತ ಕರ್ಮಕ್ಕೆ ಏಕೆ ಸ್ಥಾನವಿರಬಾರದು? ಹೀಗೆಂದು "ಗಂಡಸು ಹೆಂಗಸನ್ನು ಕಾಣುವ ದೃಷ್ಟಿ"ಯ ಮೇಲೆಯೇ ಒಂದು ಲೇಖವನ್ನು ಬರೆದು ಅವರಿಗೆ ಕಳಿಸಿದೆ. ಹಾಗೆ ನೋಡಿದರೆ ಗಂಡಸು ಹೆಂಗಸನ್ನು ಕಾಣುವ ದೃಷ್ಟಿಯೆಂದರೇ ಹೆಂಗಸು ಗಂಡಸನ್ನು ಕಾಣುವ ದೃಷ್ಟಿಯೆಂದು ಹೇಳಬೇಕು. ಹೆಣ್ಣು ಹೇಗೆ ಗಂಡಿಗೆ ಅನನ್ಯವೋ ಏಕಮಾತ್ರವೋ (ಜಾತಿ, ವ್ಯಕ್ತಿಯೂ ಏಕಮಾತ್ರವೇ ಇರಬೇಕು), ನಾವೀನ್ಯಪೂರ್ಣವೋ ಹಾಗೆ ಗಂಡೂ ಹೆಣ್ಣಿಗೆ ಅಹುದು. ಮಹಾಸರಸ್ವತಿ, ಮಹಾಲಕ್ಷ್ಮಿ, ಮಹಾಕಾಳಿ, ಮಾಹೇಶ್ವರಿ ಈ ಹೆಸರುಗಳಿಗೆ ಅನುಕ್ರಮವಾಗಿ ಬ್ರಹ್ಮ, ವಿಷ್ಣು, ರುದ್ರ, ಪುರುಷೋತ್ತಮ ಎಂಬ ನಾಮುಗಳನ್ನು ಅಳವಡಿಸಿದರೆ ಹೆಂಗಸು ಗಂಡಸನ್ನು ಕಾಣುವ ದೃಷ್ಟಿಯು ಗೊತ್ತಾಗುತ್ತದೆ. ಗಂಡಸು ರುದ್ರನಾಗಿ ಹೆಂಗಸನ್ನು ಕಾಡಿದ್ದಾನೆ; ಕೃಷ್ಣಾವತಾರವನ್ನು ಬರಿ ಸ್ಥೂಲದಲ್ಲಿ ನೆನೆದು ಹೆಂಗಸನ್ನು ಬರಿ ಉಪಭೋಗದ ಸಾಧನೆಯನ್ನಾಗಿ ಮಾಡಿದ್ದಾನೆ; ಬ್ರಹ್ಮನಾಗಿ ಗಂಡಿಗಿಂತ ಹೆಣ್ಣಿನ ಸಂಖ್ಯೆಯನ್ನು ಜಗತ್ತಿನಲ್ಲಿ ಹೆಚ್ಚಿಸಿ ಅನಾಹುತಗಳಿಗೆ ಕಾರಣನಾಗಿದ್ದಾನೆ; ಪುರುಷೋತ್ತಮನೆಂದು ತಿಳಿದುಕೊಂಡು ಹೆಣ್ಣನ್ನು ಸೇವೆಗೆ ನಿಂತ ದಾಸಿಯನ್ನಾಗಿ ಮಾಡಿದ್ದಾನೆ. ಆದರೆ ಬ್ರಹ್ಮನಾಗಿ ಹೆಣ್ಣಿಗೋಸ್ಕರ ಅವನು ಸೃಷ್ಟಿಯನ್ನು ಇನ್ನೂ ನೂತನವಾಗಿಸಬೇಕು; ವಿಷ್ಣುವಾಗಿ ಗೃಹಲಕ್ಷ್ಮಿಯೊಡನೆ ಬೆರೆತು ಸಾಮರಸ್ಯವನ್ನು ಹೆಚ್ಚಿಸಬೇಕು; ರುದ್ರನಾಗಿ ಅವಳ ಗತಾನುಗತಿಕತೆಗಳ ಮೇಲೆ ಸಿಡಿಲೆರಗಿಸಬೇಕು; ಪುರುಷೋತ್ತಮನಾಗಿ ಅವಳನ್ನು ಉಜ್ಜೀವನದ ಉಡ್ಡಾಣಕ್ಕೆ ಕರೆದೊಯ್ಯಬೇಕು. ತಾನು ಅರ್ಧನಾರೀಶ್ವರನೆಂದು ತಿಳಿಯದ ಹೊರತು ಗಂಡಿಗೆ ಇನ್ನೊಂದು ಗತಿಯಿಲ್ಲ; ಜಗತ್ತಿಗೆ ಕಲ್ಯಾಣವಿಲ್ಲ. ಹೀಗೆ ಮುಂತಾಗಿ ಸಮಾಧಾನ ಹೇಳಿ ಅವರು ಕೇಳಿದ ವಿಷಯವನ್ನು ಬಿಟ್ಟು ತದ್ವಿರುದ್ಧವಾದ ವಿಷಯದ ಮೇಲೆ ಲೇಖವನ್ನು ಬರೆದೆ! ಅಂತೂ ಹೀಗೆ ಕಳೆದಿತ್ತು ನನ್ನ ಒಂದು ರವಿವಾರ.

ಸಾಹಿತ್ಯ ಮತ್ತು ವಿಮರ್ಶೆ

ಲೇಖಕರು :
ಶ್ರೀ ಕೋಟ ಶಿವರಾಮ ಕಾರಂತರು, ಪುತ್ತೂರು

ಬರಿಯ ಈ ಲೇಖನದ ಪೂರ್ತಿಗಾಗಿ ನಾನು ಸಾಹಿತ್ಯವನ್ನು ಕುರಿತು ಹೇಳುತ್ತಿರುವೆನಾದರೂ ಲೇಖನದ ವ್ಯಾಪ್ತಿ ಎಲ್ಲ ಕಲೆಗಳಿಗೂ ಅನ್ವಯಿಸುವುದೇ. ಸಾಹಿತ್ಯವೂ ಕಲೆಯೇ. ಚಿತ್ರ, ಶಿಲ್ಪ, ನೃತ್ಯಗಳಂತೆ ಸಾಹಿತ್ಯವೂ ತನ್ನದೇ ಆದ ವಿಶಿಷ್ಟ ಸಾಧನವೊಂದರ ಮೂಲಕ, ಮಾನವನ ಅನುಭವಪ್ರಕಟನೆಗೆ ರೂಪು ಕೊಡುತ್ತದೆ. ಪ್ರತಿಯೊಂದು ಕಲೆಗೂ ತನ್ನದೇ ಆದ ಒಂದು ಚಿತ್ರಣಮಾರ್ಗವಿರುವಂತೆ, ಹಲವಾರು ಪದ್ಧತಿಗಳಿರುವಂತೆ, ಸಾಹಿತ್ಯಕ್ಕೂ ಇದೆ. ಯಾವತ್ತೂ ಕಲೆಗಳ ಉದ್ದೇಶವೂ ಮಾನವನ ಅನುಭವ ಭಾವನೆಗಳಿಗೆ ತಕ್ಕುದಾದ (ಸುಂದರವಾದ) ರೂಪವನ್ನು ಕೊಡುವುದು. ಸಾಹಿತ್ಯವೂ ಈ ನಿಯಮಕ್ಕೆ ಹೊರಗಲ್ಲ. ತನ್ನ ಅನುಭವಗಳನ್ನು ಹೊರಗೆಡಹುವ ಕವಿಯು, ಚಿತ್ರಕಾರನು ಅಥವಾ ಇನ್ನಾವನಾದರೂ ಕಲಾವಿದನು ತನ್ನ ಆತ್ಮತುಷ್ಟಿಗಾಗಿ ಸೃಷ್ಟಿ ಮಾಡುವನಾದರೂ ಸಾಮಾಜಿಕ ಜೀವಿಯಾದ ಆತ, ತನ್ನ ಕೃತಿಗಳನ್ನು ಹೊರಗೆಡಹುವಾಗ, ಉಳಿದ ಜೀವಿಗಳೊಡನೆ ಮನವರಿಕೆ ಮಾಡಿಕೊಳ್ಳುವುದೇ ಅವನ ಕೆಲಸವಾಗುತ್ತದೆ. ಬಾಹ್ಯ ಜಗತ್ತಿನ ಸಹಕಾರದಿಂದ ಅವರ ಕಲಾಸ್ವಪ್ನ ಸಂಪೂರ್ಣವಾಗುತ್ತದೆ. ಹೀಗೆ ಸಾಹಿತಿ ಮತ್ತು ಓದುಗ ಕೂಡಿದರೇನೆ ಸಾಹಿತ್ಯದ ಕೆಲಸ ಪೂರ್ಣವಾಗುತ್ತದೆ. ಹೇಳುವ ಆಸೆ ಕಲಾವಿದನಿಗೆ ಇದ್ದಂತೆ, ಕೇಳುವ ಬಯಕೆ ಜನಕ್ಕೆ ಇರಬೇಕಾಗುತ್ತದೆ. ಈ ಜನ ಒಂದೇ ತೆರನಾಗಿರುವುದಿಲ್ಲ. ಅವರಲ್ಲಿನ ಸಂಸ್ಕಾರ, ಅಭಿರುಚಿ, ರಸಾಸ್ವಾದನಶಕ್ತಿ–ಇವೆಲ್ಲ ನೂರಾರು ತೆರನಾಗಿರುತ್ತವೆ. ಇಂಥ ಜನರ ಗುಂಪಿಗೆ ವಿಮರ್ಶಕನೂ ಸೇರುತ್ತಾನೆ. ಆದರೆ ಈ ವಿಮರ್ಶಕನೆಂಬ ವ್ಯಕ್ತಿ, ಸಾಹಿತಿ ಮತ್ತು ಕಲಾವಿದರ ನಡುವೆ ನಿಂತು ತೂಕಮಾಡುತ್ತಾನೆ. ಒಬ್ಬರ ಪರಿಚಯ ಇನ್ನೊಬ್ಬರಿಗೆ ಮಾಡಿಸಿಕೊಡುತ್ತಾನೆ. ಈ ಪರಿಚಯು ಸಫಲವಾಗಬೇಕಾದರೆ, ಅವನಿಗೂ ಸಮನಾದ ಒಂದು ಯೋಗ್ಯತೆ ಬೇಕು. ಮೊದಲಿಗೆ, ಸಾಹಿತಿಯನ್ನು ತಿಳಿಯುವ ಯೋಗ್ಯತೆ, ಉಳಿದವರಿಗಿಂತ ಹೆಚ್ಚಾಗಿ ತಿಳಿಯುವ ಯೋಗ್ಯತೆ, ಅವನಿಗಿರಬೇಕು. ತಾನು ತಿಳಿದು, ತಿಳಿದುದರ ತೂಕವನ್ನು ಉಳಿದವರಿಗೆ ಹೇಳುವ ಹೊಣೆಯನ್ನು ಅವನು ಹೊರುವನಾದುದರಿಂದ, ಆ ಹೊಣೆಗೆ ತಕ್ಕ ಸಂಸ್ಕಾರವನ್ನು ಆತ ಹೊಂದಿದವನಾಗಿರಬೇಕು.

ವಿಮರ್ಶಕನ ಲಕ್ಷಣಗಳು

ವಿಮರ್ಶಕನ ಈ ಹೊಣೆ ಎಂಥದು, ಎಂದು ಚರ್ಚಿಸುವುದೇ ಈ ಲೇಖನದ ಉದ್ದೇಶ. ಸಾಹಿತಿಯಾದವನು ತನ್ನ ಜೀವನದ ಅನುಭವಗಳಿಗೂ ಅವನ್ನು ವ್ಯಕ್ತಮಾಡುವ ಬಗೆಗಳಿಗೂ ಹೊಣೆಗಾರ. ಸಾಹಿತ್ಯ ಪರಂಪರೆಯುಳ್ಳದ್ದು. ಕಾಲದೇಶಗಳ ವರ್ಚಸ್ಸಿಗೆ ಗುರಿಯಾಗುವಂತಹದು. ಅದರ ದಾರಿ ಒಂದೇ ಅಲ್ಲ. ಒಂದೇ ಕಾಲದ, ಒಂದೇ ದೇಶದ ಎಲ್ಲ ಸಾಹಿತಿಗಳೂ ಒಂದೇ ಬಗೆಯ ಅನುಭವ ಹೇಳಹೋಗುವುದೂ ಇಲ್ಲ. ಒಂದೇ ಬಗೆಯಲ್ಲಿ ಅವನ್ನು ಚಿತ್ರಿಸುವುದೂ ಇಲ್ಲ. ಆದುದರಿಂದ ಅವರ ಉದ್ದೇಶಗಳಲ್ಲಿ ವೈವಿಧ್ಯವಿದೆ, ಚಿತ್ರಣದಲ್ಲಿ ವೈವಿಧ್ಯವಿದೆ. ಈ ಭಿನ್ನ ಸ್ವಭಾವ, ವಿಭಿನ್ನ ಬಗೆಗಳನ್ನು ಅರಿಯದೆ ಹೋದವ ವಿಮರ್ಶಕನಾಗಲಾರ. ಮಾನವನ ವಿಚಾರಸರಣಿ, ಅವನಿಗೆ ದೊರಕುವ ಅನುಭವ, ಅದನ್ನು ಆತ ಚಿತ್ರಿಸುವ ರೀತಿ—ಇವೆಲ್ಲ ಹೇಗೆ ಸಾಗಿವೆ? ಸಾಗುತ್ತಿವೆ? ಇನ್ನು ಮುಂದೆ ಸಾಗುವ ಅವಕಾಶವಿದೆ-ಎಂಬುದನ್ನು ತಿಳಿಯುವ ವಿಶಾಲಬುದ್ಧಿಯೂ ಸಂಸ್ಕಾರವೂ ವಿಮರ್ಶಕನಿಗೆ ಇಲ್ಲದೆ ಹೋದರೆ, ಆತ ತನ್ನ ಕೆಲಸವನ್ನು ನೀಗಿಸಲಾರ.

ಸಾಕಷ್ಟು ಸಾಹಿತ್ಯಕೃತಿಗಳ ಅಭ್ಯಾಸ ಅವನಿಗೆ ಬೇಕಾಗುತ್ತದೆ. ಅವನು ತೂಕ ಮಾಡುವವನೇನೋ ನಿಜ. ಇಲ್ಲಿ ತೂಕಮಾಡುವುದಾವುದನ್ನು—ಎಂಬುದನ್ನು ತನ್ನ ಅನುಭವದಿಂದ ತಿಳಿಯಬಲ್ಲ ಶಕ್ತಿ ಅವನಿಗೆ ಬೇಕು. ತನಗಿಲ್ಲದ ಅನುಭವವು ಇನ್ನೊಬ್ಬರಿಗೆ ಬರಬಾರದು. ಇನ್ನೊಬ್ಬರಿಗೆ ಬರಲಾರದು—ಎಂಬ ಸಂಕೋಚಬುದ್ಧಿ ಅವನಲ್ಲಿರಬಾರದು. ಸಾಹಿತ್ಯ ಇಲ್ಲವೆ ಇತರ ಕಲೆಗಳ ವಿಷಯದಲ್ಲಿ, ಅವುಗಳ ಉದ್ದೇಶ ಮತ್ತು ರೀತಿಗಳನ್ನು ಕುರಿತಾಗಿ ಪೂರ್ವತೀರ್ಪುಗಳಿಂದ ಬದ್ಧನಾದ ವಿಮರ್ಶಕನು ಎಂದೂ ನ್ಯಾಯ ದೊರಕಿಸಿಕೊಡಲಾರ.

ಸಾಹಿತ್ಯದ ಪೂಜೆಯಲ್ಲಿ ತೊಡಗಿದ ನಮ್ಮ ಇಂದಿನ ಜನ, ಮುಖ್ಯತಃ ವಿಮರ್ಶಕರು, ವಿಮರ್ಶೆಯೂ ಒಂದು ಕಲೆ ಎಂದು ತಿಳಿಯಬೇಕು. ಹೇಗೆ ಬೆಳೆಯುವ ಜೀವನವು ಹರಿಯುವ ನದಿಯಂತೆ ಚಿರನವೀನವಾಗಿ ಸಾಗುತ್ತದೋ, ಹಾಗೆಯೇ ಜೀವನವನ್ನಾದರಿಸುವ ಸಾಹಿತ್ಯ, ಅದನ್ನು ಪ್ರತಿಫಲಿಸುವ ವಿಮರ್ಶೆ, ಚಿರನವೀನವಾಗಿ ಹೋಗಬೇಕಾದೀತು. ತನ್ನ ಅನುಭವ ಮಿತವಾದದ್ದಾದರೂ ಓದು ಕಡಿಮೆಯಾದದ್ದಾದರೂ ತಾನು ಒಬ್ಬ ನಿರಂಕುಶನಂತೆ ಆತ ಇದು ನನಗೆ ಒಪ್ಪಿಗೆಯಿಲ್ಲ; ಸಾಹಿತಿ ಇಂಥದನ್ನು ಹೇಳಬಾರದು; ಹಳತು ಬೇಕಿಲ್ಲ, ಹೊಸತೇ ಬೇಕು; ಅದನ್ನು ಹೀಗೆಯೇ ಹೇಳಬೇಕು, ಎಂದು ವಿಧಿಸಲು ಹೋಗುತ್ತಾನೆ. ಅಷ್ಟಿದ್ದರೆ ಅವನೇ ಆ ಕೆಲಸ ಮಾಡಬಹುದು. ಇನ್ನೊಬ್ಬ ಸಾಹಿತಿಯ ಅವಶ್ಯವೇ ಇಲ್ಲ—ಎಂದೇ ಅವನಿಗೆ ಸಮಾಧಾನ ಹೇಳಬಹುದು.

ಸಾಹಿತ್ಯದ ಸ್ವಭಾವ: ಅನುಭವವೆ ಅಡಿಗಲ್ಲು

ಸಾಹಿತ್ಯದ ಸ್ವಭಾವವನ್ನು ಕುರಿತು ತಿಳಿಯಲೆತ್ನಿಸಿದರೆ—ಈ ಪ್ರಶ್ನೆ ಸ್ಪಷ್ಟವಾದೀತು. ಸಾಹಿತ್ಯ ಹೇಗೆ ಹುಟ್ಟುತ್ತದೆ? ಮನುಷ್ಯ ತನ್ನ ಆವರಣದಲ್ಲಿ ಬದುಕುತ್ತಾನೆ. ಈ ಆವರಣದಲ್ಲಿ ನಿಸರ್ಗವೂ ಇದೆ; ಮನುಷ್ಯಸಮಾಜವೂ ಇದೆ. ಇವೆರಡರ ರೋಷ, ಸ್ನೇಹ, ಸ್ಪರ್ಧೆ, ತಾಕಲಾಟ, ಈರ್ಷೆ—ಎಲ್ಲವೂ ಸಾವಿರ ಬಗೆಗಳಲ್ಲಿ ಸೇರಿಕೊಂಡಿವೆ.

ಶ್ರೀಮಾನ್ ಶಿವರಾಮ ಕಾರಂತರ ಪ್ರತಿಭೆ ವಿಶ್ವತೋಮುಖವಾದದ್ದು. ಕಲಾಪ್ರಪಂಚದ ಯಾವ ಕಲ್ಲನ್ನೂ ಅವರು ಅಲುಗಾಡಿಸದೆ ಬಿಟ್ಟಿಲ್ಲ. ಚಿತ್ರದಿಂದ ಸಂಗೀತದ ವರೆಗೆ, ಕಾದಂಬರಿಯಿಂದ ಕವಿತೆಯ ವರೆಗೆ ಅವರು ಎಲ್ಲದರಲ್ಲೂ ಪ್ರಯೋಗಮಾಡಿ ತಕ್ಕಮಟ್ಟಿನ ಸಾಫಲ್ಯವನ್ನು ಹೊಂದಿದ್ದಾರೆ. ಈ ಲೇಖನದಲ್ಲಿ ವಿಮರ್ಶಕನ ನಿಲುವು ಹೇಗಿರಬೇಕು, ಅವನಲ್ಲಿರಬೇಕಾದ ಯೋಗ್ಯತೆಗಳಾವುವು ಎಂಬುದನ್ನು ಚರ್ಚಿಸಿ, ವಿಮರ್ಶಕನಿಗೊಂದು ಮರ್ಯಾದೆಯನ್ನು ಹಾಕಿಕೊಟ್ಟಿದ್ದಾರೆ.

ಹೀಗಾಗಿ ಅಂಥ ಆವರಣದಲ್ಲಿ ಜೀವಿಸುವ ವ್ಯಕ್ತಿ ಮತ್ತು ವ್ಯಕ್ತಿಸಮಾಜವು ಅನೇಕ ಬಗೆಯ ತಡೆ ತೊಡರುಗಳನ್ನು ಪಡೆಯುತ್ತವೆ. ಯಾವುದು ತಡೆಯಿಲ್ಲದೆ ಸಾಗುತ್ತದೋ, ಯಾವುದರ ಸಂಪರ್ಕದಿಂದ ನಮಗೆ ಹಿಗ್ಗುಕುಗ್ಗುಗಳು ಉಂಟಾಗುವುದಿಲ್ಲವೋ—ಅಂಥವುಗಳ ಗಮನವೇ ನಮಗಾಗುವುದಿಲ್ಲ. ನಮ್ಮ ದಾರಿಯನ್ನು ತಡೆದು, ತಮ್ಮ ಶಕ್ತಿಗಳಿಂದ ನಮ್ಮನ್ನು ಸೆಳೆಯುವ ವಸ್ತುಗಳು ಮಾತ್ರ. ಅನುಭವ ಕೊಡುವಂಥವು. ಇವು ನಮ್ಮಲ್ಲಿ ನೋವುಂಟುಮಾಡಬಹುದು, ಅಸಮಾಧಾನ ಹುಟ್ಟಿಸಬಹುದು, ವಿಸ್ಮಯ ಪ್ರೇರಿಸಬಹುದು, ನಮ್ಮ ಮನ್ನಣೆಯನ್ನು ಸೆಳೆಯಬಹುದು. ಅವುಗಳೊಡನೆ ನಮಗೆ ಸಂಪರ್ಕವಾದಾಗ, ನಾವು ಭೀತಿ ತಾಳುತ್ತೇವೆ, ಅಳುತ್ತೇವೆ, ನಗುತ್ತೇವೆ. ಇಲ್ಲೆಲ್ಲ ನಮ್ಮ ಸ್ವಭಾವ, ಅಲ್ಲಲ್ಲೇ ವ್ಯಕ್ತಗೊಂಡು, ಮನಸ್ಸಿನ ಹೊರೆಯನ್ನಿಳಿಸಿಕೊಳ್ಳುವ ದಾರಿಗಳು. ಇವುಗಳ ಪರಿಣಾಮ ತೀಕ್ಷ್ಣವಾದಲ್ಲಿ, ಆಗಾಗ ನಾವು ಪ್ರಕಟಿಸುವ ಸುಖದುಃಖಗಳ ಚಿಹ್ನೆಯಿಂದಲೆ ತೃಪ್ತಿ ಹೊಂದುವದಿಲ್ಲ. ಹೂವನ್ನು ಕಂಡು ಹಿಗ್ಗಿದ ಮನಸ್ಸು ಆ ಗಿಡವನ್ನೇ ಎತ್ತಿ ಮನೆಗೊಯ್ಯಲು ಬಯಸಬಹುದು. ನದಿಯನ್ನು ಕಂಡು ತುಂಬಿದ ಮನ—ಅದರ ನೀರಲ್ಲಿ ಆಟವಾಡಿದುದರಿಂದಲೇ ತೃಪ್ತಿಪಡೆಯದೆ, ಅದರ ಸೊಬಗನ್ನು ಕಣ್ಣಿನಿಂದಲೇ ಕುಡಿದು ಅರಗಿಸಲು ಪ್ರಯತ್ನಿಸಬಹುದು. ನಮ್ಮ ದಾರಿಗೆ ತೊಡಕು ತಂದ ನೋವನ್ನು ಅಲ್ಲಿಯೇ ಗೆಲ್ಲಲಾರದ ನಾವು, ಅದರ ಸ್ಮರಣೆಯನ್ನು ಹೊತ್ತು ಬದುಕಿನೊಂದಿಗೆ ಮುಂದೊಯ್ಯಬಹುದು. ಇಂಥ ಸಾವಿರಾರು ಬಗೆಯ 'ಅತೃಪ್ತ' ಆಸೆಗಳ ಗನಿ ಆಗುತ್ತಾನೆ ಮನುಷ್ಯ. ಇಲ್ಲಿ ನೋವನ್ನುಂಟುಮಾಡಿದ ವಸ್ತು ಒಂದೇ—'ಅತೃಪ್ತಿ' ಎಂದು ನಾವು ಎಣಿಸಬಾರದು. ಆ ಮಾತಿಗೆ ಇನ್ನೂ ವಿಸ್ತಾರವಾದ ಅರ್ಥ ಬರುತ್ತದೆ. ಆವರಣದೊಡನೆ ಸಂಪರ್ಕವಾದಾಗ ಹುಟ್ಟುವ ಖೇದ, ವಿಸ್ಮಯ, ಭೀತಿ, ಸಂತೋಷ, ಉದ್ವಿಗ್ನತೆ ಮೊದಲಾದ ಭಾವಪ್ರಕಟನೆಗಳಿಂದ ಮರೆಯಲಾರದ ಯಾವತ್ತು ಘಟನೆಗಳೂ ಕಲಾವಿದನ ಪಾಲಿಗೆ 'ಅತೃಪ್ತ ಬಯಕೆ'ಗಳು. ಅಂಥ ನೂರಾರು ಅನುಭವಗಳು ಕೂಡಿ, ಅವನಿಗೆ ಜೀವನದಲ್ಲಿ ಯಾವುದೋ ಬಗೆಯ ಅಪೂರ್ಣತೆಯನ್ನು ಬೋಧಮಾಡುತ್ತವೆ. ಸೂಕ್ಷ್ಮವಾಗಿ ಬಾಳುವ ಜೀವಿಯ ಮನದೊಳಗೆ ಇವೆಲ್ಲ ತುಂಬಿಕೊಂಡೆ ಇರುತ್ತವೆ. ಇವುಗಳ ಒತ್ತಡ ಹೆಚ್ಚಾದಂತೆ, ಅವು ತಮ್ಮದೆ ಆದೊಂದು ದಾರಿಯಲ್ಲಿ ಬೆಳಕಿಗೆ ಬರಲು ಪ್ರಯತ್ನಿಸುತ್ತವೆ. ಜೀವನದ ಒಂದೊಂದು ನೋಟಕ್ಕೆ ಸಂಬಂಧಿಸಿದಂತೆ ಉಂಟಾದ ಅನುಭವಗಳು, ತಂತಮ್ಮೊಳಗಿನ, ಅರ್ಥಾತ್ ಪ್ರಪಂಚದಲ್ಲಿ ತನಗೆ ಕಾಣುವ ವಸ್ತು-ವಸ್ತುಗಳೊಳಗಿನ ಅಸಂಬದ್ಧತೆಯನ್ನು, ಸಂಬದ್ಧವಾಗಿ ಮಾಡುವ ಮನವಾಗುತ್ತದೆ. ಹಾಗೆ ತನಗೆ ಕಂಡ ದೃಷ್ಟಿಯಲ್ಲಿ, ಸಂಬದ್ಧವಾಗಿ ಕಾಣದ ವಸ್ತುಗಳನ್ನೆಲ್ಲ, ಸರಿಪಡಿಸುವ ಆಸೆಯಿದ್ದರೂ ಸರಿಪಡಿಸಬಲ್ಲ ಸರ್ವಶಕ್ತ ಅವನಲ್ಲ. ಸರಿಪಡಿಸಬೇಕೆಂಬ ಹಂಬಲವಷ್ಟೆ ಅವನಿಗೆ. ಜಗತ್ತು ತನ್ನನ್ನು ತಾನು ಸರಿಪಡಿಸಿಕೊಂಡೀತು—ಎಂಬ ಆಸೆ ಅವನಿಗೆ ಆ ಆಸೆಗೆ ಪುಷ್ಟಿಕೊಡುವ ಪ್ರೇರಣೆ ಅವನ ಮನಸ್ಸಿನದು. ಅದಕ್ಕಾಗಿ, ತನ್ನ ಅನುಭವಗಳ ಸಂಬದ್ಧ ಸೃಷ್ಟಿಯೊಂದನ್ನು ಮಾಡಬೇಕೆಂಬ ಉತ್ಕಟ ಅಪೇಕ್ಷೆ ಅವನಲ್ಲಿ ಉಂಟಾಗುತ್ತದೆ. ಈ ಅಪೇಕ್ಷೆಯಿಂದ ಸಾಹಿತ್ಯ ಮತ್ತು ಕಲೆಗಳು ಜನ್ಮತಾಳುತ್ತವೆ. ಈ ಕೆಲಸಕ್ಕೆ ಬೇಕಾದ ವಿಸ್ತಾರ ನೋಟ ಅವನಿಗಿರಬೇಕು. ಅನುಭವವೈಶಾಲ್ಯ ಅವನಿಗೆ ದೊರೆತಿರಬೇಕು. ಅವನಿಗೆ ದೊರಕಿದ ಅನುಭವಗಳಿಂದಲೇ, ಅವನ ಕೃತಿ ಸಾಧ್ಯವಾಗುವಷ್ಟು ಸಲಕರಣೆ ಇರಬೇಕು. ತನ್ನ ಅನುಭವಗಳನ್ನು, ಅವುಗಳ ಯಾವತ್ತೂ ಹಿನ್ನೆಲೆಯಲ್ಲಿ ಹಿಡಿದು, ಹೋಲಿಸಿ ನೋಡುವ ಪಕ್ವತೆ ಅವನಲ್ಲಿರಬೇಕು. ದೊರೆತ ಬರಿಯ ನಾಲ್ಕಾರು ಅನುಭವಗಳಿಂದ, ದೊಡ್ಡದೊಂದು ಮಂದಿರವನ್ನು ಆತ ಕಟ್ಟಲಾರ. ಮಂದಿರ ಎಷ್ಟು ದೊಡ್ಡದಾಗಬೇಕೋ, ಅದಕ್ಕೆ ಬೇಕಾಗುವ ಯಾವತ್ತು ಆಕಾರದ ಕಲ್ಲುಗಳ ಪೂರೈಕೆಯು, ಪೂರ್ವ ಅನುಭವಗಳ ರೂಪದಲ್ಲಿ, ಅವನಿಗೆ ದೊರಕಿರಬೇಕು. ಸ್ಮರಣೆಯಲ್ಲಿ ಹುದುಗಿದ ಇಂಥ ಅನುಭವಗಳ ಪ್ರೇರಣೆಯಿಂದ, ಅತೃಪ್ತ ಆಸೆಯ ಬಲವತ್ತ್ವದಿಂದ, ಆತ ಪುನಃಸೃಷ್ಟಿ ಕಾರ್ಯಕ್ಕೆ ಕೈಇಕ್ಕುತ್ತಾನೆ. ತನ್ನ ಒಟ್ಟು ಸೃಷ್ಟಿಯ ದರ್ಶನದ ಸ್ಥೂಲ ಚಿತ್ರ ಮನಸ್ಸಿಗೆ ಹೊಳೆಯುವ ಕಾಲ ಬರುತ್ತಲೆ ಪರಸ್ಪರ ಸಂಬಂಧವಿಲ್ಲವೆಂದು ಕಂಡ ಕಲ್ಲುಗಳನ್ನೇ ಆಯ್ದು, ಒಂದರ ಮೇಲೊಂದು ಇರಿಸಿ, ಮಂದಿರಕ್ಕೆ ರೂಪಕೊಡಲು ಆತ ಯತ್ನಿಸುತ್ತಾನೆ. ಕೆಲಸ ಮಾಡುತ್ತ ಹೋದಂತೆ, ಹಿಂದೆ ಇರಿಸಿದ ಕಲ್ಲುಗಳೆ ಮುಂದಿನ ಕೆಲಸಕ್ಕೆ ಆಸ್ತಿವಾರವಾಗಿ ಬೆಳೆಯುತ್ತ ಹೋಗುತ್ತವೆ. ಅವನ ಅನುಭವ ಎಷ್ಟೆಷ್ಟು ಸತ್ಯವಸ್ತುವೋ (ಬರಿಯ ಕಾಲ್ಪನಿಕವಲ್ಲವೋ) ಅಷ್ಟಷ್ಟು ಸಹಜವೂ ಸುಂದರವೂ ಆಗಿ ಅವನ ಕೃತಿ ನಿರ್ಮಾಣವಾಗುತ್ತದೆ. ಸಾಹಿತ್ಯ ಮತ್ತು ಕಲೆಯ ಕೃತಿಗಳು, ಸಿಟ್ಟುಬಂದಾಗ ಕೆರಳುವ ಕಣ್ಣುಗಳಂತಾಗಿರದೆ, ಹಿನ್ನೆಲೆಯ ಯಾವತ್ತೂ ಅನುಭವಗಳ ಮೇಲೆ ಬೆಳೆದು ನಿಂತ ಹೂಗಿಡಗಳಂತಾಗಬೇಕು. ಹೀಗಾಗಿ—ಕಲೆ, ಅದನ್ನು ಪ್ರೇರಿಸಿದ ಹಿನ್ನೆಲೆ, ಅವೆರಡರ ನಡುವೆ ವಿಶ್ವಕರ್ಮನಾಗಿ ಆಟವಾಡಿದ ವ್ಯಕ್ತಿ—ಇವೆಲ್ಲ ಒಂದೆ ಪದಾರ್ಥವೆನಿಸಿದರೇನೇ ಅದರ ಸಾರ್ಥಕತೆ.

ಶಾಶ್ವತ ಕಟ್ಟಳೆ ಬೇಡ

ನಮ್ಮ ದೇಶದಲ್ಲಷ್ಟೇ ಅಲ್ಲ, ಇತರ ದೇಶಗಳ ಸಾಹಿತ್ಯ ಸಾಂಪ್ರದಾಯವನ್ನು ನೋಡಿದರೆ ಒಂದು ವಿಚಾರ ನಮಗೆ ತಿಳಿದೀತು—ಕಲೆಗೆ, ಸಾಹಿತ್ಯಕ್ಕೆ—ವಸ್ತು ಯಾವುದಿರಬೇಕು? ಎಂಬುದರ ಕುರಿತು ಉಂಟಾಗಿರುವ ಭಿನ್ನಾಭಿಪ್ರಾಯಗಳಿವು. ಹಿಂದೆ ತಮ್ಮಲ್ಲಿ ಬೆಳೆದ ಸಾಹಿತ್ಯಕೃತಿಗಳನ್ನು ಕಂಡು, ಅವುಗಳಲ್ಲಿ ತಮಗೆ ಮೆಚ್ಚುಗೆಯಾದವುಗಳನ್ನು ಮಾತ್ರ ಆರಿಸಿಕೊಂಡು, ಹೂಡುವ ಆದರ್ಶವಾದವೇ ಈ ರೀತಿಯ ಚರ್ಚೆಗೆ ಕಾರಣ. ಅದು ಧರ್ಮವನ್ನೇ ಹೇಳಬೇಕು; ಅದು ಇಂಥ ಮತವನ್ನೇ ಪ್ರಸಾರಪಡಿಸಬೇಕು; ಇಂಥ ವ್ಯಕ್ತಿಗಳೆ ಚಿತ್ರದಲ್ಲಿ ಬರಬೇಕು; ಅವು ಇಂಥ ತತ್ವಗಳನ್ನೇ ಹೇಳಬೇಕು—ಎಂಬ ತೀರ್ಮಾನಗಳಿವು. "ಯಾವ ಕಾಲಕ್ಕೂ ಅದು ಹೀಗೆ ಇರಬೇಕು" ಎಂದು, ನಾಳಿನ ಮತ್ತು ಇಂದಿನ ಸಾಹಿತ್ಯದ ಮೇಲೆ ಹೊರಿಸುವ ಅಂಕೆಗಳಿವು. ಸಾಹಿತಿ ಒಬ್ಬ ಜೀವಿ. ಎಷ್ಟು ಅಂಥ ಜೀವಿಗಳಿದ್ದಾರೋ ಅಷ್ಟೊಂದು ವ್ಯಕ್ತಿವಿವಿಧತೆ ಅವರಲ್ಲಿರಬಹುದು ಎಂದು ಜನ ಮರೆತುಬಿಡುತ್ತದೆ. ಈ ಜೀವಿಗಳನ್ನು ಪೀಡಿಸುವ ಆವರಣ, ಪ್ರಶ್ನೆಗಳು, ಸಮಾಜ, ಸಂಸ್ಕಾರ—ಬದಲಾಗುತ್ತಲೆ ಇವೆ ಎಂಬುದನ್ನು ನಾವು ಮರೆತುಬಿಡುತ್ತೇವೆ. ಆವರಣಗಳೂ ಬೇರೆ, ಆವರಣಕ್ಕೆ ಗುರಿಯಾಗುವ ವ್ಯಕ್ತಿಗಳೂ ಬೇರೆ ಎಂಬುದನ್ನು ನಾವು ತಿಳಿದರೆ, ಸಾಹಿತ್ಯದ ಉದ್ದೇಶವನ್ನು ಕುರಿತಾದ ಯಾವೊಂದು ಕಟ್ಟಿಟ್ಟ ತೀರ್ಮಾನಕ್ಕೂ ಬರಲಾರೆವು. ಒಂದೊಂದು ಆವರಣದ ಜನ, ಒಂದೊಂದು ಕಾಲದಲ್ಲಿ, ತಂತಮಗೆ ಹಿರಿದಾಗಿ ಕಾಣಿಸಿದ ವಸ್ತು

ಗಳನ್ನು ನಿರ್ಮಿಸಿ ಹೋದರು. ಇಲ್ಲಿ ಕಟ್ಟಳೆಗೆ ಅಧಿಕಾರವಿಲ್ಲ. ಪ್ರಾಮಾಣಿಕನಾದ ಯಾವೊಬ್ಬ ಸಾಹಿತಿಯೂ ಇಂಥ ಕಟ್ಟಳೆಗಳಿಗೆ ಅಂಜಿ, ತನ್ನ ಮನ ಕಂಡ ಬೆಳಕನ್ನು ಬಚ್ಚಿಡುವದಿಲ್ಲ. ತಾನು ಕಂಡ ಸತ್ಯವಷ್ಟೇ ಅವನಿಗೆ ನೆಚ್ಚು. ಅದನ್ನೇ ಜಗ ಒಪ್ಪಬೇಕು ಎಂಬ ಶುಂಠ ಅವನಾಗಲಾರ. ತನ್ನ ಬೆಳಕನ್ನು ಇತರರಿಗೆ ಹಂಚಿಕೊಡುವದರಲ್ಲಷ್ಟೇ ಅವನಿಗೆ ತೃಪ್ತಿ. ಆ ಬೆಳಕಿನಲ್ಲಿ--ತಾನು ಕಂಡಂತೆ ಜನರೂ ಕಂಡಾರು ಎಂಬುದಷ್ಟೇ ಅವನ ಆಸೆ.

ಕಲೆ ಪ್ರಚಾರಕ್ಕಾಗಿ ಅಲ್ಲ

ಕಲೆಗೆ, ಸಾಹಿತಕ್ಕೆ--ಉದ್ದೇಶ ಹೊರಿಸಹೋಗುವ ವ್ಯಕ್ತಿಗಳು ಇನ್ನಾವುದೋ ಜ್ಞಾನಕ್ಕೆ ಅನ್ವಯಿಸಬಹುದಾದ ತೀರ್ಮಾನವನ್ನು ಕಲೆಗೂ ಹೊರಿಸಬೇಕೆನ್ನುವ ವ್ಯಕ್ತಿಗಳು. ಧರ್ಮ, ಮತ ಮೊದಲಾದವುಗಳನ್ನು, ಅವುಗಳ ತತ್ವಗಳನ್ನು ಪ್ರಚಾರಗೊಳಿಸುವ ಅತಿ ಹಂಬಲವುಳ್ಳವರಿಗೆ, ಒಣ ತತ್ವಜ್ಞಾನದಿಂದ ಜನರನ್ನು ಮೋಹಿಸುವುದು ಕಷ್ಟ ಎಂದು ತಿಳಿದಿದೆ. ಅಂಥವರು ಸಾಹಿತ್ಯಕ್ಕಿರುವ ಮೋಹಕತೆಯನ್ನು ಕಂಡು, ಅದನ್ನು ತಮ್ಮ ದಾಸ್ಯಕ್ಕೆ ಸೆಳೆಯಲೆತ್ನಿಸಿದರು. ಹಾಗಾಗಿ— ಮತಸಾಹಿತ್ಯಗಳ ಹೊರೆಯೇ ಉಂಟಾಯಿತು. ಸಾಹಿತಿ-ಸ್ವಭಾವತಃ ಮತ, ಧರ್ಮ, ತತ್ವಜ್ಞಾನಪ್ರಿಯನಾದವನಲ್ಲ. ಅವನ ಸ್ವಭಾವದ ಫಲವಾಗಿ, ಅವನ ಕೃತಿಗಳಲ್ಲಿ ಈ ಸಂಬಂಧವಾದ ಪ್ರೇರಣೆ ತನ್ನಂತೆಯೇ ಬರುತ್ತದೆ. ಆತ ಉಪದೇಶಕ್ಕೆ ಹೊರಡದಿದ್ದರೂ ಅವನ ಕೃತಿಗಳ ಫಲ ಆ ಕೆಲಸ ಮಾಡಬಾರದೆಂದಿಲ್ಲ. ಆದರೆ ಮತಪ್ರಚಾರಕ್ಕೆ ಹೊರಟ ಜನ, ಅಷ್ಟರಿಂದಲೇ ತೃಪ್ತರಾಗುತ್ತಾರೆಯೇ? ಅವರು ಸಾಹಿತ್ಯದ ಹೊರಮೈಯನ್ನು ತಮ್ಮ ಉದ್ದೇಶಕ್ಕೂ ಬಳಸಿಕೊಂಡರು. ಅವರಂತೆ ಪ್ರಚಾರಕರಾದವರು-ಬರಿಯ ಮತವನ್ನಷ್ಟೇ ಅಲ್ಲ-ವಿಜ್ಞಾನ, ಕೃಷಿ, ಆಯುರ್ವೇದ, ತರ್ಕ ಎಲ್ಲಕ್ಕೂ ಕವನಶರೀರ ಕೊಟ್ಟರು. ಆದರೆ ಕಲೆಯ ಸ್ವಭಾವವನ್ನರಿಯಬಲ್ಲ ವ್ಯಕ್ತಿಗೆ ಈ ಮಂಕು ಹಿಡಿಯಲಾರದು.

ಇಂದು-ನಮ್ಮ ನಾಡಿನಲ್ಲಿ ಇನ್ನೊಂದು ಬಗೆಯ ಜನ ಹೊರಟಿದ್ದಾರೆ. ಹಿಂದೆ ಧರ್ಮಪ್ರಸಾರಕರು ತಮ್ಮ ಗಾಡಿ ಎಳೆಯುವುದಕ್ಕೆ ಸಾಹಿತ್ಯದ ಕುದುರೆ ಕಟ್ಟಿದಂತೆ, ಇಂದು ರಾಜಕೀಯ ಪಂಥವೊಂದಕ್ಕೆ ಅದೇ ಕುದುರೆಗಳನ್ನು ಕಟ್ಟಿದರಾಯಿತು ಎಂದು ತಿಳಿಯತೊಡಗಿದ್ದಾರೆ. ಈ ಜನ-ಹಿಂದಿನವರ ಹಾದಿಯನ್ನೇ ಕುರುಡುತನವೆಂದು ಸಾರಿದ ವ್ಯಕ್ತಿಗಳು. ತಾವು ಆ ದಾರಿ ಕೈಕೊಂಡ ಮಾತ್ರಕ್ಕೆ ಕಣ್ಣಿದ್ದವರಾಗುವುದು ಹೇಗೋ ನಾನು ತಿಳಿಯೆ. ಆಯಾ ಕಾಲದ ಜನಕ್ಕೆ, ಆಯಾ ಪಂಥದ ಜನಕ್ಕೆ, ಪರರ ಕುರುಡುತನ ಕಾಣುತ್ತದೆ. ತಾವು ಕುರುಡರೆಂದು ತಮಗೆ ಕಾಣುವುದಿಲ್ಲ. ಕಲಾವಿದ-ತನ್ನ ಮನ, ತನ್ನ ಜೀವನ, ತನ್ನ ಅನುಭವ-ಇವುಗಳಿಂದಲೇ ತನ್ನ ಸೃಷ್ಟಿಯನ್ನು ಮಾಡಬೇಕೇ ಹೊರತು, ಇನ್ನುಳಿದ ದಾರಿ ಹಿಡಿದರೆ, ಪರರ ಕಣ್ಣಿಂದ ಕಾಣಬಯಸುವ ಪಥಿಕನಾಗುತ್ತಾನೆ. ಹಾಗೆ ಆತ ಕಾಣಲು ಶಕ್ತನಾದರೆ, ಆತ ಕಾಣುವ ದಾರಿ ಅವನದಾಗಲಾರದು. ಅಂಥ ಜೀವನಯಾತ್ರೆಯೇ ಅವನದಲ್ಲದಾಗಿಹೋದೀತು.

ಒಬ್ಬನ ಜೀವನದಲ್ಲಿ ಸಾವು ಹುಟ್ಟುಗಳ ಸೆಣಸಾಟಗಳೇ ಮುಖ್ಯವಾಗಿ ಕಾಣಿಸಬಹುದು. ಇನ್ನೊಬ್ಬನ ಪಾಲಿಗೆ ಸಾವಿನ ಆಚಿನ ಪ್ರಶ್ನೆಗಳು ಹೆಚ್ಚಿನವೆನಿಸಬಹುದು. ಮತ್ತೊಬ್ಬನಿಗೆ ಅನ್ನ ಸಮಸ್ಯೆ, ಅಸಮತೆ-ಹೆಚ್ಚಾಗಿ ತೋರಬಹುದು. ಮೂರನೆಯವನಿಗೆ ನಿಸರ್ಗದ ಸೌಂದರ್ಯವೇ ಮನ ಸೆಳೆಯಬಹುದು. ಹಾಗೆಯೇ, ಒಂದೊಂದು ಕಾಲದಲ್ಲಿ ಒಂದೊಂದು ವಿಷಯ ಸಮಸ್ಯೆಯಾಗಿ ಕಾಣಿಸಿ, ಉಳಿದವುಗಳು ಕಾಣಿಸದೆ ಹೋದುದಾಯಿತು. ಮನವನ್ನು ಪ್ರೇರಿಸುವ ವಸ್ತುಗಳೇ ಬೇರೆಯಾದರೆ, ಸಾಹಿತ್ಯದ ಸಂದೇಶ ಒಂದೇ ಆಗಬೇಕು, ಅಥವಾ ಅದು ಇಂಥದೇ ಆಗಬೇಕು ಎನ್ನುವ ಅಧಿಕಾರ ಯಾರಿಗಿದೆ?

ಹಳೆ ಹೊಸದರ ತೊಡಕು

ಈತನಕ ಸಾಹಿತ್ಯ, ಅದನ್ನು ಹುಟ್ಟಿಸುವ ಮನೋವೃತ್ತಿಗಳ ಕುರಿತು ಹೇಳಿದೆ. ಈಗ ಅದರ ದಾರಿಯನ್ನು ಕುರಿತು ಗಮನಿಸೋಣ. ಈ ದಾರಿ-ಸಾಹಿತಿ ತನ್ನ ಉದ್ದೇಶಕ್ಕೆ ಸಮನಾಗಿ ಬಳಸಿಕೊಳ್ಳುವ ಸಾಧನವಾಗಿದೆ. ಬಗೆಬಗೆಯ ಜೀವಗಳಿಗೆ ಬಗೆಬಗೆಯ ಉಡುಗೆ ತೊಡುಗೆ. ಈ ಉಡುಗೆತೊಡುಗೆಗಳ ಯುಕ್ತತೆ ಅಯುಕ್ತತೆ, ಚೆಲುವು ಚೆಲುವಿಲ್ಲದಿರುವಿಕೆ-ಇವು ಅವನ ಉದ್ದೇಶವನ್ನು ನೆರವೇರಿಸುವುದರಲ್ಲಿ ಬಳಸಿದ ದಾರಿ ಹೇಗೆ ಸಫಲವಾಗಿವೆ, ಎಂಬುದನ್ನು ಹೊಂದಿರಬೇಕೆ ವಿನಾ ಅದನ್ನು ಬಿಟ್ಟಲ್ಲ. ಸಾಹಿತ್ಯದಲ್ಲಿ ಮನಬಿಟ್ಟ ಮೈಯಿಲ್ಲ, ಮೈಬಿಟ್ಟ ಮನವಿಲ್ಲ. ಮನಕ್ಕೆ ಹೊಂದುವ ಮೈ ಮಾತ್ರ ಮೈ. ಹೊಸತನ ಹಳೆತನಗಳು ಕಾಣಿಸಬಹುದು. ಸಾಹಿತಿ ಹಳೆಯದನ್ನೆಂದೂ ಬಿಟ್ಟಿರಲಾರ. ಹಳೆಯದರ ಫಲವಾಗಿಯೇ ಇಂದಿನ ಬದುಕು ಹುಟ್ಟಿದೆ. ಹಳೆಯದರಲ್ಲಿನ ತೃಪ್ತಿಯೇ 'ಪರಂಪರೆ.' ಅದರಿಂದ ಹುಟ್ಟಿದ ಅತೃಪ್ತಿಯೇ 'ಹೊಸತನ.' ಹಳೆಯದನ್ನು ಅಳಿದ ಯಾವ ಅನುಭವವೂ ಪ್ರಪಂಚದಲ್ಲಿಲ್ಲ. ಆದರೂ ಹೊಸತು, ಎಷ್ಟೇ ಹೊಸತಾಗಿ ಕಂಡರೂ ಹಳೆಯದರ ಫಲ. ಸಾಂಪ್ರದಾಯವಾದಿಗಳಿಗೆ ಇದು ಕಾಣಿಸಲಾರದು. ತಮ್ಮ ಬದುಕಿನಲ್ಲೇ ಆಗುವ ಹೊಸ ಬದಲಾವಣೆಗಳ ಪಾಲಿಗೆ ಅವರು ಜಡರಾಗಿರುತ್ತಾರೆ. ಇದರಿಂದಲೇ ಅನೇಕ ವಾದಗಳು ಉಂಟಾಗುತ್ತವೆ. ಸಂಸ್ಕೃತ ಸಾಹಿತ್ಯದ ರೀತಿಯನ್ನೇ ಕಂಡು ಬಂದ ಜನಕ್ಕೆ-ಅಲ್ಲಿನ ಛಂದಶ್ಶಾಸ್ತ್ರವೇ ಶಾಸ್ತ್ರ; ಬರೆದರೆ ವೃತ್ತ ಕಂದಗಳಲ್ಲೇ ಬರೆಯಬೇಕು, ಅಲಂಕಾರಗಳು, ಅಲಂಕಾರದ ನಿಯಮಗಳು-ಅಂತೆಯೇ ಇರಬೇಕು, ಎಂದು ತೋರಬಹುದು; ತೋರಿದ್ದುಂಟು. ಆಗ-ಕನ್ನಡದ ಭಾಮಿನಿ ಷಟ್ಪದಿಗಳು ಅನಾವಶ್ಯಕವಾದ, ಅಸಾಧುವಾದ ಹೊಸ ದಾರಿಗಳೆಂದು ತೋರಿರಬೇಕು. ಷಟ್ಪದಿ, ಕಂದ, ವೃತ್ತಗಳನ್ನೆ ಕಂಡು ಬಂದವರಿಗೆ, ಈಗಿನ ಪ್ರಾಸಹೀನ ಕವಿತೆ ಅಶಾಸ್ತ್ರೀಯವಾಗಿ ತೋರುತ್ತದೆ. ನಾಳಿನವರಿಗೆ ಇಂದಿನದು ಆಧಾರವಾಗಿ, ಇಂದಿನದೆಲ್ಲ ಶಾಸ್ತ್ರೀಯ ಎನಿಸಿ ಅವರದು ಅಶಾಸ್ತ್ರೀಯವಾಗಿ ಕಾಣಿಸಲೂಬಹುದು.

ಸಾಹಿತಿ ಬಳಸುವ ಸಾಧನ--ಶಬ್ದ, ದೇಸಿ, ಅಲಂಕಾರಗಳು. ಒಂದು ಮಾತಿನಿಂದ ಇನ್ನೊಂದು ಭಾವವನ್ನು-ಪ್ರಚೋದಿಸಲು ಅಲಂಕಾರ; ಒಂದು ನಿಶ್ಚಿತ ತತ್ವ, ಬಣ್ಣ, ಕ್ರಿಯೆ, ಗುಣ, ವಿಚಾರ ಹೇಳುವದಕ್ಕೆ ಶಬ್ದ; ಅವುಗಳನ್ನೇ ಬಳಸಿ ಯಾವುದೋ ಅನುಭವದ ಚಿತ್ರಕೊಡುವುದಕ್ಕೆ ನಾಣ್ಣುಡಿ, ದೇಸಿ--ಇವೆಲ್ಲ ಸಾಹಿತ್ಯಮಂದಿರದ ಇಟ್ಟಿಗೆಗಳು. 'ಮಂದಿರ ಹೀಗೆಯೇ ರಚನೆಯಾಗಬೇಕು' ಎನ್ನು ತೀರ್ಮಾನ ಬರುವುದು ಹಿಂದಿನವರು ಕಟ್ಟಿದ ಗುಡಿಗೋಪುರಗಳನ್ನು ಕಂಡ ಬಳಿಕ, ಅವರು ಅನುಸರಿಸಿದ ನಿಯಮಗಳನ್ನು ಹುಡುಕಿ ತಿಳಿಯದ್ದರಿಂದ. ಈ ಅಳತೆ ಕೋಲಿಂದಲೆ ಇಂದು-ನಾಳಿನ ಸಾಹಿತ್ಯಗಳನ್ನೆಲ್ಲ ಅಳೆಯಲು ಹೊರಡುವ ವಿಮರ್ಶಕರೂ ಬೇಕಷ್ಟು. ಮುಂದಿ

ಇದ್ದಾರೆ. ಇವೆಲ್ಲ ಹಿಂದಿನ ನಿಯಮಗಳು—ಗ್ರೀನ್ವಿಚ್ಚಿನಲ್ಲಿ ಇರಿಸಿದ ಗಜದ ಕೋಲಿನಂತೆ ನಿಶ್ಚಿತವಾದ, ಚಿರವಾದ, ಎಂದೂ ಬದಲಾಗದ ಅಳತೆ—ಎಂದು ವಿಮರ್ಶಕ ಊಹಿಸಿ ಹೊರಡುತ್ತಾನೆ. ಅಲ್ಲೇ ಆತ ತಪ್ಪುತ್ತಿದ್ದಾನೆ. ಆತ ಒಂದೊಂದು ಶಬ್ದದ, ಒಂದೊಂದು ದೇಸಿಯ, ಒಂದೊಂದು ನಾಣ್ನುಡಿಯ, ಅಲಂಕಾರದ-ಇತಿಹಾಸ ಬಲ್ಲ ಭಾಷಾವಿದ, ಹೇಗೆ ಇವೆಲ್ಲವೂ ಅರ್ಥಪುಷ್ಟಿಯಲ್ಲಿ, ವಸ್ತುನಿರೂಪಣೆಯ ಶಕ್ತಿಯಲ್ಲಿ, ಭಾವನೆಯನ್ನು ಉದ್ರೇಕಗೊಳಿಸುವ ಶಕ್ತಿಯಲ್ಲಿ, ಕಾಲಕಾಲದಿಂದ ಬದಲಾಗಿವೆ ಎಂಬುದನ್ನು ತಿಳಿಯಬಲ್ಲ? ಹಿಂದಿನ ಅರ್ಥಗಳನ್ನು ಕಳಚಿಕೊಂಡ ಮಾತುಗಳೆಷ್ಟು ಬೇಕು? ಹೊಸ ಅರ್ಥ ಗಳಿಸಿದವೆಷ್ಟು ಬೇಕು? ಹಳೆಯ ಅರ್ಥಕ್ಕೆ ವಿರುದ್ಧಾರ್ಥ ತಾಳಿದವೆಷ್ಟು ಬೇಕು? ಕಾಲಮಾನ, ಸಾಹಿತ್ಯದ ಈ ಮೂಲ ವಸ್ತುಗಳನ್ನೇ ಬದಲಿಸುತ್ತಿರುವಲ್ಲಿ ಅವನ್ನು ನಡೆಯಿಸುವ ಸೂತ್ರಗಳನ್ನು ಬದಲಿಸಿದರೆ ಆಶ್ಚರ್ಯವೇನು?

ಈ ಬದಲಾವಣೆಗಳು ಏಕೆ ಆಗುತ್ತವೆ—ಎಂಬುದನ್ನು ನಾವು ತಿಳಿಯಬೇಕು. ಆಗ ಹೊಸತನಕ್ಕೆ ಕಾರಣ ಕಂಡುಹಿಡಿಯಬಹುದು. ಮೋಹಕತೆ ಬದಲಾವಣೆಗೆ ಒಂದು ಕಾರಣ. ತನ್ನದಲ್ಲದಿದ್ದರೂ ಕನ್ನಡ ಭಾಷೆ, ಕಂದವೃತ್ತಗಳನ್ನು ಬಳಸಿಕೊಂಡಂತೆ, ತನ್ನದು ತೀರ ಸಾಮಾನ್ಯವಾಗಿ ತನಗೇ ಕಾಣಿಸಿದಾಗ ಎರವಲು ಒಡವೆಗಳಿಂದ ಭಾಷೆಯನ್ನು ಬೆಡಗುಗೊಳಿಸುವ ಜನ ಇದ್ದೇ ಇದ್ದಾರೆ. ಒಂದು ಸಂಸ್ಕೃತಿ ಇನ್ನೊಂದು ಸಂಸ್ಕೃತಿಯಿಂದ ಹೀಗೆ ಸಾಲ ತರುತ್ತದೆ. ಸಾಲ ಕೊಂಡು ಬೆಳೆಯದ ಭಾಷೆಯೇ ಇಲ್ಲ, ಸಾಹಿತ್ಯವೆ ಇಲ್ಲ. ಅವಶ್ಯವಿದ್ದೂ ಸಾಲ ಮಾಡುವವರಿದ್ದಾರೆ, ಇಲ್ಲದೆಯೂ ಸಾಲ ಮಾಡುವವರಿದ್ದಾರೆ. ಸಾಲ ಮಾಡಿ ತಂದ ಒಡವೆ, ಕಾಲಗತಿಯಿಂದ ಅವನವೇ ಆಗಿಬಿಡುತ್ತವೆ. ನಿಜವಾದ ಸಾಹಿತಿ ಅವಶ್ಯವಾದ ಸಾಲಕ್ಕೆ ಹಿಂಜರಿಯಬೇಕಾಗಿಲ್ಲ. ಅವನ ಅನುಭವದ ಚಿತ್ರಣಕಾಲದಲ್ಲಿ, ಇಂಥ ಸಾಲಗಳು ಸಹ ಅವನಿಗೆ ಸಾಲದೆ ಹೋಗುವುದುಂಟು. ಹೊಸತೇ ಆಗಿ ಕಾಣಿಸುವ ಅವನ ಅನುಭವಗಳಿಗೆ, ಆತ ಹೊಸತೇ ಆದ ಮಾತನ್ನೂ ನಾಣ್ನುಡಿಯನ್ನೂ ಅಲಂಕಾರವನ್ನೂ ಶೈಲಿಯನ್ನೂ ನಿರ್ಮಿಸಿಕೊಳ್ಳುತ್ತಾನೆ. ಈ ನಿರ್ಮಾಣ, ಅವನ ಸ್ಫೂರ್ತಿಯಿಂದ ಪ್ರೇರಿತವಾದದ್ದು. ಇದರಿಂದ ಅವನ ಸಾಹಿತ್ಯ ಪುಷ್ಟವಾಗುತ್ತದೆ. ಆತನ ಹೊಸತನಕ್ಕೆ ಜನ ಋಣಿಯಾಗಬೇಕು.

ಜನಕ್ಕೆ ಕಂಡದ್ದನ್ನು ಕಾಣುವುದರಲ್ಲಿ, ಕೇಳಿದ್ದನ್ನು ಕೇಳುವುದರಲ್ಲಿ–ಎಷ್ಟೋ ಬಾರಿ ಬೇಸರಿಕೆ ಬರುತ್ತದೆ. ಆಗ ಹಳೆಯ ಬಗೆಯಿಂದ ಚಿತ್ರಿಸುವವನಿಗಿಂತ, ಹೊಸ ಬಗೆಯಲ್ಲಿ ಚಿತ್ರಿಸುವವನಿಗೆ ಜನತೆಯ ಮನ್ನಣೆ ಸಲ್ಲುತ್ತದೆ. ಉಳಿದವರು ಹಾಕಲಾರದ ಲಾಗವನ್ನು ಡೊಂಬನು ಹಾಕುತ್ತಾನೆ. ಡೊಂಬನ ಲಾಗ ಚಮತ್ಕಾರಿಕವಾಗಿ ಕಾಣುತ್ತದೆ. ಆತನಿಗೂ ತನ್ನ ಶಕ್ತಿಯ ಅರಿವಾಗುತ್ತದೆ. ಎಷ್ಟೋ ಬಾರಿ ಚಮತ್ಕೃತಿಯಿಂದಲೇ ಜನರಂಜನೆಮಾಡಿ, ಜನರ ಮನ್ನಣೆಯನ್ನು ಆತ ಗಳಿಸುತ್ತಾನೆ. ಶಬ್ದ ಚಮತ್ಕಾರ, ಪ್ರಾಸಚಮತ್ಕಾರ, ಶ್ಲೇಷದ ಚಮತ್ಕಾರ, ಆತ್ಮನಿವೇದನೆಯ ಉದ್ದೇಶವನ್ನು ಇರಿಸಿಕೊಳ್ಳುವ ಬದಲು, ಡೊಂಬನ ಲಾಗಗಳಾಗುತ್ತವ. ಮುಗ್ಧರ ಪಾಲಿಗೆ, ಸಾಹಿತ್ಯದ 'ಡೊಂಬ' 'ಕಲಾವಿದ'ನಾಗಿ ಕಾಣುತ್ತಾನೆ. ಜನರು ಮನಕ್ಕೆ ಕೊಡುವ ಮನ್ನಣೆಯನ್ನು ಆಗ ಮೈಗೆ ಕೊಡತೊಡಗುತ್ತಾರೆ. ಅಲಂಕಾರವೇ ಅವರಿಗೆ ಸಾಹಿತ್ಯವಾಗುತ್ತದೆ. ಬಾಹ್ಯ ನಿಯಮವೇ ಅವರಿಗೆ ಕಾವ್ಯದೇವತೆಯಾಗುತ್ತದೆ. ಎಷ್ಟೋ ವಿಮರ್ಶಕರು ಕವಿಯ ಯೋಗ್ಯತೆಯನ್ನು ಬರಿಯ ಈ ಅಳತೆಯಿಂದಲೇ ತೂಗಲು ತೊಡಗುತ್ತಾರೆ. ಮನವನ್ನು ಚಿತ್ರಿಸಲಾರದ ಮಾತು, ಮನದ ಉದ್ದೇಶವನ್ನು ಮರೆಯಿಸಿ ತನ್ನ ಸೊಬಗಿನ ಕಡೆಗೆ ಮನಸೆಳೆಯುವಂತೆ ಮಾಡುವ ಮಾತು, ವೈಖರಿ—ಎಂದೂ ಸಾಹಿತ್ಯವಾಗಲಾರದು. ಚಮತ್ಕೃತಿ ಸಾಹಿತ್ಯವಲ್ಲ.

ವಿಮರ್ಶೆಯೆಂದರೆ ಯೋಗ್ಯತೆಯ ತೂಕ

ಹೀಗಾಗಿ—ಸಾಹಿತ್ಯವಿಮರ್ಶೆಗೆ ಕುಳಿತಿರುವ ವ್ಯಕ್ತಿಯು—ಸಾಹಿತ್ಯದ ಉದ್ದೇಶವನ್ನು ಕುರಿತಾದ, ಅದರ ವಿಧಾನವನ್ನು ಕುರಿತಾದ ಸ್ವತಂತ್ರ ಇಲ್ಲವೆ ಪರಂಪರಾಬದ್ಧವಾದ ಪೂರ್ವತೀರ್ಮಾನವುಳ್ಳವನಾದರೆ ನಿಷ್ಪಕ್ಷಪಾತವಾದ ವಿಮರ್ಶೆ ಅವನಿಂದ ಬರಲಾರದು. ವಿಮರ್ಶಕನು ಸಾಹಿತಿಯನ್ನು ನೋಡುವಾಗ ತೆರೆಗಣ್ಣಿನಿಂದ ನೋಡಬೇಕು. ಕೆಂಗಾಜುಗಳನ್ನು ಧರಿಸಿಕೊಂಡಿರಬಾರದು. ಪೂರ್ವತೀರ್ಮಾನಗಳಿಂದ ಬದ್ಧನಾಗಿರಬಾರದು. ಸಾಹಿತಿ—ತನ್ನ ಕೃತಿಯಲ್ಲಿ ಯಾವ ಆಶೆಯನ್ನು ಇರಿಸಿಕೊಂಡಿದ್ದಾನೆ, ಆ ಆಶಯವನ್ನು ಸಾಧಿಸಲು ಯಾವ ದಾರಿ ಹಿಡಿದಿದ್ದಾನೆ, ಅವನು ಹಿಡಿದ ದಾರಿಯಿಂದ ಅವನ ಆಶಯ, ಅವನ ಸಾಹಿತ್ಯ ಕೃತಿಯಲ್ಲಿ ಸಫಲವಾಗಿದೆಯೇ? ಎಷ್ಟು ಮಟ್ಟಿಗೆ ಆಗಿದೆ? ಎಷ್ಟು ಆಗಿಲ್ಲ? ಯಾಕೆ ಆಗಿದೆ? ಯಾಕೆ ಆಗಿರಲಾರದು? ಇವುಗಳನ್ನು ಅಳೆದು ನೋಡಬಲ್ಲ ವ್ಯಕ್ತಿಯೇ ವಿಮರ್ಶಕ. ವಿಮರ್ಶೆ ಹೊಗಳಿಕೆಯೂ ಅಲ್ಲ, ತೆಗಳಿಕೆಯೂ ಅಲ್ಲ, ವಸ್ತುವಿನ ಯೋಗ್ಯತೆಯ ತೂಕ.

ಹೀಗೆ ತೂಕಮಾಡುವ ಕೆಲಸ ಸುಲಭವೂ ಅಲ್ಲ, ಸಾಮಾನ್ಯವೂ ಅಲ್ಲ. ಸಾಹಿತ್ಯದ ಹುಟ್ಟಿಗೆ ಏನು ಕಾರಣ ಎಂದು ಹಿಂದೆ ಹೇಳಿದೆ. ಅನುಭವ ಅದರ ಕಚ್ಚಾಮಾಲು. ಅನುಭವದಲ್ಲಿ, ಅನುಭವದ ರಾಶಿಯಲ್ಲಿ ಸಮಾನವಾದುವನ್ನು ಆಯ್ದು ಸುಸಂಬದ್ಧವಾಗಿ ಬಾಳಿನ ತೃಪ್ತಿ-ಅತೃಪ್ತಿಗಳನ್ನು ಅವವುಗಳ ಹಿನ್ನೆಲೆಯಲ್ಲಿ ತೋರಿಸುವ ಕೆಲಸ ಸಾಹಿತಿಯದು. ಅವನ ಅನುಭವ, ಅರ್ಥಾತ್ ಸಾಹಿತ್ಯದ ಮೂಲ ವಸ್ತು, ಸತ್ಯವೇ ಎಂದು ನೋಡಬೇಕಾದುದು ವಿಮರ್ಶಕನ ಮೊದಲ ಪ್ರಶ್ನೆ. ವಿಮರ್ಶಕನಿಗೆ ಆ ಬಗೆಯ ಅನುಭವಗಳೇ ಇಲ್ಲದೆ ಹೋದರೆ, ಮೂಲ ವಸ್ತುವಿನ ಪರಿಚಯವೇ ಅವನಿಗಿಲ್ಲದಂತಾಗುತ್ತದೆ. ಒಬ್ಬರ ಅನುಭವವೇ ಇನ್ನೊಬ್ಬರಿಗೆ ಬರಲಾರದು ನಿಜ. ಆದರೆ ಪ್ರಬುದ್ಧನಾದವನಿಗೆ, ಅಂತಹ ಅನುಭವಸಾಮ್ಯವಾದರೂ ಆಗಿರಬೇಕು— 'ಅಂತಿರುವ' ಅನುಭವಗಳಾದರೂ ಇರಬೇಕು. ಅವು ತನಗಾಗಿ ಬಂದಿರದಾಗ, ಅನ್ಯರಿಂದಲಾದರೂ ತಿಳಿದು ಬಂದಿರಬೇಕು. ಅಷ್ಟಕ್ಕೂ ಸಿಗದ ಹೊಸ ಅನುಭವಗಳ ಪರಿಚಯವು ಕಲಾವಿದನಿಗಾದಾಗ, ಆ ಅನುಭವದ ಹಿನ್ನೆಲೆಯನ್ನು ಹೊಂದಿಸಿಕೊಂಡು, ಆತ ಅದನ್ನು ತಿಳಿಯಲೆತ್ನಿಸಬೇಕು. 'ಸಹೃದಯತೆ' ಎಂದರೆ ಅದು; ಕವಿಯ ಹೃದಯಮೀಂಟಿದ ಅನುಭವಕ್ಕೆ ತನ್ನ ಹೃದಯವನ್ನು ಶ್ರುತಿಗೊಳಿಸಬಲ್ಲನಾದರೆ ಮಾತ್ರ ಓದುಗ, ವಿಮರ್ಶಕ ಅವನನ್ನು ತಿಳಿಯುವ ಶಕ್ತಿ ಪಡೆಯುತ್ತಾನೆ. ಇಲ್ಲವಾದರೆ ಇಲ್ಲ.

ಸಹೃದಯನಾದ ವಿಮರ್ಶಕನಿಗೆ, ಅನುಭವ ಸಾಕಷ್ಟು ವಿಶಾಲವಾಗಿದ್ದಲ್ಲಿ, ಸಾಹಿತಿಯ ಮೂಲ ಅನುಭವಗಳ ತೂಕ ಗೊತ್ತಾಗುತ್ತದೆ. ಅನುಭವ; ಅವರ ಹಿನ್ನೆಲೆ–ಇವುಗಳ ಮೇಲಿಂದ ಅವು ಕೃತಿಯ ಆಶಯಕ್ಕೆ ಸಹಾಯವಾಗಿವೆಯೇ ಇಲ್ಲವೇ? ಭಿನ್ನ ಅನುಭವಗಳ ತೂಕ, ಅಳತೆಗಳು ಸಮವಾಗಿ ಬೆರೆತು ಬಂದಿವೆಯೇ ಇಲ್ಲವೇ? ತಳವಿಲ್ಲದ ಕಲ್ಪನೆಗಳಿಗೆ ಅನುಭವದ ಹೆಸರು ಕೊಟ್ಟಿದ್ದಾನೆಯೇ? ಈ ಅನುಭವ

ಸತ್ಯವಾಗಿದ್ದರೂ ಸತ್ಯವಾಗಿ ಕಾಣುವಂತೆ ಚಿತ್ರಿಸಿದ್ದಾನೆಯೇ ಇಲ್ಲವೇ?–ಎಂಬುದನ್ನು ಆತ ಶೋಧಿಸಬೇಕು. ಅನುಭವಕ್ಕೆ ಅಂಟಿಕೊಂಡ ಸಾಹಿತಿಯು ಭಾವನೆ–ಅಳತೆ ಮೀರಿದೆಯೇ? ಆವೇಶ ಅನುರಾಗಗಳಿಗೆ ಮೋಸಹೋಗಿದೆಯೇ? ಎಂಬುದನ್ನು ಆತ ಕಾಣಬೇಕು.

ಕೃತಿಯ ಆಶಯ ಸ್ಪಷ್ಟವಾಗುವಂತೆ, ಸನ್ನಿವೇಶಗಳು, ಅವುಗಳ ಚಿತ್ರಣ ಸಮಂಜಸವಾಗಿ ಬಂದಿವೆಯೇ? ಅವುಗಳಲ್ಲಿ ಶೈಥಿಲ್ಯವಿದೆಯೇ? ಅಸಂಬದ್ಧ ತೀರ್ಮಾನಕ್ಕೆ ಅವಕಾಶವಿದೆಯೇ–ಎಂಬುದನ್ನು ತೂಗಿನೋಡಬೇಕು. ತಾನು ಒಪ್ಪದ ಆಶಯವನ್ನು ಸಾಹಿತಿ ಒಪ್ಪಿದ ಮಾತ್ರಕ್ಕೆ, ಆತ ತಪ್ಪುಗಾರನಾಗಲಾರ. ಸಾಹಿತಿ ಒಪ್ಪಿದ ಆಶಯ–ಅನುಭವದ ಸಾರದಿಂದ ಅಲ್ಲಿ ಬೆಳೆದು, ಗಿಡವಾದಂತೆ ತೋರಬೇಕಾದದ್ದೇ ಮುಖ್ಯ. ಆ ಗಿಡದ ಸ್ವಭಾವ ಸ್ಪಷ್ಟವಾದಲ್ಲಿ ಅದರ ಫಲ ಅಥವಾ ಪುಷ್ಪವನ್ನು ಸಹೃದಯನ ಊಹೆಗೆ ಬಿಡುವ ಸಾಹಿತಿಯೂ ಉಂಟು. ತಾನೇ ಚಿತ್ರಿಸಿ ತೋರಿಸುವವನೂ ಉಂಟು. 'ಈ ಬೆಳಸಿಗೆ ಈ ಫಲ,' ಎಂದು ಬಾಯ್ಬಿಟ್ಟು ಹೇಳಲೇಬೇಕಾದ ಕಾರಣವಿಲ್ಲ. ಫಲ ಕಹಿಯಾಗಿ ಕಾಣಿಸುವುದೂ ಉಂಟು. ಸಿಹಿಯಾಗಿ ಕಾಣಿಸುವುದೂ ಉಂಟು. ಬೆಳಸೆಲ್ಲ ಕಹಿಯಿಂದ ಕೂಡಿದಾಗ ಫಲವನ್ನು ಮಾತ್ರ ರುಚಿಕಟ್ಟಾಗಿ ಮಾಡಿದರೆ, ಸತ್ಯ ಹುಟ್ಟಲಾರದು, ಸೌಂದರ್ಯ ಬರಲಾರದು. ಸತ್ಯವೇ ಕಲೆಯಲ್ಲಿನ ಸೌಂದರ್ಯ. ಕತೆಯ ಕೊನೆಗೆ ತಲೆಹೊಡಕನನ್ನು ಪಶ್ಚಾತ್ತಾಪಪೆಡಿಸಿ "ಅಂದಿನಿಂದ ಅವನು ಒಳ್ಳೆಯವನಾಗಿ ಬಾಳಿದನು" ಎಂದ ಮಾತ್ರಕ್ಕೆ ಸುಖಾಂತ ಬರಲಾರದು.

ಇತ್ತ ಸಾಹಿತಿಯ ಚಿತ್ರಣವಿಧಾನ, ಅವನು ಬಳಸುವ ಶೈಲಿ, ಹಿಡಿದಿರುವ ದಾರಿ––ಇವೆಲ್ಲ ಅವನ ಅನುಭವಗಳಿಂದ ಪುಷ್ಟಿಗೊಂಡ ಆಶಯವನ್ನು ಚಿತ್ರಿಸುವುದರಲ್ಲಿ ಸಮರ್ಥವಾಗಿದೆಯೋ ಎಂಬುದನ್ನು ವಿಮರ್ಶಕ ನೋಡಬೇಕೆ ಹೊರತು, ಅದರಿಂದ ಬೇರೆಯೇ ಆದ ಚೆಲುವನ್ನು ಹುಡುಕಹೋಗಬಾರದು. ಹೊಂದಿಕೆಯಿಲ್ಲದ ಸನ್ನಿವೇಶ, ನಗನಗಿಸುವ ಮಾತು, ಮನೋಹರವಾದ ವರ್ಣನೆ ಅನಾವಶ್ಯಕವಾದ ಸತ್ಯವಾದರೂ ಇವಾವುದಕ್ಕೂ ಸ್ವತಂತ್ರವಾದ ಸ್ಥಾನವಿಲ್ಲ. ಅವೇನಿದ್ದರೂ ಮೂಲ ಆಶಯವನ್ನು ಚಿತ್ರಿಸುವದರಲ್ಲಿ ನೆರವಾದರೇನೇ ಅವಕ್ಕೆ ಸ್ಥಾನ ಇಲ್ಲವೆ ಮಾನ.

ವಿಮರ್ಶಕನಿಗೆ ಸಾಹಿತ್ಯದ ವಿವಿಧ ಮಾರ್ಗಗಳು ತಿಳಿದಿರಬೇಕು. ಒಂದು ಕತೆ ಇಲ್ಲವೆ ಚಿತ್ರ, ಕವನಕ್ಕೆ ಒಪ್ಪಿದ ಮಾತ್ರಕ್ಕೆ ನಾಟಕಕ್ಕೆ ಒಪ್ಪಬೇಕೆಂದಿಲ್ಲ, ನಾಟಕಕ್ಕೆ ಒಪ್ಪಿದ್ದು ಕಾದಂಬರಿಗೆ ಬರಬೇಕೆಂದಿಲ್ಲ. ಯಾವುದಾದರೊಂದು ವಸ್ತುವಿಗೆ ಒಂದು ಸಾಹಿತ್ಯಮಾರ್ಗ ಅತ್ಯುತ್ತಮವಾಗುತ್ತದೆ. ಈ ದೃಷ್ಟಿಯಿಂದಲೂ ವಿಮರ್ಶಕ, ಸಾಹಿತಿಯು ಆರಿಸಿಕೊಂಡ ಬಗೆ ಪ್ರಕೃತದ ಉದ್ದೇಶಕ್ಕೆ ಒಪ್ಪಿದ್ದೆ ಅಲ್ಲವೆ ಎಂದು ನೋಡಬೇಕಾಗುತ್ತದೆ.

ಒಟ್ಟಂದ ಹೇಳಹೋಗುವಲ್ಲಿ––ವಿಮರ್ಶಕನ ದಾರಿ ಹೊಣೆಯುಳ್ಳದ್ದು. ಆತ ಸಾಹಿತಿಯ ಹೊಣೆಯನ್ನು, ಜನತೆಯ ಹೊಣೆಯನ್ನು, ಒಟ್ಟು-ಸಾಹಿತ್ಯದ ಹೊಣೆಯನ್ನು ಹೊರಬಲ್ಲವನಾಗಬೇಕು. "ಇದು ನನ್ನ ಅಭಿಪ್ರಾಯ" ಎಂದು, ತನ್ನದೇ ಅಧಿಕಾರ, ತನ್ನದೇ ಶಾಸ್ತ್ರ ಸಾಧಿಸುವ ವ್ಯಕ್ತಿಯು, ವಿಮರ್ಶಕನಾಗಲಾರ. ಆತ ಸರ್ವಾಧಿಕಾರಿಯಾಗಬಹುದು.

ದಾಂಪತ್ಯದ ದೊಂಬೆ

(ಚಿತ್ರದ ಚಮತ್ಕೃತಿಯೊಂದು)

ಬರೆದವರು:— ಶ್ರೀರಂಗ

ಪಾತ್ರ ವಿವರ :

೧. ಯುವಕ
೨. ಹೆಂಡತಿ (ಅವನ ಹೆಂಡತಿ)
೩. ಶೀನು (ಅವನ ಗೆಳೆಯ)

[ಮಧ್ಯಮ ವರ್ಗದ ಒಬ್ಬ ತರುಣನ ಸಂಸಾರದ ದೃಶ್ಯ. ಒಂದು—ಅಲ್ಲ—ಒಂದೇ ಒಂದು ಕೋಣೆ. ಬಲಬದಿಯ ಗೋಡೆಗೆ ಗೃಹಪಾತ್ರೆಗಳ ರಾಶಿ ತರತರವಾಗಿ ನಿಂತಿದೆ. ಎದುರಿನ ಗೋಡೆಗೆ ಎರಡು ಗಾದಿಯ ಸುರುಳಿಗಳು ಆತಿವೆ. ಎಡಬದಿಯ ಗೋಡೆಗೆ ಪುಸ್ತಕ--ಗಂಡಸು ಹೆಂಗಸರ ಬಟ್ಟೆಗಳು-ಹಳೆಯ ಪತ್ರಿಕೆಗಳ ರಾಶಿ. ಮುಂತಾಗಿ ಒಟ್ಟಿಧಂತೆ ಬಿದ್ದಿವೆ. ಈ ಗೋಡೆಗೆ ರಂಗಭೂಮಿಯ ತುದಿಯತ್ತ ಹೊರಗೆ ಹೋಗುವ ಬಾಗಿಲು. ಇದಕ್ಕೆ ಎದುರಾಗಿ ಬಲಬದಿಯ ಗೋಡೆಯಲ್ಲಿ ರಂಗಭೂಮಿಯ ಮೇಲ್ಭಾಗಕ್ಕೆ ಒಳಗೆ ಹೋಗುವ ಬಾಗಿಲು. ತೆರೆ ಮೇಲಕ್ಕೆದ್ದಾಗ- ಬೆಳಗಿನ ೧೦ ಗಂಟೆಯ ಸಮಯ- ಎದುರಿನ ಗಾದಿಯ ಸುರುಳಿಗಳಿಗೆ ಆತುಕೊಂಡು ಎಡಬದಿಗಿದ್ದ ಚಿಕ್ಕ ಮುರುಕು ಬೆಂಚಿಗೆ ಕೈಯೂರಿ ಕೆಳಗಿದ್ದ ಜಮಖಾನೆಯ ಮೇಲೆ ಕುಳಿತ ತರುಣನ ದೃಶ್ಯ. ವಯಸ್ಸು ಸುಮಾರು ೨೮. ವೇಷ, ಗುಂಡಿಗಳಿಲ್ಲದೆ ತೊಟ್ಟ ಶರ್ಟು, ತೀಡದೆ ಉಟ್ಟ ಧೋತರ, ಬರಿ ತಲೆ. ತೆರೆ ಎದ್ದೊಡನೆ ಬಲಬದಿಯ- ಎಂದರೆ ಒಳಕ್ಕೆ ಹೋಗುವ ಬಾಗಿಲಿನಿಂದ- ಬಟ್ಟೆ ಒಗೆಯುವ ಸದ್ದು ಕೇಳಬರುವುದು. ತರುಣನು ಆ ಕಡೆ ಒಂದು ನಿಮಿಷ ದಿಟ್ಟಿಸಿ ನೋಡುವನು. ಅವನ ಎಡಗೈಯಲ್ಲಿ ಒಂದು ಹಾಳೆಯ ತುಣುಕು, ಬಲಗೈಯಲ್ಲಿ ಪೆನ್ಸಿಲ್; ಬಾಗಿಲ ಕಡೆ ನೋಡುವಾಗ ಪೆನ್ಸಿಲ್ಲನ್ನು ಕಿವಿಗೆ ಇರಿಸುವನು. ಕ್ರಮೇಣ ಅವನ ಮುಖ ಅರಳುವುದು. ಎದುರು ನೋಡುವನು. ಬಟ್ಟೆ ಒಗೆಯುವ ಸದ್ದಿಗೆ ತಾಳ ಹಿಡಿಯುವನು; ಕ್ರಮೇಣ ಗುಣುಗುಣು ನುಡಿಯತೊಡಗುವನು; ಆ ಮೇಲೆ ಗೊಣಗುತ್ತ, ತಾಳಕ್ಕೆ ತಲೆ ತೂಗುತ್ತ ಒಂದೆರಡು ನಿಮಿಷ ಹಾಳೆಯ ಮೇಲೆ ಬರೆಯುವನು. ಕೊನೆಗೆ ಅದನ್ನು ಸ್ತಬ್ಧನಾಗಿ ಮನಸ್ಸಿನಲ್ಲಿ ಓದಿಕೊಂಡು ಗಟ್ಟಿಯಾಗಿ ಹಾಡುವನು.

" ಭಾರತ ವೀರರೆ, ಮೀರುತ ದಾಸ್ಯದ,
ಸಾರಿ ಸ್ವತಂತ್ರತೆ, ಏಳಿರಿ ಏಳಿರಿ।। "

ಇವೆರಡು ಸಾಲ್ಗಳನ್ನು ನುಡಿದಾಗ ಬಲಬದಿಯ ಬಾಗಿಲಿನಿಂದ ಹೆಂಗಸು ಬರುವಳು. ಬಟ್ಟೆ ಒಗೆದು ಬಂದ ವೀರವೇಷದಲ್ಲಿದ್ದಾಳೆ. ಬಾಗಿಲಿನಲ್ಲಿ ನಿಂತು ಒಂದೇ ಸವನೆ ತರುಣನನ್ನು ದಿಟ್ಟಿಸುವಳು. ಆದರೆ ಇವನ ಲಕ್ಷ್ಯವಿಲ್ಲ. ಆವೇಶದ ಭರದಲ್ಲಿ ಆಕಾಶದ ಕಡೆ ನೋಡುತ್ತ ಗಟ್ಟಿಯಾಗಿಯೇ ನುಡಿಯ ತೊಡಗುವನು.

" ಏಳಿರಿ, ಏಳಿರಿ
ಗೆಳೆತನದಿಂದಲಿ ಬಾಳಿರಿ
ದೇಶದಿ ಶಾಂತಿಯ ತಾಳಿರಿ
ನೀಗಿ ದಡ್ಡತನ- ಬಡತನ, ವಿಶ್ವಕೆ
ದಾರಿ ತೋರುತಲಿ ಆಳಿರಿ—
ಏಳಿರಿ। ಏಳಿರಿ "

ಎನ್ನುತ್ತಲೆ ಆವೇಶದ ಮುದ್ರೆಯಿಂದ ಎದ್ದು, ಅತ್ತಿತ್ತ ನೋಡುವಾಗ ಎಡಬದಿಗೆ ಹೆಂಡತಿಯನ್ನು ಕಂಡು]

ಯುವಕ:– (ಹುಚ್ಚು ನಗೆಯಿಂದ, ಮುಚ್ಚುವ ಯತ್ನದಿಂದ) ಹೆಹೆ—(ಏನು ಮಾತನಾಡಬೇಕೆಂದು ತಿಳಿಯದೆ) "ಜೈಹಿಂಡ್" (ಎಂದು ಗಂಭೀರ ಮುದ್ರೆಯಿಂದ ನುಡಿಯುವನು).

ಹೆಂಡತಿ:– (ಉಸಿರೆಳೆದು) ಹೂಂ—. . ಹಿಂಡ್ಲಿಕ್ಕೆ ಜೈ ಬೇಕಾಗ್ತದೊ ಕೈ ಬೇಕಾಗ್ತದೊ—ಅಲ್ಲಿ ಒಳಗೆ ಬಂದು ನಾ ಒಗೆದ ಅರಿವೆ ಹಿಂಡಿದರೆ ತಿಳಿದೀತು !

ಯುವಕ:– (ಆಕಾಶದಿಂದ ನೆಲಕ್ಕೆ ಅಪ್ಪಳಿಸಿಬಿದ್ದು ನೊಂದವನಂತೆ) ಅಲ್ಲಲ್ಲ—ಇದು ನೋಡು—ನೀನು ಅಷ್ಟೊಂದು ತಾಳ ಹಿಡಿದು ಅರಿವೆ ಒಗೆಯೋದು ಕೇಳಿ ಸ್ಫೂರ್ತಿ ಬಂದಿತು ನನಗ—ಅದಕ್ಕ--

ಹೆಂಡತಿ:– (ನಡುವೆಯೆ) ಸ್ವತಃ ಸುಮ್ಮ ಕೂತು ಮಂದಿ ಮೈಮುರಿ ದುಡಿಯೋದನ್ನ ನೋಡಿದರ ನಿಮಗ ಯಾವಾಗಲೂ ಸ್ಫೂರ್ತಿ ಬರೋದು !

ಯುವಕ:– (ಮುಂದೆ ಬಂದು ಸಂತೈಸುವ ದನಿಯಲ್ಲಿ) ಇದು ನೋಡು--ಸ್ವಾತಂತ್ರ್ಯ ಸಿಕ್ಕು ಇಡಿಯ ದೇಶದ ವಾತಾವರಣಾನೇ ಬದಲಾಗೇದ . . ನಮ್ಮ ಮನೀವಳ್ಗಿನ್ನೂ ಒಂದಿಷ್ಟು ಬದಲ್ಯಾಡೋಣಲ್ಲ !

ಹೆಂಡತಿ:– (ತಿರಸ್ಕಾರದಿಂದ) ಏನು ವಾತಾಮರಣನೊ ಏನೊ ?

ಯುವಕ:– ವಾತಾ-**ಮರಣ** ಅಲ್ಲ-ವಾತಾವರಣ, atmosphere, ಹವಾ —

ಹೆಂಡತಿ:– (ನಡುವೆಯೆ) ಅಯ್ಯ! ಏನ್ನಾಲ್ಕು ಕಿಡಿಕಿ ಇದ್ದ ಮನೀ ಅನ್ನವರ್ಾಗೇ ಹವಾ ಬದಲ್ಯಾಡ್ಲಿಕ್ಕೆ ಹೊರಟಾರ ?

ಯುವಕ:– (ಮಾತು ಬದಲಾಯಿಸುವ ಯತ್ನದಲ್ಲಿ) ಈಗ ಎಷ್ಟು ಹೊಡೆಯಿತು ? (ಅತ್ತಿತ್ತ ನೋಡಿ) ಇನ್ನೊಂದು ಗಡಿಯಾರ ತಂದಿಡ್ಬೇಕು.

ಹೆಂಡತಿ:– ಇನ್ನ ಆ ನೆವಕ್ಕ ಹೊರಗ ಹೋಗೋದು ಬ್ಯಾಡ. ಇದೇ ಈಗ ನಳ ಬಂದ ಆತು.—ಹತ್ತೂವರೆ ಹೊಡೆಧಾಂಗ ಆತು.

ಯುವಕ:– (ಒಮ್ಮೆಲೆ) ಹತ್ತೂವರೆ ! ಎಲೆಲೆ ! ಇವನಿಗೆ ಹನ್ನೊಂದು ಗಂಟೆಗೆ ಬರಲಿಕ್ಕೆ ಹೇಳಿದ್ದೆ;'ಹೂಂ, ಬರೋ ಹೊತ್ತೇ ಆಯ್ತಲ್ಲ—?

ಹೆಂಡತಿ:– (ಮುಂದೆ ಬಂದು) ಮತ್ತೆ ಯಾರಿಗೆ ಬರಲಿಕ್ಕೆ ಹೇಳಿದ್ದೀರಿ ? (ಅವನು ತನ್ನನ್ನು ತಪ್ಪಿಸಲು ಅತ್ತಿತ್ತ ಏನೋ ಹುಡುಕುತ್ತಿರುವಂತೆ ನಟಿಸುವಾಗ ಹಟದಿಂದ) ಯಾರಿಗೆ ಬರ್ಲಿಕ್ಹೇಳಿದ್ರೀ– ಅಂದೆ!....ಊಟಕ್ಕೇ ಬಾ ಅಂತ ಹೇಳೀರೇನು ಮತ್ತೆ?

ಯುವಕ:– ಊಟಕ್ಕೆ ? ಛೆ-ಛೆ-ನಾ ಏನು ಹಾಂಗ ಹೇಳಿಲ್ಲ . . ನಿದಾನ — ಹಾಂಗ ಹೇಳಿದ್ದು ನನಗೆ ನೆನಪಿಲ್ಲ .... ಮತ್ತು " ಹನ್ನೊಂದು ಗಂಟೆ " ಅಂದ ಮೇಲೆ ಊಟಕ್ಕೇ ಅಂತ ತಿಳ್ಕೋ ತಾನೋ ಏನೊ ಮಹಾರಾಯ !

ಸೂಚನೆ:– (೧) ಇದರ ಎಲ್ಲ ಒಡೆತನ ಶ್ರೀಮತಿ ಶಾರದಾದೇವಿ ಜಾಗೀರದಾರ ಇವರದು.

(೨) ಈ ದೃಶ್ಯದಲ್ಲಿ ಕನಸನ್ನು ತೋರಿಸುವಾಗ ಛಾಯಾ ನಾಟ್ಯ ಇಲ್ಲವೆ ಇನ್ನಾವುದಾದರೂ ಕ್ರಮವನ್ನು ಅನುಸರಿಸುವುದು ಅತ್ಯಗತ್ಯವಾಗಿದೆ.

(೩) ಬರಹದಲ್ಲಿ ಒಡೆಯರ ಪೂರ್ವಸಮ್ಮತಿ ಇಲ್ಲದೆ ಇದನ್ನು ಆಡಲೇಕೂಡದು.

ಹೆಂಡತಿ:– (ತಿರಸ್ಕಾರದಿಂದ) ಅಯ್ಯ! ನಿಮ್ಮ ಹುಚ್ಚುತನ ನನಗ ಗೊತ್ತಿಲ್ಲ? ತಿಳೀತು . . ಊಟಕ್ಕೇ ಹೇಳೀರಿ . . ಈಗ ಹೇಳೋ ಧೈರ್ಯ ಇಲ್ದವರು ಮುಂಚೆ ಹೇಳಿರೋದು ಅಷ್ಟರಾಗೇ ಅದ. .

ಯುವಕ:– ಇಲ್ಲಿಲ್ಲ—ಆ-ನಮ್ಮ-ಈತ-ಶೀನು-ಒಬ್ಬನೇ ಬರುವನ.

ಹೆಂಡತಿ:– ಒಬ್ಬರೇ ಬರ್ಲಿ, ಕೌರವರ್ಹಾಂಗ ನೂರಾಒಬ್ರೇ ಬರ್ಲಿ.... ಮನೀವಳ್ಗ ಸಾಮೂನಿದ್ರ ನನ್ಗ ಚಿಂತಿ....

ಯುವಕ:– (ಮತ್ತೆ ಮೊದಲಿನ ಸ್ಥಳಕ್ಕೆ ಕೂತು) ಏ, ಇಲ್ಲಿ ನೋಡು ....ಅವನಿಗೆ ನಾನು ಊಟಕ್ಕೆ ಬಾ ಅಂತ್ಹೇಳಿದ್ದು ನಿಜ... ನಾವೇನು ತಿನ್ನತೀವಿ ಅದನ್ನೇ ತಿಂತಾನ ಅವ—

ಹೆಂಡತಿ:– (ನಡುವೆಯೆ) ನಾವೇನ್ತಿನ್ತೀವಿ—ಒಬ್ಬರ ಮ್ಯಾಲೊಬ್ರು ಹಲ್ಲು !

ಯುವಕ:– (ಸಂತೈಸುವ ದನಿಯಲ್ಲಿ) ಅದನ್ನೇ ಬ್ಯಾಡ ಅಂತೀನಿ.... ವಾತಾವರಣ-ಅಂದ್ರ, ಹವಾ-atmosphere ಬದಲ್ಯಾಡೋಣು ಅಂತ ಹೇಳ್ತೀನಿ....ಯಾಕ ಕಡಿದಾಡ್ಬೇಕು ಹೇಳು ನೋಡೋಣ– ಸುಖದಿಂದ ಯಾಕ ಇರ್ಬಾರ್ದು ಅಂತೀನಿ—ದೇಶಕ್ಕ ಸ್ವಾತಂತ್ರ್ಯ ಸಿಕ್ಕಿತು—

ಹೆಂಡತಿ:– (ನಡುವೆಯೆ) ಅಯ್ಯ ನಿಮ್ಮ ಸ್ವಾತಂತ್ರ್ಯ! ಎರಡೂ ಹೊತ್ತು ಅದ್ನೆ ತಿಂದು ಹೊಟ್ಟೆ ತುಂಬಿಕೋರಿ ಅಂದ್ರೆ–ನನಗೂ ಒಲೆ ಮುಂದೆ ಕೂತು ಕಣ್ಣೀರು ಸುರಿಸೋದು ತಪ್ಪಿತು....ನಿಮ್ಮ ಜೋಡಿ ಸಂಸಾರದೊಳಗ ಏನ್ನೋಡಿ ಸುಖಪಡಬೇಕೊ?

ಯುವಕ:– ಸುಖ ಪಡಿದಿದ್ರೆ–ಕಡಿದಾಡೋದು ಯಾಕೆ ಅಂತ–ಕಡೆಗೆ —ದೇಶದಾಗ ಇಷ್ಟು ಜನ ಕಡಿದಾಡ್ತಾರ—ಅದನ್ನು ನೋಡಿ ಸಮಾಧಾನ ಮಾಡಿಕೋಬೇಕು?

ಹೆಂಡತಿ:– (ಕನಲಿ) ಅಂದ್ರೆ? ನನಗೇನು ಕಡಿದಾಟೇ ಸೇರ್ತದ ಅಂತೀರೊ—ಏನು?

ಯುವಕ:– (ನಗೆಯಿಂದ ಇಲ್ಲ-ಅಹುದಲ್ಲೊ? ನಡೀ—ಹಾಂಗಾದರ ....ನೀ ನಿನ್ನ ಕೆಲಸಕ್ಕ, ನಾ ನನ್ನ ಕೆಲಸಕ್ಕೆ— (ಒಮ್ಮೆಲೆ) ಹಾಂ– ಅಹುದು ನೋಡು... ಅವರವರ ಕೆಲಸದಾಗ ಅವರು ತೊಡಗಿದರ ದೇಶದಾಗ ಜಾತಿಯ ಜಗಳ ಕೂಡ ಆಗಲಿಕ್ಕಿಲ್ಲ.

ಹೆಂಡತಿ:– ದೇಶಕ್ಕ ಯಾಕ ಬುದ್ಧೀ ಹೇಳ್ತಿರಿ? ಮೊದಲು ನೀವು ಒಂದು ಕೆಲಸ ಹಿಡೀರಿ, ಅಂದ್ರ ಮನೀವಳ್ಗಿನ ಕಡಿದಾಟ ತಪ್ಪೋದು.

ಯುವಕ:– (ಉತ್ಸಾಹದಿಂದ) ಅದರ ಕಾಳಜೀನೇ ಬಿಡು ನೀನು.. ದೇಶದ ವಾತಾವರಣನೇ—ಅಂದ್ರ atmosphere ಹವಾನೇ ಬದಲಾಗೇದ—ಕೆಲಸ ಸಿಗದೇ ಏನು?

ಹೆಂಡತಿ:– “ಒಳತು” ಅನ್ನಿರಿ....ಅಲ್ಲೀತನಕ ನನಗ ಒಳಗ ಪಲ್ಲೆ ಹೆಚ್ಚಿಕೊಡಿರಿ—ನಡೀರಿ—(ಹೊರಡುತ್ತ) ಬರ್ರಿ-ಅಂದೆ-ಲಗೂನೆ– ನಿಮ್ಮ ಗೆಳೆಯ ಶೀನೂಗ ಊಟ ಸಿಗಬೇಕಾಗಿದ್ದರೆ— (ಹೋಗುವಳು)

[ಯುವಕನು ಕೈಯಲ್ಲಿಯ ಹಾಳೆಯ ಕಡೆ ನೋಡುತ್ತ, ಏನು ಮಾಡಬೇಕೆಂದು ಅನುಮಾನಿಸುತ್ತ ನಿಂತಿರುವಾಗ ಮತ್ತೆ ಬಂದು]

ಒಳಗ ಬರ್ತೀರೊ ಇಲ್ಲೋ ಅಂದೆ!

ಯುವಕ:– (ಲಗುಬಗೆಯಿಂದ) ಬನ್ ಬನ್ ದೆ—

ಹೆಂಡತಿ:– ಮುಂದಾಗ್ರಿ, ಅಂದ್ರ ನನಗ ಖಾತ್ರಿ ಆಗ್ತದ.

[ಯುವಕನು ಒಳಗೆ ಹೋಗುವಾಗ, ಮುಖ ತಿರುವಿ ಆಕೆಯನ್ನು ನೋಡಿ, ತಟ್ಟನೆ ಒಳಕ್ಕೆ ಓಡುವನು, ಹೆಂಡತಿ ಒಂದು ನಿಮಿಷ ಅವನು ಹೋದತ್ತ ನೋಡುತ್ತ ಕ್ರಮೇಣ ಮುಗುಳ್ನಗೆ ನಗುತ್ತ, ವೇಷವನ್ನು ಸಾವರಿಸಿಕೊಳ್ಳುತ್ತ ರಂಗಭೂಮಿಯ ನಡುವಿನ ವರೆಗೆ ನಡೆದು ಬಂದು.. ಗಾದಿಯ ಸುರುಳಿಯ ಮೇಲೆ ಕೈಯಿಟ್ಟು, ಮತ್ತೊಮ್ಮೆ ಒಳಕ್ಕೆ ನೋಡಿ, ವಿಚಾರಮಗ್ನಳಂತೆಯೆ ನಿಲ್ಲುವಳು.]

[ಒಂದರೆ ನಿಮಿಷದಲ್ಲಿ ಯುವಕನು ಹೊರಗೆ ಬರುವನು. ಹೆಂಡತಿಯನ್ನು ದಿಟ್ಟಿಸಿ ನೋಡುವನು. ಆವಳು ವಿಚಾರ ಮಗ್ನಳಂತೆಯೆ ನಟಿಸಿ ಲಕ್ಷಕೊಡುವುದಿಲ್ಲ. ಯುವಕನು 'ಹಂ' ಎಂದು ಉಸಿರೆಳೆದು, ತಾನೂ ಆಕೆಯ ಕಡೆಗೆ ಲಕ್ಷ್ಯಕೊಡದೆ, ತನ್ನಷ್ಟಕ್ಕೆ ಎಂಬಂತೆ ನಡೆದು, ಬೆಂಚಿನ ಮೇಲೆ ಕುಳಿತು ಇದಿರು ನೋಡುತ್ತ—]

ಯುವಕ:– (ಆಕಾಶದ ಕಡೆ ಕಣ್ಣಿಟ್ಟು) “ಕಾಂತಾಮಣೀ ರಮಣೀ” (ಕಳ್ಳನೋಟದಿಂದ ತಟ್ಟನೆ ಹೆಂಡತಿಯನ್ನು ನೋಡಿ ಮತ್ತೆ ಮೊದಲಿನಂತೆ) “ಕಾಂತಾಮಣೀ, ರಮಣೀ! ರಮಣೀ, ಅಡುಗೇ ಮನೀ ಸುಪಾಕಿನೀ! ರಮಣೀ” (ಎಂದು ದನಿಯನ್ನು ಎಳೆಯುವನು)

ಹೆಂಡತಿ:– (ಮುಂದೆ ನಡೆದು, ಅವನ ಕಡೆ ಲಕ್ಷವಿಲ್ಲದಂತೆ ನಟಿಸಿ, ಎದುರು ನೋಡುತ್ತ) ಎಂಥಾಮನೀ। ಸುಮ್ಮನೆ। (ದನಿಗೂಡಿಸುವಳು.

ಯುವಕ:– ರಮಣಿ, ಅಡುಗೀಮನೀ।


ಹೆಂಡತಿ:– ಎದುರಲಿ ನೀರಮನೀ। ಸುಮ್ಮನೆ॥


ಯುವಕ:– ಕಾಂತಾಮಣೀ, ರಮಣಿ॥ ಪ॥


ಹೆಂಡತಿ:– ಹಸಿವಾದರೆ।




Glamorous NALINI comes to Screen after long in "Nalini Films'" GUNJAN. The Picture is distributed by 'Anil Films', Dharwar for Karnatak Circuit.


PLYWOOD
THE
Timber in its Most Flexible Form
The Karnatak Industrial & Plywood Co. Ltd.
NEAR RAILWAY STATION - DHARWAR.


IDEAL


ಐಡಿಯಲ್
ಫೋಟೋ-ಝಿಂಕೋ
ವರ್ಕ್ಸ
ಹುಬ್ಬಳ್ಳಿ
IDEAL
BLOCK MAKER
FOR HIGH-CLASS
LINE, HALFTONE, COLOUR,
BLOCKS & DESIGNS
IDEAL PHOTO-ZINCO WORKS HUBLI



ಯುವಕ:– ಬಿಸಿಯೂಟವೈ ||
ಹೆಂಡತಿ:– ತುಸು ರೇಶನವೈ—
ಯುವಕ:– ಹಾ | ರಮಣೀ || .

[ಕೊನೆಯ ಎರಡು ಸಾಲ್ಗಳನ್ನು ಅನ್ನುವಾಗ ಇಬ್ಬರೂ ನಗೆಮೊಗದಿಂದ ಕೈಕೈಹಿಡಿದು ಇದಿರಾಗಿ ನಿಂತಿರುವರು.]

[ಇದೇ ಸಮಯಕ್ಕೆ ಹೊರಬಾಗಿಲಿನಿಂದ ಇನ್ನೊಬ್ಬ ತರುಣ ಬರುವನು. ಇವರಿಬ್ಬರ ಲಕ್ಷವಿಲ್ಲ. ಹೊಸಬನು ಒಂದು ನಿಮಿಷ ಇಬ್ಬರನ್ನೂ ನೋಡಿ ಕೊನೆಗೆ–]

ಹೊಸಬ:– (ಗಟ್ಟಿಯಾಗಿ) ಓ—ಭವತಿ

[ಇಬ್ಬರೂ ನಿಂತಲ್ಲಿಯೆ ಚಕಿತರಾಗಿ ಸುಮ್ಮನಿರುವರು]

ಲಕ್ಷ್ಮಾಂ ದೇಹಿ:– (ಇಬ್ಬರೂ ತನ್ನನ್ನೇ ನೋಡಲು) ಒಂದಿಷ್ಟು ಲಕ್ಷಕೊಡಿರಿ–ನನ್ನ ಕಡೆ–ಅಂದೆ–

[ಹೆಂಡತಿ ನಾಚಿ ಹಿಂದೆ ಹಾಸಿಗೆಯ ಸುರುಳಿಯ ಕಡೆ ಸರಿದು ನಿಲ್ಲುವಳು]

ಯುವಕ:– (ಪೆಚ್ಚಾಗಿ) ಹೆ–ಹೆ–ಹಹಹ!–ಯಾವಾಗ ಬಂದೆಯೊ– ಶೀನೂ ?

ಶೀನು:– ಯಾವಾಗ ಬಂದೆ ! . . ನಾನು ಬಂದಿದ್ದಿಲ್ಲ ಅಂದ್ರ ಪೋಲೀಸರು ಬರ್ತಿದ್ದರು—

ಯುವಕ:– (ತಿಳಿಯದೆ) ಆಂ—?

ಶೀನು:– ಆಂ—ಏನಂತಿ ? ನಿಮ್ಮ ಸಂಗೀತ ಕೇಳ್ಲಿಕ್ಕೆ ಬಾಗಿಲಿನಿಂದ ರಸ್ತೆತುಂಬ ಜನ ನಿಂತಿತ್ತು . . ದಿವಸ್ಗಾಲರೆ ಇಂಥವು!.... ಇದೇ ನೋ ದಂಗೆ ಅಂತ ತಿಳಿದು ಕೊಂಡುಪೋಲೀಸರೆ ಬರಬಹುದಾಗಿತ್ತು.

ಯುವಕ:– (ನಕ್ಕು) ಹಹ!.... ಜನರದಾದರೂ ಒಳೇ ವಿಚಿತ್ರ ಸ್ವಭಾವ.... ಮನೇವಳಗ ಹಾಡಿದರೆ ಹಿಂಡುಹಿಂಡಾಗಿ ಮುಕರ್ತ್ಯಾರ ಕೇಳ್ಲಿಕ್ಕೆ....ಸ್ಟೇಜಿನ ಮ್ಯಾಲೆ ಹಾಡಿದರ ಒಬ್ಬರೂ ಕೇಳೋದಿಲ್ಲ....ಹ ?

ಶೀನು:– (ಚಕಿತನಾಗಿ) ಅಂದ್ರೇನು—ರಿಹರ್ಸಲ್ಲೇ ನಡಿಸಿದ್ದಿರೊ ಏನು–? (ಇಬ್ಬರನ್ನೂ ನೋಡುವನು).

ಯುವಕ:– (ಹೆಂಡತಿಯ ಕಡೆ ನೋಡುತ್ತ) ಏನ ನಡಿಸಿದ್ದೇವೆ? ನಿನಗ ನೆನಪ ಅದ ಏನು?

ಹೆಂಡತಿ:– (ನಾಚಿಕೆಯಿಂದ) ಸಾಕು ತಗೀರಿ! (ಬೆಂಚದ ಕಡೆ ನಡೆಯುತ್ತ) ಬಂದವರಿಗೆ ‘ಕೂಡಿರಿ’ ಸಹಿತ ಅನ್ನೋ ಹಾಂಗಿಲ್ಲ! (ಬೆಂಚನ್ನು ಎತ್ತುವವಳಂತೆ ಕೈಹಚ್ಚುವಳು).

ಯುವಕ:– (ಲಗುಬಗೆಯಿಂದ ನಡೆದು, ತಾನೇ ಅದನ್ನೆತ್ತಿ ರಂಗಭೂಮಿಯ ಮಧ್ಯದಲ್ಲಿ ಇಡುತ್ತ) ‘ಕೂಡು’ ಸಹಿತ ಅಂದಿಲ್ಲ, ಅಂದ್ರೆ? ಕೂಡ್ಲಿಕ್ಕೆ ಬಂದಿದ್ದರೆ ತಾವೇ ಕೂಡ್ತಾರ; ಇಲ್ಲಾ ಅಂದ್ರ ನಾವು ಹೇಳಿದ್ರೂ ಕೂಡೋದಿಲ್ಲ, ಯಾಕೊ? (ಶೀನೂಗೆ ಕೇಳಿ–ತಾನೇ ಮೊದಲು ಕುಳಿತುಕೊಂಡು) ಹಂ–ಕೂಡಪ!

ಹೆಂಡತಿ:– (ಒಳಬಾಗಿಲಿಗೆ ನಿಂತು) ಚಹ ತಂದ್ಕೊಡ್ತೇನಿ: (ಒಳಗೆ ಹೋಗುವಳು).

> ಪ್ರೊ. ರಂಗಾಚಾರ್ಯ ಜಾಗಿರದಾರರು ಕರ್ನಾಟಕದ ಇಂದಿನ ಸಮಾಜದಲ್ಲಿಯ ಅರ್ಥರಹಿತ ರೀತಿನೀತಿಗಳನ್ನು ಗಾಳಿಗೆ ಹಿಡಿಯುವದಕ್ಕೇ ಲೇಖನಿ ಹಿಡಿದವರು. ಸಮಾಜದ ಮುಖಕ್ಕೆ ಕನ್ನಡಿ–ಅಥವಾ ಭೂತಕನ್ನಡಿ– ಹಿಡಿದು ಅದು ತನ್ನ ವಿಕೃತಿಯನ್ನು ಕಂಡು ತಾನೇ ನಗುವಂತೆ ಮತ್ತು ಬೇಕೆನಿಸಿದರೆ ತನ್ನನ್ನು ತಿದ್ದಿಕೊಳ್ಳುವಂತೆ ಮಾಡಲು ಅವರಿಗೆ ಬೇರೆಲ್ಲ ಸಾಹಿತ್ಯ ಶೈಲಿಗಳಿಗಿಂತ ನಾಟಕ ಶೈಲಿಯಲ್ಲೆ ಹೆಚ್ಚು ಸಾಫಲ್ಯದೊರಕಿದೆ. ಇಲ್ಲಿ ಸ್ತ್ರೀಯ ತಾಯ್ತನ ಮತ್ತು ಪುರುಷನ ಕಾಮುಕತನಗಳನ್ನು ಅವರು ಒಳ್ಳೆ ಮಾರ್ಮಿಕವಾಗಿ ಚಿತ್ರಿಸಿದ್ದಾರೆ.

[ಯುವಕ ವೈಭವಯುಕ್ತ ಮುಖಮುದ್ರೆಯಿಂದ ಶೀನೂನನ್ನು ನೋಡುವನು. ಶೀನೂ– ನಿರಾಶೆಯ ಕಳೆಯಿಂದ ಉಸುರ್ಗರೆಯುವನು. ಏಳುವನು.. ಎದ್ದು ಅತ್ತಿತ್ತ ವಿಚಾರಮಗ್ನನಂತೆ ತಿರುಗಾಡುವನು.. ಯುವಕನು ಏನೂ ತಿಳಿಯದೆ ತುಸು ಗಾಬರಿಯ ಮುಖದಿಂದ ಅವನನ್ನು ದಿಟ್ಟಿಸುವನು.]

ಶೀನು:– (ಯುವಕನಿಗೆ ಇದಿರಾಗಿ ಒಮ್ಮೆಲೆ ತಡೆದು ನಿಂತು) ನಿನ್ನ ಸುಖ ನೋಡಿ ನನಗ ದುಃಖ ಆಗ್ತದ....

ಯುವಕ:– (ದಿಟ್ಟಿಸಿ ನೋಡುತ್ತ) ಭಲೆ!.... ಒಳ್ಳೆಯ ಗೆಳೆಯ!.... (ಎದ್ದು ಬಂದು ಅವನ ಭುಜದ ಮೇಲೆ ಕೈಯಿಟ್ಟು) ಯಾಕೋ? (ಸಹಾನುಭೂತಿಯ ದನಿಯಲ್ಲಿ) ಏನಾಗಿದೆಯೋ, ಶೀನೂ?

ಶೀನು:– (ವಿಷಾದದಿಂದ) ನಮ್ಮ ಅಗಸ್ಟ ೧೫ ಆಯ್ತು! (ಉಸುರ್ಗರೆಯವನು).

ಯುವಕ:– (ಆಶ್ಚರ್ಯದ ದನಿಯಲ್ಲಿ) ಅಗಸ್ಟ ೧೫ ! ಅದೊಂದು ರೋಗದ ಹೆಸರು ಅಂತ ಹೇಳಿಧಾಂಗ ಹೇಳ್ತೀಯಲ್ಲೊ !

ಶೀನು:– (ದ್ವೇಷದ ದನಿಯಲ್ಲಿ) ರೋಗ ಅಲ್ಲ ಬರಿಯ, ಪಿಡುಗು, ಪಿಡುಗು ಅದು !

ಯುವಕ:– (ತಿಳಿಯದ್ದಕ್ಕೆ ತುಸು ಕನಲಿದ ದನಿಯಲ್ಲಿ) ಏನೊ ಅದು ? ಅಗಸ್ಟ ೧೫ ಅಂತೀ, ಪಿಡುಗು ಅಂತಿ !

ಶೀನು:– (ಅಣಕಿನ ದನಿಯಲ್ಲಿ) ಸ್ವಾತಂತ್ರ್ಯ ! ಅಂದ್ರೆ ಬ್ರಿಟಿರು ಬಿಡಲಿಲ್ಲ, ಮುಸಲ್ಮಾನರು ಉಳಿಯಲಿಲ್ಲ !

ಯುವಕ:– (ನಿರಾಶೆಯ ದನಿಯಲ್ಲಿ)ಥೂ! ನಿನ್ನ! ಏನಂತಾನೊ ಅಂತ್ಮಾಡಿದ್ದೆ.... ಇಡಿಯ ದೇಶಕ್ಕೆ ಆದದ್ದಕ್ಕ ನೀ ಯಾಕೆ ಖಾಸಗೀ ಸೂತಕ ಬಂದವರ್ಹಾಂಗ ಮುಖ ಮಾಡೀದಿ? ಥೂ! ಹಹ!

ಶೀನು:– (ಸಂತಾಪದಿಂದ) ದೇಶಕ್ಕೆ ಬಂದ ಪಿಡುಗು ನನಗೂ ಬಂದಿದೆ....ನಾನೂ ಸ್ವತಂತ್ರ ಆದೆ ! (ತಿರಸ್ಕಾರದ ದನಿಯಲ್ಲಿ) ಸ್ವತಂತ್ರ !

ಯುವಕ:– (ಅವನ ಕೈಹಿಡಿದು ಎಳೆದು ಬೆಂಚದ ಮೇಲೆ ಕುಳ್ಳಿರಿಸುತ್ತ) ಒಂದಿಷ್ಟು ಬುದ್ಧಿಗೆ ಬಂದ ಬೆವರು ಆರಿಸಿಕೊ....ಚಹ ಕುಡಿ....ಆ ಮ್ಯಾಲೆ ನಿನ್ನ ಸ್ವಾತಂತ್ರ್ಯದ ಧ್ವಜ ನಿಲ್ಲಿಸೋಣ....

ಶೀನು:– (ತಿರಸ್ಕಾರದಿಂದ ನಕ್ಕು) ನನ್ನ ಸ್ವಾತಂತ್ರ್ಯದ ಧ್ವಜ ! ಅಂದ್ರ—ಅಡುಗೆಮನೆ !

ಯುವಕ:– (ಒಮ್ಮೆಲೆ ಸ್ಮರಣೆಗೆ ಬಂದು) ಹಂ––ಹಂ....ಈಗ ನನ್ನ ಸುಖ ಅಂದೆ ನೋಡು––ಅದರ ಧ್ವಜಾನೂ ಅಡುಗೇಮನೀನೆ.... ನಿನ್ನೆ ರಾತ್ರಿ ನೀ ಹೇಳಿದಿ, ಈ ಹೊತ್ತು ಇಲ್ಲಿಯೆ ಊಟಕ್ಕ ಬರುವವ ಅಂತ....ನಾನು ಆಗಲಿ ಅಂದೆ ನಿನಗೆ, ‘ದೇವರೇ ಕಾಯ್ಬೇಕು’ ಅಂದೆ ಮನಸಿನೊಳಗೆ....ಅಂತೂ (ಮೆಲ್ಲಗೆ) ಆಕೆಗೆ ಹೇಳಲೇ ಇಲ್ಲ....ಈಗ ಮುಂಜಾನೆ ಹೇಳ್ದೆ....‘ಮನೀವಳ್ಗ ಸಾಮಾನೇ ಇಲ್ಲ’ ಅಂದಳು; ‘ಅಡಗೀಮನೆವಳಗ ಪಲ್ಲೆ ಹೆಚ್ಚಿರಿ ಬಂದು’ ಅಂದಳು.... (ಅಭಿಮಾನದಿಂದ) ಶೀನೂ, ಶೀನೂ, ಹೇಳ್ತೇನಿ ನಿನಗ, ಅಡಗೀಮನೀಗೆ ಹೋಗಿ ನೋಡಿದರೆ, ಎಲ್ಲಾ ಅಡಿಗೆ ಚೊಕ್ಕ ತಯಾರೇ ಆಗಿತ್ತೊ !

ಶೀನು:– (ಆಶ್ಚರ್ಯದಿಂದ) ಅಂದ್ರ? ನಾನೇ ಹೇಳಿದ್ನಲ್ಲ ನಿಮ್ಮನೀಯವರಿಗೆ?

ಯುವಕ:– ಏನಂದೆ? ನೀ ಹೇಳಿದ್ದಿಯಾ? ಆಕೆಗೆ? ಮತ್ತೆ ನನಗೆ–

ಶೀನು:– (ಒಮ್ಮೆಲೆ ಹೊಳೆದು ಗಟ್ಟಿಯಾಗಿ ನಕ್ಕು) ಹಹಹ! ನಿನಗೆ? ನಿನಗ ಹೇಳಿದ್ರ ಊಟ ಕಾಣೋದು ಅಷ್ಟರಾಗೆ ಇತ್ತು. ಅದಕೇ ಮೊದಲು ಇಲ್ಲಿ ಬಂದು ಅವರಿಗೆ ಹೇಳಿದೆ, ಮುಂದೆ ಹಾದಿಯೊಳಗ ನೀ ಭೆಟ್ಟಿ ಆದಿ ಅಂತ ನಿನಗ ಹೇಳಿದೆ–ಹಹ!

ಯುವಕ:– (ಸಿಟ್ಟಿನಿಂದ) ಹುಂ! ಇದೂ ಅಗಸ್ಟ ೧೫ಏ ಏನು?.... ನನ್ನ ಮನೆಯೊಳಗೆ ಕಾಯಿದೇಕ್ಕ ನಾ ಸ್ವತಂತ್ರ; ಆಕೆ ಮಾತ್ರ ಬ್ರಿಟಿಶರ ಹಾಂಗ ಮ್ಯಾನೇಜರ!

ಶೀನು:– ಇಲ್ಲೇ ಬಂದರು.... ಏನು ಹೇಳೋದದ ಹೇಳು.

[ಹೆಂಡತಿ ಚಹದ ಬಟ್ಟಲನ್ನು ತೆಗೆದುಕೊಂಡು ಬರುವಳು]

ಯುವಕ:– (ಸಿಟ್ಟಿನ ದನಿಯಲ್ಲಿ) ಏ–ನನ್ ಕಪ್ ಕೆಳಗಿಡು.... ಮೊದಲು ನನಗ ಉತ್ತರ ಕೊಡು.... ಶೀನೂ ಊಟಕ್ಕ ಬರೋದು ನಿನಗ ಗೊತ್ತಿತ್ತೇನು? (ತಲೆ ತೂಗುವಳು). ನಾನು ಹೇಳೋದ್ಕಿಂತ ಮುಂಚೇ ಗೊತ್ತಿತ್ತೆ? (ಮತ್ತೆ ತಲೆತೂಗುವಳು) . ಮೂರನೆಯ ಸಲ ಕೇಳ್ತಿನಿ– ಕಾಯಾ ವಾಚಾ ಮನಸಾ ಹೇಳು ಗೊತ್ತಿತ್ತೇನು?

ಹೆಂಡತಿ:– (ಗಟ್ಟಿಯಾಗಿ) ಹೌದು....

ಯುವಕ:– ಮೊದಲೇ– ಅಂದ್ರ ನನ್ನ ಸುಮ್ಸುಮ್ನೆ–ಅಲ್ಲ–

ಹೆಂಡತಿ:– ನೀವೇ ಈಗ ಹೇಳಲಿಲ್ಲ– ನಂನಮ್ಮ ಕೆಲಸ ನಾವು ಮಾಡಿದರ ಜಗಳೇ ಇಲ್ಲ ಅಂತ–ಅಡಿಗೇ ಊಟದ ಕೆಲಸದಾಗ ನಿಮಗ ಯಾಕ ಗೊತ್ತಾಗಬೇಕು?

ಯುವಕ:– (ಶೀನೂಗೆ) ಅಂತೂ ಸ್ವತಂತ್ರ ಆದೆಯಪ– ಮುಂದೀ ಮನೀವಳ್ಗ.

ಹೆಂಡತಿ:– ಅಯ್ಯ! ನಿಮಗೂ ಹೇಳಿದರೇನು? (ಶೀನೂನನ್ನ ನೋಡುವಳು) .

ಯುವಕ:– ಅದನ್ನೇ ಹೇಳ್ತಿದ್ದ ಕೆಟ್ಟ ಮುಖ ಮಾಡಿ!

ಹೆಂಡತಿ:– (ಕನಿಕರದಿಂದ) ಹೆಂಡತಿ ಬಿಟ್ಟು ಹೋದ ಮ್ಯಾಲೆ ಕೆಟ್ಟ ಮುಖ ಬ್ಯಾಡ ಅಂದ್ರ—

ಯುವಕ:– (ಒಮ್ಮೆಲೆ) ಹೆಂಡತಿ ಬಿಟ್ಟು ಹೋದ ಮ್ಯಾಲೆ! ಅಂದ್ರ ನೀ ನನ್ನ ಬಿಟ್ಟು ಹೋಗುವಾಕೆ—

ಶೀನು:– (ಒಮ್ಮೆಲೆ ನಡುವೆಯೆ) ಏ–ಮಹಾರಾಯಾ! ನನ್ನ ಹೆಂಡತಿ ನನ್ನ ಬಿಟ್ಟು ಹೋದಳು....ಅದನ್ನ ಹೇಳ್ತಾರ ಅವರು.

ಯುವಕ:– ಬಿಟ್ಟು ಹೋದಳು! ಸಣ್ಣ ಕೂಸೇನು ನೀನು ನಿನ್ನ ಬಿಟ್ಟು ಹೋದರ ಕೆಟ್ಟ ಮುಖ ಮಾಡಲಿಕ್ಕೆ? ಹೋದಳೆಲ್ಲಿ? ನೀನೂ ಹೋಗಬೇಕಾಗಿತ್ತು ಆಕೆಯ ಜೋಡಿ!

ಹೆಂಡತಿ:– (ತಿರಸ್ಕಾರದಿಂದ ನಕ್ಕು) ಅಯ್ಯ! ನನ್ನ ಕರ್ಮ! 'ಹೆಂಡತಿ ಬಿಟ್ಟಳು' ಅಂದ್ರ ಸಹಿತ ಇವರಿಗೆ ಅರ್ಥ ಆಗೋದಿಲ್ಲ.... ಚಹ ಕುಡೀರಿ—ಆರ್‍ತದ.

[ಇಬ್ಬರೂ ಚಹದ ಕಡೆ ನೋಡುತ್ತ ಮುಖ ಕೆಳಗೆ ಮಾಡಿ ಚಹ ಕುಡಿಯುವರು. ಅಲ್ಲಿಯ ವರೆಗೆ ಸ್ತಬ್ಧ]

ಯುವಕ:– (ಚಹ ಮುಗಿಸಿ, ತನ್ನಷ್ಟಕ್ಕೆ ಎಂಬಂತೆ) ಹಂ..... ಹೀಂಗಾಯ್ತು–ಅಂತೀಯಾ?

[ಶೀನು ಚಹ ಮುಗಿಸಿ ಕಪ್ಪನ್ನು ಬದಿಗೆ ಸರಿಸಿಟ್ಟು ಸುಮ್ಮನಿರುವನು]

ಹೆಂಡತಿ:– ([illegible]) ಹಣೆಯೊಳಗ ಬರೆದಿಲ್ಲ ಸುಖ!

ಯುವಕ:– (ಸಿಟ್ಟಿನಿಂದ) ಅಂದ್ರೆ? ಇವನ ಹಣೆಯೊಳಗೆ ಬರೆದಿದೆ ಅಂತೀ ಏನು?

ಹೆಂಡತಿ:– ಯಾಕೆ ಬರೆದಿರಬಾರದು?

ಯುವಕ:– ಇವನ ಹಣೆಯೊಳಗೆ ಬರೆದಿದ್ದರೆ ಹಣೆಗೆ ಹಣೆ ಗಟ್ಟಿಸಿ ಆಕೆಯ ಹಣೆಯೊಳಗೂ ಮೂಡ್ತಿತ್ತು.

ಹೆಂಡತಿ:– (ಅಸಹ್ಯದಿಂದ) ಸಾಕು.... ನಿಮ್ಮ ನಾಲಗೆಗಂತೂ ತಾಳ ಇಲ್ಲ, ಮೇಳ ಇಲ್ಲ (ಎನ್ನುತ್ತ ಒಳಗೆ ಹೋಗುವಳು).

ಯುವಕ:– (ಶೀನೂನನ್ನ ನೋಡಿ) ಥೂ! ನಿನ ಕೈಲಾಗದ! ಹೆಂಡತೀನ್ನ ಬಿಟ್ಟೆ ಅಂತ ಹೇಳ್ಬಾರ್ದೆ? 'ಹೆಂಡತೀನೆ ಬಿಟ್ಟಳು' ಅಂತ ಹೇಳ್ತದ ಗಂಡಸು!

ಶೀನು:– (ಒಳಬಾಗಿಲ ಕಡೆ ನೋಡುತ್ತ) ನಾನೇ ಬಿಟ್ಟೇನ್ಯೋ.... ಇದ್ದ ಮಾತು ಹೇಳೋದಂದ್ರೆ ನಾನೇ ಆಕೀನ್ನ ಹೊರಗ ಹಾಕೀನಿ.... ಆದ್ರೆ ನಿನ್ಹೇಂಡ್ತೀ ಮುಂದ ಹಾಂಗ ಹೇಳಿದ್ದರ 'ಊಟಕ್ಕ ಬಾ' ಅಂತಿದ್ದರ?

ಯುವಕ:– (ಉತ್ಸಾಹದಿಂದ) ನೀನೇ ಹೊರಗ ಹಾಕೀದಿಲ್ಲೊ? ನೀನೇ– ಅಹುದಲ್ಲೊ? ಕೈ ತಾ ಇಲ್ಲಿ (ಕೈ ಕುಲುಕುವನು). ಇನ್ನ ಮ್ಯಾಲೆ– ಮುಂದಿನ ಗೊತ್ತುವಳಿ.... ಅಲ್ಲೊ–, ಈ ಹುಚ್ಚುತನ ಯಾಕೆ ಮಾಡಿದಿ?

ಶೀನು:– (ಒಮ್ಮೆಲೆ ಎದ್ದು ಯುವಕನ ಕಡೆ ಬೆನ್ನುಮಾಡಿ, ಬೆನ್ನಿಗೆ ಕೈಕಟ್ಟಿ ನಿಲ್ಲುವನು). ಹುಚ್ಚುತನ! (ಯುವಕನ ಕಡೆ ಮುಖ ತಿರುವಿ) ಹುಚ್ಚುತನ ಅನ್ನುವೆಯಲ್ಲ? ಹೆಂಡತಿಯನ್ನ ಯಾಕೆ ಬಿಟ್ಟೆ ಅಂತ? (ಮೆಲ್ಲಗೆ ಅತ್ತಿತ್ತ ಹೆಜ್ಜೆಗಳನ್ನಿಡುತ್ತ ಯುವಕನನ್ನು ನೋಡದೆಯೆ ಮಾತನಾಡುವನು). ಯಾಕೆ ಬಿಟ್ಟೆ? ಹೀಗೆ ಪ್ರಶ್ನೆ ಕೇಳೋದೇ ಹುಚ್ಚುತನ! ಸ್ವತಃ ಮಾಡಿಕೊಂಡದ್ದಲ್ಲ, ಮನೆಯವರು ಕಟ್ಟಿದ್ದು.... ನಾನಾಗಿಯೇ ಕೈಹಿಡಿದಿದ್ದರೆ, ನಾನು ಯಾಕೆ ಕೈ ಬಿಟ್ಟೆ ಅನ್ನಬಹುದು.... ತಿಳಿಯುವ ಮುಂಚೆ ನನ್ನ ಆ ಕೈಯಲ್ಲಿ ಇಟ್ಟರು.... ಈಗ ತಿಳಿಯೋದು ನನಗೆ, ಕೈ ತಕ್ಕೊಂಡೆ.... ಯಾಕೆ ಬಿಟ್ಟೆ ಅಂತ?.... ಬುದ್ಧಿಗೆ ಬುದ್ಧಿ ಸಮ ಇಲ್ಲ, ವಿಚಾರಕ್ಕೆ ವಿಚಾರ ಸಮ ಇಲ್ಲ, ಮಾತಿಗೆ ಮಾತು ಮಾತು ಸಮ ಇಲ್ಲ; ಹೊಂದಿಕೆ ಆಗೋದು ಹೇಗೆ? 'ಸ್ವಾತಂತ್ರ್ಯ ಸಿಕ್ಕಿತು' ಅಂತ ಹೇಳಿದ ದಿವಸ ಸಿಗದೇ ಏನು? ಅದೇನು ಕಂಟ್ರೋಲಿನ ಸಾಮಾನೇನು ಅಂತ ಅಂದಳು. (ಯುವಕನನ್ನು ದಿಟ್ಟಿಸಿ ನೋಡಿ) ತಿಳಿತೇನೂ–? ಆಗಿಂದಾಗೇ ಹೊರಗೆ ಹಾಕಿಬಿಟ್ಟೆ ಆಕೆನ್ನ....

ಯುವಕ:– (ಅವನನ್ನು ದಿಟ್ಟಿಸುತ್ತ) ಹುಂ–. . 'ಹೊರಗೆಹಾಕಿದೆ' ಅಂತ ದನಿಯೊಳಗ ಆವೇಶ ಇದೆ....ಅಲ್ಲೊ, ಇಷ್ಟು ಹುರುಪಿನಿಂದ ಹೆಂಡತೀನ್ನ ಬಿಟ್ಟವ ಮುಖ ಯಾಕೆ ಕೆಟ್ಟ ಮಾಡೀದಿಯೊ ಮತ್ತೆ?

ಶೀನು:– (ಕೈಚಲ್ಲಿ) ಮತ್ತೊಬ್ಬಾಕೀನ್ನ ಮದುವೆ ಆಗ್ಲಿಕ್ಕೆ ಬರೋದಿಲ್ಲಲ್ಲ—ಎಂಬ ಸಂಕಟಕ್ಕಾಗಿ...(ಎನ್ನುತ್ತ ಕುಳಿತುಕೊಳ್ಳುವನು).

ಯುವಕ:– (ವಿಚಾರಮಗ್ನನಾದವನಂತೆ) ಹುಂ....ಇದೂ ಒಂದು ಸಮಸ್ಯೆಯ ನಾಟಕಾನೇ ಆಯ್ತು–ಉ–ಊ.

ಹೆಂಡತಿ:– (ಒಳಬಾಗಿಲಿನಿಂದ ಹಣಿಕಿ ಹಾಕಿ) ಊಟಕ್ಕೆ ಏಳ್ತೀರಾ ಇನ್ನ?

[ಇಬ್ಬರೂ ಕನಸಿನಲ್ಲಿ ಎಚ್ಚೆತ್ತವರಂತೆ ಆ ಕಡೆ ಮುಖ ತಿರುಗಿಸುವರು.]

[ಎರಡು ನಿಮಿಷ ರಂಗಭೂಮಿಯಲ್ಲಿ ಕತ್ತಲೆ-ಕೆಲವು ಕಾಲ ಗತಿಸಿದೆ ಎಂದು ಸೂಚಿಸಲು ಮತ್ತೆ ಬೆಳಕು ಬಂದಾಗ ಊಟ ಮುಗಿದು-ಮೂವರೂ ರಂಗಸ್ಥಲದಲ್ಲಿ ಕುಳಿತಿದ್ದಾರೆ. ಶೀನೂ ಕೈಯಲ್ಲಿ ವೃತ್ತಪತ್ರವಿದೆ. ಯುವಕನು ಎಲೆ-ಅಡಿಕೆ ತಿನ್ನುತ್ತಲಿದ್ದಾನೆ. ತುಸು ದೂರದಲ್ಲಿ ಹೆಂಡತಿ ಕುಳಿತಿದ್ದಾಳೆ. ಕೈಯಲ್ಲಿ ಹೆಣಿಗೆಯನ್ನು ಬಟ್ಟೆಯನ್ನು ಹಿಡಿದುಕೊಂಡು ಕುಳಿತಿದ್ದಾಳೆ. ಎಲ್ಲರೂ ತಂತಮ್ಮಷ್ಟಕ್ಕೆಯೆ ತೊಡಗಿದ್ದಾರೆ. ಒಂದೆರಡು ನಿಮಿಷಗಳ ತರುವಾಯ-]

ಯುವಕ:- ಅಂತೂ, ಶೀನೂ, ಸ್ವಾತಂತ್ರ್ಯದಿವಸದ ಮುಹೂರ್ತದೊಳಗೇ ಸ್ವತಂತ್ರ ಆದಿ ಅನ್ನ—

ಶೀನು:- ಅದಕ್ಕೆ ಹೇಳಿದೆನಲ್ಲ, ಇನ್ನ ಅಡುಗೇಮನೀನೇ ನಮ್ಮ ಧ್ವಜ ಅಂತ—

ಹೆಂಡತಿ:- ಅದ್ಯಾಕ? ಸದ್ಯಕ್ಕಂತೂ ನಮ್ಮಲ್ಲೇ ಊಟಕ್ಕ ಬರ್‍ರಿ ಅಂತ ಹೇಳ್ಯಾರಲ್ಲ— ?

ಶೀನು:- (ನಡುವೆಯೆ) ಛೆ! ನಿಮಗೆ ಎಷ್ಟು ದಿವಸ ತ್ರಾಸ! ನಮ್ಮ ಹಾಡು ನಮಗಿರಲಿ.

ಹೆಂಡತಿ:- ಎಲ್ಲಾರದೂ ಒಂದೇ ಹಾಡು.

ಯುವಕ:- ಯಾವುದೂಊ?

ಹೆಂಡತಿ:- ಯಾವುದಂದ್ರೆ-?

ಪ್ರಕೃತಿ ಪುರುಷ ಇದು ಜೋಡಿ ||
ನಿರ್ಗುಣನಾಗಿಹ ನಿಷ್ಕ್ರಿಯನಾಗಿಹ |
ಪರಾವಲಂಬಕನಾಗಿಹ ಪುರುಷನು |
ವಿಶ್ವದ ರಂಗದಿ ಪ್ರಕೃತಿಯ ಸಂಗದಿ |
ನಿಶ್ವಾಸಿಸುವನು ಜನ್ಮವ ಬೇಡಿ ||

[ಹಾಡು ಮುಗಿಸುವಷ್ಟರಲ್ಲಿ ಮಿಕ್ಕ ಇಬ್ಬರೂ ಒರಗಿಕೊಂಡಿದ್ದಾರೆ. ಹೆಂಡತಿ ಅದನ್ನು ನೋಡಿ ಕೊನೆಯ ಸಾಲಿಗೆ ದನಿಯನ್ನು ಇಳಿಸುತ್ತ ಮೆಲ್ಲಗೆ ಸಾವರಿಸಿಕೊಂಡು ಏಳುವಳು. ಅವರನ್ನು ದಿಟ್ಟಿಸಿ ಒಳಬಾಗಿಲಿನ ಕಡೆ ನಡೆಯುತ್ತ]

ಹೆಂಡತಿ:- ಗಂಡಸು! ಹೆಂಗಸು! ಎಲ್ಲಾದರೂ ಒಂದೇಏ ಹಾಡು (ಎನ್ನುತ್ತ ಸದ್ದುಮಾಡದೆ ಹೋಗುವಳು).

[ಒಂದು ನಿಮಿಷ ನಿಶ್ಶಬ್ದತೆ. ನಟರಿಗಾಗಿ ಒಂದು ಸೂಚನೆ. ಇನ್ನು ಕೆಲಹೊತ್ತು ನಡೆಯುವ ದೃಶ್ಯ ಯುವಕ ಮತ್ತು ಶೀನೂ ಇವರ ಕನಸು. ಆದ್ದರಿಂದ ಅದು-ಕನಸು- ಮುಗಿಯಿತೆಂಬ ಸೂಚನೆ ಬರುವ ವರೆಗೆ ಯುವಕ ಮತ್ತು ಶೀನೂ ತಂತಮ್ಮ ಮಾತನಾಡುವಾಗ ಮಾತ್ರ ಕಣ್ದೆರೆದು, ಇನ್ನೊಬ್ಬನ ಕಡೆ ನೋಡದೆ ಮಾತು ಮುಗಿದ ಕೂಡಲೆ ಕಣ್ಮುಚ್ಚಬೇಕು. ಹೆಂಡತಿ ಮಾತ್ರ ಈ ಕನಸಿನಲ್ಲಿ ಯಾವಾಗಲೂ ಕಣ್ದೆರೆದೇ ಪ್ರವೇಶಿಸುವಳು- ಆದರೆ ಆಕೆಯೂ ಬೇರೆ ಯಾರನ್ನೂ ನೋಡುವುದಿಲ್ಲ.]

ಯುವಕ:- (ವಿಚಾರಪರನ ದನಿಯಲ್ಲಿ) ಮೊದಲೇ ಆಕೆಗೆ ಹೇಳಿದ್ದ! ಹೆಂಡತಿಯನ್ನು ಬಿಡಲು ಉತ್ಸಾಹ! ಇನ್ನೊಬ್ಬಾಕೆಯನ್ನು ಮದುವೆಯಾಗಲು ಶಕ್ಯವಿಲ್ಲ ಎಂದು ನಿರುತ್ಸಾಹ!....ಹಂ.... ಕಳ್ಳ! ಠಕ್ಕ!.... ಅವನನ್ನ ಕಂಡು ಮಾತಾಡಿಸಿ ಇದರ ಗೂಢ ಏನಂಬೋದನ್ನ ನೋಡಿಕೊಂಡೇ ಬರ್‍ತೀನಿ.... (ಮತ್ತೆ ಕಣ್ಮುಚ್ಚಿ ಒರಗಿಕೊಳ್ಳುವನು).

ಶೀನು:- (ಒರಗಿಕೊಂಡಲ್ಲಿಯೆ ಎದ್ದು ಕುಳಿತು, ಕಳ್ಳದನಿಯಲ್ಲಿ) ಶ್‌ಶ್! ಕಮಲಾ-ಕಮಲಾ-?

ಹೆಂಡತಿ:- (ಕನಸಿನಲ್ಲಿಯಂತೆ, ಹೆಳ್ಳಿಯ ಮೇಲೆ ಹಜ್ಜೆಯನ್ನಿಡುತ್ತ, ಆಕಾಶದತ್ತ ದಿಟ್ಟಿಸುತ್ತ) ಯಾರು? ಶೀನೂ!

ಶೀನು:- (ಅತ್ಯಂತ ಉತ್ಸಾಹದ ದನಿಯಲ್ಲಿ) ಶೀನು! ಅಂದ್ರೆ- ಇವ ಮನೆಯಲ್ಲಿಲ್ಲ ಅಂದಾಂಗ ಆಯ್ತು.

ಹೆಂಡತಿ:- ಯಾರು? ಅವರು ಈಗ ಬರ್‍ತಾರ.... ಇಲ್ಲಿದ್ರೇನಾಯ್ತು-ಕೂಡಲ್ಲ.

ಶೀನು:- ಅವ ಇದ್ದಾಗ ನೀನು 'ಶೀನು' ಅಂತ ಕರೆದು ಸಲುಗೆ ತೋರಿಸೋದಿಲ್ಲ, ಅದಕ್ಕಂದೆ.

ಹೆಂಡತಿ:- ಅಂದ್ರೇನು? ಅವರಿಗೇನು ಗೊತ್ತಿಲ್ಲ- ಸಣ್ಣವರಿದ್ದಾಗ ನಾನೂ ನೀನೂ ಕೂಡಿ ಬೆಳೆದವರು ಅಂತ-?

ಶೀನು:- (ಆಸೆಯ ದನಿಯಲ್ಲಿ) ಕಮಲಾ, ಕಮಲಾ, ಈಗ ಅದನ್ನೇ ಕೇಳ್ಲಿಕ್ಕೆ ಬಂದೀನಿ ನಾನು.

ಹೆಂಡತಿ:- ಅಷ್ಟು ಯಾಕೆ ಸಂಕೋಚ ಅದಕ್ಕೆ.... ನಿನಗೆ ಯಾರು ಬ್ಯಾಡಾ ಅಂದ್ರು-?

ಶೀನು:- (ಉತ್ಸಾಹದಿಂದ) ಇಂದಿನಿಂದ ನಾ ಸ್ವತಂತ್ರ ಅದೆ-

ಹೆಂಡತಿ:- ಏನು?

ಶೀನು:- (ಉತ್ಸಾಹದಿಂದ) ಕಮಲಾ, ಸ್ವತಂತ್ರ ಆದೆ; ಹೆಂಡತಿ ಬಿಟ್ಟು ಹೋದಳು!

ಹೆಂಡತಿ:- (ನಗೆಯಿಂದ, ಅವನು ತನ್ನ ಕೈ ಹಿಡಿದಿರುವನೆಂಬಂತೆ ನಟಿಸಿ) ಅಯ್ಯ! ಇಷ್ಯಾಕೆ ನಡಗತದೆ ನಿನ್ನ ಕೈ? ಗಂಡನ್ನ ಹೆಂಡತಿ ಬಿಟ್ಟರೂ ಗಂಡಸಿಗೆ ಹೆಂಗಸು ಬಿಡೋದಿಲ್ಲ, ಶೀನೂ....

ಶೀನು:- (ತಪ್ಪು ಒಪ್ಪಿಕೊಳ್ಳುವ ದನಿಯಲ್ಲಿ) ಅಹುದು.

ಹೆಂಡತಿ:- (ನಕ್ಕು) ಅಹುದಿಲ್ಲೋ ಯಾರಿಗಾಗಿ ನೀ ಪರತಂತ್ರ-

ಶೀನು:- (ನಡುವೆಯೆ) ನಿನಗಾಗಿ, ಕಮಲಾ, ನಿನಗಾಗಿ.

ಹೆಂಡತಿ:- ಅಯ್ಯ! ನನಗ್ಗೊತ್ತಿಲ್ಲ ಅಂತ ತಿಳಿದೀಯಾ?

ಶೀನು:- (ಆಶ್ಚರ್ಯದ ದನಿಯಲ್ಲಿ) ಏನು? ನಿನಗ-ನಿನಗ-ಇದು-ಗೊತ್ತಿದೆಯೆ?-ಹ್ಯಾಗ- ಅಲ್ಲ ಅಂದ್ರ-ಯಾವಾಗ-?

ಹೆಂಡತಿ:- ಹುಚ್ಚು! ಗಂಡಸು ಹುಚ್ಚು! ಹ್ಯಾಂಗ ಅಂತ? ಯಾವಾಗ ಅಂತ? ನೆನಪಿದೆ ಏನು ನಿನಗೆ, ಶೀನೂ? ನಂನಿಂ ಮನೆಯವರೆಲ್ಲ

ಕೂಡಿ ಬೆಳದಿಂಗಳೂಟಕ್ಕ ಹೋಗಿದ್ದರು ಒಂದು ರಾತ್ರಿ.... ತಿರುಗಿ ಮನೆಗೆ ಹೊರಡುವಾಗ, ಕೈತುಂಬಿ ಮನಸ್ಸು ತುಂಬಿ ಬೆಳದಿಂಗಳು ಪಸರಿಸಿದ್ದನ್ನು ಕಂಡು ನಾನು ಮುಂದ್ಮುಂದೆ ಓಡತಿದ್ದೆ, ಬೆಳದಿಂಗಳ ಜೋಡಿ ಜಿದ್ದು ಕಟ್ಟಿದವರ್ಹಾಂಗ. ಆಗ ನೀ ನನ್ನ ಜೋಡಿ ಜಿದ್ದು ಕಟ್ಟಿ ಹಿಂದಿನಿಂದ ಓಡಿದಿ.... ಇಬ್ಬರೂ ಮುಂದೆ ಹೋದಿವಿ.... ಎಲ್ಲಾರೂ ಹಿಂದುಳಿದರು.... ಗಿಡದ ಕೊಂಬೆಯ ಮ್ಯಾಲೆ ಕೂತಿವಿ, ಕಾಲ ತೂಗತಾ.... ತೂಗುವ ನೆರಳಿಗೆ ತಾಳ ಹಿಡಿದು ನಾನು ಹಾಡಿದೆ....

ಶೀನು:– (ನೆನೆಸಿಕೊಳ್ಳುವವನಂತೆ) ಹಾಡಿದೆ-ಹಾಡ್–ಅಹುದು– " " (ಎಂದು ಒಂದೆರಡು ಶಬ್ದಗಳನ್ನು ನುಡಿಯುವನು.?

ಹೆಂಡತಿ:– (ನಕ್ಕು) ಹಾಂಗಲ್ಲ....ಶಬ್ದ ನೆನಪಿದೆ ನಿನಗೆ....ಆದರೆ ಧಾಟಿ ಅದಲ್ಲ....ಹೀಗೆ

ಬಾ ಬಬಬಾ ಬಾಬಾ ಚಂದಿರಮಾ ।
ಹಿಡಿಯಲು ಬಾಬಾ ಸುಂದರ ಸೋಮಾ ॥
ಬರುವೆ ಬೆಳುದಿಂಗಳೊಳ್ ।
ಸರಿದೆನು ನೆರಳೊಳ್ ।
ಹಹ! ನಿನಗೆ ಭ್ರಮಾ ॥ ೧ ॥

(ಮುಗಿದ ನಂತರ) ನೋಡಿದೆಯಾ? ಈಗಿನ ಹಾಂಗ ಆಗೂ ನಿನ್ನ ಕಣ್ಣೊಳಗ ನೀರು ಹರೀತಿತ್ತು.... ನಿನ್ನ ಕಣ್ಣು ತಿಳಿ ಆಗಿತ್ತು....ಆ ಕಣ್ಣೊಳಗಿಂದ ನೋಡಿದರ ನಿನ್ನ ಹೃದಯ ಕಾಣಿಸತಿತ್ತು.... ಆ ನಿನ್ನ ಹೃದಯದೊಳಗ ನನ್ನ ಪ್ರತಿಬಿಂಬ ಇತ್ತು.... ಆಗತಿ ಳೀತು ನನಗೆ—

ಶೀನು:– (ನಡುವೆಯೆ) ಆಗ–? ಕಮಲಾ, 'ಆಗ' ಅಂತ ಯಾಕೆ ಅನ್ನುವೆ? ಈಗಲೂ ನನ್ನ ಹೃದಯದಲ್ಲಿ ನೀನೇ ಇರುವೆ.

ಹೆಂಡತಿ:– ಈಗ ಇದ್ದದ್ದು ಜೀವಂತ ನನ್ನ ಪ್ರತಿಬಿಂಬ ಅಲ್ಲ, ಶೀನೂ; ನನ್ನ ಭಾವಪಟ....ಈಗ ನೀನೇ ನನ್ನ ಹೃದಯದೊಳಗ ಇರುವೆ....

ಶೀನು:– (ಮತ್ತೆ ಆಸೆಯ ದನಿಯಲ್ಲಿ) ಏನು–ಏನಂದೆ–ಕಮಲಾ ?

ಹೆಂಡತಿ:– (ಮುಗುಳ್ನಗೆಯಿಂದ) ಹುಚ್ಚು! ಗಂಡಸು! ನೋಡಿದೆಯಾ ನಿನ್ನ ಕೈ ನಡೆಗತದೆ, ನಿನ್ನ ದನಿಯೊಳಗ ಧೈರ್ಯ ಇಲ್ಲ! ಅದಕ್ಕೇ ಹೇಳಿದೆ. ಈಗ ನೀನು ನನ್ನ ಹೃದಯದೊಳಗ ಅಂತ....

ಶೀನು:– (ಮೇಲಿನಂತೆ) ಕಮಲಾ, ಕಮಲಾ, ಆದರೆ ನನಗಿನ್ನು ಮದುವೆ ಮಾಡಿಕೊಳ್ಳಲು ಬರುವುದಿಲ್ಲ; ಹೊಸ ಕಾನೂನು ಬಂದಿದೆ. ನಿನಗ ನಿನ್ನ ಮದುವೆ ಮುರಿಯಲು ಬರುವುದಿಲ್ಲ; ಹೊಸ ಕಾನೂನು ಬಂದಿಲ್ಲ.

ಹೆಂಡತಿ:– (ಗಟ್ಟಿಯಾಗಿ ನಕ್ಕು) ಗಂಡಸಿನ ಜೀವನ ಲೆಕ್ಕದ ಜೀವನ ....ಕಾನೂನು–ಕಾಯಿದೆ! . . ಶೀನೂ, ಯಾರು ಕೇಳಿದರು ನಿನಗಿದೆಲ್ಲ? ಹೆಂಗಸು ಯಾವ ಕಾನೂನಿಗೂ ಪರತಂತ್ರಳಲ್ಲ––

ಶೀನು:– ಹಾಗಾದರೆ, ಧೈರ್ಯ ಮಾಡುವೆಯಾ? ನನ್ನೊಡನೆ ಬರುವೆಯಾ?

ಹೆಂಡತಿ:– ತಿರುವುಮುರುವು ವ್ಯವಹಾರ! ತಾಯಿ ಮಗುವಿನ ಕೂಡ ಹೋಗುವದೆ?

ಶೀನು:– (ತಿಳಿಯದೆ) ತಾಯಿ—? ಮಗು—?

ಹೆಂಡತಿ:– ನಾನು ತಾಯಿ, ನೀನು ಮಗು. ಹೆಂಗಸು ತಾಯಿ ಗಂಡಸು ಮಗು....ತಾಯ್ತನ ಪಡೆಯುವ ಮುಂಚೆ ಒಮ್ಮೆ, ಒಂದು ಕ್ಷಣ ಮಾತ್ರ, ಹೆಂಗಸು ಹೆಂಡತಿ....ಒಮ್ಮೆ ತಾಯ್ತನ ಬಂದಿತೆಂದರೆ ಹೆಂಗಸು ಚಿರಂತನ ತಾಯಿ!

ಶೀನು:– ಏನು? ಬೆನ್ನು ಮೇಲೆ ಆಡಿಸುವ ಕೈ ತಲೆಯ ಮೇಲಿನ ಆಶೀರ್ವಾದದಂತಿದೆ....ಕಮಲಾ, ಕಮಲಾ ಹಾಗಾದರೆ ನಾನು ಹೊರಡುವೆ.

ಹೆಂಡತಿ:– ಎಲ್ಲಿಗೆ?

ಶೀನು:– ಮಹಾತ್ಮಾಜಿಯವರು ಹೇಳಿದ್ದಾರೆ....ಎಲ್ಲೆಲ್ಲಿ ದಂಗೆ ನಡೆದಿದೆ ಅಲ್ಲಲ್ಲಿ ನಡುನುಗ್ಗಿ ಪ್ರಾಣಕೊಡುವದು ಪ್ರತಿಯೊಬ್ಬನ ಕರ್ತವ್ಯ ಎಂದು....ಹೋಗುವೆ....ತನ್ನ ರಕ್ತಸುರಿಸಿ ಹೊಸ ರಕ್ತದ ಜೀವ ಹುಟ್ಟಿಸುವುದು ಗಂಡಸಿನ ಕೆಲಸ; ಅಲ್ಲಿಗೆ ಹೋಗುವೆ.

ಹೆಂಡತಿ:– ಯಾವಾಗ?

ಶೀನು:– ನಾಳೆ.

ಹೆಂಡತಿ:– ಹಾಗಾದರೆ ಹೋಗುವ ಮುಂಚೆ ನಮ್ಮಲ್ಲಿ ಊಟ ಮಾಡಿ ಹೋಗು....ಶೀನೂ, ನನ್ನಾಣೆಯಾಗಿದೆ ನನ್ನನ್ನು ನೋಡದೆ ಹೋದೆಯೆಂದರೆ.... (ಉಸುರ್ಗರೆದು) ಹೋಯಿತು! ಮತ್ತೊಂದು ಜೀವ ನಿರಾಸೆಗೆ ಆಹುತಿಯಾಯಿತು....ಸಂಸಾರ ಎರಡಾಯಿತು, ಶೀನು ಜೀವ ಕೊಡುವ ...(ಒಳಗೆ–ಬಂದಂತೆಯೆ–ಹೋಗುವಳು).

[ಮತ್ತೆ ಒಂದು ನಿಮಿಷ ನಿಃಶಬ್ದ]

(ಆಮೇಲೆ) **ಯುವಕ:**– (ಸಿಟ್ಟಿನ ದನಿಯಲ್ಲಿ) ಛೆ! ಹೀಂಗ್ಬಿಟ್ರೆ ಉಪಯೋಗ ಇಲ್ಲ....ಇದೇನೊ ಠಕ್ಕತನ ನಡೆದಿದೆ: ನನ್ನ ಸಂಸಾರದ ಸತ್ಯಾನಾಶ ನಡೆದಿದೆ; ನನ್ನನೇವಳ್ಗ ಮೋಸ ನಡೆದಿದೆ ...ಶೀನು—

ಆಕೆ !....ಅಬ್ಬ !....ಸಣ್ಣವರಿದ್ದಾಗಿನಿಂದ ಕೂಡಿ ಬೆಳೆದವರು !.... ಅವ ಹೆಂಡತೀನ್ನ ಬಿಟ್ಟ. ಈಕೆ— ? —ಇನ್ನ ಗಂಡನ್ನ ಬಿಡು ವಾಕೆಯೊ ಏನು? ಆದ್ರ—ಅದ್ಕೂ ಮುಂಚೆ ನಾನೇ ಈಕೇನ್ನ ಬಿಟ್ಟುಬಿಟ್ಟರೆ ?.... ಮೊದಲು ಮಾತನಾದ್ರೂ ಆಡಿಸಿ ನೋಡೋಣ ....(ದನಿ ಎತ್ತರಿಸಿ) ಏ— (ಮತ್ತೆ ಕಣ್ಮುಚ್ಚುವನು) .

[ಹೆಂಡತಿ ಈ ಮೊದಲು ಬಂದಂತೆ ಮೆಲ್ಲಗೆ ನಡೆಯುತ್ತ ಬರು ವಳು]

ಯುವಕ:– (ಸಿಟ್ಟಿನಿಂದ) ಏ—ಇಲ್ಲಿ ನೋಡು—ನಿನ್ನ ಮ್ಯಾಲೆ ನನ್ನ ಸಂಶಯು ಅದ ಅಂದೆ.

ಹೆಂಡತಿ:– ಅಹುದು.

ಯುವಕ:– (ಚಕಿತನಾಗಿ) ಏನಂದೆ?

ಹೆಂಡತಿ:– ಅಹುದು—ಅಂದೆ.

ಯುವಕ:– (ಸಂತಾಪದಿಂದ) ಮನಕ್ಕಾಗಿ ಅಲ್ದಿದ್ರು ಜನಕ್ಕಾಗಿ ನಾಚಿಕೆ ಅದನೊ ಇಲ್ಲೊ ನಿನಗ? 'ಸಂಶಯು ಅದ' ಅಂದ್ರ 'ಹೌದು' ಅಂತೀಯಾ?

ಹೆಂಡತಿ:– 'ಇಲ್ಲ' ಅಂದ್ರ ನಿಮುಗ ವಿಶ್ವಾಸ ಕೂಡೋದಿಲ್ಲ.

ಯುವಕ:– 'ಅಹುದು' ಅಂದ್ರೆ–?

ಹೆಂಡತಿ:– ನಿಮುಗ ವಿಶ್ವಾಸ ಇಡೋ ಧೈರ್ಯ ಆಗೋದಿಲ್ಲ.

ಯುವಕ:– (ಸಂತಾಪದಿಂದ) ಅಬ್ಬ! ಕಲಿತ ಹೆಂಡತಿ ಅಲ್ಲ ನೀನು, ಕಲಿಸೋ ಹೆಂಡತಿ. ಬುದ್ಧಿ ಕಲಿಸೋ 'ಹೆಂಡತಿ' ಅಂದೆ.... ಏನು?– ಮಾತಾಡಲ್ಲ?

ಹೆಂಡತಿ:– (ಮುಗುಳ್ನಗೆಯಿಂದ) ಏನು ಮಾತಾ? Thank you ಅನ್ನಲಿಯಾ?

ಯುವಕ:– (ತಡೆಯದೆ) ಸಾಕ ನಿನ್ನ 'ಕೊಂಕು'.... ಶೀನೂನ ಜೋಡಿ ಗೆಳೆತನ ಮುಗಿಸ್ತೀಯಾ ಏನು–

ಹೆಂಡತಿ:– (ನಡುವೆಯೆ) ನಿಮ್ಮ ಸಂಶಯು ಯಾರ ಮ್ಯಾಲೆ? ನನ್ನ ಮ್ಯಾಲೊ? ಶೀನೂನ ಮ್ಯಾಲೊ? ಇಬ್ಬರ ಮ್ಯಾಲೊ?

ಯುವಕ:– ಇನ್ನು ಮಾತು ಮುಗಿಸದಿದ್ರೆ, ನೀ ಆದ್ರೂ ಹೊರಗ ಹೋಗ್ಬೇಕು, ನಾನಾದ್ರೂ ಹೊರಗ ಹೋಗ್ಬೇಕು.

ಹೆಂಡತಿ:– ಅಯ್ಯ! ಎದ್ದೇ ಬಿಟ್ಟಿರಲ್ಲ? ನೀವೇ ಹೊರಗ ಹೋಗ್ತೀರಾ? ಅಷ್ಟು ಸಿಟ್ಟಿನಿಂದ ನನ್ನ ಯಾಕೆ ನೋಡ್ತೀರಿ? ಬೇಕಾದ್ರ ನಾನೇ ಹೊರಗ ಹೋಗ್ತೀನಿ.... ಮನೆಯಿಂದ ಹೊರಬೀಳೋದೇನು ತಡ.... ಮನಸಿನೊಳಗಿಂದ ಹೊರಗ ಹಾಕಿದರ—

ಯುವಕ:– (ತ್ವೇಷದ ದನಿಯಲ್ಲಿ) ಮನಸು ! ಮನಸು ! ಮನ ಸ್ಸಿಗೆ ಬಾಗಿಲಿಲ್ಲ....

ಹೆಂಡತಿ:– (ಕನಿಕರದ ದನಿಯಲ್ಲಿ) ಪಾಪ !

ಯುವಕ:– (ಸಂತಾಪದಿಂದ ಕೂಗುತ್ತ) ಪಾಪ ? ಯಾವ್ದು ಪಾಪ ? ನಡೆ, ನಡೆ, ನಿನ್ನ ಮಾತು ಬೇಡ, ಕಣ್ಣೆದುರು ನೀನು ನಿಲ್ಲುವುದು ಬೇಡ.... ನಡೆ !

ಹೆಂಡತಿ:– (ಸಮಾಧಾನದ ದನಿಯಲ್ಲಿ) ಯಾಕ ಕೂಗಿ ತ್ರಾಸ ಮಾಡಿ ಕೊತೀರಿ ? ನಾನಾಗೇ ಹೋಗ್ತೀನಿ, ನನಗೂ ಅಡಿಗೇ ಮಾಡ್ಬೇಕಾ ಗೇದ....ಅಡಿಗೆ ಆದ ಮ್ಯಾಲೆ ಕರೆಯೋದಿಲ್ಲ, ಹಸಿವೆ ಆದ್ರ ನೀವೇ ಒಳಗ ಬರ್ರಿ. (ಹೋಗುವಳು.)

ಯುವಕ:– (ಕಳವಳದಿಂದ) ಏನು ಮಾಡಲಿ—ಅಂದೆ! ಹಸಿವೆ ಆದದ್ದೂ ಸುಳ್ಳಲ್ಲ, ಈಕೇ ಮ್ಯಾಲೆ ಸಂಶಯು ಬಂದದ್ದೂ ಸುಳ್ಳಲ್ಲ. (ವಿಚಾರ ಬದಲಾಯಿಸಿ) ಏನು–ಇವನ ಮ್ಯಾಲೆ ಸಂಶಯನೊ ? ಊಟಾ ಆದ್ಮೇಲೆ ಮಾತಾಡಿಸಿಯೇ ಬಿಡೋಣ.

ಶೀನು:– ಇವನ ಮುಂದೆ ನಾನೂ ಹೇಳಿ ಬಿಡೋದೆ ನೆಟ್ಟಗ....

ಯುವಕ:– (ಹಲ್ಲು ಕಟಿಯುತ್ತ) ಕಳ್ಳ ! ಠಕ್ಕ !

ಶೀನು:– (ತಿರಸ್ಕಾರದಿಂದ) ಬ್ಯಾಡ—ಇವ ಪುಕ್ಕ !

ಯುವಕ:– ಹೆಲೊ, ಸ್ವತಂತ್ರ ಶೀನೂ, ನಮ್ಮ ಮನೆ ಬಿಟ್ಟು ನಮ್ಮನ್ನ ಎಂದು ಸ್ವತಂತ್ರ ಮಾಡುವೆ ?

ಶೀನು:– ನಾನು ಹೋಕ್ತೇನಿ ಪಶ್ಚಿಮ ಪಂಜಾಬಕ್ಕ—

ಯುವಕ:– (ತಿರಸ್ಕಾರದಿಂದ) ಅಲ್ಲಿ ಹೋದಳೇನು ನಿನ್ನ ಹೆಂಡತಿ ? ....ಹೆಂಡತಿ—ಬಿಟ್ಟಳು ಅಂತ ಸಾಯ್ಲಿಕ್ಕೆ ಹೊರಟಿಯಾ ?

ಶೀನು:– (ಕಿಡಿಗೇಡಿಯಂತೆ) ನಿನ್ನ ಹೆಂಡತಿ ಬಿಟ್ಟಿದ್ದರೆ ನೀ ಏನು ಮಾಡ್ತಿದ್ದೆ ? ಅಂ ?

ಯುವಕ:– (ಒಮ್ಮೆಲೆ ಸಿಟ್ಟಿನ ದನಿಯಲ್ಲಿ) ಎಲ ! ಕಳ್ಳ ! ಠಕ್ಕ ! ಈಗ ಹೊರಬಿತ್ತಲ್ಲ ನಿನ್ನ ಮೋಸ !

ಶೀನು:– (ಗಾಬರಿಯ ದನಿಯಲ್ಲಿ) ಎಲ ! ಏನೊ ? ಏನಿದು ? ಕುತ್ತಿಗೆ ಹಿಚುಕುವೆ ? ಸಾಯ್ತೀನಿ—

ಯುವಕ:– ಸಾಯ್ಲಿಕ್ಕೇ ಹೊರಟವ ಎಲ್ಲಿ ಸತ್ತರೇನು—(ಒರಗಿದ ಲ್ಲಿಯೆ ಕುತ್ತಿಗೆ ಹಿಚುಕುವವನಂತೆ ಕೈ ಮಾಡಿರುವನು) .

ಶೀನು:– ಸಾಯೋದೆ ಆದ್ರ ನಿನ್ನ ಹೊಡೆದಾದ್ರೂ ಸಾಯ್ತೀನಿ—(ಒರಗಿ ದಲ್ಲಿಯೆ ಕೈ ಎತ್ತುವನು) .

ಯುವಕ:– (ಸಂತಾಪದಿಂದ) ಮನೆಮುರುಕಾ—

ಶೀನು:– (ತಿರಸ್ಕಾರದಿಂದ) ಅಂಜುಬುರುಕಾ—

ಯುವಕ:— ಯಾರಿಗೆ ಅಂಜುಬುರುಕ—

ಶೀನು:—- ಯಾರು ಮನೆಮುರುಕ—-

[ಇಬ್ಬರೂ ಒಂದೇ ವೇಳಿಗೆ ಎಚ್ಚತ್ತವರಂತೆ ಕಣ್ದೆರೆದು ಎದ್ದು ನಿಲ್ಲುವರು. ಅದೇ ವೇಳಿಗೆ **ಹೆಂಡತಿ** ಮುವ್ವರಿಗಾಗಿ ಚಹ ತರುವಳು. ಒಂದು ನಿಮಿಷ ಎಲ್ಲರೂ ದಂಗುಬಡಿದಂತೆ, ಸ್ತಬ್ಧರಾಗಿ ನಿಲ್ಲುವರು. **ಯುವಕ– ಶೀನು** ಏನೂ ತಿಳಿಯದೆ, ತುಸು ನಾಚಿಕೆಯಿಂದ ಒಬ್ಬರನ್ನೊಬ್ಬರು ನೋಡುತ್ತಿರುವರು. ಅವರನ್ನು ಕಂಡು ತಿಳಿಯದ್ದಕ್ಕೆ ಬೆರಗಾಗಿ **ಹೆಂಡತಿ** ನಿಂತಿರುವಳು.]

ಹೆಂಡತಿ:– ಅಯ್ಯ! ಏನಾಗೇದ ನಿಮಗ? ಒಬ್ಬರೊಬ್ಬರು ಗುರುತು ಇಲ್ಲದವರ್ಹಾಂಗ ನೋಡುತ್ತೀರಲ್ಲ?

ಯುವಕ:– ಗುರುತು ಇದ್ದಿರಲಿಲ್ಲ—

ಶೀನು:– (ನಗೆಯಿಂದ)–ಈಗ ಆಯ್ತು.

ಹೆಂಡತಿ:– ಏನಾಯ್ತು? ಮಧ್ಯಾಹ್ನ ಊಟ ಆದ ಮ್ಯಾಲೆ ನಿದ್ದೆ ಮಾಡಿದರ ಹೀಂಗ ಆಗ್ತಿರತದ.

ಯುವಕ:– ನಮಗೆ ನಿದ್ದೆ ಹತ್ತಿತ್ತೇನೆ?

ಹೆಂಡತಿ:– ಅಯ್ಯ! ವಳಗ ಸ್ಟೋದ ಮುಂದ ಕೂತರೂ ನಿಮ್ಮ ಗೊರಕೆ ಕೇಳ್ತಿತ್ತು!

ಶೀನು:– (ತನ್ನಷ್ಟಕ್ಕೆ ಎಂಬಂತೆ) ಅಂದ್ರೆ–ಕನಸು ಬಿದ್ದದ್ದೆ ನಿಜ.

ಯುವಕ:– ಅಂದ್ರೆ– ಮನಸಿನೊಳಗಿನ ಸಂಶಯಕ್ಕಾಗಿ ಕನಸಿನೊಳಗ ಹೊಡೆದಾಟ ಆಯ್ತು–

ಹೆಂಡತಿ:– ಕೆಲಸ ಇಲ್ಲದ ಗಂಡಸರು ಇಂಥಾದ್ದಕ್ಕ ಮಾತ್ರ ಸ್ವತಂತ್ರ....

ಯುವಕ:– (ಒಮ್ಮೆಲೆ ನಿರ್ಧಾರದಿಂದ) ಶೀನೂ, ನಾನೂ ನಿನ್ನ ಕೂಡ ಬರ್ತೀನಿ.

ಹೆಂಡತಿ:– (ಮುಳ್ನಗೆಯಿಂದ) ಯಾಕ? ನಿಮ್ಹೆಂಡ್ತೀನೂ ಬಿಟ್ಟಳೇನು?

ಯುವಕ:— (ಸೋಗಿನ ಸಿಟ್ಟಿನಿಂದ) ಬಿಟ್ಟಳು—ನಾಚಿಕೆ!

ಹೆಂಡತಿ:—- (ಗಂಭೀರವಾದ ದನಿಯಲ್ಲಿ, ಮಾತೃವಾತ್ಸಲ್ಯದ ಕಳಕಳಿಯಲ್ಲಿ) ಗಂಡಸರಿಗಿಲ್ಲದ ನಾಚಿಕೆ ಹೆಂಗಸಿಗೆಲ್ಲಿಂದ ಬಂದೀತು? ನಾಚಿಕೆ? ಹೆಂಗಸಿಗೆ ನಾಚಿಕೆ ಇದ್ದರೆ ಜಗತ್ತೇ ಇರತಿರಲಿಲ್ಲ....ಗಂಡಸಿಗೆ ನಾಚಿಕೆ ಇಲ್ಲ ಅಂಥೇಳಿ ಜಗತ್ತೇ ಉಳಿಯಲಾರಥಾಂಗಾಗೇದ... (ತನ್ನಷ್ಟಕ್ಕೆ ಎಂಬಂತೆ) ನಾಚಿಕೆ ಅಂಬೋದು ತನಗಾಗಿ ಇರಬೇಕು, ಮಂದಿಗಾಗಿ ಅಲ್ಲ.... ನಾಚಿಕೆ ಅಂಬೋದು ತಾಯಿಯಾದ ಹೆಂಗಸಿಗಲ್ಲ, ಕೂಸಿನಂತಿದ್ದ ಗಂಡಸಿಗೆ.... ಶೀನೂಗ ನಾಚಿಕೆ, ಹೆಂಡತಿ ಬಿಟ್ಟಳು ಅಂತ; ಇವರಿಗೆ ನಾಚಿಕೆ ಹೆಂಡತೀನ್ನ ಬಿಡೋದು ತಮಗಾಗೋದಿಲ್ಲ ಅಂತ . . . ನನಗ ನಾಚಿಕೆ, ಇವರಿಬ್ಬರಿಗೂ ಬುದ್ಧಿ ಇಲ್ಲ ಅಂತ—

ಯುವಕ:— (ಒಮ್ಮೆಲೆ) ಹಾಂ- (ಹೆಂಡತಿ ಎಚ್ಚತ್ತವಳಂತೆ ನೋಡುವಳು) ಸುಮ್ಮ ಕೂತಹಾಂಗ ನಾಟಕಾ ಬೆಳೆಸಲಿಕ್ಕೆ ಹತ್ತಿದೆಲ್ಲ? ನಾವೇನು ಚಹ ಕುಡೀಬೇಕಂತ ಕೂತೀವೆಯೊ ಏನು—

ಶೀನು:— (ನಗೆಯಿಂದ) ಉಪದೇಶಾಮೃತ ಕುಡೀತೀವೆಯೊ?

ಹೆಂಡತಿ:— ಇದು ಕುಡಿಯೋದಲ್ಲ, ಆದರೂ ಅಮೃತ . . . ಬೆಂಕಿಯೊಳಗ ಕುದಿದ ನೀರು ಆರೋಗ್ಯಕ್ಕ ಹಿತಕೊಡೋಹಾಂಗ, ಸಮಾಜಕ್ಕಾಗಿ ಕುದಿದ ಮನುಷ್ಯ ಸಮಾಜಕ್ಕ ಹಿತ— ಅಂತ ತೋರಿಸಲಿಕ್ಕೆ ಇದನ್ನ ತಂದೀನಿ-

—ನಿಮಗ ಆರತಿ ಬೆಳಗಲಿಕ್ಕೆ ಇದರಿಂದ.
ಆರತಿ ಬೆಳಗುವೆ ಭಾರತ ವೀರಗೆ।
ಆರದ ಪೇಯವ ಕುಡಿವ ಕುಮಾರಗೆ ॥ ಸ ॥

[ಹಾಡು ಮುಗಿದ ಮೇಲೆ ಇಬ್ಬರಿಗೂ ಅವರ ಚಹವನ್ನು ಕೊಡುವಳು]

ಯುವಕ:— ' ಹಿಂದು- '

ಶೀನು:— ಸ್ವಾಹಾ (ಎಂದು ಕುಡಿದು). ' ಮುಸಲ್ಮಾನ್- '

ಯುವಕ:— ಸ್ವಾಹಾ (ಎಂದು ಕುಡಿಯುವನು).

ಹೆಂಡತಿ:— ಇಬ್ಬರೂ ಕೂಡಿದರ—ಚಹ (ಎಂದು ಕುಡಿಯುವಳು. ಅವರಿಬ್ಬರ ಚಪ್ಪಾಳೆ)

[ತೆರೆ]

೧೯೭೮ರ ಒಂದು ಚಿತ್ರ

(ಪ್ರೊ. ನಾ. ಕಸ್ತೂರಿ, ಎಂ. ಎ., ಬಿ. ಎಲ್.)

ನ್ಯಾಯಪತಿ:– ನಿನ್ನ ಹೆಸರೇನು?

ಅಪರಾಧಿ:– ತಿಮ್ಮರಾಯ.

ನ್ಯಾಯಪತಿ:– ನಿನ್ನ ನಂಬರು ?

ಅಪರಾಧಿ:– ಕ ೪೮೦,೩೬೫

ನ್ಯಾಯಪತಿ:– ವಯಸ್ಸು ?

ಅಪರಾಧಿ:– ತಿಳಿಯದು, ಸ್ವಾಮಿ. ನೀವೇ ಗುಣಕಾರ ಮಾಡಿ ನೋಡಿ ... ಗಾಂಧಿಯವರ ಖೂನಿಯಾದಾಗ, ನನಗೆ ಕಿರುಮೀಸೆ ಬಿಂದಿತ್ತು....ಹೆಂಡ ಕುಡಿಯೋದು ನಿಲ್ಲಿಸಿದಾಗ, ನಮ್ಮೂರಾಗೆ, ನಮ್ಮಪ್ಪ ನನಗೆ ಹೆಣ್ಣು ತರುವ ಮಾತು ಪ್ರಾರಂಭಿಸಿದ....

ನ್ಯಾಯಪತಿ:– ಹಾಗಾದರೆ, ನಿನಗೀಗ ೪೮, ೫೦ ಇರಬಹುದು....

ಅಪರಾಧಿ:– ಇರಬಹುದು, ಸ್ವಾಮಿ. ನಿಮ್ಮ ಗುಣಕಾರ ತಪ್ಪುತ್ತದೆಯೇ ?

ನ್ಯಾಯಪತಿ:– ಆದರೂ, ನೀನು ಇದುವರೆಗೂ ಓದು ಬರಹ ಕಲಿಯದೆ ದೇಶದ್ರೋಹವನ್ನೂ ಆತ್ಮವಂಚನೆಯನ್ನೂ ಮಾಡಿರುವೆ. ಪ್ರತಿ ಒಬ್ಬನೂ ಅಕ್ಷರಕಲಿತು, ಪ್ರಕಟನೆಗಳನ್ನೂ ಜಾಹೀರಾತುಗಳನ್ನೂ ಪತ್ರಿಕೆಗಳನ್ನೂ ಓದಿ, ಜ್ಞಾನಾಭಿವೃದ್ಧಿ ಮಾಡಿಕೊಂಡು ಸತ್ಪ್ರಜೆಯಾಗಬೇಕೆಂದು, ನಮ್ಮ ನಾಯಕರು ಒತ್ತಾಯಪಡಿಸಿ ಕಾಯಿದೆ ಮಾಡಿರುವಾಗ....ನೀನು....ಆರಡಿ ಎರಡಂಗುಲ ಎತ್ತರದ, ಧಾಂಡಿಗ, ನೀನು....

ಅಪರಾಧಿ:– ಹಾಗೆಲ್ಲ ಬೈಯಬೇಡ್ರಿ, ಸ್ವಾಮಿ, ನನ್ನನ್ನ....ನನಗೆ ಅಳು ಬರುತ್ತೆ.

ನ್ಯಾಯಪತಿ:– ಅಳು ಬರುತ್ತಂತೆ, ಅಳು! ಮತ್ತೆ ಏಕೆ ವಯಸ್ಕರ ಶಿಕ್ಷಣ ಶಾಲೆಗಳಿಗೆ ಹೋಗಲಿಲ್ಲ? ತುಂಡಾಂಡಿ ಹಾಗೆ ಊರಲ್ಲೆಲ್ಲ ಅಲೆಯುತ್ತೀಯಾ? ಅಕ್ಷರ ಬರದೆ ಇದ್ದರೆ, ನೀನು ಹೇಗೆ ನಿನ್ನ ಮತ ಕೊಡುತ್ತಿದ್ದಿಯಾ, ಚುನಾವಣೆಗಳಲ್ಲಿ ?

ಅಪರಾಧಿ:– ಅದಕ್ಕೇನು, ಸ್ವಾಮಿ! ಈ ಹುರಿಯಾಳುಗಳೆಲ್ಲ ಮನೆ ಬಾಗಿಲಿಗೇ ಬಂದು, ಒಬ್ಬರನ್ನೊಬ್ಬರು ತೆಗಳಿ ಬೈದು ಕೆಡವುತ್ತಾರೆ. ಅವ ಅಯೋಗ್ಯ ಅಂತ ಇವ ಹೇಳುತ್ತಾನೆ. ಇವ ನಾಲಾಯಕ್ಕ ಅಂತ ಅವ ಹೇಳುತ್ತಾನೆ. ಎಲ್ಲರೂ ಹೇಳೋದು ಗಾಂಧೀಮಾತೇ ....ಸತ್ಯ, ಅಹಿಂಸೆ, ಸರಿ! ನಾನೇನು ಮಾಡುತ್ತೇನೆ, ತಿಳೀತೆ? ಗುರುತೂನೂ ಹಾಕೋದಿಲ್ಲ; ಬಣ್ಣಾನೂ ನೋಡೋದಿಲ್ಲ. ಎಲ್ಲ ಪೆಟ್ಟಿಗೆಗೂ ಒಟ್ಟಿಗೆ ಕೈಮುಗಿದು ಬಿಟ್ಟು, ಚೀಟೀನ ಬಾಯಿಗೆ ಹಾಕಿಕೊಂಡು, ಈಚೆಗೆ ಬರ್ತೀನೆ....

ನ್ಯಾಯಪತಿ:– ಛೀ ! ಮುಚ್ಚುಬಾಯಿ ! ಅನಕ್ಷರಸ್ಥ !

ಅಪರಾಧಿ:– ಅದು ನನ್ನ ತಪ್ಪಲ್ಲ, ಸ್ವಾಮಿ! ನನ್ನ ನಂಬರು ಗುರುತು ಹಾಕಿ, ನಾನು ಯಾವ ಶಾಲೆಗೆ ಸೇರಿಕೊಳ್ಳಬೇಕು ಅಂತ ತಿಳಿಸಿರಿ ದಯವಿಟ್ಟು, ಅಂತ, ಅರ್ಜಿ ಬರೆಸಿದೆ, ಸ್ವಾಮಿ, ನನ್ನ ಮಗನ ಕೈಯಿಂದ ...ಹುಬ್ಬಳ್ಳಿಗೂ ಬೆಂಗಳೂರಿಗೂ ಆಕಾಶದ ಬಸ್ಸು ಬಂದ ವರ್ಷವೇ !

ನ್ಯಾಯಪತಿ:– ಸರಿ, ಹಾಗಾದರೆ ೧೦ ವರ್ಷದ ಹಿಂದೇನೆ! "ಕ" ಅಂತ ನಂಬರಿನ ಹಿಂದೆ ಬರೆದರೆ ತಾನೆ, ನೀನು ಕರ್ನಾಟಕ ಪ್ರಾಂತದವನು ಅಂತ ಗೊತ್ತಾಗೋದು, ದಿಲ್ಲೀಲಿ? ಬರೇ ನಂಬರ್ ಸಾಲದು !

ಅಪರಾಧಿ:– ಅದನ್ನೂ ಬರೆದಿರ ಬೇಕು, ಸ್ವಾಮಿ ! ನನ್ನ ಮಗ ! ಅವನು ಬಲು ಜಾಣ ಇದಾನೆ.

ನ್ಯಾಯಪತಿ:– ಸರಿ ! ಮಗನ ಕೈಯಿಂದ ಬರೆಸಿದೆ....ಕೂಡಲೇ, ಜವಾಬು ಬಂದಿರಬೇಕು. ದಿಲ್ಲಿ ಅಂದರೆ, ಸಾಮಾನ್ಯವೇ ? ಪಾದರಸ, ಅಲ್ಲಿಯ ಜನ !

ಅಪರಾಧಿ:– ಹೂಂ, ಸ್ವಾಮಿ ! ಜವಾಬೇನೋ ಬಂತು. ಅದರಲ್ಲಿ ಬರೆದಿದ್ದರು: "ಅರ್ಜಿದಾರನ ಸ್ವಹಸ್ತದಲ್ಲೇ ಇರಬೇಕು, ಬರೆವಣಿಗೆ; ಕಂಡವರ ಕೈಯಿಂದ ಬರೆಯಿಸಕೂಡದು ಅಂತ.... "

ನ್ಯಾಯಪತಿ:– ಹಾ !

ಅಪರಾಧಿ:– ಹೂಂ, ಸ್ವಾಮಿ! ಅದಕ್ಕೆ ನಾನೂ ಉತ್ತರ ಬರೆಯಿಸಿದೆ, ಅನ್ನಿ. ನೀವು ಮೊದಲು ಕಲಿಯಿರಿ ನೀವು ಕಲಿಸೊ ವಿದ್ಯೇನ.... ಗುಮಾಸ್ತೆ ಕೈಲಿ ಕನ್ನಡದಲ್ಲಿ ಟಾಯಿಪ್ ಮಾಡಿಸಿ, ರುಜುಹಾಕುವ ಜಾಗ ತೋರಿಸಿದರೆ, ಗುದ್ದಲಿ ಗುರುತು ಹಾಕೋದನ್ನ ಬಿಡಿ, ನೀವೂನು ಇವತ್ತಿಂದ, ಅಂತ ಬರೆಸಿದೆ. ಆದರೆ ಟಪಾಲಿಗೆ ಹಾಕಲಿಲ್ಲ.ಅನ್ನಿ....ಬರಹ ಕಲಿಯೋಕೆ ಅಪ್ಪಣೆಕೊಡಿ, ಅಂತ ವಿನಯವಾಗೀನೇ....

ನ್ಯಾಯಪತಿ:– ನ್ಯಾಯಸ್ಥಾನದಲ್ಲಿ ನಿನ್ನ ರಾಮಾಯಣ ಬೇಡ. ಇಲ್ಲಿ ನಡೆಯುತ್ತಿರುವ ಕಟ್ಟಳೆ, ನೀನು ೫೦ ವರ್ಷದ ಕನ್ನಡಿಗ, ಇದುವರೆಗೆ ಓದುಬರಹ ಕಲಿಯದೆ ಇದ್ದದ್ದರಿಂದ, ನಿನ್ನ ಮೇಲೆ ಕಾನೂನು ಪ್ರಕಾರ....

ಅಪರಾಧಿ:– ಡಿಲ್ಲಿಯಿಂದ ಫಾರಂ ಬರುತ್ತೆ. ಅದನ್ನ ಭರ್ತಿಮಾಡಿಸಿದರೇನೇ ಶಾಲೆಗೆ ಸೇರಿಸುವುದು, ಅಂತ ಮಾಸ್ತರು ಹೇಳಿದ್ದರು, ಸ್ವಾಮಿ....

ನ್ಯಾಯಪತಿ:– ಫಾರಂ ತರಿಸಿದೆಯಾ ?

ಅಪರಾಧಿ:– ನನ್ನ ಕಾಗದಕ್ಕೆ ಉತ್ತರ ಬಂತು,–ಆ ಫಾರಂ ತರಿಸುವದಕ್ಕೆ ಬರೇ ಕಾಗದ ಬರೆಯಕೂಡದಂತೆ; ಫಾರಂ ಕಳುಹಿಸಿ, ಅಂತ, ಕೇಳೋಕೇನೇ ಮತ್ತೊಂದು ಫಾರಂ ಇದೆಯಂತೆ.

ನ್ಯಾಯಪತಿ:– ಹೌದು, ಮತ್ತೆ. ಅಷ್ಟೂ ತಿಳಿಯದ ದಡ್ಡನೇ, ನೀನು? ತ್ಸು ! ತ್ಸು ! ತ್ಸು !

ಅಪರಾಧಿ:– ಕೊನೆಗೆ, ಆ ಫಾರಂದಲ್ಲೇ ಕೇಳಿಕೊಂಡೆ, ಸ್ವಾಮಿ.

ನ್ಯಾಯಪತಿ:– ಹಾ ! ಅದೀಗ ಸರಿ . . ಆಮೇಲೆ....

ಅಪರಾಧಿ:– ಫಾರಂ ಬಂತು, ಎಂಟು ತಿಂಗಳಾದ ಮೇಲೆ....ಅದನ್ನ ತುಂಬಿಸಿ ಕಳುಹಿಸಿದೆ........ನನ್ನ ವಿಷಯ ಒಕ್ಕಲಿಗ ಅಂತ ಬರೆ

ಪ್ರೊ. ನಾ. ಕಸ್ತೂರಿಯವರು ಉತ್ತಮ ಪ್ರತಿಯ ಹಾಸ್ಯರಸ ಸಿದ್ಧಿ ಮಾಡಿಕೊಂಡವರು. ಕನ್ನಡದಲ್ಲಿ ಇಂದಿಗೂ ದುರ್ಲಭವಾದ ಹಾಸ್ಯ–ಸಾಹಿತ್ಯದಲ್ಲಿ ಇವರ ಕೃತಿಗಳು ಮೇಲ್ಪಂತಿಯಲ್ಲಿ ವಿರಾಜಿಸುತ್ತಿವೆ. "ಕರ್ಮವೀರ"ದಲ್ಲಿ ಆಗಾಗ್ಗೆ ಅವರ ಲೇಖನಗಳನ್ನೋದಿದವರಿಗೆ ಅವರ ಲೇಖಗಳ ಸ್ವಾರಸ್ಯವನ್ನು ಬೇರೆ ಅನುಮೋದಿಸಬೇಕಿಲ್ಲ. ಇಲ್ಲಿ ಅವರು ೩೦ ವರ್ಷಗಳಾಚೆಗೆ ಕಣ್ಣು ಹಾಯಿಸಿ ಅಕ್ಷರ ಪ್ರಚಾರದ ಮೇಲೆ "ಚಕ್ರದೃಷ್ಟಿ"ಯನ್ನು ಬೀರಿದ್ದಾರೆ.

ಸಿದ್ದೆ..ಅದಕ್ಕೆ ಆರು ತಿಂಗಳ ಮೇಲೆ, ಜವಾಬು ಬಂತು..ಕಾನೂನ ಪ್ರಕಾರ ಯಾರೂ ಇಂಡಿಯಾದಲ್ಲಿ ಜಾತಿ ಹೆಸರು ಬರೆಯಬಾರದು.. ನೀನು ಬರೆದಿಯಾ. ಆದ್ದರಿಂದ, ನಿನ್ನ ಮೇಲೆ ಪೋಲೀಸನವರನ್ನು ಛೂ ಬಿಡುತ್ತೇವೆ, ಅಂತ..

ನ್ಯಾಯಪತಿ:– ಎಲಾ ! ನೀನು ಹೇಳಬೇಕಾಗಿತ್ತು....ಒಕ್ಕಲುತನ, ಅಂತ, ಒಕ್ಕಲಿಗ ಅಂತ ಅಲ್ಲ ಅಂಬೋದನ್ನ....

ಅಪರಾಧಿ:– ಮತ್ತೆ ಅದನ್ನೇ ಬರೆಸಿದೆ..ಎಂಟು ತಿಂಗಳ ಅನಂತರ, ಉತ್ತರ ಬಂತು.

ನ್ಯಾಯಪತಿ:– ಏನಂತ?

ಅಪರಾಧಿ:– ಅಪ್ಪಣೆ ಚೀಟಿಗೆ ನೀನು ಕರ್ನಾಟಕ ಪ್ರಾಂತದ ರಾಜಧಾನಿಗೆ ಬರೆದುಕೊ, ಅಂತ.

ನ್ಯಾಯಪತಿ:– ಅದು ಯಾವ ಊರು ಅಂಬೋದು ಇದುತನಕ ನಿಶ್ಚಯವಾಗಿಲ್ಲವಲ್ಲಾ ! ಧಾರವಾಡವೋ ಕಾರವಾರವೋ ಬೆಂಗಳೂರೋ ಮಂಗಳೂರೋ ?

ಅಪರಾಧಿ:– ಹಾಗಂತ ನಾನು ಮತ್ತೆ ಬರೆದೆ, ದಿಲ್ಲಿಗೆ..

ನ್ಯಾಯಪತಿ:– ಕೊನೆಗೆ ಏನಾಯಿತು, ಅದನ್ನ ಹೇಳು ! ಸುಮ್ಮನೆ ನಿನ್ನ ಪುರಾಣ ಎಲ್ಲ ಒದರಬೇಡ, ಇಲ್ಲಿ..ನನಗೆ ನಿದ್ದೆ ಬರುತ್ತಿದೆ..

ಅಪರಾಧಿ:– ಕಡೆಗೆ, ದಿಲ್ಲಿ ಕಚೇರಿಯಿಂದ ಜವಾಬು ಬಂದದ್ದರಲ್ಲಿ, ಕ. ೪೮೦,೩೬೫ ಎಂಬ ಮನುಷ್ಯ ಹಾಲಿ ಜೀವ ಸಹಿತ ಇರಲಿಕ್ಕೆ ಅವಕಾಶವಿಲ್ಲ. ಆತ ನಮ್ಮ ಸೆನ್‌ಸಸ್ ಕಚೇರಿ ಲೆಕ್ಕದಲ್ಲಿ ಸತ್ತು ಎರಡು ವರ್ಷವಾಯಿತು, ಅಂದರು.... ಸ್ವಾಮಿ, ನನ್ನನ್ನ....

ನ್ಯಾಯಪತಿ:– ಅಳಬೇಡ.... ಅಳಬೇಡ! ಅಲ್ಲಿ ಹೋಗಿ ನೀನು ಅಲ್ಲಿಯ ಕಾರಕೂನನ ಕೈ ಬೆಚ್ಚಗೆ ಮಾಡದೆ ಇದ್ದದ್ದರಿಂದ, ಆತನ ಕೈತಪ್ಪಿ ಹಿಂಗಾಗಿರಬೇಕು.

ಅಪರಾಧಿ:– ತಕ್ಷಣ, ನಾನು ದಿಲ್ಲಿಗೆ ಹೋಗಿ, ಹೋಳಿ ಹಬ್ಬ ಎಬ್ಬಿಸಿದೆ, ಸ್ವಾಮಿ! "ಇದ್ದಕ್ಕಿದ್ದಂಗೇನೇ ಇಲ್ಲಾ, ಅನ್ನಿಸಿಬಿಟ್ಟರಲಾ, ಮಹಾಸ್ವಾಮಿ!" ಅಂದೆ.... ಊರಿಗೆ ಬಂದೆ. ಆರು ತಿಂಗಳ ತಡ ಮಾಡಿದರು, ಜವಾಬಿಗೆ.... ಅಷ್ಟುಕಾಲ ನನ್ನ ಪ್ರಾಣಾನ ಗಟ್ಟಿಯಾಗಿ ಹಿಡಿದುಕೊಂಡಿರುವುದೇ ನನಗೆ ತ್ರಾಸವಾಯಿತು. ಕಡೆಗೆ, ಊರಿಂದ ಆಯುರ್ವೇದದ ಡಾಕ್ಟರ್ ಸರ್ಟಿಫಿಕೆಟ್ ಕಳುಹಿಸು, ಅಂದರು.... ಕಳುಹಿಸಿದೆ.... ಆಮೇಲೆ, ಬರೆದರು. ನೀನು ಬದುಕಿರುವುದೇನೋ ನಿಜ ಅಂತ ತಿಳಿಯಿತು. ಆದರೆ, ಕ. ೪೮೦,೩೬೫ ನಂಬರ ಮೇಲೆ ನಾವು ಕರೀಗೆರೆ ಎಳೆದುಬಿಟ್ಟದೇವೆ. ಬ್ರಹ್ಮ ಬಂದರೂ ನಾವು ಬರೆ ಎಳೆದದ್ದನ್ನ ತಿದ್ದಲಾರೆವು. ಆದರೂ ನೀನು ಅದೇ ನಂಬರನ್ನೆ ಇನ್ನು ಮುಂದೆ ಎಲ್ಲ ವ್ಯವಹಾರಗಳಿಗೂ ಉಪಯೋಗಿಸಬಹುದು, ಅಂದರು.

ನ್ಯಾಯಪತಿ:– ಸದ್ಯಃ, ಬದುಕಿದೆ! ಅದೇ ನಂಬರು ತೋರಿಸಿ, ಅಕ್ಷರ ಕಲಿಯುವುದಕ್ಕೆ ಶಾಲೆಗೆ ಹೋಗಬಹುದಾಗಿತ್ತಲ್ಲಾ....

ಅಪರಾಧಿ:– ಶಾಲೆಗೆ ಸೇರಿಕೊಳ್ಳುತ್ತೇನೆ, ಅಂತ ಬರೆಯಿಸಿ, ಫಾರಂ ತರಿಸುವುದಕ್ಕೆ ಮತ್ತೆ ಪ್ರಯತ್ನ ಮಾಡಿದೆ.... ಆದರೆ, ಆಗ ತಿಳೀತು ಒಂದು ಹೊಸ ವಿಷಯ.. ನಗು ಬರುತ್ತೆ, ಸ್ವಾಮೀ ನೆನೆಸಿಕೊಂಡರೆ..

ನ್ಯಾಯಪತಿ:– ಏನದು? ಅಂಥ ವಿಚಿತ್ರ?

ಅಪರಾಧಿ:– ದಪ್ತರಲ್ಲಿ ಸತ್ತು ಬದುಕಿದಾಗ, ನನ್ನನ್ನ ಆಗ ತಾನೆ ಹುಟ್ಟಿದ ಮಗು ಅಂತ ಆ ಪಟ್ಟಿಗೆ ಸೇರಿಸಿ, ಕ. ೪೮೦,೩೬೫ ಅಂಬೋ ಹಳೇ ನಂಬರನ್ನೇ ನನಗೆ ಮತ್ತೆ ಹಚ್ಚಿದ್ದರಂತೆ. ಅದರಂತೆ, ನನಗೆ ಈಗ, ಎರಡು ವರ್ಷ ವಯಸ್ಸು! ಇನ್ನೂ ನಾನು ಹಾಲುಗಲ್ಲದ ಕೂಸು!

ನ್ಯಾಯಪತಿ:– ಹಿಡಿಂಬಾಸುರನ ಹಂಗಿದೀಯಲ್ಲೋ ?

ಅಪರಾಧಿ:– ಇದೀನಿ! ಇಲ್ಲ, ಅಂದೆನೇ ನಾನು? ಆದರೆ, ದಿಲ್ಲಿ ದಫ್ತರು ! ಸರ್ಕಾರೀ ಲೆಕ್ಕ ! ಚೀಟಿ ನಂಬರು ! ಸರ್ಕಾರೀ ಲೆಕ್ಕದಾಗೆ, ನಾನು ಇನ್ನೂ ಎರಡು ಮೂರುವರ್ಷ ಕಾದು ಓನಾಮ ಕಲಿಯುವುದಕ್ಕೆ, ಹೆಬ್ಬೆಟ್ಟು ಚೀಪುತ್ತ, ಶಿಶುವಿಹಾರಕ್ಕೆ ಹೋಗಬೇಕು, ನನ್ನ ತಾಯಿ ಕೊಂಕುಳಲ್ಲಿ ಕೂತು ! ಹ....ಹ....ಹ....

ನ್ಯಾಯಪತಿ:– ಹೇಯ್ ! ಹಲ್ಲು ಹಿಡಿದು ಮಾತನಾಡು ! ಇದು ನ್ಯಾಯಸ್ಥಾನ, ಎಂಬ ಜ್ಞಾನವೇ ಇಲ್ಲ, ನಿನಗೆ. ಓದು ಬರಹ ಕಲಿಯದೆ ಇದ್ದ ೨೫ ವರ್ಷ ವಯಸ್ಸಿನವರನ್ನೆಲ್ಲ ಬಂದೀಖಾನೆಗೆ ಕಳುಹಿಸಬೇಕೆಂಬ ಕಾನೂನಿದೆ....ಗೊತ್ತೆ....

ಅಪರಾಧಿ:– ಗೊತ್ತು, ಸ್ವಾಮಿ ! ಆದರೆ, ನನಗೆ ಈಗ....ತಾವೇ ನೋಡಿ, ಈ ಚೀಟೀಲಿ ಹಾಕಿರೋ ವಯಸ್ಸನ್ನ....ಹುಟ್ಟಿದ ದಿನಾನ ?

ನ್ಯಾಯಪತಿ–: ಅದು ಬೇಡ ! ನಿನ್ನನ್ನ ಬಂದೀಖಾನೆಗೆ ಕಳುಹಿಸುವದೇ ನ್ಯಾಯ.

ಅಪರಾಧಿ:– ಯಾಕೆ, ಸ್ವಾಮಿ? ಯಾವ ತಪ್ಪಿಗೆ? ಯಾವ ಅಪರಾಧಕ್ಕೆ ?


ನ್ಯಾಯಪತಿ:– ಯಾವ ತಪ್ಪಿಗೂ ಅಲ್ಲ. ನೀನೇನೋ ಓದು ಬರಹ ಕಲಿಯಲು ತುಂಬ ಕಾತರತೆ ತೋರಿಸಿದ್ದೀಯಾ.ಆದರೆ, ನಾನು ನಿನ್ನನ್ನ ಬಂದೀಖಾನೆಗೆ ಕಳುಹಿಸಿಯೇ ಕಳುಹಿಸುತ್ತೇನೆ....ಅಳಬೇಡ....ಮಗೂ !....ಏಕೆಂದರೆ, ಅಲ್ಲಿ ಎಲ್ಲ ಬಂದಿಗಳಿಗೂ ಒತ್ತಾಯವಾಗಿ ಅಕ್ಷರ ಕಲಿಸುತ್ತಾರೆ. ಫಾರಂ, ನಂಬರು, ಅಪ್ಪಣೆ, ಡಿಲ್ಲಿ ಯಾವುದರ ತಂಟೆಯೂ ಇಲ್ಲ. ಓದು ಬರಹ ಕಲಿತ ಕೂಡಲೇ ನಿನಗೆ ಬಿಡುಗಡೆ.

ಅಪರಾಧಿ:– ಇದೀಗ ನ್ಯಾಯವಾದ ಮಾತು, ಸ್ವಾಮಿ. ಒಪ್ಪಿದೆ !

ವ್ಯಂಗ ಚಿತ್ರಕಾರನ ದೃಷ್ಟಿಯಲ್ಲಿ




ವೇಷವೇ ಶಾಖೆಗೆ ಕೈಗನ್ನಡಿಯಾಗಿರಲಿ ! ಭಾರತ ಮಂತ್ರಿಗಳ ವೇಷದ ಬಗ್ಗೆ ವ್ಯಂಗ ಚಿತ್ರಕಾರನ ಸಲಹೆ !



ಹೀಗಿತ್ತು ನಿಜಾಮರ ಪ್ರಯತ್ನ !





ಮೇಲೆ:— ಸಂಸ್ಥಾನೇಶ್ವರರ ಸ್ಥಾನ! ನಿಜಾಮರಿಗೆ ಸ್ಥಳ ಕಾದಿಟ್ಟಿದೆ.

ಬಲಕ್ಕೆ:— ಪಶ್ಚಿಮ ಪೂರ್ವಗಳ ನಡುವೆ ಭಾರತದ ವಿದೇಶಧೋರಣೆ


ವ್ಯಂಗ ಚಿತ್ರಕಾರನ ದೃಷ್ಟಿಯಲ್ಲಿ ಜಗತ್ತಿನ ಸ್ವರೂಪ



ಇವರಲ್ಲಿ ಮೈತ್ರಿ ಸಾಧ್ಯವೇ?



ಪರಸ್ಪರ ಸಹಕಾರ!




ರಶಿಯದ ವಿರುದ್ಧ ಪಶ್ಚಿಮ ಯುರೋಪಿನ ಯುದ್ಧ ಸನ್ನಾಹ



ಸ್ಟಾಲಿನ್ ಸಂಗೀತ



ಮಾನವನ ಹಕ್ಕುಗಳ ತಾಮ್ರಪಟವೊಂದನ್ನು ಯುಕ್ತ ರಾಷ್ಟ್ರಸಂಘ ಸಿದ್ಧ ಪಡಿಸಿದೆ.ಆದರೆ ಈ ಬಡಪಾಯಿಗಳು?



ಬ್ರಿಟಿಶ ಪ್ರಧಾನರ ಶಯನಸುಖ

ಜಗತ್ತಿನ ಸ್ವರೂಪ!



ದಕ್ಷಿಣ ಆಫ್ರಿಕೆಯ ಹೊಸ ಪ್ರಧಾನ ಮಾಲನ್ನರ ಧೋರಣ




ಪಂ. ಜವಾಹರ: ಸಮಸ್ಯಾಪ್ರಪಂಚದಲ್ಲಿ




ಪಶ್ಚಿಮ ಜರ್ಮನ್ ಸರಕಾರ: ಪಾಶ್ಚಾತ್ಯ ಮಿತ್ರರ ರಶಿಯಾ ವಿರೋಧಿ ಧೋರಣ



ಜಿನ್ನಾ



ಸ್ಟಾಲಿನ್,



ಕ್ರಿಪ್ಸ,



ಡ್ಯೂಯಿ,



ಟ್ರೂಮನ್,



ವಾಲೇಸ್

ಕನ್ನಡ ಭಾರತದ ಭೀಮಸೇನ

ಲೇಖಕರು:
ಶ್ರೀ ಗೋವಿಂದ ಪೈ, ಮಂಜೇಶ್ವರ

(ಸ್ಥಾಲೀಪುಲಾಕ)

ಭೀಮನ ಹೆಸರೆತ್ತುವಲ್ಲಿ ನನಗೆ ಹೀಗೆನಿಸುತ್ತದೆ, ಆತನನ್ನು ಕುರಿತು ತರ-ತಮ ಭಾವಗಳಿಂದಲೇ ಹೇಳಬೇಕಲ್ಲದೆ, ಆ ಪ್ರತ್ಯಯಗಳಿಲ್ಲದ ಶುಷ್ಕ ಗುಣವಾಚಿಗಳಷ್ಟೇ ಆ ಬಗ್ಗೆ ಸಾಲವು. ಆತನು ಚಿಕ್ಕಂದಿನಿಂದಲೇ ಕಷ್ಟಿಗ, ಶ್ರಮಜೀವಿ. ಕೌರವರಿಗೂ ಆತನಿಗೂ ಹುಟ್ಟುಹಗೆ, ಆಜನ್ಮ ಸಾಪತ್ನ್ಯ. ಅವರಿಗೆ ಇತರ ಪಾಂಡವರಲ್ಲಿ ಅವರಿದ್ದರೆ ಇರಲಿ ಎಂಬಂಥಾ ಔದಾಸ್ಯವಿದ್ದಿರಬಹುದೇನೋ, ಆದರೆ ಭೀಮನಲ್ಲಿ ಅಹಿ-ನಕುಲ. ಕೌರವರು ಆತನನ್ನು ಶೈಶವದಲ್ಲೇ ಕುಹಕದಿಂದ 'ಕಟ್ಟಿ ಹಾಕಿದರೊಂದು ಮಡುವಿನಲಿ' (ಕನ್ನಡ ಭಾರತ, ಆದಿ. ೬. ೧೦) 'ಮಹಾಸುರದ ಫಣಿಗಳಲಿ ಕಚ್ಚಿಸಿ ಗಾಸಿಮಾಡಿ'ದರು. (ಅದೇ, ೧೧),

> ಪಾವುಗಳಂ ಕೊಳಿಸಿ ಮಹಾ
> ಗ್ರಾವಮನುಱದಡಸಿ ಕಟ್ಟಿ ಕೊರಲೊಳ್ ಗಂಗಾ।
> ದೇವಿಯ ಮಡುವಿನೊಳಬ್ಬಿದ
> ರಾವರಿಸದೆ ತಮ್ಮ ಕುಲವನಡಿಗಬ್ಬುವವೋಲ್ ॥
>
> (ಪಂಪ ಭಾರತ, ೨.೩೨)

ಅದೂ ಸಾಲದೆ,

> ಕಾಳಕೂಟ ಹಲಾಹಲವ ಕಾ
> ರ್ಕೋಟಕದ ರದ ವತ್ಸನಾಭಿ ಕ
> ರಾಳ ಸೌರಾಷ್ಟ್ರಕವ ಶೌಕ್ಲಿಕ ಸುಪ್ರದೀಪಕವ।
> ಹೇಳಲರಿದೆನಿಪೆಂಟು ವಿಷವನು
> ಮೇಳವಿಸಿ ಬಳಿಕುಳಿದ ಮಧುರ ವಿ
> ಶಾಲ ವಸ್ತುಗಳಿಂದ ಕಜ್ಜಾಯಗಳ ಮಾಡಿಸಿ ॥
>
> (ಕ- ಭಾ. ಆದಿ. ೬.೧೪)

ಅವನ್ನು ಬಾಲ್ಯದಿಂದಲೆ ಕೂಳುಪಾಂಡ್ಯನಾಗಿದ್ದ ಆತನಿಗೆ ಉಣಿಸಿದರು. ಭೀಮನಾದರೂ ರವಷ್ಟೂ ಬೇಸರಲಿಲ್ಲ ಮಾತ್ರವಲ್ಲ, ತನಗೆ ಕಡಿಸಿದ ಹಾವುಗಳ ವಿಷಕ್ಕೆ ಗಾರುಡಿಸಿದ, ಗಂಗೆಯಿಂದ ತೇಲಿ ಬಂದ, ಇಕ್ಕಿದ ಕಜ್ಜಾಯಗಳನ್ನು ಮೆದ್ದು ಡರ್ರನೆ ತೇಗಿದ; ಮತ್ತೂ ಅವೆಲ್ಲ ಶಿಕ್ಷೆಗಳಲ್ಲಿ ತೇರಿ ಬಂದೂ ಆತನು ಕೌರವರನ್ನು 'ಮುರಿಯಾಟದಲಿ ಸದೆದ' (ಕ. ಭಾ. ಆದಿ ೬.೧೪). ಆ ಮೇಲೆ ಕೌರವರು ಕುಂತೀಸಮೇತರಾದ ಪಾಂಡವರನ್ನು ಅರಗಿನಮನೆಯೊಳಗೆ ಯುಕ್ತಿಯಿಂದ ಒಳಕೈಸಿ, ಅಲ್ಲಿದ್ದಾಗ ಅವರನ್ನು ಸುಟ್ಟುಬಿಡಲೆಂದು ಆ ಮನೆಯನ್ನು ಸುಟ್ಟರೂ ಅವರು ಸುಟ್ಟುಹೋಗದೆ ಅದರ ಸುರಂಗದ್ವಾರದಿಂದ ಹೊರನುಸುಳುತ್ತಲೆ, ಮುಂದೆ ನಡೆಯಲಾರದ ಅವರೆಲ್ಲರನ್ನೂ ಇನ್ನೂ ಎಳೆ ಪ್ರಾಯದಲ್ಲಿದ್ದ ಭೀಮನೊಬ್ಬನೆ ಹೊತ್ತುಕೊಂಡು ಎಷ್ಟೋ ದೂರಕ್ಕೆ ನಡೆದು ಹೋದ. ಆ ಎಳವೆಯಲ್ಲೇ ಏನು ಸಾಮರ್ಥ್ಯ! ಅನಂತರ ಹಿಡಿಂಬ, ಬಕ, ಕಿಮ್ಮೀರ, ಜಟಾಸುರ, ಮೊದಲಾದ ರಾಕ್ಷಸರನ್ನು, ಜರಾಸಂಧ, ಕೀಚಕರಂಥಾ ತನ್ನಂತೆಯೇ ಸಾವಿರ ಮದ್ದಾನೆಗಳಷ್ಟರ ಬಲಾಢ್ಯರನ್ನು ಹುಡಿಹುಡಿ ಗೈದ ಅಪ್ರತಿಮ ಬಲಾಧಿಕನಾ ಭೀಮ.

ಆತನು ಏಕಾಂಗವೀರ, ಒಕ್ಕೈವೀರ. ಭಾರತದ ಮಿಕ್ಕ ವೀರರಿಗೆ ಯುದ್ಧದಲ್ಲಿ ರಥಗಳೂ ಬೇಕು, ಕೈಯ್ಯಲ್ಲಿ ಆಯುಧಗಳೂ ಬೇಕು. ಅನ್ಯಥಾ ಅವರು ತೀರ ಮಿಟಿಮಿಟಿ ಗೊಂಬೆಗಳಷ್ಟೇ. ಕರ್ಣಾರ್ಜುನರಾದರೂ ತಂತಮ್ಮ ಬಿಲ್ಲಂಬುಗಳೂ ಅವುಗಳೊಂದಿಗೆ ಪ್ರಾಯಶಃ ತೇರೂ ಇಲ್ಲದಿದ್ದರೆ, ಒಂದು ನಿಮಿಷಕ್ಕಾದರೂ ಕಾದಲಾಪರೆ? ಭೀಮನಿಗಾದರೆ ತೇರು ಹೇಗೂ ಬೇಡವಷ್ಟೇ, ಗದೆಯೂ ಏಕೆ? ಯಾವ ಆಯುಧವೂ ಬೇಕೆಂದಿಲ್ಲ, ತನ್ನ ತೋಳೇ ಸಾಕು, ಕೊನೆಗೆ ತನ್ನ ಮುಷ್ಟಿಯೂ ಸಾಕು ಶತ್ರುಹನನಕ್ಕೆ. ಉದಾ: ಹಿಡಿಂಬನನ್ನು ಆತನು 'ಹೆಮ್ಮರನ ಕೊಂಬಿನಲಿ' ಹೊಯ್ದು (ಕ. ಭಾ. ಆದಿ. ೯. ೨೦) 'ಸೀಳ್ದು ಬೀಸಿದ' ನು (ಪಂ. ಭಾ. ೩. ೧೮); ಬಕನನ್ನು 'ಅಸಗವೊಯ್ಲಿಂ' ಹೊಯ್ದು ಕೊಂದನು (ಪಂ. ಭಾ. ೩.೨೦), ಅಂದರೆ ಅಗಸನು ಬಟ್ಟೆ ಒಗೆವಂತೆ ಒಗೆದು ಕೊಂದನು; ಕಿಮ್ಮೀರನನ್ನೂ ಮರದ ರೆಂಬೆಯಿಂದ ಹೊಡೆದು ಕೊಂದನು; ಜರಾಸಂಧನನ್ನು ಮುಷ್ಟಿಯುದ್ಧದಲ್ಲಿ ಸೀಳಿ ಕೊಂದನು; ಕೀಚಕನನ್ನು ಮುಷ್ಟಾಮುಷ್ಟಿಯಾಗಿ ಜಟ್ಟಿ ಕಾಳಗದಲ್ಲಿ ಕೊಂದನು. ಅರ್ಥಾತ್ ಭೀಮನ ವೀರತ್ವ ಆತನ ಆಯುಧದಲ್ಲಿ ಅಲ್ಲ, ಆತನ ಸಾಮರ್ಥ್ಯದಲ್ಲಿ, ಅಂದರೆ ಆತನಲ್ಲಿಯೇ ಇತ್ತು.—

> ಕ್ರಿಯಾಸಿದ್ಧಿಃ ಸತ್ತ್ವೇ ವಸತಿ ಮಹತಾಂ ನೋಪಕರಣೇ

ಶ್ರೀ ಕೃಷ್ಣನಲ್ಲಿ ಆತನಿಗಿದ್ದ ನಿಶ್ಚಲವಾದ ಭಕ್ತಿಯ ಮಟ್ಟಿಗೆ ಸುತರಾಂ ಎರಡು ಬಗೆಯತಕ್ಕಂತೆ ಇಲ್ಲವಾದರೂ, ಯಾವ ಕಂಟಕದಲ್ಲೂ ಆ ಭಗವಂತನಿಗೆ ಆತನು ಒಮ್ಮೆಯಾದರೂ ಮೊರೆಯಿಡದೆ, ತನ್ನನ್ನೇ, ತನ್ನ ಸಾಮರ್ಥ್ಯವನ್ನೇ ನಚ್ಚಿ, ಉಚ್ಚೈಃಶಿರನಾಗಿ ಪ್ರತಿಕೂಲ ದೈವದೊಡನೆ ಭುಜಾಭುಜಿಯಾಗಿ ಹೆಣಗಾಡಿ ತನ್ನನ್ನೂ ತನ್ನವರನ್ನೂ ಪಾರಗಾಣಿಸಿದ ಅಸಹಾಯಶೂರನೂ ಅದ್ವೈವವೀರನೂ ಆತ. ಹಾಗೂ ನಿನ್ನ ಬಂಡಿ ಸುಟ್ಟದೆ, ನನ್ನ ಕುದುರೆ ಸತ್ತದೆ, ಅತಏವ ನನ್ನ ಬಂಡಿಗೆ ನಿನ್ನ ಕುದುರೆಯನ್ನು ಹೂಡಿ ಮುಂದೆ ಸಾಗೋಣ ಎಂಬ ಪರಾವಲಂಬನವನ್ನೂ ದಾರಿಯಲ್ಲಿ ಹುಲಿ ಇದಿರು ಬರಲಿಕ್ಕೆ ಮನೆಗೆ ಓಡಿ ಹೋಗಿ ಬಿಲ್ಲನ್ನು ಕೊಂಡುಬರುವೆನೆಂಬ ಶಸ್ತ್ರಾವಲಂಬನವನ್ನೂ ಒಲ್ಲದ, ಎಲ್ಲಿ ಕಷ್ಟವೊ ಅಲ್ಲಿ ಧೃಷ್ಟನೆಂದು ತನಗೆ ತಾನು ಸಾಕಾದ ಆತ್ಮಾವಲಂಬನವೇ ವೀರತೆಯ ನೇತಃಪರವಾದ ಪ್ರಮುಖ ಲಕ್ಷಣವೆಂದಾದರೆ, ಮತ್ತು ತನ್ನ ಪ್ರಾಣದ ಮೇಲೆ ತಿರಸ್ಕಾರವೂ ಸ್ವಾಭಿಮಾನದ ಪುರಸ್ಕಾರವೂ ಆ ವೀರತೆಯ ಎರಡು ಬಾಹುಗಳೆಂದೂ ಆದರೆ, ಆ ದೃಷ್ಟಿಯಿಂದ ಸಮೀಕ್ಷಿಸುವಲ್ಲಿ, ಭಾರತದಲ್ಲಿ ಭೀಮನನ್ನು ಮಿಕ್ಕ ವೀರನು ಮತ್ತೊಬ್ಬನಿಲ್ಲ, ಅಥವಾ ಆದರ ಬೇರೆ ಯಾವ ವೀರನು ತಾನೆ ತನ್ನ ಪರಮಧ್ಯೇಯವನ್ನು, ತನ್ನ ಜೀವಿತಸರ್ವಸ್ವವನ್ನು ಈ ಶಿಲಾವಚನದಲ್ಲಿ ಉದ್ಗಾರಿಸಿರುವನು? —

ಶ್ರೀ ಗೋವಿಂದ ಪೈಯವರ ಸರಿತೂಕದ ವಿದ್ವಾಂಸರು ಕರ್ನಾಟಕದಲ್ಲಿ ಕೈಬೆರಳುಗಳಲ್ಲೆಣಿಸುವಷ್ಟು ಜನರೂ ಇಲ್ಲವೆನ್ನಬಹುದು. ಪ್ರಾಚ್ಯ ಸಂಶೋಧನದಲ್ಲಿ ಇವರದು ಅಧಿಕಾರವಾಣಿಯಾದರೂ ಸಾಹಿತ್ಯ ವಿಮರ್ಶೆ, ಕಾವ್ಯನಿರ್ಮಾಣಗಳಲ್ಲಿಯೂ ಇವರು ತುಂಬ ಸಾಫಲ್ಯ ಪಡೆದಿದ್ದಾರೆ. ಭಾರತದಲ್ಲಿ ಭೀಮನ ಪಾತ್ರದ ವೈಶಿಷ್ಟ್ಯಗಳನ್ನು ಅವರು ಇಲ್ಲಿ ವಿವೇಚಿಸಿದ್ದಾರೆ.

ಜೀವವೀಕ್ಷಣವಳಿದು ಹೋಗಲಿ
ಕಾವುದಭಿಮಾನವನು ನಿತ್ಯದ
ಭಾವನಾಗಿಹುದಾತ್ಮನಾಚಂದ್ರಾರ್ಕವಭಿಮಾನ॥

(ಕ. ಭಾ. ಅರಣ್ಯಕ. ೨.೨೭)

ಪ್ರಾಣದ ಅವಗಣ್ಯತೆಯೂ ಸ್ವಾಭಿಮಾನದ ಅತಿಗಣ್ಯತೆಯೂ ವೀರತೆಯ ಜೀವಾಳವೆಂಬ ಸತ್ಯವನ್ನು ಯಾರಾದರೂ ಅಲ್ಲಗಳೆಯಲಾಪರೇ?

ಮತ್ತೂ ನೋಡೋಣ. ಧರ್ಮರಾಯನ ತಮ್ಮಂದಿರೆಲ್ಲರೂ ಭಾರತನ ಒಳಗೂ ಹೊರಗೂ ದಿಗ್ವಿಜಯಿಸಿ, ಆತನ ರಾಜಸೂಯಯಾಗವನ್ನು ಮಹಾಮಹವಾಗಿ ನೆರವೇರಿಸಿದರಷ್ಟೇ. ಆದರೆ ಯಾವ ಜರಾಸಂಧನನ್ನು ನಿಗ್ರಹಿಸಿದಲ್ಲದೆ ಆ ಯಜ್ಞವು ಸಾಗುವಂತಿಲ್ಲ ಎಂದು ಶ್ರೀಕೃಷ್ಣನು ಅಷ್ಟು ಕಟ್ಟಾಗಿ ಹೇಳಿದನೊ—

.... ಆ ಮಾ
ಗಧನೆ ಬಲುಗೈ ರಾಜಸೂಯಕೆ
ಸವರವನು ನಾ ಕಾಣೆನಾತನ ಖಂಡೆಯದ ಮೊನೆಗೆ॥

(ಕ. ಭಾ. ಸಭಾ. ೨.೩೩)

ಆ ಜರಾಸಂಧನನ್ನು ಮಡುಹಿ ಆ ಯಾಗವನ್ನು ಧರ್ಮರಾಯನಿಂದ ಮಾಡಿಸಿದಾತನು ನಿಜವಾಗಿ ಭೀಮಸೇನನೊ? ಮತ್ತೆ ಯಾವನೊಬ್ಬನೊ? ಹಾಗೂ ಭಾರತದಲ್ಲಿ ಕರ್ಣಾರ್ಜುನರಿಲ್ಲದಿದ್ದರೂ, ಬೇರೆ ಯಾವ ಮಹಾವೀರರಿಲ್ಲದಿದ್ದರೂ, ಅದು ಕಂಡಿತವಾಗಿ ಸಾಗುತಿತ್ತು. ಆದರೆ ಭೀಮ–ದುರ್ಯೋಧನರಿಲ್ಲದಿದ್ದರೆ ಮಾತ್ರ, ಕೈಮುಟ್ಟಿಸಿದ ಶತಪದಿಯಂತೆ, ಅದು ಅಲ್ಲಿಯೇ ಸುರುಟುತಿತ್ತಲ್ಲದೆ ಸರ್ವಥಾ ಮುಂದರಿಯುತ್ತಿರಲಿಲ್ಲ. ಏಕೆಂದರೆ ದುರ್ಯೋಧನನಿಲ್ಲದಿದ್ದರೆ, ಆ ಯುದ್ಧವೆಲ್ಲಿ? ಆ ಕಥೆಯೇ ಎಲ್ಲಿ? ಅಂತೆಯೇ ಸೂಜಿಯ ಮೊನೆಯನ್ನು ಊರುವಷ್ಟರ ಎಡೆಯನ್ನಾದರೂ ಪಾಂಡವರಿಗೆ ಬಿಟ್ಟು ಕೊಡಲೊಲ್ಲೆ ಎಂಬ ದುರ್ಯೋಧನನೂ ಆತನ ಮಂದಿ ಏನೋ ತಮ್ಮಂದಿರೂ ಇದ್ದಿರುವನಕಾ, ಇಲ್ಲವೆ ಆ ತಮ್ಮಂದಿರೆಲ್ಲರೂ ಮಡಿದ ಮೇಲೂ ಛಲವಾದಿಗಳಲ್ಲಿ ಛಲವಾದಿಯೂ ಹಟಗಾರರಲ್ಲಿ ಹಟಗಾರನೂ ಆದ ಆ ದುರ್ಯೋಧನನು ಜೀವಂತವಾಗಿದ್ದನಕಾ ಧರ್ಮರಾಯನಿಗೆ ರಾಜ್ಯ ಬರುತ್ತಿತ್ತೇ? ಆ ಕೌರವ ವಂಶದ ವಂಶವನ್ನೇ ನಿರ್ಮೂಲಿಸಿದ ಅದೊಬ್ಬನೇ ಯಾರು? ಅರ್ಥಾತ್ ಧರ್ಮರಾಯನನ್ನು ಹಸ್ತಿನಾವತಿಯ ಸಿಂಹಾಸನದಲ್ಲಿ ಕುಳ್ಳಿರಿಸಿದವನಾರು? ಆ ಕಾರಣ ಭಾರತವನ್ನು ಸಾಕಲ್ಯವಾಗಿ ಜಯೋತ್ತರವಾಗಿ ಕೊನೆಗಾಣಿಸಿದವನಾರು? ಭೀಮಸೇನನೊ? ಮತ್ತಾವನೊಬ್ಬನೊ? ಹಾಗಾದರೆ ಭಾರತದ ಪ್ರಾಣಯೋನಿ ಯಾರು? ಭಾರತದ ವೀರತೆಯ ಜೀವಜ್ಯೋತಿ ಯಾರು? ಅತಏವ ಭಾರತದ ವೀರಾಧಿವೀರನೆಂದರೆ ಭೀಮನಲ್ಲದೆ ಮತ್ತಾರು? ಹೀಗೆ ಒಂದೇ ಮಾತಿನಲ್ಲಿ ಹೇಳುವುದಾದರೆ, ಭೀಮನಿದ್ದಿಲ್ಲವಾದರೆ, ಧರ್ಮರಾಯನಿಗೆ ರಾಜ್ಯಪ್ರಾಪ್ತಿ ಇಲ್ಲ, ಅತಏವ ಭಾರತವೇ ಇಲ್ಲ.

ಹಾಗಾದರೆ ಯಾವ ಭಾರತಕಾರನಾದರೂ ಭಾರತದ ನಾಯಕತ್ವದ ಬಾಸಿಗವನ್ನು ಭೀಮನಿಗೆ ಮುಡಿಸಿಲ್ಲವೇಕೆ? ಇಷ್ಟೇ ಜಗ್ಗೆ: ಆತನ ಆ ಅನುಪಮೇಯವಾದ ಸಾಮರ್ಥ್ಯದೊಂದಿಗೆ ಅದಕ್ಕೆ ತಕ್ಕಂತೆ (ಉದಾ.) ಅರ್ಜುನನ ಮೇಧಾಶಕ್ತಿಯೂ ಆತನಿಗೆ ಸಾಕಷ್ಟಾದರೂ ಇದ್ದಿದ್ದರೆ, ವ್ಯಾಸನೂ ಅವನ ಒಂದೆ ಇತರ ಭಾರತಕಾರರೂ ಆ ನಾಯಕತ್ವದ ಹಾರವನ್ನು ಅವನ ಕೊರಳಲ್ಲೇ ಹಾಕಿಬಿಡುತ್ತಿದ್ದರು. ಆದರೆ ಮಾಡಲೇನು? ಭೀಮನ ಸರ್ವಸ್ವವೂ ಆತನ ತೋಳುಗಳಲ್ಲೇ ಬಂದು ಕೂತಿತಲ್ಲದೆ, ಒಳಗಿಂದೊಳಗೆ ಕೊನೆವರೆಗೂ ತೀರ ಬಾಲಬುದ್ಧಿ, ಕಾರ್ಯದಲ್ಲಿ ತೀರ ದುಡುಂದುಡುಕು. ಹೀಗಾಗಿ ಆತನ ವೀರತೆಗೆ ತಕ್ಕ ವಿವೇಕದ ಮೆರುಗಿಲ್ಲದೆ, ಅದು ಆ ಕವಿಗಳ ಮನಸ್ಸನ್ನು ಸೆಳಕೊಳ್ಳಲಾರದಾಯಿತು. ದಿಙ್ಮಾತ್ರವಾಗಿ ಹೇಳುವುದಾದರೆ, ಕೀಚಕನ ಬಲಾತ್ಕಾರದಿಂದ ಕ್ಷುಬ್ಧಳಾದ ದ್ರೌಪದಿಯ ಮೊರೆಯಲ್ಲಿ ಮನಕರಗಿ ಆತನನ್ನು ಕೊಂದು ಅವಳ ಮಾನವನ್ನು ಕಾಯಲಿಕ್ಕೆ ದುಡುಕಿದವನೂ ಹಾಗೂ ದುಡುಕಲಾಪವನೂ ಎಂದರೆ ಪಾಂಡವರಲ್ಲಿ ಆತನೊಬ್ಬನೆ. ಹಾಗೆ ಕೈಮಾಡುವುದರಿಂದ ತಮ್ಮ ಅಜ್ಞಾತವಾಸದ ಗುಟ್ಟು ಬಯಲಾಗಿ ತಾವು ಮತ್ತೂ ೧೨ ವರ್ಷ ತೊಳಲಬೇಕಾದೀತಲ್ಲ? ಎಂಬ ಗೊಡವೆಯ ದಾರಿಗೇ ಆತ ಹೋಗಿಲ್ಲ, ಆ ದೀರ್ಘದೃಷ್ಟಿ ಸುತರಾಂ ಇಲ್ಲ. ಮಾಡಬೇಕೆಂದು ಮನಸ್ಸಿಗೆ ಮೂಡಿತೊ ಮಾಡಿಯೇ ಬಿಟ್ಟ ಆ ಯತ್ಕಿಂಚನಕಾಶಿ. ಪಾಂಡವರಲ್ಲಿ ಮಿಕ್ಕವರಿಗಿಂತ ಶ್ರೀ ಕೃಷ್ಣನಲ್ಲಿ ಆತನ ಭಕ್ತಿ ಕಡಿಮೆಯಾಗಿರಲಿಲ್ಲ, ಪ್ರಾಯಶಃ ಕೊಂಚ ಅಧಿಕವೇ ಆಗಿತ್ತಾದರೂ ಕೃಷ್ಣನು ಗೀತೆಯನ್ನು ಆತನಿಗೆ ಹೇಳಲಿಕ್ಕೆ ಹೊರಟಿದ್ದರೆ–. ಆದರೆ ಕಾದೆನ್ನುವ ಮುಂಚೆ ಕಾದಲಿಕ್ಕೆ ಟೊಂಕ ಕಟ್ಟಿ ಚಚ್ಚರಿಸುವಾತ ಕಾದೆನ್ನುವಾಗ ಮತ್ತೆ ನಿತ್ತಾನೆ? ಅಂಥವನಿಗೆ ತನ್ನ ಬಂಧುಬಳಗದ ಮೇಲೂ ಗುರುಹಿರಿಯರ ಮೇಲೂ ಕೈಯೆತ್ತೆನೆಂದು ಶಸ್ತ್ರಗಳನ್ನು ಕೆಳಗಿಡುವಷ್ಟರ ಕ್ಲೈಬ್ಯವೂ ಹೃದಯದೌರ್ಬಲ್ಯವೂ ಮನಸಿನಲ್ಲಿ ಹೇಗೂ ಇರಲಾರವಷ್ಟೇ, ಕನಸಿನಲ್ಲಾದರೂ ಇದ್ದಾವೇ? ಅಂಥವನಲ್ಲಿ ಹೊಸ ಹುರುಪನ್ನು ಹುಟ್ಟಿಸತಕ್ಕಂತೆ ಆತನಿಗೆ ಗೀತೆಯನ್ನು ಉಪದೇಶಿಸಿ ಕೃಷ್ಣನೇಕೆ ವೃಥಾ ದವಾಗ್ನಿಗೆ ಶಾಕವಿತ್ತಾನು? ಉಬ್ಬರಕ್ಕೆ ನೀರು ಹೊತ್ತಾನು? ಆದರೂ ವಿತರ್ಕಮಾತ್ರಕ್ಕಾಗಿ ಕೃಷ್ಣನು ಭೀಮನಿಗೆ ಗೀತೆಯನ್ನು ಹೇಳತೊಡಗಿದನೆಂದೇ ಇಟ್ಟುಕೊಂಡರೆ ಅದು ೨ ನೆಯ ಅಧ್ಯಾಯದ ಕೆಲವು ಶ್ಲೋಕಗಳಿಗಿಂತ ಮುಂದಕ್ಕೆ ಸರಿಯುತ್ತಿರಲೂ ಇಲ್ಲ–ಏಕೆಂದರೆ ಹೇಳಿಕೊಡುವುದನ್ನು ಕಿವಿಗೊಟ್ಟು ಕೇಳುವಷ್ಟರ ತಾಳ್ಮೆ, ಅದನ್ನು ತಿಳಿಯುವಷ್ಟರ ಜಾಣ್ಮೆ ಗಿಳಿಗಲ್ಲದೆ ಹದ್ದಿಗೆಲ್ಲಿ?— ಆತನಿಗೆ ತನ್ನ ವಿಶ್ವರೂಪವನ್ನು ಪ್ರದರ್ಶಿಸಬೇಕಾದ ಆವಶ್ಯಕತೆ ಶ್ರೀ ಕೃಷ್ಣನಿಗೆ ಇರುತ್ತಿರಲೂ ಇಲ್ಲ. ಭೀಮನಿಗೆ ತನ್ನ ಕೆಲಸವಾಯಿತು, ತಾನಾಯಿತು, ಗುರುತರವಾದ ಯಾವ ವಿಷಯಗಳ ತೊಡಕೂ ಇಲ್ಲ, ಕೆಲಸ ಮುಗಿಯುತ್ತಲೆ ಪ್ರಾಯಶಃ ಯಾವೊಂದು ವಿವಿಕ್ತವಾದ ಸ್ಥಳವನ್ನು ಸೇರಿ ಎಲೆಯಡಿಕೆ ಜಗಿಯುತ್ತಲೂ, ಅಲ್ಲಿ ಸಹಜವಾಗಿ ನೆರೆವ ಮಂದಿಯೊಂದಿಗೆ ಪಟ್ಟಾಂಗ ಹೊಡೆಯುತ್ತಲೂ, ಅಥವಾ ತನ್ನೊಡನೆ ಸಸ್ನೇಹವಾಗಿ ಜಟ್ಟಿ ಕಾಳಗವನ್ನು ಮಾಡಬೇಕೆಂದು ಬಂದ ಮಲ್ಲರೊಡನೆ ಹೋರಾಡಿ ಅವರನ್ನು ಸೋಲಿಸತಕ್ಕಂತೆ ಕುಕ್ಕರಿಸುತ್ತಲೂ, ಅಲ್ಲವೆ ತನ್ನಲ್ಲಿ ಮಲ್ಲಯುದ್ಧವನ್ನು ಕಲಿಯಲಿಕ್ಕೆ ಬಂದ ಪ್ರೇಪ್ಸುಗಳಿಗೆ ಕಲಿಸುತ್ತಲೂ, ಕಾಡಿನಲ್ಲಿದ್ದಾಗ ಬೇಡರ ಜತೆಯಲ್ಲಿ ಹೋಗಿ ಬೇಟೆಯಾಡುತ್ತಲೂ ಇದ್ದರೆ ತೀರಿತಲ್ಲಿಗೆ ಆತನ ದಿನಚರ್ಯೆ. ಈ ಕಾರಣ ಆತನ ಸಲುಗೆಯ ಒಡನಾಡಿ ಎಂದರೆ ಆತನೆ, ಇಲ್ಲವೆ ಅವನ ಸ್ವಂತ ಅಖಾಡದ ಮಲ್ಲರು ಹಾಗೂ ಅವನ ಆಖೇಟದ ಬೇಡರು. ಇಂಥಾ ಅಪೂರ್ವವೂ ವಿಲಕ್ಷಣವೂ ಆದ ವ್ಯಕ್ತಿಗೆ ರನ್ನನೊಬ್ಬನು ಮಾತ್ರ, ಅದೂ ಸಹೇತುಕವಾಗಿ, ಕಟ್ಟಿದನಲ್ಲದೆ ಬೇರೆ ಯಾವ ಕವಿ ಮಹಾಕಾವ್ಯೋಚಿತವಾದ ಧೀರೋದಾತ್ತ ನಾಯಕತ್ವದ ಪಟ್ಟವನ್ನು ಕಟ್ಟಿಯಾನು?

ಈ ಸಂದರ್ಭದಲ್ಲಿ ಇದೊಂದು ಸಾಕೂತವಾದ ಪ್ರಶ್ನೆಯನ್ನು ಎತ್ತಬಹುದು, ಭೀಮನು ದುಃಶಾಸನನ

ಹೊಡೆದು ವಕ್ಷವನುಗಿದು ರಕ್ತವ
ಕುಡಿತೆಯಲಿ ನೊಗೆನೊಗೆದು ವೂರುತಿ
ಕುಡಿದು ಮಿಕ್ಕುದ ಖಳನ ಕಟವಾಯಿಗಳಲಿರೆದೆರೆದು ।
ಮಡದಿಯುನು ಭಂಗಿಸಿದ ಫಲವಿದು
ಕಡೆಗೆ ಗಣಿಸಿತೆ ಕೌರವಾನುಜ
ನುಡಿಯುದಿರಲೇಕಂಜಬೇಡೆನ್ನಾಣೆ ನುಡಿಯೆಂದ ॥

(ಕ. ಭಾ. ಕರ್ಣ. ೧೯. ೫೫)

ಹಾಗೂ ಆತನ

ಶೋಣಿತಾಂಬುವಿನಿಂದ ತರುಣಿಯು
ವೇಣಿಯುನು ತೊಳತೊಳದು ದಂತ
ಶ್ರೇಣಿಯಲಿ ಬಾಚಿದನು ಬೈತಲೆ ತೆಗೆದು ಚೆಲುವಿನಲಿ ॥

(ಅದೇ ೧೯. ೬೨.)

ಎಂದು ಕೇಳಿದೆಯಲ್ಲ? ಇದು ಧರ್ಮವೆ? ಇದು ವೀರತೆಗೆ ತಕ್ಕುದೇ? ಎಂದು ಇದಕ್ಕೆ ಪ್ರತಿನುಡಿಯಾಗಿ ಹೇಳುವುದಾದರೆ, ರಜಸ್ವಲೆಯಾಗಿದ್ದ ದ್ರೌಪದಿ, 'ರಜಸ್ವಲೆಯಾಗಿರ್ದೆಂ ಮುಟ್ಟಲಾಗದು' (ಪಂ ಭಾ. ೭. ೪. ವಚನ),

ಅನುಜ ಕೇಳ್ಳೆ ಪುಸ್ಪವತಿ ತಾ
ನೆನಗೆ ರಾಜಸಭಾಪ್ರವೇಶವ
ದನುಚಿತವಲೆ? .... (ಕ. ಭಾ. ಸಭಾ. ೧೪. ೬೮)

ಎಂದು ಅಂಗಲಾಚಿ ಸೆರಗೊಡ್ಡಿ ಬೇಡಿಕೊಂಡರೂ ಒಲ್ಲದೆ, ಅದಕ್ಕೆ ರವಷ್ಟೂ ಗಮನಿಸದೆ, ದುಶ್ಶಾಸನನು ಆಕೆಯುನ್ನು ಮುಡಿ ಹಿಡಿದು ದುರ್ಯೋಧನನ ಸಭಾಮಧ್ಯಕ್ಕೆ ಎಳತಂದು, ಆ ತುಂಬು ಸಭೆಯಲ್ಲಿ ಆಕೆಯನ್ನು ಬತ್ತಲೆ ಮಾಡಲೆಂದು ಆಕೆಯ ಸೀರೆಯನ್ನು ಒಂದರ ಹಿಂದೆ ಒಂದು ಸೆಳೆದನಲ್ಲಾ? ಅದು ನ್ಯಾಯವೇ? ಎಂದು ಪ್ರತಿಪ್ರಶ್ನಿಸಬಹುದು. ಆಗ್ಗೆ ಆ ಸಭೆಯಲ್ಲಿ ಇದ್ದ ಇಲ್ಲದ, ಹಾಗೂ ವ್ಯಕ್ತಿತ್ವ ಎಂದುಳ್ಳ, ಪ್ರತ್ಯೇಕ ವ್ಯಕ್ತಿಯನ್ನು ಕರೆದು ತನ್ನ ಮಾನವನ್ನು ಕಾಯಿ ಎಂದು ಗೋಳಾಡುವ ದ್ರೌಪದಿಯ ಅರಣ್ಯರುದಿತದಿಂದ ಕನಕನಲಿ ಕಿಡಿಕಿಡಿಯಾದ, ಹಾಗೂ ಅಣ್ಣನ ವಚನೇಸ್ಥಿತನಾಗಿ ಹಲ್ಲು ಕಿತ್ತ ಹಾವಿನಂತೆ ಆಗ್ಗೆ ಏನೂ ಮಾಡಲಾರದ ಭೀಮನು—

ಧರಣಿ ಜಲ ಪಾವಕ ಸಮೀರಾ
ದ್ಯರುಗಳರಿತಿರಿ ಶಕ್ರ ನಿರುಋತಿ
ವರುಣ ವಾಯು ಕುಬೇರ ಯಮರೆಂಬಖಿಳ ದಿಗಧಿಪರು ।
ಬರೆದುಕೊಂಡಿರಿ ಭಾಷೆಯುನು ಸುರ
ನರ ಫಣಿವ್ರಜ. . . . . ॥

(ಕ. ಭಾ. ಸಭಾ. ೧೫. ೩೮)

ಎಂದು ಸಕಲ ಜಗತ್ತನ್ನೇ ತನ್ನ ಸಾಕ್ಷಿಯಾಗಿಟ್ಟುಕೊಂಡು,

. . . . ಕೌರವರ ನೂರ್ವರ
ಗೋಣ ಬನಕಾಳಗದೊಳಿನ್ನಯ
ಕೇಣಿ ತನ್ನಯ ಗದೆಗೆ ದುರ್ಯೋಧನನ ತೊಡೆಗಳಿಗೆ ।
ವಾಣಿಯುವು ದುಶ್ಶಾಸನನ ತನಿ
ಶೋಣಿತವ ತಾ ಕುಡಿಯುದಿರೆ ನಿ
ನ್ನಾಣೆ ಸ್ವೈರಣೆಗಿದುವೆ ಫಲ. . . . . . . । (ಅದೇ. ೧೫. ೩೭)

ಎಂದು ಥರಥರನೆ ನಡುಗುತ್ತಿರುವ ಆ ಸಭೆಯ ಮುಂದೆ ದ್ರೌಪತಿಗೆ ಈ ಭಾಷೆ ಇತ್ತನು. ಕೋಪದ ರಭಸದಲ್ಲಿ ಕಣ್ಣುಕುರುಡನಾಗಿ, ಮನಕುರುಡನಾಗಿ, ಪ್ರಾಯುಶಃ ತಾನು ಏನು ಆಡುತ್ತೇನೆಂದು ಕೂಡಾ ಎಚ್ಚರವಿಲ್ಲದೆ ಮಾಡಿದ ಪ್ರತಿಜ್ಞೆಯದು. ಅದನ್ನು ತೊಟ್ಟುಕೊಂಡಂತೆ, ಹಾಗೂ ತೊಟ್ಟುಕೊಂಡ ಬಳಿಕ ಸಲ್ಲಿಸಬೇಕಾದಂತೆ ಸಲ್ಲಿಸಿದನಷ್ಟೇ. ದುಶ್ಶಾಸನನ ಘೋರವಾದ, ದಾರುಣವಾದ ಪೈಶಾಚಿಕ ಕೃತ್ಯಕ್ಕೆ, ಕುಂಭೀಪಾಕದಲ್ಲಿ ನರನರಳಿಯೂ ತೊಳೆಕೊಳ್ಳಲಾರದ ಆ ಮಹಾಪಾತಕಕ್ಕೆ ಭೀಮನು ಇಹದಲ್ಲಿ ಆತನಿಗೆ ಕೊಟ್ಟ ಶಿಕ್ಷೆ ಏನೂ ಹೆಚ್ಚಲ್ಲ, ಯಾವ ತಪ್ಪೂ ಅಲ್ಲ, ಅದರಿಂದ ಭೀಮನ ವೀರತೆಗೆ ಏತರ ಕುಂದೂ ಇಲ್ಲ, ಯಾವ ದೈವವೂ ಆ ಬಗ್ಗೆ ಭೀಮನಲ್ಲಿ ಮುನಿಯುತಕ್ಕ ಪಾಪವೂ ಅದಲ್ಲ, ಇದರೊಂದಿಗೆ ನೆನವರಿಸಿಕೊಳ್ಳೋಣವಂತೆ, ಪಂಚವಟಿಯಲ್ಲಿ ಲಕ್ಷ್ಮಣನು ಶೂರ್ಪಣಖಿಗೆ ನಾಸಾಭಂಗ ಮಾಡಿದನಲ್ಲ? ಆಕೆ ಮೂಗರಕಿಯಾಗುವಷ್ಟರ ಶತಾಪರಾಧಿಯಾಗಿದ್ದಳೆ? ಆದರೆ ಅದಾತನ ಮಹಾವೀರತೆಗೇನೂ ಲಾಂಛನವೇ? ಹಾಗೂ ದೈವ ಮುನಿಯತಕ್ಕ ಪಾತಕವೇ? ಸರ್ವಥಾ ಅಲ್ಲ. ಪಾಶವ ವೃತ್ತಿಯ ವ್ಯಕ್ತಿಗಳಲ್ಲಿ ಪಾಶವ ವೃತ್ತಿಯಿಂದಲೇ ವ್ಯವಹರಿಸಬೇಕು. ಅದರಲ್ಲಿ ಆತ, ಈತ, ಆಕೆ, ಈಕೆ ಎಂದಿಲ್ಲ, ಅದಲ್ಲದೆ ಮುಂದೆ ತಿಳಿವಂತೆ ರಾಮಾಯಣ ಭಾರತಾದಿ ಆ ಪುರಾತನ ಕಾಲದ ವೈರವಿಶುದ್ಧಿಯೂ ಕಣ್ಣಿಗೆ ಕಣ್ಣು, ಹಲ್ಲಿಗೆ ಹಲ್ಲು ಎಂಬಷ್ಟರ ಮಟ್ಟಿಗೆ ಮುಯ್ಯಿಗೆ ಮುಯ್ಯಾಗಿತ್ತು.

ಎರಡನೆಯದಾಗಿ ಭೀಮನಿಗೂ ಕೌರವನಿಗೂ ಆದ ಕೊಟ್ಟ ಕೊನೆಯ ಗದಾಯುದ್ಧದಲ್ಲಿ ಭೀಮನು ದುರ್ಯೋಧನನನ್ನು ಕೀಳಾಯದಲ್ಲಿ, ಅಂದರೆ ಸೊಂಟದ ಕೆಳಗೆ ತೊಡೆಯಲ್ಲಿ ಮೋದಿ ಕೆಡವಿ, ಮೂರ್ಧಾಭಿಷಿಕ್ತನಾದ ಆತನ ಕಿರೀಟವನ್ನು ತನ್ನ ಕಾಲಿಂದ ತುಳಿದನಷ್ಟೇ, ಅದು ಧರ್ಮವೆ? ಅದೂ ಭೀಮನ ವೀರತೆಗೆ ಕಳಂಕವಲ್ಲವೇ? ಎಂದು ಮತ್ತೂ ಆಕ್ಷೇಪಿಸಬಹುದು. ಹಿಂದೆ ನೋಡೋಣ, ಧರ್ಮರಾಯನು ಕೊನೆಗೆ ತನ್ನನ್ನೇ ಮುಂದಾಗಿ ಒಡ್ಡಿ ಸೋತ ಬಳಿಕ ತಾನೆ ಸಹಜವಾಗಿ ಕಿಂಕಾರ್ಯತಾಮೂಢನಾಗಿ ಕುಳಿತಿದ್ದಾಗ ಆತನನ್ನು ದುರ್ಯೋಧನನು ಶಕುನಿಯ ದ್ವಾರಾ ಬಲಾತ್ಕರಿಸಿ ಅಥವಾ ಪ್ರೇರೇಪಿಸಿ ಆತನಿಂದ ದ್ರೌಪದಿಯನ್ನು ಒಡ್ಡಿಸಿದನಲ್ಲ? ಅದು ನೀತಿಯೇ? ದ್ರೌಪದಿಯೇ ಆಕುರಿತು—

ಮುನ್ನ ತನ್ನನು ಸೋತು ಬಳಿಕಿನೊ
ಳೆನ್ನ ಸೋತರೆ ಸಲುವುದೇ ಸಂ
ಪನ್ನ ವಿಮಲಜ್ಞಾನರರಿದೀ ಪ್ರಶ್ನೆಗುತ್ತರವ।
ಎನ್ನ ಮೆಚ್ಚಿಸಿ ಕೊಡಲಿ. . . . . ॥

(ಕ. ಭಾ. ಸಭಾ. ೧೪. ೫೭)

ಎಂದು ಕೌರವ ಸಭೆಯ ಮುಂದೆ ಅರಿಕೆಮಾಡಿಕೊಂಡಳಲ್ಲ? ಅದಕ್ಕೆ ದುರ್ಯೋಧನನು ಯಥಾಪ್ರಶ್ನವಾದ, ಯಥಾಯೋಗ್ಯವಾದ ಪ್ರತ್ಯುತ್ತರವಿತ್ತನೆ? ಆಗ್ಗೆ ಧರ್ಮವೆಲ್ಲಿ ಹೋಯಿತು? ಆ ರಜಸ್ವಲೆಯನ್ನು ಕೌರವನು ಸಭೆಗೆ ಎಳತರಿಸಿ, ಅವಳ ಸೀರೆಯನ್ನು ದುಶ್ಶಾಸನನಿಂದ 'ಸುಲಿಸಿ, ಆ ಮೇಲೆ ಮತ್ತೂ ಆಕೆಯ ಕಡೆಗೆ ನೋಡಿ ನಗುತ್ತ,

ಎಲೆಗೆ ನಿನ್ನವರೇನು ಮಾಡುವ
ರೊಲೆಯೊಳಡಗಿದ ಕೆಂಡವಿವರ
ಗ್ಗಳಿಕೆ ನಂದಿದುದೆನುತ ಮುಂಜೆರಗೆತ್ತಿ ಮಾನಿನಿಗೆ ।
ಖಳನು ತೊಡೆಗಳ ತೋರಿಸಿದ. . . . . ॥

(ಕ.ಭಾ.ಸಭಾ. ೧೫. ೩೦)

ಇದೆಲ್ಲ ನ್ಯಾಯವೇ? ಆಗ ಧರ್ಮ ಎಲ್ಲಿಗಾಯಿತು? ಆಗ್ಗೆ ಘೃತಾಹುತಿಯನ್ನು ಹುಯ್ದ ಹೋಮಾಗ್ನಿಯಂತೆ ಒಂದೇ ಬಾರಿ ಆಕೆಯ ಸಂತಾಪ ಮುಳಿದೆದ್ದು ಪ್ರಜ್ವಲಿಸುತ್ತಲೆ

. . . . ಅತಿ
ಮುಳಿದು ಕೊಟ್ಟಳು ಶಾಪವನು ನಿ
ನ್ನಳಿವು ತೊಡೆಯಲಿ ಮುಗಿವುದೆಂದಳು ಮುಗುದೆ ಖಾತಿಯಲಿ ||

(ಅದೇ, ೧೫. ೩೦)

ಆಕೆ ಆತನಿಗಿತ್ತ ಆ ಶಾಪಕ್ಕೆ ಹಾಗೂ ಆ ದುರುಳತನದಿಂದ ಕೆರಳಿ

...ಪಿಂಗಾಕ್ಷನೂರುದ್ವಯಮನುರು ಗದಾಘಾತದಿಂ ನುಚ್ಚುನೂಱಾ|
ಗೊಡೆವೆಂ ತದ್ರತ್ನರಶ್ಮಿ ಪ್ರಕಟಮುಕುಟಮುಂ ನಂಬು ನಂಬು ....||

(ಪಂ. ಭಾ. ೭.೧೩)

ಎಂದು ಆ ಭೀಮನು ತೊಟ್ಟುಕೊಂಡ ಆ ಪ್ರತಿಜ್ಞೆಗೂ, ಆಮೇಲೆ ಕೌರವನಲ್ಲಿಗೆ ಸಂಧಿಗೆಂದು ಹೋಗುವಬಗ್ಗೆ ಸನ್ನಿಹಿತನಾದ ಶ್ರೀಕೃಷ್ಣನೊಡನೆ

ನಡದು ಸಂಧಿಯ ಮಾಡಿ ಮುರರಿಪು
ಕೊಡಿಸು ಸಾಕೈದೂರನಿವರಿಗೆ
ತಡೆಯದಾನೆರಡೂರ ಕೊಂಟೆನು ಕೌರವೇಂದ್ರನಲಿ ||

(ಕ. ಭಾ. ಉದ್ಯೋಗ ೬.೩೦)

ಎಂದು ಆ ಪ್ರತಿಜ್ಞೆಯ ಪುನರುಕ್ತಿಗೂ ಅನುಗುಣವಾಗಿ ದುರ್ಯೋಧನನಿಗೆ **To every action there is an equal and opposite reaction,** ಪ್ರತ್ಯೇಕ ಕಾರ್ಯಕ್ಕೆ ತತ್ಸಮಾನವಾದ ಪ್ರತಿಕಾರ್ಯವಿದೆ ಎಂಬ ಪ್ರಕೃತಿಯ ನಿಯಮಕ್ಕೆ, ನಿಯತಿಯ ಕಟ್ಟಳೆಗೆ ಸರಿಯಾಗಿ ತನ್ನ ಅತಿರಾಮಣೀಯವಾದ ದೌರಾತ್ಮ್ಯಕ್ಕೆ; ತನ್ನ ಕರ್ಮಕ್ಕೆ ತಕ್ಕ ಫಲ ದೊರೆಯಿತಲ್ಲದೆ ಬೇರೆಯಲ್ಲ. ಭೀಮನು ದುರ್ಯೋಧನನೊಂದಿಗೆ ಹೋರಾಡುವಂದು ಆತನು ತನಗೂ ತನ್ನವರಿಗೂ ಎಸಗಿದ 'ಮುನ್ನಿನ ಕವಲ್ಬನ್ನಂಗಳಂ' (ಗದಾಯುದ್ಧ,೭.೩೯) ನೆನನೆನದು ಏನೆಂದನೆಂದು ಕೇಳೋಣ —

ಜತುಗೇಹಾನಲದಾಹದಿಂ ವಿಷವಿಶೇಷಾಲಿಪ್ತ ಗುಪ್ತಾನ್ನದಿಂ
ಕೃತಕ ದ್ಯೂತವಿನೋದದಿಂ ದ್ರುಪದಜಾಕೇಶಾಂಬರಾ-
ಕೃಷ್ಟಿಯಿಂ
ಧೃತರಾಷ್ಟ್ರಾತ್ಮಜ ಪಾಂಡುರಾಜಸುತರಂ ಮುನ್ನಂ ಕೊಲಲ್
ಕೋಱಿದ್ಯೆ
ಗತಕಾಲಂ ಲಯಕಾಲವಾಯ್ತು ನಿನ್ನಗಿನ್ನಾಯ್ತಂತ್ಯಕಾಲಂ ಗಡಾ||

(ಗದಾ. ೭. ೪೦)

ಇದು ಲಾಕ್ಷಾಗೇಹದಾಹಕ್ಕಿದು ವಿಷಮವಿಷಾನ್ನಕ್ಕಿದಾ ನಾಡ
ಜೂದಿಂ
ಗಿದು ಪಾಂಚಾಲೀಪ್ರಪಂಚಕ್ಕಿದು ಕೃತಕಸಭಾಳೋಕನ
ಭ್ರಾಂತಿಗೆಂದೋ|
ವದೆ ಪೊಯ್ದಂ ಕಾಲ್ಗಳಂ ತೋಳ್ಗಳನಗಲ್ದುರಮುಂ ಕೆನ್ನೆಯುಂ
ನೆತ್ತಿಯುಂ ಕೋ
ಪದಿನ್ನೈದುಂ ದುರ್ನಯಕ್ಕೈದೆಡೆಯನುರು ಗದಾದಂಡದಿಂ
ಭೀಮಸೇನಂ || (ಗದಾ. ೮. ೧೯)

ಹೀಗೆಂದು ಭೀಮನು ತನ್ನ 'ಗದಾದಂಡದಿಂ ಮುಳಿದಿಟ್ಟಂ ಕುರುಕುಭೃಜ್ಜಂಡೋರು ದಂಡಂಗಳಂ' (ಗದಾ. ೮. ೩೬), ಹಾಗೂ

.... ಭೀಮಸೇನನೊದೆದಂ ವಾಮಾಂಘ್ರಿಯಿಂ ರತ್ನಮುಂ
ಡಲ ರಶ್ಮಿಪ್ರಕಟಜ್ವಲನ್ಮಕುಟಮುಂ ಕೌರವ್ಯರಾಜೇಂದ್ರನಾ ||

(ಅದೇ, ೮. ೩೯)

ಭೀಮನ ಆ ಕೃತ್ಯ ನಿಂದನೀಯವಾಗಿದ್ದರೆ, ಅದನ್ನು ಕಂಡು 'ನಭೋಭಾಗದೊಳಾಗಳ್ ದೇವತೂರ್ಯಧ್ವನಿ' (ಗದಾ, ೮. ೪೧) ಮೊಳಗುತಿತ್ತೇ? ನಾರದನು ಅಂಕದ ಗಂಡನಾದ ಭೀಮನಿಗೆ ಎಣೆಯ ಸುಭಟರನ್ನು ತಾನು ಕಂಡೆನಿಲ್ಲ ಎಂದು ಹೊಗಳುತಿದ್ದನೆ? ಸುರರೂ ಸುರಾಂಗನೆಯರೂ ಕುಸುಮೋತ್ಕರವನ್ನು ಸುರಿಯುತಿದ್ದರೇ? ಸುರದುಂದುಭಿಗಳು ಉಲಿಯುತಿದ್ದುವೇ?(ಅದೆ, ೮. ೪೨). ಇದನ್ನೆಲ್ಲ ಕವಿಯ ಚಮತ್ಕಾರವೆಂದರೆ, ಭೀಮನ ಒದೆತವೂ ಬೇರೊಂದು ಚಮತ್ಕಾರವೊ ಇಲ್ಲವೊ ಅತಿಶಯೋಕ್ತಿಯೊ ಆಗಿರಬಾರದೇಕೆ? ಹೇಗೂ ಹೀಗೆ ದ್ರೌಪದಿಯ ದಾರುಣವಾದ ಅಭಿಶಾಪವನ್ನೂ ತನ್ನ ಭೀಕರವಾದ ಪ್ರತಿಜ್ಞೆಯನ್ನೂ ದುಶ್ಶಾಸನನಲ್ಲಿಯೂ ದುರ್ಯೋಧನನಲ್ಲಿಯೂ ಈಡೇರಿಸುವಲ್ಲಿ ಭೀಮಸೇನನು ತತ್ಕಾಲಕ್ಕೆ, ತನ್ನಲ್ಲಿ ಮೈಯ್ತುಂಬಿದ ಆವೇಶದಲ್ಲಿ ತನ್ನನ್ನು ತಾನು ಮರೆತು ನಿಯತಿಯ ಪ್ರಹರಣಾಯುಧವಾದನಷ್ಟೇ. ತತ್ಕಾಲಕ್ಕೆ ತನ್ನನ್ನು ತಾನು ಮರೆತು ಎಂದು ಏಕೆಂದೆನೆಂದರೆ, ಹಾಗಿಲ್ಲದಿದ್ದರೆ ದುಶ್ಶಾಸನನ ಉರಃಸ್ಥಳವನ್ನು ಬಗಿದು ನೆತ್ತರನ್ನು ಮೊಗೆಯುತ್ತಿದ್ದಾಗ ಭೀಮನು ತನ್ನವರೇ ಆದ ಶ್ರೀಕೃಷ್ಣನನ್ನೂ, ತನ್ನ ಅಣ್ಣತಮ್ಮಂದಿರನ್ನೂ, ತಮ್ಮ ಮಕ್ಕಳನ್ನೂ, ತಮ್ಮ ಮಿಕ್ಕ ನೆರವಿಗರನ್ನೂ ಕರೆಕರೆದು ಹೀಗೆ ಮೂದಲಿಸುತ್ತಿರಲಿಲ್ಲ—

ಏನು ಧರ್ಮಜ ನಕುಲ ಸಹದೇ
ವೇನು ಸಾತ್ಯಕೀ ದ್ರುಪದಸುತ ನಿಮ
ಗೇನು ಪೌರುಷವಿಲ್ಲವೇ ದ್ರೌಪದಿಯ ತನಯರಿಗೆ|
ಏನು ದಯ ನಿಮಗಿಲ್ಲವೇಕೈ
ದಾನವಾಂತಕ ಪಾರ್ಥ ಬಿಲು ಸಂ
ಧಾನವನು ನೀ ಮಾಡಿ ಬಿಡಿಸೈ ಕೌರವಾನುಜನ ||

(ಕ. ಭಾ. ಕರ್ಣ. ೧೯. ೭೯)

ಅವೆರಡೂ ಬಾರಿ ಆ ಗಳಿಗೆಗಳ ಮಟ್ಟಿಗೆ, ದಕ್ಷಯಜ್ಞದಲ್ಲಿ ಸತೀದೇವಿ ತನ್ನ ದೇಹವನ್ನು ಬೇಳ್ದಳೆಂದು ಕೇಳುತ್ತಲೆ ಹಠಾತ್ ಕೋಪವಿವಶನಾಗಿ ತನ್ನ ಜಟಾಜೂಟವನ್ನು ಕಿತ್ತು ನೆಲಕ್ಕೆ ಅಪ್ಪಳಿಸಿದ ಪರಮೇಶ್ವರನಂತೆ, ಭೀಮಸೇನನು ಸಹಸಾ ರುದ್ರಾವತಾರನಾದ. ಆ ಮೇಲೆ ಘಟಿಸಿದ ಮಖಧ್ವಂಸದಿಂದಲೂ, ದಕ್ಷವಧೆಯಿಂದಲೂ, ಅಲ್ಲಿ ನಡೆಯಿತೆಂಬ ಇತರ ಹಿಂಸೆಯಿಂದಲೂ ಆ ಮಹಾದೇವನ ದೇವದೇವತೆಗೆ ಕುಂದು ತಟ್ಟುವುದಾದರೆ, ಈ ಆಭೀಲ ಕೃತ್ಯಗಳಿಂದ ಭೀಮನ ಉದ್ದಂಡವಾದ ವೀರತ್ವಕ್ಕೂ ಅದರ ಅಮ್ಲಾನವಾದ ಯಶಸ್ಸಿಗೂ ಕುಂದು ತಟ್ಟೀತು, ಇಲ್ಲವಾದರೆ ಇಲ್ಲ.

ಈ ಸಂದರ್ಭದಲ್ಲಿ ನಾವು ನೆನವರಿಸಬೇಕಾದ ಇದೊಂದು ಸಂಗತಿಯೂ ಇದೆ. ಭಾರತ ಯುದ್ಧ ನಡೆದ ಇಂದಿಗೆ ಸುಮಾರು ೫೦೦೦ ವರ್ಷಗಳ ಹಿಂದಣ ಆರ್ಯರಲ್ಲಿ ಅಹಿಂಸಾ ಧರ್ಮದ ಗೊಡವೆ, ಯುದ್ಧಕಾರ್ಯದ ಮಟ್ಟಿಗಾದರೂ, ಇದ್ದಿರಲಿಲ್ಲ. ಇಲ್ಲವಾದರೆ ಬರೇ ೧೬ ವರ್ಷದ, ಇನ್ನೂ ಹಾಲ ಹಲ್ಲು ಉದುರಿಲ್ಲದ ಆ ಎಳಗೂಸಾದ ಅಭಿಮನ್ಯು ಚಕ್ರವ್ಯೂಹವನ್ನು ಹೊಕ್ಕಿರುವಲ್ಲಿ ಕರ್ಣನೇ ಮೊದಲಾದ ಮಹಾ ವೀರಬ್ರುವರಾದ ಷಡ್ರಥರು ಸುತ್ತು ಹಾಕಿ, ಆತನನ್ನು ಅಂಗಾಂಗ ವಿಚ್ಛಿನ್ನವಾಗಿಸಿ ಮಡುಹುತಿದ್ದರೇ ? ಆ ಕಾರಣವೇ ಪ್ರಾಯಶಃ ಶರಶಯ್ಯಾಗತನಾದ ಭೀಷ್ಮನು ಧರ್ಮರಾಯನಿಗೆ ಧರ್ಮರಹಸ್ಯವನ್ನು ಅರುಹುವಲ್ಲಿ ಹೀಗೆಂದನು —

ಕೃತೇ ಪ್ರತಿಕೃತಿಂ ಕುರ್ಯಾದ್ಧಿಂಸನೇ ಪ್ರತಿಹಿಂಸನಮ್ |
ತತ್ರ ದೋಷಂ ನ ಪಶ್ಯಾಮಿ ಶಠೇ ಶಾಠ್ಯಂ ಸಮಾಚರೇತ್ ||

ಮಾಡಿದುದಕ್ಕೆ ಬದಲು ಮಾಡಬೇಕು, ಹಿಂಸಿಸಿದವನನ್ನು ಪ್ರತಿಹಿಂಸಿಸಬೇಕು, ಅದರಲ್ಲಿ ಯಾವ ಪಾಪವನ್ನೂ ನಾನು ಕಾಣೆ; ಶಠನಲ್ಲಿ

ಶಾತ್ಯವನ್ನೇ ಅಚರಿಸಬೇಕು. ನಮ್ಮಂತೆಯೇ ಆರ್ಯರಾಗಿದ್ದ ಪ್ರಾಚೀನ ಗ್ರೀಕರಲ್ಲಿಯೂ ಯುದ್ಧದಲ್ಲಿ ಅಹಿಂಸೆಯ ಗೊಡವೆ ಹೇಗೂ ಇದ್ದಿಲ್ಲವಷ್ಟೇ, ಧರ್ಮದ ಸೊಡ್ಡೂ ಇರಲಿಲ್ಲ; ಉದಾ: ಹೋಮರನ (Homer) ಇಲಿಯೆಡ್ (Iliad) ಎಂಬ ಪುರಾತನ ಗ್ರೀಕ್ ಮಹಾ ಕಾವ್ಯದಲ್ಲಿ,ಕಾದಾಡಿದ ಇತ್ತಂಡದವರೂ,ಗ್ರೀಕರೂ ತ್ರೋಯಿಯವರೂ, ಎಸಗಿದ ಎಷ್ಟೋ ಹಿಂಸಾಕೃತ್ಯಗಳನ್ನು ಹೇಳಿದೆ. ಕೊನೆಗೆ ಅದರ ನಾಯಕರಾದ ಗ್ರೀಕ ಅಖಿಲ್ಲೀಸರು (Achilles) ಪ್ರತಿನಾಯಕ ನಾದ ತ್ರೋಯಿಯ (Troy) ರಾಜ ಕುಮಾರನಾದ ಹೆಕ್ತರನನ್ನು (Hector) ಕೊಂದು ಆತನ ಮೃತ ದೇಹವನ್ನು ತನ್ನ ರಥದ ಹಿಂದೆ ಕಟ್ಟಿ ಅದನ್ನು ಆತನ ತಂದೆಯ ರಾಜಧಾನಿಯಾದ ತ್ರೋಯಿಯ ಸುತ್ತು ಸುತ್ತು ಏಳು ಬಾರಿ ಎಳಿಸಿಕೊಂಡು ಹೋದನೆಂದು ಹೇಳಿದೆ. ತಾವೂ ಆರ್ಯರಾಗಿದ್ದ ಪ್ರಾಚೀನ ರೋಮಿಯರು ಗೆದ್ದುಕೊಂಡ ದೇಶಗಳ ಅರಸರನ್ನು ಸೆರೆ ಹಿಡಿದು ತನ್ನೊಡನೆ ರೋಮ ನಗರಕ್ಕೆ ತಂದು, ಆ ನಗರದಲ್ಲಿ ತಾವು ಮೆರಸುವ ಚೈತ್ರಯಾತ್ರೆಯಲ್ಲಿ ಸಜೀವರಾಗಿದ್ದ ಅವರನ್ನು ತಮ್ಮ ರಥಗಳ ಹಿಂದೆ ಕಟ್ಟಿ ಎಳಸಿಕೊಂಡು ಹೋಗು ತಿದ್ದರು. ಇ. ಇ.

ಅಥವಾ ಭಾರತ ಯುದ್ಧದಿಂದ ಇಂದಿಗೆ ಸುಮಾರು ೫೦ ಶತಕ ಗಳ ಮೇಲೂ, ಅಂದಿನವರಿಗಿಂತ ಶತ ನಾಗರಿಕರೆಂದು ತಮ್ಮ ಬೆನ್ನನ್ನು ತಾವೇ ತಟ್ಟಕೊಳ್ಳುವ ಇಂದಿನವರೇನೂ ದುರುಳತನದಲ್ಲಿ ಅವರಿಗಿಂತ ತಕ್ಕಷ್ಟಾದರೂ ಬಲಗೆಯ್ಯಾಗಿರುವರೇ ? ನೋಡೋಣ. ಸಿಪಾಯಿಗಳ ದಂಗೆ ಎಂದು ಅಪನಾಮವೆತ್ತ ೧೮೫೭-೫೮ ನೆಯ ಇಸವಿಯ ಭಾರ ತೀಯ ಸ್ವಾತಂತ್ರ್ಯ ಸಂಗ್ರಾಮದಲ್ಲಿ ನಮ್ಮವರ ಮೇಲೆ ಯಾವ ಹಿಂಸೆ ಯಾವ ಅತ್ಯಾಚಾರ ನಡೆಯಲಿಲ್ಲ ? ಇಂದಿಗೆ ೩೫ ವರ್ಷ ಗಳೊಳಗೆ ಜಗತ್ತಿನಲ್ಲಿ ಆಗಿ ಹೋದ ಆವೆರಡೂ ಮಹಾ ಯುದ್ಧಗಳಲ್ಲಿ ಯಾವ ಕ್ರೌರ್ಯ, ಯಾವ ಘೋರವಾದ ಹತ್ಯಾಪರಂಪರೆ ಘಟಿಸಲಿಲ್ಲ? ಮೂರೇ ವರ್ಷಗಳ ಹಿಂದೆ ಜಪಾನಿನಲ್ಲಿ ಎಸೆದ ಅಣುಬಾಂಬಿಗೆ ಎಷ್ಟು ಮಂದಿ ನಿಃಶಸ್ತ್ರರಾದ ನಿರಪರಾಧಿಗಳು ತುತ್ತಾಗಲಿಲ್ಲ ? ಒಂದೇ ಮಾತಿ ನಲ್ಲಿ ಹೇಳುವುದಾದರೆ, ಆಯಾ ಕಾಲದಲ್ಲಿ ಆ ಕಾಲಕ್ಕೆ ತಕ್ಕಂತೆ ಕೆಡುಕು ಇದ್ದೇ ಇದೆ. ಅದಕ್ಕೆ ಆ ಕಾಲ ಈ ಕಾಲ ಎಂದಿಲ್ಲ. ಮನುಷ್ಯನು ಮನುಷ್ಯನಾಗಿರುವ ವರೆಗೆ, ಅಂದರೆ ಸೃಷ್ಟಿಯಾದಂದಿ ನಿಂದ ಮುಗಿವ ವರೆಗೂ ಅದು ಇಲ್ಲವೆಂಬ ಕಾಲವಿಲ್ಲ. ಅತಏವ ತನ್ನ ಮುಂದಣ ಎಮ್ಮೆಯನ್ನು ಹಿಂದಣ ಎಮ್ಮೆ ಬತ್ತಲೆ ಎಂದು ನಗುವಂತೆ ಭೀಮಸೇನನ ಆ ಕೃತ್ಯಗಳನ್ನು ಹೇಯವೆಂದು ಇಂದಿನ ವರು ಅವಹೇಳಿಸುವಲ್ಲಿ ಏನೂ ಹುರುಳಿಲ್ಲ. ಅವಕ್ಕೆ ತಕ್ಕ ಸಮವಾಯ ಕಾರಣಗಳಿದ್ದುವೊ ಎಂದು ನಿಧಾನವಾಗಿ ವಿಚಾರಿಸಿದರೆ, ಇದ್ದುವು, ಮೇಲೆ ವಿಸ್ತರಿಸಿರುವಂತೆ ಆತನು ಕೊಟ್ಟ ಶಿಕ್ಷೆಗೆ ಹತ್ತು ಮಡಿಯಾದ ಶಿಕ್ಷೆಯನ್ನು ವಿಧಿಸುವಷ್ಟರ ಮಟ್ಟಿನ ಕಾರಣಗಳು ಅವನಿಗಿದ್ದುವು, ಅಹಿಂಸಾ ತತ್ವದ ಜಾಜ್ವಲ್ಯದಿಂದ ಕುಕ್ಕಿರುವ ನಮ್ಮ ಕಣ್ಣುಗಳನ್ನು ಒಮ್ಮೆ ಮೆತ್ತಗೆ ಒರೆಸಿಕೊಂಡು, ಆ ಪುರಾಕಾಲದ ವೀರರ ಕಾರ್ಯ ಗಳನ್ನು ಅವರಂದಿನ ನಾಗರಿಕತೆಯ ಬೆಳಕಿನಲ್ಲೇ ಸಮಾಲೋಚಿಸಿದರೆ ಭೀಷಣವಾದ ಅಕಾರ್ಯಗಳೆಂದು ಇಂದಿನ ಬೆಳಕಿನಲ್ಲಿ ಕಾಣಿಸಬಹು ದಾದ (!) ಭೀಮನ ಅವೆರಡು ಕೃತ್ಯಗಳು ಆತನ ವೀರತೆಯನ್ನು ಉದ್ದೀಪಿಸುವವೇ ಹೊರತು ಸರ್ವಥಾ ಕಳೆಗೆಡಿಸವೆಂದು ಮನದಟ್ಟು ದಿರದು.


ಪ್ರಣಯಿಯ ಸ್ಪೈರಣೆ

ಹೊರಗಣ್ಣ ನೋಟಕ್ಕೆ ಆಕೆ ಸುಂದರಿಯಲ್ಲ,
ಬೇರೆ ಹಲವಾರು ಹೆಣ್ಣುಗಳ ತೆರದೆ;
ಅವಳ ಚೆಲುವಿಕೆಯನ್ನು ಅರಿತವನೆ ನಾನಲ್ಲ
ಎನ್ನ ಕಂಡವಳು ನಸುನಕ್ಕ ವರೆಗೆ.
ಅಹಹ! ತೊಳಗುವ ಕಣ್ಣನಾಗ ಕಂಡೆ,
ನಲುಮೆಗೊಳ, ಬೆಳಕ ಕಾರಂಜಿಯೆಂದೆ.

ಈಗವಳ ದಿಟ್ಟಿಗಳು ಕಠಿನ, ರಾಗವಿಹೀನ
ನನ್ನ ಕುಡಿನೋಟಕಾಕೆಯ ನೋಟವಿಲ್ಲ;
ಆದರೂ ನಾನವಳ ನಯನಂಗಳೊಳನೂನ
ಪ್ರೇಮ-ದ್ಯುತಿಯನರಸುವುದನು ಮಾಣ್ದಿಲ್ಲ:
ಅವಳ ಭ್ರುಕುಟಿಯೆ ನನಗೆ ಏಸೇಸೊ ಚಂದ
ಉಳಿದ ಹೆಣ್ಗಳ ಬೆಡಗುನಗೆನೋಟಕಿಂತ.

—ಹಾರ್ಟ್ಲೆ ಕೊಲರೀಜ





ಈ ದೀಪಾವಳಿಯಿಂದ ಮುಂದಿನ ದೀಪಾವಳಿ ವರೆಗಿನ

ವರ್ಷ ಭವಿಷ್ಯ

ತಾ|| ೨-೧೧-೧೯೪೮ ರಿಂದ ತಾ|| ೨೧-೧೦ ೧೯೪೯ ರ ವರೆಗೆ

ಜ್ಯೋತಿಷಿ ಕೃಷ್ಣಶಾಸ್ತ್ರಿ ಭಿಡೆ, ಭವಿಷ್ಯ ಕಥನ ಕಾರ್ಯಾಲಯ, ಕಾರ್ಲೇಕರ ಭವನ, ಬೆಳಗಾವ

ಬಹುದಿನಗಳಿಂದ ನಮ್ಮ ಪತ್ರಿಕೆಯಲ್ಲಿ ವಾರದ ಭವಿಷ್ಯವನ್ನು ಕೊಟ್ಟು ನಮ್ಮ ವಾಚಕರಿಗೆಲ್ಲ ಚಿರಪರಿಚಿತರಾದ ಶ್ರೀ ಕೃಷ್ಣಶಾಸ್ತ್ರಿ ಭಿಡೆ (ಭವಿಷ್ಯ ಕಥನ ಕಚೇರಿ, ಖಡೇ ಬಜಾರ ಬೆಳಗಾವಿ) ಇವರು ಈ ವರುಷದ ದೀಪಾವಳಿಯಿಂದ ಬರುವ ದೀಪಾವಳಿವರೆಗಿನ ಭವಿಷ್ಯವನ್ನು ಬರೆದಿದ್ದಾರೆ. ಶಾಸ್ತ್ರಿಗಳು ರಾಜ ಮಹಾರಾಜರಲ್ಲಿಯೂ ಜನಸಾಮಾನ್ಯರಲ್ಲಿಯೂ ಒಳ್ಳೆ ಪ್ರಸಿದ್ಧರಾಗಿರುವರು.

೧. ಮೇಷ

ಈ ರಾಶಿಯ ಜನರಿಗೆ ಈ ವರ್ಷ ತಾ. ೬-೬-೪೯ ರಿಂದ ಮುಂದೆ ಪ್ರಕೃತಿಯು ಒಳ್ಳೇ ಆರೋಗ್ಯಕರವಾಗಿದೆ. ಆವರೆಗೆ ತಲೆಸೂಲಿ, ಚಿತ್ತಭ್ರಮ, ಒಂದು ಅಸಾಧ್ಯ ವಿಷಯವನ್ನು ಕುರಿತು ಸದಾ ಆಲೋಚನೆ ಇಲ್ಲವೆ ಪ್ರಿಯ ವಸ್ತು ಅಥವಾ ವ್ಯಕ್ತಿಯನ್ನು ಕಳಕೊಳ್ಳುವ ಯೋಗ. ವಿಯೋಗದ ಅಥವಾ ವಿರಹದ ಆಘಾತ, ಭೂತಬಾಧೆ, ಮಂತ್ರತಂತ್ರದ ಬಾಧೆ, ದೃಷ್ಟಿಯಾಗುವದು ಇವುಗಳಲ್ಲಿ ಯಾವುದಾದರೊಂದು ಬಗೆಯ ಪೀಡೆಯಾಗುವ ಸಂಭವವಿದೆ. ಅದರಲ್ಲಿಯೂ ತಾ. ೧೬-೧೧-೪೮ ರ ವರೆಗಿನ ಮತ್ತು ತಾ. ೧೩-೩-೪೯ ರಿಂದ ತಾ. ೨೧-೪-೪೯ ರ ವರೆಗಿನ ಕಾಲವು ಹೆಚ್ಚು ತ್ರಾಸದಾಯಕವಾಗಿರುವ ಸಂಭವವಿದೆ. ಆದ್ದರಿಂದ ಮೇಲ್ಕಾಣಿಸಿದ ಅವಧಿಯಲ್ಲಿ ಆಹಾರ ವಿಹಾರಗಳನ್ನೂ ಮಾನಸಿಕ ಮತ್ತು ಶಾರೀರಿಕ ಶ್ರಮವನ್ನೂ ಒಳ್ಳೇ ದಕ್ಷತೆಯಿಂದ ಮಿತಗೊಳಿಸಬೇಕು. ತಾ. ೬-೬-೪೯ ರಿಂದ ಮುಂದೆ ಪ್ರಕೃತಿಯು ಚನ್ನಾಗಿರುವ ಯೋಗವಿದ್ದರೂ ತಾ.೨೮-೮-೪೯ ರಿಂದ ೧೬-೧೦-೪೯ ರ ವರೆಗೆ ನೀರಿನ, ಬೆಂಕಿಯ, ಅಥವಾ ಮೇಲಿನಿಂದ ಬೀಳುವ ಅಪಘಾತದಅಲ್ಪಸ್ವಲ್ಪ ಭಯವಿದೆ. ಆದ್ದರಿಂದ ಮೇಲ್ಕಾಣಿಸಿದ ಸ್ಥಳಗಳಲ್ಲಿ ಆಗ ಬಹಳ ಎಚ್ಚರಿಕೆಯಿಂದಿರಬೇಕು. ಹೆಂಡತಿಯ ಪ್ರಕೃತಿಯೂ ತಾ. ೬-೬-೪೯ ರ ವರೆಗೆ ಅದರಲ್ಲಿಯೂ ಮಾರ್ಚ ತಿಂಗಳಿಂದ ಮೇಲಿನ ತಾರೀಖಿನವರೆಗೆ ಸರಿಯಾಗಿರಲಾರದು. ಅದರಲ್ಲಿಯೂ ಆಕೆ ಗರ್ಭಿಣಿಯಾಗಿದ್ದರೆ ಬಯಕೆಯ ಅಥವಾ ತತ್ಸಂಬಂಧೀಯ ಉಪದ್ರವಗಳು ಹೆಚ್ಚುವವು. ಅಲ್ಲದೆ ನಿಮ್ಮ ನಿಮ್ಮೊಳಗೆ ಮೇಳಬೀಳುವದಿಲ್ಲ. ನಿಮಗೆ ಹೆಂಡತಿಯ ಬಗ್ಗೆ ಮತ್ತು ಹೆಂಡತಿಗೆ ನಿಮ್ಮ ಬಗ್ಗೆ ಸರಳ ಮಾತುಗಳಲ್ಲಿಯೂ ಕೊಂಕು ಉಂಟಾಗುವದೆಂದ ಮೇಲೆ ಮೂಲ ಮಾತಿನಲ್ಲಿಯೇ ಮತಭೇದವಿದ್ದರೆ ಕೇಳುವದೇನು? ಸುಶಿಕ್ಷಿತ ಮತ್ತು ಸುಸಂಸ್ಕೃತರಾಗಿದ್ದರೂ ಮಾತಿನ ಪೆಟ್ಟಿನಿಂದ ಪರಸ್ಪರರಲ್ಲಿ ವೈಷಮ್ಯ ಉಂಟಾಗದಿರದು. ಹೀಗಿರಲು ಅಶಿಕ್ಷಿತ ಮತ್ತು ಗಾವಿಲರಾದ ಪತಿಪತ್ನಿಯಲ್ಲಿ ಕೈಕೈ ಕೂಡ ಆಗುವವೆಂಬಲ್ಲಿ ಆಶ್ಚರ್ಯವೇನು? ತಾ. ೬ ಜೂನದ ನಂತರ ಮಾತ್ರ ಇಬ್ಬರಲ್ಲಿಯೂ ಸರಿಯಾಗಿ ಸಾಮರಸ್ಯವುಂಟಾಗುವದು. ಕೇವಲ ವಿಷಯಸುಖಕ್ಕೆ ತಾ. ೨೧-೧೧-೪೮ ರಿಂದ ೧೪-೧೨-೪೮ ರ ವರೆಗೆ, ತಾ. ೯-೧-೪೯ ರಿಂದ ತಾ. ೨೪-೨-೪೯ ರ ವರೆಗೆ, ತಾ. ೧೪-೪-೪೯ ರಿಂದ ತಾ. ೩೧-೫-೪೯ ರ ವರೆಗೆ, ತಾ. ೨೬-೬-೪೯ ರಿಂದ ತಾ. ೧೪-೮-೪೯ ರ ವರೆಗೆ ಮತ್ತು ಆ ಮೇಲೆ ತಾ. ೮-೯-೪೯ ರಿಂದ ತಾ. ೪-೧೦-೪೯ ರ ವರೆಗೆ ಅನುಕೂಲ ಕಾಲವಿದೆ. ಯಾರ ಮದುವೆಯಾಗಿಲ್ಲವೋ ಅವರ ಮದುವೆ ತಾ ೨೮-೨-೪೯ ರೊಳಗೆ ಆಗುವ ಸಂಭವವಿದೆ. ಮಕ್ಕಳಿಗೆ ಈ ವರ್ಷವು ಕಷ್ಟಕರವಾಗಿದೆ. ಈ ರಾಶಿಯ ಹೆಣ್ಣುಮಕ್ಕಳ ಬಾಳಂತಿತನವು ಬಹಳ ಕಷ್ಟದಾಯಕವಾಗುವದು. ತಾ. ೧೩-೨-೪೯ರಿಂದ ತಾ.೧೨-೩-೪೯ ಮತ್ತು ತಾ. ೧೬-೮-೪೯ ರಿಂದ ೧೬-೧೦-೪೯ ರ ವರೆಗೆ ಆಗುವ ಹೆರಿಗೆ ಬಹಳ ತೊಂದರೆಯದಾಗುವದಲ್ಲದೆ ಹುಟ್ಟಿದ ಮಗು ಬದುಕಿದರೆ ಅದು ಕೇವಲ ಈಶ್ವರಕೃಪೆಯೇ. ತಾ. ೨೮ ಫೆಬ್ರುವರಿ ವರೆಗೆ ಹೆಣ್ಣುಮಗು ಹುಟ್ಟುವ ಸಂಭವ. ಆ ತರುವಾಯ ಹೆರಿಗೆಯಾದರೆ ಗಂಡುಮಗುವಾಗುವ ಸಂಭವ ಉಂಟು. ಚಿಕ್ಕಮಕ್ಕಳಿಗೆ ನಡುಗುವ ಬೇನೆ, ಬಾಲಗ್ರಹ, ಇವುಗಳಿಂದ ಮೇಲಿಂದ ಮೇಲೆ ಮತ್ತು ವೈಲಿ, ಗೊಬ್ಬರ, ದೀರ್ಘಜ್ವರ ಇವುಗಳ ಮೂಲಕ ತಾ.೩ ಫೆಬ್ರುವರಿಯಿಂದ ತಾ. ೧೨ ಮಾರ್ಚದ ವರೆಗೆ ವಿಶೇಷ ಭಯವಿದೆ.

ಧಂದೆ ಮತ್ತು ದಿನಗೂಲಿ ಮಾಡುವವರಿಗೆ ಈ ವರ್ಷವು ಉತ್ಕರ್ಷದ್ದಾಗಿದೆ. ತಾ. ೨೬-೧೨-೪೮ ರಿಂದ ತಾ. ೩-೨-೪೯ ರ ವರೆಗೆ ಉದ್ಯೋಗಸ್ಥರಿಗೆ ಮತ್ತು ನೌಕರದಾರರಿಗೆ ಒಳ್ಳೇ ಪ್ರಗತಿಯುಂಟು. ಮತ್ತೆ ತಾ.೨೧-೪-೪೯ ರಿಂದ ೩೦-೫-೪೯ ರವರೆಗೆ ಹಾಗೂ ತಾ. ೧೨-೬-೪೯ ರಿಂದ ತಾ. ೨೮-೮-೪೯ ರ ವರೆಗೂ ಉತ್ಕರ್ಷಕಾರಕ ಕಾಲವಿದೆ. ಈ ವರ್ಷ ನೆಚ್ಚಿಕ್ಕಿಂತ ಉಳಿಕೆ ಹೆಚ್ಚಿ ದ್ರವ್ಯಲಾಭವಾಗುವ ಸಂಭವವಿದೆ. ಒಳ್ಳೇಕೀರ್ತಿತರುವ ಮತ್ತು ಸಮಾಜದಲ್ಲಿಯೂ ರಾಜವರ್ಗದಲ್ಲಿಯೂ ಪ್ರತಿಷ್ಠೆ ಬೆಳೆವಂತಹ ಕೃತ್ಯಗಳು ಮೇಲಿಂದ ಮೇಲೆ ಘಟಿಸುವವು. ಆದರೂ ಒಳಗೊಳಗೆ ನಿಮ್ಮ ಜೊತೆಗಿದ್ದವರ ಉತ್ಕರ್ಷ ಸಹನವಾಗುವದಿಲ್ಲ. ಪ್ರತಿಸ್ಪರ್ಧಿಗಳನ್ನಂತೂ ಕುಟಿಲ ನೀತಿಯಿಂದ ಕೂಡ ಗೊತ್ತಿಗೆ ಹಚ್ಚಲಾಗುವದು. ವಾದದಲ್ಲಿಯೂ ಸ್ಪರ್ಧೆಯಲ್ಲಿಯೂ ತಾ. ೬ ಜೂನದ ನಂತರ ಪ್ರತಿಪಕ್ಷಿಗಳನ್ನು ಗೆಲ್ಲುವ ಅದಿಲ್ಲದಿದ್ದರೆ ಹಣ್ಣು ಮಾಡುವ ಕಾಲವಿದೆ. ಆದರೆ ಮೇಲ್ಕಾಣಿಸಿದ ತಾರೀಖಿನ ವರೆಗೆ ಮಾತ್ರ ಪ್ರತಿಪಕ್ಷಿಗಳ ಏರಾಟವೇ ಹೆಚ್ಚು.

ವಿದ್ಯಾರ್ಥಿಗಳಿಗೆ ಈ ವರ್ಷ ತಾ. ೨೮-೨-೪೯ ರ ವರೆಗೆ ವಿಶೇಷ ಅನುಕೂಲ ಕಾಲವಿದೆ. ಆದರೆ ಈ ವೇಳೆ ಮಿರಿದ ಮೇಲೆ ಪರೀಕ್ಷೆಗೆ ಕೂಡುವ ವಿದ್ಯಾರ್ಥಿಗಳು ಅದೆಷ್ಟು ಜಾಣರಾಗಿದ್ದರೂ ಉತ್ತೀರ್ಣರಾಗುವದು ದುಸ್ತರವೇ. ಪ್ರಾಪಂಚಿಕ ಸುಖದ ಬಗ್ಗೆ ಒಟ್ಟಿನ ಮೇಲೆ ವಿಚಾರ ಮಾಡಿದರೆ ತಾ. ೨೧-೧೧-೪೮ ರಿಂದ ತಾ. ೧೪-೧೨-೪೮; ಮತ್ತೆ ತಾ. ೧-೨-೪೯ ರಿಂದ ತಾ. ೨೦-೩-೪೯; ಪುನಃ ತಾ. ೧೪-೪-೪೯ ರಿಂದ ತಾ. ೧೪-೮-೪೯; ಆ ಮೇಲೆ ತಾ. ೮-೯-೪೯ ರಿಂದ ತಾ. ೪-೧೦-೪೯ ರ ವರೆಗಿನ ಕಾಲವು ಒಳ್ಳೇ ಹಿತಕರವಾಗಿದೆ. ಒಟ್ಟಿನ ಮೇಲೆ ಈ ವರ್ಷದಲ್ಲಿ ನಿಮಗೆ ದುಃಖಕ್ಕಿಂತ ಸುಖವೇ ಹೆಚ್ಚು ಲಭಿಸುವದು ಎಂಬ ಬಗ್ಗೆ ಯಾವ ಸಂದೇಹವೂ ಇಲ್ಲ.

೨. ವೃಷಭ

ಈ ರಾಶಿಯ ಜನರಿಗೆ ಪ್ರಕೃತಿಯ ದೃಷ್ಟಿಯಿಂದ ಮಾರ್ಚ ಪ್ರಾರಂಭದ ವರೆಗೆ ಅಷ್ಟು ಹಿತಕರವಾಗಿಲ್ಲ. ಹೊಟ್ಟೆ ನೋವು, ಮೊಣಕಾಲು ನೋವು ಇಲ್ಲವೆ ಮಂಡಿ ಎಂಬ ರೋಗವಾಗುವದು. ಯಾವದೋ ಒಂದು ಕಾಲ್ಪನಿಕ ಸಂಕಟದ ಬಗ್ಗೆ ಮನಕ್ಕೆ ಇಲ್ಲದ ಭಯ, ಮಜ್ಜಾತಂತುಗಳ ವಿಕಾರ, ಹೀಗೆ ತೊಂದರೆಯಾಗುವ ಸಂಭವ ಬಹಳುಂಟು. ಆದರಲ್ಲಿಯೂ ತಾ. ೧೮-೧೧-೪೮ ರಿಂದ ತಾ. ೨೬-೧೨-೪೮ ರ ವರೆಗೆ, ಮತ್ತೆ ತಾ.೧೨-೭-೪೯ ರಿಂದ ೨೮-೮-೪೯ ರ ವರೆಗೆ, ಮೇಲೆ ತಾ. ೧೬-೧೦-೪೯ ರಿಂದ ಮುಂದಿನ ಕಾಲವು ಬಹಳ ಕ್ಲೇಶಕಾರಕವಾಗಬಹುದು.

ಅದರಂತೆ ನಿಮ್ಮ ಹೆಂಡತಿಗೆ ತಾ. ೨೧-೪-೪೯ ರಿಂದ ತಾ. ೩೦-೫-೪೯, ಮತ್ತೆ ತಾ. ೧೨-೬-೪೯ ರಿಂದ ತಾ. ೨೮-೮-೪೯ ಈ ಸಮಯ ಆರೋಗ್ಯಭಂಗವಾಗುವ ಸಂಭವವಿದೆ. ಆದರೆ ಒಟ್ಟಿನಲ್ಲಿ ಮಾರ್ಚದಿಂದ ಮುಂದೆ ವಿಷಯ ಸುಖವು ಚನ್ನಾಗಿ ಲಭಿಸುವದು. ಎಲ್ಲ ಮಾತುಗಳಲ್ಲಿಯೂ ಹೆಂಡತಿಯದೇ ಮೇಲ್ಗೈಯಾಗುವದು. ಆಕೆ ಹೇಳಿದಂತೆಯೇ ಕುಣಿಯಬೇಕಾಗುವದು. ಮಕ್ಕಳ ಆರೋಗ್ಯಕ್ಕೆ ತಾ. ೬ ಜೂನದ ನಂತರದ ವೇಳೆಯು ಅಷ್ಟು ಚನ್ನಾಗಿಲ್ಲ. ಆ ಸಮಯದಲ್ಲಿ ಅವರ ವರ್ತನವೂ ಮನಸ್ಸಿಗೆ ಒಪ್ಪಿಗೆಯಾಗುವಂತೆ ಇರುವದಿಲ್ಲ. ಆದರೆ ಮಾರ್ಚ ತಿಂಗಳಿಂದ ಅವರದು ಇನ್ನುಳಿದ ವಿಷಯಗಳಲ್ಲಿ ಅಪೇಕ್ಷಿಸಿದಂತೆ ಉನ್ನತಿಯಾಗುತ್ತ ಹೋಗುವದು. ನಿಮ್ಮ ತಾಯಿ, ಬದುಕಿದ್ದರೆ, ಈ ವರ್ಷವೆಲ್ಲ ಅವರಿಗೆ ಕ್ಲೇಶದಾಯಕವಾಗಿ ಪರಿಣಮಿಸುವದು ಮತ್ತು ಪ್ರಾಣಾಂತಿಕ ಕಷ್ಟವನ್ನು ಅನುಭವಿಸಬೇಕಾಗದು. ಅಲ್ಲದೆ ನಿಮ್ಮ ಮತ್ತು ತಾಯಿಯ ನಡುವೆ ಎಳ್ಳಷ್ಟೂ ಮೇಳಬೀಳದು. ತಾ. ೩೧-೫-೪೯ ರಿಂದ ತಾ. ೧೨-೬-೪೯ ರ ವರೆಗೆ ಮತ್ತು ತಾ. ೧೬ ಅಕ್ಟೋಬರ ನಂತರದ ಸಮಯವು ಕ್ಲೇಶಕಾರಕವೂ ಹಗೆತನವನ್ನು ಬೆಳೆಸುವಂತಹದೂ ಆಗಿದೆ. ತಾ. ೩-೨-೪೯ ರಿಂದ ತಾ. ೧೪-೩-೪೯ ರ ನಡುವಿನ ಅವಕಾಶದಲ್ಲಿಯೂ ವೈರಭಾವ ಒಡಮೂಡದಿರದು.

ಈ ರಾಶಿಯ ಸ್ತ್ರೀಯರು ಗರ್ಭಿಣಿಯರಾಗಿದ್ದರೆ ತಾ. ೬ ಜೂನ ನಂತರದ ಕಾಲವು ಅಷ್ಟು ಹಿತಕರವಾಗದು. ಪಾಂಡುರೋಗ ಅಥವಾ ರಕ್ತಹೀನತೆ ಕೆಲೆದೋರಬಹುದು. ಮೇಲ್ಕಾಣಿಸಿದ ತಾರೀಖಿನ ನಂತರ ಹೆರಿಗೆಯಾಗುವವರಿದ್ದರೆ ಅನುಭವಿಕ ಡಾಕ್ಟರರನ್ನು ಕರೆಯಿಸಿಕೊಳ್ಳುವದು ನೆಟ್ಟಗೆ. ಯಾಕೆಂದರೆ ಹೆರಿಗೆಯನ್ನು ಶಸ್ತ್ರಕ್ರಿಯೆಯಿಂದ ಮಾಡಿಸುವ ಪ್ರಸಂಗವೂ ಬರಬಹುದು. ಫಲಹೋದರೂ ಗಿಡವಾದರೂ ಉಳಿದೀತಲ್ಲಾ ಎಂದು ಸಮಾಧಾನ ಹಚ್ಚಿಕೊಳ್ಳುವ ಹೊತ್ತೂ ಬರಬಹುದು. ಒಂದು ವೇಳೆ ಅವಳಿಜವಳಿ ಮಕ್ಕಳೂ ಹುಟ್ಟಬಹುದು

ಒಟ್ಟಿನ ಮೇಲೆ ಈ ವರ್ಷ ಗ್ರಹಮಾನಗಳು ಪ್ರಾಪಂಚಿಕ ಸುಖಕ್ಕೆ ಕೆಲವೊಂದು ವಿಷಯಗಳಲ್ಲಿ ಅತ್ಯುತ್ಕೃಷ್ಟವಾಗಿಯೂ ಇನ್ನು ಕೆಲ ವಿಷಯಗಳಲ್ಲಿ ಅತಿ ಕಷ್ಟಕಾರಕವಾಗಿಯೂ ಉಂಟೆಂದು ತಿಳಿಯಬೇಕು. ಧಂದೆ ಮತ್ತು ದಿನಗೂಲಿಯವರಿಗೆ ಈ ವರ್ಷ ಸ್ವಲ್ಪವೂ ಕೆಟ್ಟದ್ದಲ್ಲ ಪ್ರತಿಷ್ಠೆಗೂ ಲೌಕಿಕಕ್ಕೂ ಕೆಲ ಸಂದರ್ಭಗಳಲ್ಲಿ ಕಪ್ಪು ಹತ್ತುವಂತ ಪ್ರಸಂಗ ಬರಬಹುದಾದರೂ ಅದನ್ನೆಲ್ಲ ಲೆಕ್ಕಿಸದಷ್ಟು ನಿಮ್ಮ ಮನಸ್ಸು ಮರಗಟ್ಟಿಹೋಗುವದು. ನಿಮ್ಮ ವಿರೋಧಿಗಳನ್ನು ಹತ್ತಿಕ್ಕಲು ಕೃಷ್ಣ ಕಾರಸ್ಥಾನವನ್ನು ಕೂಡ ಹೂಡಲಾಗುವದು. ನಿಮ್ಮ ಗುರಿ ಮುಟ್ಟುವಾಗ ಯಾರು ಅಡ್ಡ ಬಂದರೂ ಅವರನ್ನೆಲ್ಲ ಬದಿಗೊತ್ತಿ ಹಿಡಿದ ಕಾರ್ಯವನ್ನು ಮಾಡಿಯೇ ಮುಗಿಸುವಿರಿ. ಲಾಟರಿ, ಸಟ್ಟಾ, ಅಥವಾ ಇನ್ನಾವುದಾವರೂ ವಿಧವಾಗಿ ನಿಮ್ಮ ನಿಮ್ಮ ಜನ್ಮಕಾಲದ ಗ್ರಹಯೋಗಕ್ಕನುಗುಣವಾಗಿ ಹೆಚ್ಚು ಅಥವಾ ಕಡಮೆ ಪ್ರಮಾಣದಲ್ಲಿ ಅಕಲ್ಪಿತ ಧನಲಾಭವಾಗಿಯೇ ತೀರುವದು. ಈ ಯೋಗ ಸಂಧಿಸುವ ಕಾಲವೆಂದರೆ, ತಾ. ೧೫ ಡಿಸೆಂಬರದಿಂದ ತಾ. ೧ ಜಾನೆವರಿ ವರೆಗೆ. ಧಂದೇದಾರರಿಗೆ ಮಾರ್ಚ ತಿಂಗಳದ ಪ್ರಾರಂಭದ ವರೆಗೆ ಮನಸ್ಸಿಗೆ ಸಮಾಧಾನವೆನಿಸುವಂತೆ ಲಾಭಪ್ರದವಾಗಿರುವದು. ಮಾರ್ಚದಿಂದ ಮುಂದೆ ನೋಕರಿ ಮಾಡುವವರಿಗೆ ಅತ್ಯಂತ ಸಮಾಧಾನಕಾರಕಕಾಲ. ಈ ಸಮಯದಿಂದ ಎಲ್ಲರಿಗೂ ಮಿತ್ರ ಸುಖವು ಉತ್ತಮವಾಗಿದೆ. ಕರ್ತೃತ್ವಶಕ್ತಿಯುಳ್ಳವರ ಆಸ್ತಿಯು ಬೆಳೆಯುವದು. ವಾದವಿವಾದದಲ್ಲಿಯೂ ಸ್ಪರ್ಧೆಯಲ್ಲಿಯೂ ಶತ್ರುಗಳು ಸಂಪೂರ್ಣ ಪರಾಜಯಹೊಂದಿ ಚಲಾಪಿಲ್ಲಿಯಾಗಿ ಹೋಗುವರು. ಈ ವಿಷಯದಲ್ಲಿ ತಾ. ೧೫ ಡಿಸೆಂಬರದಿಂದ ತಾ. ೭ ಜಾನೇವರಿ, ಮತ್ತೆ ತಾ. ೨ ಫೆಬ್ರುವರಿಯಿಂದ ತಾ. ೧೩ ಎಪ್ರಿಲ, ಹಾಗೂ ತಾ. ೨೦ ಜುಲೈ ತಿಂಗಳಿಂದ ತಾ. ೧೪ ಆಗಸ್ಟ ಈ ಸಮಯವು ಹೆಚ್ಚು ಜಯಪ್ರದವಿದೆ. ಸಮಾಜದಲ್ಲಿ ಹೆಚ್ಚಿನ ಮಾನ ದೊರೆವ ಸಂಭವವಿಲ್ಲದಿದ್ದರೂ ರಾಜಪಕ್ಷದಲ್ಲಿ ತುಂಬ ಗೌರವ ದೊರೆಕುತ್ತ ಹೋಗುವದು. ಈ ದೃಷ್ಟಿಯಿಂದ ತಾ ೩೧ ಮೇ ತಿಂಗಳಿಂದ ತಾ. ೧೧ ಜುಲೈ ವರೆಗೆ ಸರಿಯಾಗಿ ಲಕ್ಷ್ಯವಿಟ್ಟುಕೊಂಡಿರಬೇಕು. ಹುಡುಗರುಹುಡಿಗೆಯರ ಮದುವೆ ಮಾಡುವ ವಿಚಾರವಿದ್ದಲ್ಲಿ ಮಾರ್ಚದಿಂದ ಮುಂದಿನ ಕಾಲವು ಅನುಕೂಲವಾಗಿರುವದು. ಇದರಂತೆ ನಿಮ್ಮ ನಿಮ್ಮ ಸಾಮರ್ಥ್ಯಕ್ಕನುಸಾರವಾಗಿ ನಾಲ್ಕುದುಡ್ಡು ಕೂಡಿಡಲು ಆಸ್ಪದವಾಗುವದು. ಮಾರ್ಚದ ನಂತರ ದೂರದ ಪ್ರವಾಸವಾಗಿ ಉದ್ದೇಶ ಸಫಲವಾ

ಗುವದು. ಮಹತ್ವದ ಲೇಖ ಕೆಲಸಗಳೂ ಕರಾರುಪತ್ರಗಳೂ ಈ ವರ್ಷ ಬಹಳ ಆಗುವವು. ಭೆಟ್ಟಿಯ ವಿಷಯದಲ್ಲಿ ಮೊದಮೊದಲು ವಿರಸವೆನಿಸಿದರೂ ಮತ್ತೆ ಪ್ರಯತ್ನಿಸಿದರೆ ಅದು ಮನೋನುಗುಣವಾಗಿಯೇ ಪರಿಣಮಿಸುವದು.

ಈ ರಾಶಿಯ ವಿದ್ಯಾರ್ಥಿಗಳಿಗೆ ಫೆಬ್ರುವರಿಯ ವರೆಗೆ ಕೊರಗಂಟು, ಆದರೆ ಮಾರ್ಚದಿಂದ ಮುಂದೆ ನಗೆನಲಿವಿನಲ್ಲಿ ಓಲಾಟವೇ ಓಲಾಟ. ಮಾರ್ಚ ತಿಂಗಳಿಂದ ಜರುಗುವ ಪರೀಕ್ಷೆಗಳಲ್ಲಿ ಹಸಿದಡ್ಡನು ಕೂಡ ಖಂಡಿತ ತೇರ್ಗಡೆಯಾಗುವ ಪ್ರಬಲ ಯೋಗವಿದೆ.

೩. ಮಿಥುನ

ಈ ರಾಶಿಯ ಜನರಿಗೆ ಈ ವರ್ಷ ಅವರ ಮತ್ತು ಅವರ ಹೆಂಡತಿಯ ಪ್ರಕೃತಿಯು ಮಾರ್ಚ ತಿಂಗಳ ಪ್ರಾರಂಭದ ವರೆಗೆ ಚೆನ್ನಾಗಿರುತ್ತದೆ. ಆ ಮುಂದೆ ಅಷ್ಟು ಚೆನ್ನಾಗಿರದು. ಮೊಣಕಾಲು ನೋವು, ದಮ್ಮು, ಕೆಮ್ಮು, ಮೂತ್ರಾಶಯ ವಿಕಾರ, ಮುಖರೋಗ ಮೊದಲಾದವುಗಳಿಂದ ಹೆಚ್ಚು ಕಡಮೆ ತೊಂದರೆಯಾಗುವ ಸಂಭವ. ಆದರೂ ಯಾರ ಜೀವಕ್ಕೂ ಭಯವಿಲ್ಲ. ಹೆಂಡತಿಯ ಸ್ವಭಾವವು ಮಾರ್ಚದ ವರೆಗೆ ಅತ್ಯಂತ ಉಲ್ಲಸಿತವಾಗಿ ಉತ್ಸಾಹಭರಿತವಾಗಿರುವದಲ್ಲದೆ ಯೋಜಕತೆಯೂ ತೋರಿಬರುವದು. ಆದರೆ ಆನಂತರ ಅವಳ ಮನೋವೃತ್ತಿಯು ತದ್ವಿರುದ್ಧವಾಗುವದು. ತಾ. ೬ ಜೂನದ ವರೆಗೆ ಮಕ್ಕಳಿಗೆ, ಆ ಮುಂದೆ ತಂದೆ ತಾಯಿ ಮೊದಲಾದ ವೃದ್ಧರಿಗೆ ಒಂದಿಲ್ಲ ಒಂದು ಶಾರೀರಿಕ ಕ್ಲೇಶವಾಗುವದು. ಆದರೆ ಇವರೆಲ್ಲರ ಈ ಕ್ಲೇಶವು ಅಷ್ಟೊಂದು ತಾಪದಾಯಕವಾಗಿರುವದಿಲ್ಲ ಹಾಗೂ ಹಾಸಿಗೆ ಹಿಡಿವಂತಹದೂ ಅಲ್ಲ. ನಿಮ್ಮ ಸ್ವಭಾವದಲ್ಲಿ ಅತ್ಯಂತ ವೈಲಕ್ಷಣ್ಯ ವ್ಯಕ್ತವಾಗುವದು. ಅಂದರೆ, ಒಂದು ಕ್ಷಣ ಔದಾರ್ಯ ಉಕ್ಕಿ ಬಂದರೆ ಇನ್ನೊಂದು ಕ್ಷಣಕ್ಕೆ ಕೃಪಣತೆ ತಲೆ ಎತ್ತಿ ನಿಲ್ಲುವದು. ಈಗ ಒಬ್ಬರಿಗೆ ಪ್ರೋತ್ಸಾಹನ ಕೊಡಬೇಕೆನ್ನಿಸಿದರೆ ಇನ್ನೊಂದು ಗಳಿಗೆಗೆ ಅವನ ಉತ್ಸಾಹ ಭಂಗವಾಗುವಂತಹ ಭಯಸೂಚಕ ಮಾತು ಹೊರಬರುವದು. ಕ್ಷಣದಲ್ಲಿ ಒಬ್ಬನನ್ನು ಕುದುರೆಯ ಮೇಲೆ ಕುಳ್ಳಿರಿಸಿ ಮೆರೆಯಿಸಬೇಕೆನ್ನಿಸಿದರೆ ಮರುಕ್ಷಣದಲ್ಲಿ ಆವನನ್ನು ಕತ್ತೆಯ ಮೇಲಿರಿಸಿ ಮಾನಭಂಗ ಮಾಡಿಸಬೇಕೆಂದೆನಿಸುವದು. ಇಂತಹ ಅಸ್ಥಿರ ವೃತ್ತಿಯ ಮೂಲಕ ಹೊರಗಿನವರಂತೂ ಇರಲಿ ಮನೆಯವರೇ ನಿಮ್ಮ ಮೇಲೆ ಒಂದಿಷ್ಟೂ ವಿಶ್ವಾಸವಿಡರು. ಸ್ವಭಾವದ ಈ ವೈಲಕ್ಷಣ್ಯವು ತಾ. ೨೫-೧೧-೪೮ರಿಂದ ತಾ. ೧೪-೧೨-೪೮ ರ ವರೆಗೆ, ತಾ. ೨-೧-೪೯ ರಿಂದ ತಾ. ೯-೨-೪೯ ರ ವರೆಗೆ ಮತ್ತು ತಾ. ೨೯-೪-೪೯ ರಿಂದ ತಾ. ೧-೭-೪೯ ರ ವರೆಗೆ ಹೀಗೆ ಈ ಅವಕಾಶಗಳಲ್ಲಿ ಬಹಳ ತೋರಿಬರುವದು. ಪ್ರಕೃತಿಗೆ ತಾ. ೧೭-೧೨-೪೮ ರಿಂದ ತಾ. ೨-೨-೪೯, ತಾ. ೩೧-೫-೪೮ ರಿಂದ ತಾ. ೧೨-೭-೪೯ ಮತ್ತು ತಾ. ೨೯-೮-೪೯ ರಿಂದ ತಾ. ೧೬-೧೦-೪೯ ಈ ಸಮಯವು ಬಹಳ ತೊಂದರೆಯದಾಗುವದು. ಇನ್ನು ಹೆಂಡತಿಗೆ ತಾ. ೧೨-೭-೪೯ ರಿಂದ ತಾ. ೧೭-೧೦-೪೯ ರ ವರೆಗೆ ವಿಶೇಷ ತ್ರಾಸದಾಯಕ ಕಾಲವೇ. ಪ್ರಾಪಂಚಿಕ ಸುಖದ ದೃಷ್ಟಿಯಿಂದ ಈ ವರ್ಷ ತಾ. ೬ ಜೂನದ ವರೆಗೆ ಆಲ್ಹಾದಕಾರಕವಾಗಿರುವಷ್ಟು ಮುಂದೆ ಇರಲಾರದು.

ಈ ರಾಶಿಯ ಸ್ತ್ರೀಯರು ಬಸಿರಿಯರಾಗಿದ್ದರೆ ಮೇಲ್ಕಾಣಿಸಿದ ತಾರೀಖಿನ ತನಕ ಆ ಬಗ್ಗೆ ಮೇಲಿಂದ ಮೇಲೆ ತೊಂದರೆಯಾಗುತ್ತಿರುವದು ಹಾಗೂ ಇದೇ ಅವಧಿಯಲ್ಲಿ ಹೆರಿಗೆಯಾದರೆ ಅದು ಎಂದಿಗಿಂತ ತುಸು ಹೆಚ್ಚು ತೊಂದರೆ ಕೊಡುವದು ಆದರೆ ಈ ಸಮಯ ಮೀರಿ ಆಗುವ ಹೆರಿಗೆಗಳು ಅತಿ ಸುಲಭ ಮತ್ತು ನಿರಾತಂಕವಾಗಿ ಆಗುವವು. ಮಾರ್ಚ ಪ್ರಾರಂಭದ ವರೆಗೆ ಪ್ರಸೂತರಾಗುವ ಸ್ತ್ರೀಯರಿಗೆ ಬಹುತರ ಗಂಡು ಮಗುವೇ ಜನಿಸುವದು.

ಈ ವರ್ಷ ಉಳಿದವರೊಡನೆ ಮೇಳಗೂಡಲಿ ಬಿಡಲಿ, ಗಂಡಹೆಂಡಂದಿರ ನಡುವೆ ಮಾತ್ರ ಅತ್ಯಂತ ಪ್ರೇಮವೂ ಮತ್ತೈಕ್ಯವೂ ನೆಲೆಗೊಳ್ಳುವದರಲ್ಲಿ ಸಂದೇಹವೇ ಇಲ್ಲ. ಬಂಧು ಬಾಂಧವರಿಗೆ ಹಾಗೂ ಅವರಿಂದ ಲಭಿಸುವ ಸುಖಕ್ಕೆ ಈ ವರ್ಷವು ಅಷ್ಟೇನು ಅನುಕೂಲವದ್ದಲ್ಲ. ಇದಕ್ಕಿಂತ ಮಿತ್ರಸುಖವು ಇನ್ನೂ ಘಾತಕವಾಗಿದೆ. ಕೆಲ ಮಿತ್ರರಂತೂ ನಿಮ್ಮನ್ನು ವಂಚಿಸುವರು. ಇನ್ನು ಕೆಲವರು ಸ್ಥಾನಾಂತರದ ಫಲವಾಗಿ ಕಡೆತನಕ ದೂರಾಗಿಬಿಡುವರು. ಮತ್ತೆ ಕೆಲವರೊಡನೆ ಸಣ್ಣ ಮಾತಿಗಾಗಿ ಒಬ್ಬರೊಬ್ಬರ ಮುಖಾವಲೋಕನವೇ ಬೇಡ ಎನ್ನುವಷ್ಟು ವೈರ ಬೆಳೆಯುವದು ಹಾಗೂ ಉಳಿದ ಮಿತ್ರರು ಇದ್ದೂ ಇಲ್ಲದಂತೆ ವರ್ತಿಸುವರು. ಮೇಲಿನ ವಿಷಯವು ತಾ. ೧೭-೧೧-೪೮ ರ ವರೆಗಿನ ಮತ್ತು ಆಮೇಲೆ ತಾ. ೩-೨-೪೯ ರಿಂದ ತಾ. ೧೨.೩.೪೯, ತಾ. ೩೧.೫.೪೯ ರಿಂದ ತಾ. ೧೨-೭-೪೯ ವರೆಗಿನ ಅವಧಿಯಲ್ಲಿಯೂ ಅನಂತರ ತಾ.೧೮-೧೦-೪೯ ರಿಂದ ಮುಂದೆಯೂ ಬಹಳ ಅನುಭವಕ್ಕೆ ಬರುವದು.

ಈ ವರ್ಷ ಶತ್ರುಗಳು ನಿರ್ನಾಮವಾಗಿ ಹೋಗುವರು. ಅವರಲ್ಲಿ ಯಾರು ಎಷ್ಟೇ ಬಲಶಾಲಿಗಳಾಗಿದ್ದರೂ ಅವರ ಇತರ ಶತ್ರುಗಳ ಕಾರಸ್ಥಾನದಿಂದ ಮಣ್ಣುಮುಕ್ಕುವರು. ತಾ. ೨೮.೨.೪೯ ರ ವರೆಗೆ ನಂತರ ತಾ. ೨೧-೪-೪೯ ರಿಂದ ತಾ. ೩೦-೫-೪೯ ರ ವರೆಗೆ ಹಾಗೂ ತಾ. ೨೮.೮.೪೯ ರಿಂದ ಮುಂದೆ ಈ ವಿಷಯದಲ್ಲಿ ನಿಮಗೆ ಅನುಭವ ಬರುವದು. ಆದರೆ ಆ ಮಧ್ಯದಲ್ಲಿ ತಾ. ೩೧-೫-೪೯ ರಿಂದ ತಾ. ೧೨-೭-೪೯ ರ ಸಮಯವು ನಿಮಗೆ ಕೈತೋರಿಸುವ ಸಂಭವವಿದೆ.

ಧಂದೆ ಮತ್ತು ಕೂಲಿ ಮಾಡುವವರಿಗೆ ಈ ವರ್ಷವು ಬಹಳ ಉತ್ತಮವಿದೆ. ಅದರಲ್ಲಿಯೂ ಧಂದೆದಾರರಿಗೆ ಫೆಬ್ರುವರಿ ಕೊನೆಯ ವರೆಗೆ ಅತ್ಯಂತ ಉತ್ಕರ್ಷಕಾರಕ ಮತ್ತು ಲಾಭಪ್ರದವಾಗಿದೆ. ನೌಕರದಾರರಿಗೆ ಮಾರ್ಚದಿಂದ ಮುಂದೆ ಹೆಚ್ಚು ಏರಿಕೆಯ ಕಾಲವಿದೆ. ಅದರಲ್ಲಿಯೂ ನಿಸ್ಪೃಹವಾಗಿರುವವರಿಗಿಂತ ಸಂಚಿಟ್ಟು ನಡೆವವರ ಬೇಳೆ ಇನ್ನೂ ಚೆನ್ನಾಗಿ ಬೇಯುವದು. ಲಾಭದ ದೃಷ್ಟಿಯಿಂದ ತಾ. ೧೮-೧೧-೪೮ ರಿಂದ ತಾ. ೨.೨.೪೯, ತಾ. ೧೩-೩-೪೯ ರಿಂದ ತಾ. ೩೦-೫.೪೯ ಮತ್ತು ತಾ. ೧೨-೭-೪೯ ರಿಂದ ತಾ. ೨೮-೮-೪೯ ಹೀಗೆ ಈ ಕಾಲವು ಹೆಚ್ಚು ಫಲದಾಯಕವಿದೆ. ಯಾವ ಕಠಿಣ ಕೆಲಸವಿದ್ದರೂ ಅಲ್ಪಾಯಾಸದಿಂದಲೇ ನೆರವೇರುವದು. ಹೊರಹೊರಗೆ ಅದೆಷ್ಟೇ ಸತ್ಯನಿಷ್ಠೆ ತೋರ್ಪಡಿಸಿದರೂ ಒಳಒಳಗೆ ಅಸತ್ಯತೆಯ ಮತ್ತು ಪಾಪವಾಸನೆಯ ತಾಂಡವವೇ ತಾಂಡವ. ತಾ. ೬ ಜೂನದ ನಂತರ ಸಮಾಜದಲ್ಲಿದ್ದ ನಿಮ್ಮ ಹಿರಿಮೆ ಹಗುರಾಗುತ್ತ ಹೋಗುವ ಸಂಭವವಿದೆ. ಈ ಅವಧಿಯಲ್ಲಿ ತರುಣರಂತೆಯೇ ವೃದ್ಧರೂ ಕೂಡ ತಿಳಿದೋ ತಿಳಿಯದೆಯೊ ಸ್ತ್ರೀ ವಿನಯವನ್ನು ಭಂಗಿಸುವ ಭಯವಿದೆ. ಅದರಲ್ಲಿಯೂ ತಾ. ೨೬-೬-೪೯ ರಿಂದ ತಾ. ೨೦-೭-೪೯, ತಾ. ೧೫.೬.೪೯ ರಿಂದ ತಾ. ೭-೯.೪೯ ಮತ್ತು ತಾ ೪.೧೦-೪೯ ರಿಂದ ಮುಂದೆ ಈ ಅವಧಿಯಲ್ಲಿ ಹೆಚ್ಚು ಎಚ್ಚರಿಕೆಯಿಂದಲೂ ನಿಗ್ರಹದಿಂದಲೂ ಇರುವದೊಳಿತು. ಪುಷ್ಕಲ ಧನವೇನೋ ದೊರಕುವದು ನಿಜ. ಆದರೆ ಇಲ್ಲದ ಈರ್ಷೆ, ಇಲ್ಲದ ದೊಡ್ಡಸ್ತಿಕೆ ಹೆಮ್ಮೆ ತೋರಿಸುವ ಸೆಳೆತಕ್ಕೆ ನೀವೂ ನಿಮ್ಮ ಹೆಂಡತಿಯೂ ಸಿಕ್ಕು ಬಂದದ್ದನ್ನೆಲ್ಲ ಬರಿದು ಮಾಡಿಬಿಡುವಿರಿ. ತಾ. ೬ ಜೂನದ ನಂತರ ಸ್ಥಾವರ ಆಸ್ತಿಯ ಬಗ್ಗೆ ಇಲ್ಲದ ಕಿಟಿಕಿಟಿ ಪ್ರಾರಂಭವಾಗುವದು. ಒಟ್ಟಿನಲ್ಲಿ ಈ ವರ್ಷ ಜಾಣತನದಿಂದಲೂ ದೂರದರ್ಶಿತ್ವದಿಂದಲೂ ಯುಕ್ತಿಪೂರ್ವಕವಾಗಿಯೂ ನಡೆದುಕೊಳ್ಳುವದು ಲೇಸು ಎಂದು ಸಲಹೆ ಕೊಡಬೇಕಾಗಿದೆ.

ಕಾಯದೆ ಮತ್ತು ಮೆಕ್ಯಾನಿಕಲ್ ಅಭ್ಯಾಸಕ್ರಮವನ್ನು ಅನುಸರಿಸಿದ ವಿದ್ಯಾರ್ಥಿಗಳಿಗೆ ಈ ವರ್ಷವು ಯಶೋದಾಯಕವಾಗಿದೆ. ಅದರಲ್ಲಿಯೂ ಯಾವ ವಿದ್ಯಾರ್ಥಿಯೇ ಇರಲಿ ಕೆಳಗಿನ ಅವಧಿಯಲ್ಲಿ ಪರೀಕ್ಷೆಗೆ ಕೂಡುವವರಿಂದ ನಿಶ್ಚಯವಾಗಿಯೂ ಹಾಲು ಸಕ್ಕರೆ ಸಿಕ್ಕಲೇಬೇಕು. ಅವರು ಪೇಢೆ ಹಂಚಲೇಬೇಕು. ಆ ಸುಯೋಗಯುಕ್ತ ಪರೀಕ್ಷೆಯ ಸಮಯದ ವಿವರ ಹೀಗೆ:—

ತಾ. ೨೧-೧೧-೪೮ ರಿಂದ ತಾ. ೧೪-೧೨-೪೮, ತಾ. ೮-೧-೪೯ ರಿಂದ ತಾ. ೩೧-೧-೪೯, ತಾ. ೨೫-೨-೪೯ ರಿಂದ ತಾ. ೨೦-೩-೪೯, ತಾ. ೧೪-೪-೪೯ ರಿಂದ ತಾ. ೬-೫-೪೯, ತಾ. ೧-೬-೪೯ ರಿಂದ ತಾ. ೨೪-೬-೪೯, ತಾ. ೨೧-೭-೪೯ ರಿಂದ ತಾ. ೧೩-೮-೪೯ ಮತ್ತು ತಾ. ೮-೯-೪೯ ರಿಂದ ತಾ. ೩-೧೦-೪೯

೪. ಕರ್ಕ

ಈ ರಾಶಿಯವರ (ಸಾಡೇಸಾತ) ಏಳು ವರಿಯ ಯೋಗವಿನ್ನೂ ಮುಗಿದಿಲ್ಲ. ಈಗ ಬಂದಿರುವ ೨ ನೇ ಶನಿಸ್ಥಾನ ಮತ್ತು ರಾಶಿಯು ಆ ಯೋಗದ ಕಟುತ್ವವನ್ನು ಹೆಚ್ಚಿಸುವ ಹಾಗೆ ಅಶುಭವಾಗಿದ್ದುದರಿಂದ ಮತ್ತು ದ್ವಿತೀಯಕ್ಕೆ ಧನ, ಕುಟುಂಬ, ನೇತ್ರ, ವಾಣಿ ಮತ್ತು ಮಾರಕ ಹೀಗೆ ಸಂಜ್ಞೆ ಇದ್ದುದರಿಂದ ಈ ಎಲ್ಲ ಸಂದರ್ಭಗಳಲ್ಲಿಯೂ ಅವನು ಹೆಚ್ಚು ಕಡಮೆ ತನ್ನ ಕೋಪವನ್ನು ತೋರಿಸದೆ ಬಿಡನು. ಅಂದರೆ ಇದ್ದ ಧನವೆಲ್ಲ ಬಹುತರ ವಿನಾಕಾರಣ ವ್ಯಯವಾಗಿ ಹೋಗುವ ಸಂದರ್ಭ ಒದಗುವವು. ಧನವೇ ಇಲ್ಲದಿದ್ದರೆ ಸಾಲ ಮಾಡುವ ಪ್ರಸಂಗ ಬರುವದು. ಹೆಂಡತಿಗೆ ಮೇಲಿಂದ ಮೇಲೆ ಪ್ರಕೃತಿ ಕೆಡುವದು. ಕುಟುಂಬದಲ್ಲಿ ಕಲಹವುಂಟಾಗಿ ಒಬ್ಬರ ಮುಖವು ಪೂರ್ವಕ್ಕೆ ಇನ್ನೊಬ್ಬರದು ಪಶ್ಚಿಮಕ್ಕೆ ಆಗುವದು. ಇದರಿಂದ ಚಾಕರರು, ತಾವಾಗಿ ಬಂದ ಅಥವಾ ಬೇಕೆಂದೇ ಕರೆಸಿಕೊಂಡ ಅತಿಥಿಗಳು ಮತ್ತು ಮಿತ್ರರೆಂದು ಉಡುಬುಡು ಮಾಡುವವರು ಚನ್ನಾಗಿ ನಿಮ್ಮ ತಲೆಯ ಮೇಲೆ ಕೈಯಾಡಿಸುತ್ತಾರೆ. ತಾ. ೧೨ ಫೆಬ್ರುವರಿಯಿಂದ ತಾ. ೧೨ ಮಾರ್ಚ, ತಾ. ೧೬ ಜೂನದಿಂದ ತಾ. ೧೭ ಜುಲೈ ಮತ್ತು ತಾ. ೧೭ ಅಗಸ್ಟದಿಂದ ತಾ. ೧೬ ಸಪ್ಟೆಂಬರ ಈ ಅವಧಿಯಲ್ಲಿ ಈ ಬಗ್ಗೆ ಸಾಕಷ್ಟು ಕಟು ಅನುಭವ ಬರುವದು. ಹೆಂಡತಿಗೆ ಮೇಲಿಂದ ಮೇಲೆ ಮತ್ತು ತಂದೆತಾಯಿಂದಿದ್ದರೆ ಅವರಿಗೆ ತಾ. ೬ ಜೂನದ ವರೆಗೆ ಪ್ರಕೃತಿ ಸರಿಯಾಗಿರಲಾರದು. ಸ್ವತಃ ನಿಮ್ಮ ಪ್ರಕೃತಿಗೆ ಈ ವರ್ಷವು ಒಟ್ಟಿನ ಮೇಲೆ ನೆಟ್ಟಗಿದೆ. ಆದರೆ ತಾ. ೩-೨-೪೯ ರಿಂದ ತಾ. ೧೨-೩-೪೯ ಮತ್ತು ತಾ. ೧೭ ಆಕ್ಟೋಬರ ನಂತರದ ಕಾಲದಲ್ಲಿ ಪ್ರಕೃತಿ ತುಸು ಕೆಡಬಹುದು. ಮಾನಸಿಕ ತ್ರಾಸವು ಬಹಳವಾಗುವದು. ನಿಮ್ಮ ಸರಳ ಮಾತು ಇಲ್ಲವೆ ಬರೆಹ ಯಾರಿಗೂ ರುಚಿಸುವದಿಲ್ಲ. ಮನಸ್ಸಿಗೆ ಪೆಟ್ಟು ಕೊಡುವ ದುರುತ್ತರಗಳು ನಿಮ್ಮ ಹೆಂಡರು ಮಕ್ಕಳಿಂದ ಕೂಡ ಬರುವ ಸಂಭವವಿರುವವೆಂದ ಮೇಲೆ ಉಳಿದವರ ಮಾತೇನು ? ಕಣ್ಣು ಕೆಡುವ ಸಂಭವವಿದೆ ಮತ್ತು ದೃಷ್ಟಿ ಮಂದವಾಗಬಹುದು. ಮೋತಿಬಿಂದು, ಕಣ್ಣು ಬರುವದು ಹೀಗೆ ಯಾವದಾದರೊಂದು ನೇತ್ರವಿಕಾರವಾಗುವದೆಂದ ತಿಳಿಯಬೇಕು. ತಾ. ೬ ಜೂನದ ನಂತರ ದಾಯಾದಿಗಳಿಗೆ ಅನಿಷ್ಟವಿದೆ ಮತ್ತು ಅವರೊಡನೆ ವಿತುಷ್ಟಿಯುಂಟಾಗುವದು. ತಾ. ೧ ಮಾರ್ಚ ತಿಂಗಳಿಂದ ಮುಂದೆ ಮಕ್ಕಳಿಗೆ ಪ್ರಗತಿಪರ ಕಾಲವಿದೆ. ಅಲ್ಲದೆ ಈ ತಾರೀಖಿನಿಂದ ಪ್ರಾಪಂಚಿಕ ಸುಖವೂ ಮೊದಲಿಗಿಂತ ತುಸು ತುಸು ಸುಧಾರಿಸಹತ್ತುವದು. ಆಪ್ತರು ನೆರೆಹೊರೆಯವರು ನಿಮ್ಮನ್ನು ಕಂಡು ಮತ್ಸರಿಸುವರಲ್ಲದೆ ಕುಚೇಷ್ಟೆಯನ್ನೂ ಮಾಡುವರು. ದನಕರುಗಳಿದ್ದರೆ ರೋಗ ಮೂಲಕ ಮತ್ತು ವಾಹನಗಳಿದ್ದರೆ ಮುರಿಯುವದರ ಮೂಲಕ ಹಾನಿ ತಟ್ಟುವ ಸಂಭವವಿದೆ.

ಈ ರಾಶಿಯ ಸ್ತ್ರೀಯರಿಗೆ ಮಾರ್ಚ ತಿಂಗಳ ಪ್ರಾರಂಭದ ವರೆಗೆ ಪತಿಸುಖವು ಬಹಳ ಕಡಮೆಯುಂಟು. ಬಸಿರೆಯರಾದವರು ತಾ. ೩-೨-೪೯ ರಿಂದ ತಾ ೧೨-೩-೪೯ ಮತ್ತು ತಾ. ೧೨-೭-೪೯ ರಿಂದ ೨೭-೮-೪೯ ರ ಅವಕಾಶದಲ್ಲಿ ಹೆತ್ತರೆ ತುಸು ಕಷ್ಟವಿದೆಯಾದರೂ ಪ್ರಾಣಕ್ಕೆ ಅಪಾಯವಿಲ್ಲ. ಉಳಿದ ಕಾಲದಲ್ಲಿ ಮಾತ್ರ ಸುಲಭ ಪ್ರಸೂತಿಯಾಗುವದು. ಗಂಡಿಗಿಂತ ಹೆಣ್ಣು ಮಗುವಾಗುವ ಯೋಗವೇ ಹೆಚ್ಚು ಪ್ರಬಲ ಉಂಟು.

ಇರಲಿ, ಧಂದೆಗಾರರಿಗೆ ಮತ್ತು ಕೂಲಿಕಾರರಿಗೆ ಈ ವರ್ಷವು ಅಷ್ಟೇನು ಕೆಡಕಿಲ್ಲ. ಧಂದೆಗಾರರಿಗಿಂತ: ನೌಕರಿ ಮಾಡುವವರಿಗೆ ಹೆಚ್ಚು ಸುಖಕರವಾಗಿದೆ. ಮೇಲಿನ ವರ್ಗದ ಅಧಿಕಾರಿಗಳಿಗೆ ಫೆಬ್ರುವರಿ ಕೊನೆಯ ವರೆಗಿನ ಕಾಲದಲ್ಲಿ ಮತ್ತು ಅವರ ಕೈಕೆಳಗಿನವರಿಗೆ ಮಾರ್ಚದಿಂದ ಮುಂದಿನ ಕಾಲದಲ್ಲಿ ಬಡತಿಯಾಗುವ ಪ್ರಬಲಯೋಗ ಉಂಟು. ಇದರಂತೆ ಕಿರುಕುಳ ಧಂದೆಗಾರರಿಗೆ ತಾ. ೬ ಜೂನ ವರೆಗಿನ ಕಾಲವು ಹಾಗೂ ದೊಡ್ಡ ವ್ಯಾಪಾರಿಗಳಿಗೆ ಅನಂತರದ ಕಾಲವು ಹೆಚ್ಚು ಯಶಪ್ರದವಾಗಿದೆ. ಲಾಭ ದೃಷ್ಟಿಯಿಂದ ತಾ. ೨೦ ನವೆಂಬರ ವರೆಗಿನ ಕಾಲವು ಮತ್ತು ನಂತರ ತಾ. ೧೫ ಡಿಸೆಂಬರದಿಂದ ತಾ. ೭ ಜಾನೇವರಿ ಫೆಬ್ರುವರಿ ತಾ. ೧: ರಿಂದ ತಾ. ೨೪, ಮಾರ್ಚ ತಾ. ೨೧ ರಿಂದ ಎಪ್ರಿಲ ತಾ. ೧೩, ಮೇ ತಿಂಗಳದ ತಾ. ೭ ರಿಂದ ತಾ. ೩೧, ಜೂನ ತಾ. ೨೫ ರಿಂದ ಜುಲೈ ತಾ. ೧೯, ಅಗಸ್ಟ ತಾ. ೧೪ ರಿಂದ ಸಪ್ಟೆಂಬರ ತಾ. ೭ ಮತ್ತು ಆಕ್ಟೋಬರ ತಾ. ೪ ರಿಂದ ಮುಂದೆ ಹೀಗೆ ಈ ಅವಧಿಯು ಬಹಳ ಉತ್ತಮ. ಬಂಧುಗಳ ಮತ್ತು ಮಿತ್ರರ ಇದರಂತೆ ನಿಮ್ಮ ಸ್ವತಃದ ಮದುವೆಯಾಗುವದಿದ್ದರೆ ಮಾರ್ಚದಿಂದ ಮುಂದಿನ ಸಮಯದಲ್ಲಿ ಅದು ನೆರವೇರುವ ಸಂಭವವೇ ಹೆಚ್ಚು ಆದರೆ ಪ್ರತ್ಯಕ್ಷವಾಗಿ ಅಕ್ಷತೆ ಬೀಳುವ ವರೆಗೆ ಇಲ್ಲದ ವಿಘ್ನಗಳನೇಕ ಒದಗಿ 'ಮದುವೆ ಆದೀತೋ ಆಗಲಿಕ್ಕಿಲ್ಲವೋ ಎನ್ನುವ ಹಾಗಾಗುವದಲ್ಲದೆ ಬೀಗಬೀಗರಲ್ಲಿ ಬಹಳ ತುರುಸುಂಟಾಗುವದು. ವಾದದಲ್ಲಿಯೂ ಹೆಚ್ಚಿನ ಯಶ ದೊರೆತೀತೆಂಬುದಾಗಿ ಆಶಿಸದಿರುವದೇ ಒಳಿತು. ಮಾರ್ಚದಿಂದ ಮುಂದಿನ ಸಮಯದಲ್ಲಿ ಒಂದಿಷ್ಟು ಅನುಕೂಲತೆ ಎನ್ನಿಸಬಹುದು. ಬಹಿರಂಗ ಹಾಗೂ ಗುಪ್ತ ಶತ್ರುಗಳು ನಿಮ್ಮ ಹೆಸರು ಕೆಡಿಸಲು ಕಂಡ ಕಂಡಲ್ಲೆಲ್ಲ ಒಳ್ಳೆ ರಭಸದಿಂದ ಪ್ರಯತ್ನಿಸುವರು. ಸಮಾಜದಲ್ಲಿ ಪ್ರತಿಷ್ಠೆಯು ತಾ. ೬ ಜೂನದ ತರುವಾಯವೇ ಸರಿಯಾಗಿರುವದು. ಮಿತ್ರಸುಖದ ಬಗ್ಗೆ ಹೇಳುವದಾದರೆ, ಮಹಾರಾಯಾ ದೂರದಿಂದಲೇ ನಮಸ್ಕಾರ ಎನ್ನುವ ಸ್ಥಿತಿ ಪ್ರಾಪ್ತವಾಗುವದು. ಒಟ್ಟಿನಲ್ಲಿ ಸುಖಕ್ಕಿಂತ, ದಗದಗಿ, ತ್ರಾಸ, ಹಾನಿ ಇವೇ ಹೆಚ್ಚಿನ ಪ್ರಮಾಣದಲ್ಲಿ ಘಟಿಸುವವೆಂದೇ ಈ ವರ್ಷದ ಗ್ರಹಯೋಗಗಳು ಹೇಳುತ್ತವೆ.

ವಿದ್ಯಾರ್ಥಿಗಳಿಗೂ ಈ ವರ್ಷವು ಗೆಲವಿನದಲ್ಲ. ಆದೆಷ್ಟೇ ಚನ್ನಾಗಿ ಓದಿ ಅರಗಿಸಿಕೊಂಡಿದ್ದರೂ ಪರೀಕ್ಷೆಯ ಕಾಲಕ್ಕೆ ಯಾವುದೊ ವಿಚಿತ್ರ ಘಟನೆಯಿಂದ ಪ್ರಶ್ನಪತ್ರಗಳನ್ನು ಸರಿಯಾಗಿ ಬರೆಯಲು ಬಾರದ ಹಾಗೆ ಮನಸ್ಥಿತಿಯುಂಟಾಗುವದು. ಅದರಲ್ಲಿಯೂ ತಾ. ೧೭ ನವೆಂಬರ ವರೆಗೆ, ತಾ. ೧೬ ಮಾರ್ಚ ದಿಂದ ತಾ. ೨೧ ಎಪ್ರಿಲ, ತಾ. ೩೧ ಮೇದಿಂದ ಜುಲೈ ತಾ. ೧೨ ಈ ಅವಧಿಯಲ್ಲಿ ಪರೀಕ್ಷೆಗೆ ಕೂಡತಕ್ಕವರಿಗೆ ಉತ್ತೀರ್ಣರಾಗುವಷ್ಟೇ ಗುಣಗಳು ಹಾಗೂ ಹೀಗೂ ದೊರಕಬಹುದು. ಒಟ್ಟಿನಲ್ಲಿ ಈ ರಾಶಿಯ ಜನರು, ಬಂದದ್ದನ್ನು ಎದುರಿಸಲು ಎತ್ತುಗಡೆ ಮಾಡಿಕೊಂಡಿರುವದೇ ಲೇಸೆಂದು ಈವರ್ಷದ ಸಂದೇಶವವರಿಗೆ.

೫. ಸಿಂಹ

ಈ ರಾಶಿಯ ಜನರಿಗೆ ೭॥ (ಸಾಡೇಸಾತ) ಯೋಗದ ಮಧ್ಯಾಹ್ನವು ಇದೇ ಪ್ರಾರಂಭವಾಗಿದೆ. ಆದರೆ ಮೊದಲಿನ ೨॥ ವರ್ಷಗಳಿಗಿಂತ ಈ ೨॥ ವರ್ಷಗಳು ಸೌಮ್ಯವಾಗಿವೆ. ಅಂದರೆ ೧೨ ಶನಿಯು ಈ ಮೊದಲು ತ್ರಾಸದಾಯಕವಿದ್ದಷ್ಟು ಈಗಿನ ೧ ನೆಯವನು ಇರುವದಿಲ್ಲ. ಇಷ್ಟೇ ಅಲ್ಲ; ಕೆಲಕೆಲವು ವಿಷಯಗಳಲ್ಲಿ ಒಳಿತನ್ನೇ ಮಾಡಿಕೊಡುವನು. ಆದರೂ ಪ್ರಕೃತಿಯ ವಿಷಯದಲ್ಲಿ ಒಳ್ಳೇ ಎಚ್ಚರಿಕೆಯಿಂದ ಇರುವದು ಲೇಸು. ಯಾಕಂದರೆ ಈ ಗ್ರಹವು ಈ ರಾಶಿಯಲ್ಲಿ, ಅರ್ಧಾಂಗವಾಯು, ಕಟ್ಟಿನ ಜ್ವರ, ಮೂತ್ರಕೃಚ್ಛ್ರ, ಶಕ್ತಿಪಾತ, ಶಸ್ತ್ರಪಘಾತ ಮತ್ತು ಹೊರಚಾಳಿ ಇದ್ದವರಿಗೆ ಪ್ರಮೇಹಭಯ, ಉಪದಂಶಭಯ, ಮೊದಲಾದ ವಿಕಾರಗಳನ್ನು ಉಂಟುಮಾಡುವ ಸಂಭವವಿದೆ. ಮಾರ್ಚದಿಂದ ಮುಂದಿನ ಕಾಲದಲ್ಲಿ ಬಹಳ ಜಾಗರೂಕತೆಯಿಂದಲೇ ವರ್ತಿಸಬೇಕು. ೧೧ ಸಾವಿರವಾದರೂ ಮಹಾಮೃತ್ಯುಂಜಯ ಜಪಮಾಡಬೇಕು, ಅಂದರೆ ಗಂಡಾಂತರವು ನಿವಾರಣ

ವಾಗುವದು. ವಿಶೇಷವಾಗಿ ತಾ. ೩-೨-೪೯ ರಿಂದ ತಾ. ೨೦-೪-೪೯, ತಾ. ೩೧-೫-೪೯ ರಿಂದ ತಾ. ೧೧-೭-೪೯ ಮತ್ತು ತಾ. ೧೭ ಅಕ್ಟೋಬರದಿಂದ ಮುಂದೆ ಹೆಚ್ಚುಕಡಿಮೆ ಪ್ರಮಾಣದಲ್ಲಿ ಕ್ಲೇಶ ಉಂಟಾಗಬಹುದು. ಹೆಂಡತಿಗೆ ಮಾತ್ರ ಸಹಸಾ ತ್ರಾಸವಾಗುವದಿಲ್ಲ. ಆದರೂ ತಾ. ೧೨-೨-೪೯ ರಿಂದ ತಾ. ೧೩-೩-೪೯ ಮತ್ತು ತಾ. ೧೬-೮-೪೯ ರಿಂದ ತಾ. ೧೭-೯-೪೯ ರ ಪರ್ಯಂತ ಕಿರುಕಳ ತ್ರಾಸವಾದರೂ ಆಗುತ್ತಿರುವದು. ಗಂಡಹೆಂಡಂದಿರು ಒಳ್ಳೇ ಅನ್ಯೋನ್ಯವಾಗಿರುವರು. ಚಿಕ್ಕಮಕ್ಕಳಆರೋಗ್ಯಕ್ಕೆ ತಾ. ೨೭-೧೦-೪೮ ರಿಂದ ತಾ. ೨-೨-೪೯ ಮತ್ತು ತಾ. ೨೮-೮-೪೯ ರಿಂದ ತಾ. ೧೬-೧೦-೪೯ ರ ವರೆಗಿನ ಕಾಲವು ಒಂದಿಷ್ಟು ಕ್ಲೇಶದಾಯಕವಾಗಿದೆ. ಆದರೆ ಅವರ ಉನ್ನತಿ ಮಾತ್ರ ಚೆನ್ನಾಗಿಯೇ ಆಗಿ ಅವರಿಂದ ಯಥಾಯೋಗ್ಯವಾದ ಸುಖ ಸಿಕ್ಕುವದು. ನಿಮ್ಮ ಸ್ವಭಾವದಲ್ಲಿ ಸಿಡಿಮಿಡಿ, ಹಟ, ಅಸತ್ಯವಾದ ಈ ಗುಣಗಳು ಬೆಳೆದುಬಂದುದು ತೋರುವದು.

ಪ್ರಾಪಂಚಿಕ ಸುಖದಲ್ಲಿ ಒಳಿತೂ ಅಲ್ಲ, ಕೆಡಕೂ ಅಲ್ಲ, ಅನ್ನುವ ಹಾಗೆ ಮಧ್ಯಮಸ್ಥಿತಿ ಕಂಡು ಬರುವದು. ಒಳಿತು-ಕೆಡಕು, ಸುಖ ದುಃಖ, ಆನಂದ ಉದ್ವೇಗ ಇತ್ಯಾದಿ ಪರಸ್ಪರ ವಿರುದ್ಧವಾಗಿರುವ ಘಟನೆಗಳು ಆಗಾಗ ಸಂಭವಿಸುವವು. ಇದರಿಂದ ಅಳುವದೋ ನಗುವದೋ ಎಂಬಂತಹ ವಿಚಿತ್ರಸ್ಥಿತಿ ಉಂಟಾಗುವದು. ನಿಮ್ಮ ಇಲ್ಲವೆ ನಿಮ್ಮ ಮಕ್ಕಳ ವಿವಾಹವಾಗುವದಿದ್ದಲ್ಲಿ ಈ ಮಂಗಲಕಾರ್ಯವು ಮಾರ್ಚದ ಮೊದಲೇ ಸುಲಭವಾಗಿ ಸಾಂಗವಾಗುವದು.

ಈ ವರ್ಷವು ನಿಮ್ಮ ಸ್ಥಾವರ ಆಸ್ತಿಯನ್ನೂ ಆದರ ಉತ್ಪನ್ನವನ್ನೂ ಹೆಚ್ಚಿಸುವಂತಹದಿದೆ. ಆದರೆ ಬೆಲೆ ಅಥವಾ ವೆಚ್ಚವನ್ನು ಹೆಚ್ಚಾಗಿ ತೆತ್ತಬೇಕಾಗುವದು.

ಈ ರಾಶಿಯ ಸ್ತ್ರೀಯರಿಗೆ ಪತಿಸುಖವು ಚೆನ್ನಾಗಿ ಲಭಿಸುವದು. ಆದರೆ ನಿಮ್ಮ ಪ್ರಕೃತಿಯ ಕಿರುಕಳದ ಮೂಲಕ ಅದನ್ನು ಭೋಗಿಸಲು ಕೂಡ ಬರುವದಿಲ್ಲ. ಬಸಿರೆಯರ ಹೆರಿಗೆಯು ಹಗುರಾಗಿಯಾಗುವದು. ಮಾರ್ಚ ತಿಂಗಳದ ಮೊದಲು ಹೆರಿಗೆಯಾಗಬೇಕಾದವರಿಗೆ ಹೆಣ್ಣುಮಗುವೂ ಅನಂತರ ಹೆರುವವರಿಗೆ ಪುತ್ರ ಪ್ರಾಪ್ತಿಯೂ ಆಗುವ ಸಂಭವವು ವಿಶೇಷವಾಗಿದೆ. ಮಾರ್ಚದ ಮುನ್ನ ಒಂದು ವೇಳೆ ಅವಳಿ ಜವಳಿ ಜನಿಸಿದರೂ ಜನಿಸಬಹುದು. ಹೆರಿಗೆಯ ನಂತರ ಬಾಣಂತಿತನದ ಶುಶ್ರೂಷೆ ಮಾತ್ರ ನೆಟ್ಟಗೆ ಆಗದಿರುವ ಯೋಗವಿದೆ. ಮನೆತನದ ಅಡಚಣಿಗಳು ಬಹಳ ಬರುವವು. ತಾ. ೬ ಜೂನದಿಂದ ಮುಂದಿನ ಕಾಲದಲ್ಲಿ ಆಗುವ ಬಾಣಂತಿತನವು ಬಾಣಂತಿಗೆ ಅಷ್ಟು ಒಗ್ಗುವದಿಲ್ಲ.

ಧಂದೆಗಾರರಿಗೂ ಕೂಲಿಕಾರರಿಗೂ ಈ ವರ್ಷವು ಬಹಳ ಉತ್ತಮವಿದೆ. ಧಂದೆಗಾರರಿಗೆ ಫೆಬ್ರುವರಿ ಕೊನೆಯ ವರೆಗಿನ ಕಾಲವು ಹಾಗು ನೌಕರಿದಾರರಿಗೆ ಮಾರ್ಚದಿಂದ ಮುಂದಿನ ಕಾಲವು ಹೆಚ್ಚು ಹಿತಾವಹವಾಗಿದೆ. ತಾ. ೨೨-೪-೪೯ ರಿಂದ ತಾ. ೨೭-೮-೪೯ ಈ ಅವಧಿಯಲ್ಲಿ ಪರಿಸ್ಥಿತಿಗನುಗುಣವಾಗಿ ಪತ್ತು, ಪ್ರತಿಷ್ಠೆ, ಬಡತಿ, ಅಧಿಕಾರ, ಕೀರ್ತಿ ಇವುಗಳಲ್ಲಿ ಒಂದಿಲ್ಲೊಂದು ಹೆಚ್ಚಲೇಬೇಕು.

ಕೇವಲ ದ್ರವ್ಯಲಾಭಕ್ಕೆ ತಾ. ೨೫-೧೧-೪೮ ರ ವರೆಗೆ ಮತ್ತು ಆ ಮೇಲೆ ಡಿಸೆಂಬರ ತಾ. ೧೫ ರಿಂದ ತಾ. ೩೦, ಮಾರ್ಚ ತಾ. ೧೦ ರಿಂದ ತಾ ೨೮, ಎಪ್ರಿಲ ತಾ. ೧೨ ರಿಂದ ತಾ. ೨೮, ಜೂನ ತಾ. ೩ ರಿಂದ ತಾ. ೧೯, ಅಗಸ್ಟ ತಾ. ೬ ರಿಂದ ವರ್ಷಾಂತ್ಯದ ವರೆಗೆ ಹಾಗೇ ಈ ಕಾಲವು ಹೆಚ್ಚು ಅನುಕೂಲವಾಗಿದೆ. ಫೆಬ್ರುವರಿ ಅಂತ್ಯದ ವರೆಗೆ ವಿಶೇಷ ಕೀರ್ತಿಯ ಒಂದಾದರೂಮಹತ್ಕಾರ್ಯವಾಗುವದು. ಆದರಂತೆ ಆವರೆಗೆ ಹೆಚ್ಚುಕಡಿಮೆ ಪ್ರಮಾಣದಲ್ಲಿ ಆಕಸ್ಮಿಕ ಧನಲಾಭವೂ ಆಗುವದು. ಈ ವರ್ಷದಲ್ಲಿ ಪತ್ರವ್ಯವಹಾರವೂ ಲೇಖನ ಕಾರ್ಯವೂ ಯಶಸ್ವಿಯಾದಷ್ಟು ಪ್ರತ್ಯಕ್ಷ ಭೆಟ್ಟಿಯು ಯಾವದೇ ಕೆಲಸದಲ್ಲಿ ಯಶಸ್ವಿಯಾಗಲಾರದು. ಪ್ರವಾಸಯೋಗಗಳೇನೊ ಬಹಳ ಬರುವವು. ಆದರೆ ಪ್ರತ್ಯಕ್ಷ ಪ್ರವಾಸ ಘಟಿಸುವದು ಕಡಿಮೆಯೇ ಮತ್ತು ಆದಷ್ಟು ಪ್ರವಾಸವು ತ್ರಾಸದಾಯಕವೇ ಆಗುವದು. ಪ್ರವಾಸ ಕಾಲದಲ್ಲಿ ಒಂದು ವಸ್ತುವೋ ಮಹತ್ವದ ಕಾಗದಪತ್ರವೊ ಕಳೆದು ಹೋಗುವ ಭಯವಿದೆ. ಒಂದು ವೇಳೆ ಆಗಿನ ಕಾಲದಲ್ಲಿ ಒಬ್ಬ ಮನುಷ್ಯನು ತಪ್ಪಿಸಿಕೊಂಡರೂ ತಪ್ಪಿಸಿಕೊಳ್ಳಬಹುದು.

ಮಿತ್ರ ಸುಖವು ಚೆನ್ನಾಗಿಯೇ ಲಭಿಸುವದು ಆದರೆ ಹಗೆಗಳಿಂದ ವಿಧವಿಧದ ತ್ರಾಸವಾಗುತ್ತ ಹೋಗುವದು. ಅದೆಷ್ಟೋ ಪೀಡೆಗೆ ಒಳಗಾದರೂ ಈ ರಾಶಿಯವನು ಜೀವಂತವೇ ಉಳಿಯುವನು. ಹೀಗೆ ಹೇಳುವ ಕಾರಣವೆಂದರೆ ಶತ್ರುಗಳು ಪ್ರಾಣಹರಣಕ್ಕೊ ಹೊಂಚು ಹಾಕುವ ಸಂಭವವಿದೆ. ಮಾರ್ಚತಿಂಗಳಿಂದಈ ಗೊಂದಲವು ಬಹಳ ಆಗಹತ್ತುವದು. ಅದ್ದರಿಂದ ತಾ. ೧೩-೩-೪೯ ರಿಂದ ತಾ. ೨೧-೪-೪೯, ಮತ್ತು ತಾ. ೨೮-೮-೪೯ ರಿಂದ ತಾ. ೧೭-೧೦-೪೯ ಈ ಕಾಲದಲ್ಲಿ ಬಹಳ ಎಚ್ಚರದಿಂದಿರಬೇಕು. ವಾದವಿವಾದದಲ್ಲಿ ಮತ್ತು ಸ್ಪರ್ಧೆಯಲ್ಲಿ ಮಾತ್ರ ಗೆಲವಿನ ಬಹುಭಾಗವು ನಿಮ್ಮ ಉಡಿಯಲ್ಲಿಯೇ ಬೀಳುವದು. ಈ ಬಗ್ಗೆ ತಾ ೨೧. ೪.-೪೯ ರಿಂದ ೩೦-೫.-೪೯ ಮತ್ತು ತಾ ೧೨-೭-೪೯ರಿಂದ ತಾ. ೨೭-೮-೪೯ ಈ ಕಾಲವು ಹೆಚ್ಚು ಅನುಕೂಲದ್ದಾಗಿದೆ.

ವಿದ್ಯಾರ್ಥಿಗಳಿಗೆ ಈ ವರ್ಷವು ಫೆಬ್ರುವರಿ ಅಂತ್ಯದ ವರೆಗೆ ಒಳ್ಳೆ ಉತ್ತಮವಿದ್ದು ನಂತರ ಮಧ್ಯಮಸ್ಥಿತಿಯಿದೆ. ಆದರೂ ನೂರಕ್ಕೆ ೭೫ ಜನ ಮಾತ್ರ ಉತ್ತೀರ್ಣರಾಗುತ್ತಾರೆ. ಮಾರ್ಚದಿಂದ ಮುಂದೆ ಪರೀಕ್ಷೆಯಿದ್ದವರು ಗಣಿತ, ಭಾಷಾ ವಿಷಯ ಮತ್ತು ಭೂಗೋಲ ಇವುಗಳ ಬಗ್ಗೆ ಹೆಚ್ಚು ಲಕ್ಷ ಪೂರೈಸಬೇಕೆಂದು ಸಲಹೆ ಕೊಡಬೇಕಾಗಿದೆ.

೬. ಕನ್ಯಾ

ಹೋದ ಜುಲೈ ೨೫ ತಾ ನಿಂದ ೧೨ ನೇ ಶನಿಯು ಬಂದದ್ದರಿಂದ ಈ ರಾಶಿಯ ಜನರು ೭॥ ಯ (ಸಾಡೇಸಾತಿ) ಸುಳಿಯಲ್ಲಿ ಸಿಲುಕಿದ್ದಾರೆ. ಈ ತಿರಗಣಿಯಿಂದ ಪಾರಾಗಬೇಕಾದರೆ ಬಹಳ ದಿನಬೇಕು. ಅಂದರೆ ಸುಮಾರು ೧೯೫೬ ನೇ ಇಸ್ವಿಗೆ ಬಂದು ಹತ್ತುವದು. ಈಗಿನ ೧೨ ನೆಯವನು ೧ಕ್ಕೆ ಬರಲು ೧೯೫೦ ರ ಸಪ್ಟೆಂಬರ ಬರಬೇಕಾಗುವದು. ಈಗಿನ ಶನಿಯು ನಿಮಗಿಂತ ಮತ್ತು ನಿಮ್ಮ ಹೆಂಡತಿಗಿಂತ ಮಕ್ಕಳಿಗೆ ಹೆಚ್ಚು ತ್ರಾಸದಾಯಕನಿದ್ದಾನೆ. ಅಲ್ಪಾಯುಗಳಾಗಿದ್ದ ಹುಡುಗರಂತೂ ಬದುಕಲು ದೇವರಕೃಪೆಯೇ ಬೇಕಾಗುವದು. ಈ ಹುಡುಗರು ಬಂದ ಕ್ಲೇಶದಿಂದ ಪಾರಾಗುವದು ಕಠಿಣವೇ. ಅದರಲ್ಲಿಯೂ ತಾ. ೧೮-೧೧-೪೮ ರಿಂದ ತಾ ೨೬-೧೨-೪೮, ತಾ. ೩-೨-೪೯ ರಿಂದ ತಾ ೧೨-೩-೪೯, ತಾ ೩೧-೫-೪೯ ರಿಂದ ತಾ ೧೧-೭-೪೯ ಮತ್ತು ತಾ ೧೭-೧೦-೪೯ ರಿಂದ ಮುಂದೆ ಹೀಗೆ ಈ ಅವಧಿಯಲ್ಲಿ ಪ್ರಕೃತಿಯ ಬಗ್ಗೆ ಹೆಚ್ಚು ಎಚ್ಚರದಿಂದಿರಬೇಕು. ಸ್ವತಃಕ್ಕೆ ತಾ ೬ ಜೂನದ ವರೆಗೆ ಮತ್ತು ಆನಂತರ ಹೆಂಡತಿಗೆ ಕಿರಕುಳ ಅನಾರೋಗ್ಯ ಸಂಭವಿಸಬಹುದು. ಪತಿಪತ್ನಿಯರಲ್ಲಿ ಒಳ್ಳೆ ಮೇಳವು ಕಂಡುಬರುವದು. ಆದರೆ ಮಕ್ಕಳು ಮಾತ್ರ ಇಬ್ಬರೊಡನೆಯೂ ವಿರೋಧ ಕಟ್ಟಿಕೊಳ್ಳುವಂತೆ ವರ್ತಿಸುವರು. ತಾ ೬ ಜೂನದ ವರೆಗೆ ಪ್ರಾಪಂಚಿಕ ತೊಂದರೆಯು ಬಹಳ ಆಗುವದು. ಎಷ್ಟೋ ಅವಿಭಕ್ತ ಕುಟುಂಬಗಳು ಒಡೆದು ಬೇರೆಬೇರೆಯಾಗುವವು. ಆಸ್ತಿಯನ್ನು ಹಂಚುವಾಗ ತೀರ ಕನಿಷ್ಠ ಭಾಗವು ಮತ್ತು ವಸ್ತುಗಳು ನಿಮ್ಮ ಪಾಲಿಗೆ ಬರುವವು. ಮಾರ್ಚ ತಾ ೧ ರ ವರೆಗೆ ಕಲಹಕ್ಕೆ ಒಳ್ಳೆ ಉಕ್ಕು ಬರುತ್ತಿರುವದು. ಕಲಹದ ಸೆಳೆತಕ್ಕೆ ಸಿಕ್ಕಾಗ ಪ್ರತಿಯೊಬ್ಬರ ಪ್ರವೃತ್ತಿಯೂ ಅತ್ಯಂತ ಘಾತಕವಾಗಿರುವದು. ತಾನೇ ತನ್ನ ಕೈಗಳಿಂದ ತನ್ನ ಮನೆಗೆ ಕೊಳ್ಳಿಕೊಡುವ ಆತ್ಮಘಾತಕ ವಿಚಾರಗಳುಂಟಾಗುವವು ಮತ್ತು ಇದೆಲ್ಲದರ ದುರ್ಲಾಭವನ್ನು ನೆರೆಹೊರೆಯವರೂ ಕುಲಕಂಟಕರಾದ ದುರ್ವೃತ್ತಿಯು ಅಪ್ಪರೂ ಸಂಪೂರ್ಣ ಪಡೆದುಕೊಳ್ಳುವರು. ಮೇಲ್ಕಾಣಿಸಿದ ತಾರೀಖಿನ ನಂತರ ಮಾತ್ರ ಯಾವನೋ ಒಬ್ಬನು ಕಣ್ಣಿಗೆ ಇಂಗು ಹಚ್ಚುವವನು ಸಂಧಿಸುವನು. ಆಗ ಪ್ರತಿಯೊಬ್ಬರ

ಕಣ್ಣು ನಿಚ್ಚಳವಾಗಿ ತೆರೆಯುವವು. ಇದಲ್ಲದೆ ಹೊರಗಿನ ರಾಜಕೀಯ ಮತ್ತು ಸಾಮಾಜಿಕ ಸಂಕಟಗಳೂ ಒಮ್ಮೆ ಮ್ಮೆ ಬಹಳ ಧ್ವನಿಗೊಳಿಸಿ ಬಿಡುವವು ಆದರೆ ಅವುಗಳ ಉಪಶಮನವು ತುಸುವೆ ತೊಂದರೆಯಿಂದ ತುಸುವೆ ವೆಚ್ಚ ಮಾಡುವದರಿಂದ ಆಗುವದು

ಹುಡುಗ ಹುಡುಗೆಯರ ಲಗ್ನಮಾಡುವದಿದ್ದರೆ ಮಾರ್ಚದಿಂದ ಮುಂದೆ ಮಾಡಬೇಕು. ಅಂದರೆ ಯುಗ್ಮಗಳನ್ನು ಮೇಳಯಿಸಲು ಹಾಗೂ ಕಾರ್ಯವು ನಿರ್ವಿಘ್ನವಾಗಿ ಜರಗಲು ಹೆಚ್ಚು ಅನುಕೂಲವಾಗಿರುವದು. ಆದರೂ ವೆಚ್ಚವು ಪ್ರಮಾಣಮೀರಿ ಆಗುವ ಸಂಭವ. ಬೀಗರೂ ಅವರ ಅನುಗಾಮಿಗಳೂ ಬಹಳ ನಿಷ್ಠುರ, ಮತ್ತು ಕ್ಷುದ್ರಬುದ್ಧಿಯುಳ್ಳವರಾಗಿರುವದು ಹಾಗೂ ಹೆಜ್ಜೆಹೆಜ್ಜೆಗೂ ಉಪಟಳಕೊಡುವರು ಒಟ್ಟಿನ ಮೇಲೆ ಸ್ತ್ರೀ ಸುಖವನ್ನು ಳಿದು ಇನ್ನೆಲ್ಲ ಪ್ರಾಪಂಚಿಕ ತ್ರಾಸವೂ ಈ ವರ್ಷ ಹೆಚ್ಚೆಂದೇ ತಿಳಿದು ಮುಂಪರಿಯಬೇಕು

ಈ ರಾಶಿಯ ಸ್ತ್ರೀಯರಿಗೆ ಪತಿಸುಖವನ್ನು ಬಿಟ್ಟರೆ ಬೇರಾವ ಸುಖವೂ ಒಂದು ಕ್ಷಣವಾದರೂ ದೊರಕುವದೋ ಇಲ್ಲವೊ ಅದರಲ್ಲಿಯೂ ಮಾರ್ಚದಿಂದ ಜೂನದ ವರೆಗೆ ಒಂದಿಷ್ಟು ನೆಟ್ಟಗೆ ಹೆರಿಗೆಯಾಗಬೇಕಾದವರು ಮಾರ್ಚ ಪ್ರಾರಂಭದ ವರೆಗೆ ಹೆರಿಗೆಯ ಕಷ್ಟವೆಂಥದೇನು ಎಂಬದನ್ನು ಚೆನ್ನಾಗಿ ಅರಿಯುವರು ಮತ್ತು ಹುಟ್ಟಿದ ಕೂಸು ಗಂಡಾದರೆ ಅದರ ಆಯುರ್ದಾಯವು ಎಷ್ಟೆಂಬುದನ್ನು ದೇವರೇ ಬಲ್ಲ. ಮಾರ್ಚ ದಿಂದ ತಾ ೬ ಜೂನದ ವರೆಗೆ ಆಗುವ ಹೆರಿಗೆಯು ಸುಲಭವಾಗುವದು ಆದರೆ ಬಾಣಂತಿಗೆ ಮಾತ್ರ ಕೆಲ ತಿಂಗಳು ತುಸು ಕ್ಲೇಶಕಾರಕವಾಗುವವು ಮತ್ತು ತಾ ೬ ಜೂನದ ನಂತರ ಹೆರಿಗೆಯಾಗುವ ಬಾಣಂತಿ ಮತ್ತು ಕೂಸು ಒಳ್ಳೆ ಆರೋಗ್ಯದಿಂದೂ ಆನಂದದಿಂದಲೂ ಇರುತ್ತಾರೆ. ಫೆಬ್ರುವರಿ ಕೊನೆಯ ವರೆಗೆ ಹೆಣ್ಣುಕೂಸು ಜನಿಸುವ ಯೋಗವೇ ಹೆಚ್ಚಾಗಿದೆ

ಈ ವರ್ಷವು ಧಂದೆಗಾರರಿಗೆ ಮತ್ತು ಕೂಲಿಕಾರರಿಗೆ ಅಷ್ಟಕ್ಕಷ್ಟೇ ಇದೆ. ಯಾವಾಗಲೂ ಆಯವು ಕಡಮೆ ವ್ಯಯಮಾತ್ರ ಹೆಚ್ಚು ಹೀಗೆಯೇ ಈ ವರ್ಷವು ಸಾಗುವದು. ಅದರಲ್ಲಿಯೂ ಕೀರ್ತಿ, ಪ್ರತಿಷ್ಠೆ ಮತ್ತು ಪತ್ತು ಇವುಗಳು ದ್ರವ್ಯಲಾಭಕ್ಕಿಂತ ಹೆಚ್ಚು ಸಮಾಧಾನಕಾರಕವಾಗಿವೆ. ಧಂದೆಗಾರರ ಕ್ರಯ ವಿಕ್ರಯಾದಿಗಳಲ್ಲಿ ಏರಾಟಿಕೆ ನಡೆಯುವದು. ಆದರೆ ಭಾವಿ ಉತ್ಕರ್ಷಕ್ಕೆ ಸಹಾಯಕವಾಗಲೆಂಬ ದೂರದರ್ಶಿತ್ವದಿಂದಲೂ ಇತರ ವ್ಯವಸಾಯ ಬಾಂಧವರ ಬಗ್ಗೆ ಈರ್ಷಾಭಾವದಿಂದಲೂ ಬುದ್ಧಿಪುರಸ್ಸರವಾಗಿ ಲಾಭದ ಕಡೆಗೆ ದುರ್ಲಕ್ಷವಾಗುವ ಸಂಭವವಿದೆ. ನೌಕರಿಮಾಡುವವರಿಗೆ ಸಹಿತ ಕೆಲಕಾಲ ತಾತ್ಪೂರ್ತಿಕ ಅಧಿಕಾರ ಲಭಿಸುವದು. ಆದರೆ ವರಿಷ್ಠರನ್ನು ತುಷ್ಟಿಗೊಳಿಸಲು ಲಾಭದ ಲೆಕ್ಕಾಚಾರವನ್ನೇ ಕಡೆಗಣಿಸುವ ಪ್ರಸಂಗಬರುವದು. ವರಿಷ್ಠಗಣವನ್ನು ಶಾಂತವಾಗಿಡುವ ಪ್ರಯತ್ನದಲ್ಲಿ ಸಾಕುಬೇಕಾಗುವದು. ಅದರಲ್ಲಿಯೂ ತಾ ೨೧-೧೧-೪೮ ರಿಂದ ತಾ. ೧೩-೧೨-೪೮, ತಾ. ೮-೧-೪೯ ರಿಂದ ತಾ ೨೪-೨-೪೯, ತಾ. ೨೧-೩-೪೯ ರಿಂದ ತಾ ೧೩-೪-೪೯, ತಾ ೮-೫-೪೯ ರಿಂದ ತಾ. ೨೦-೬-೪೯ ಮತ್ತು ತಾ ೮-೯-೪೯ ರಿಂದ ತಾ. ೪-೧೦-೪೯ ಈ ಕಾಲವು ಲಾಭಕ್ಕೆ ಅನುಕೂಲವಾಗಿದೆ. ಆದರೆ ಅಧಿಕ ವ್ಯಯದ ಮೂಲಕ ಶೇಖರಿಸಿಟ್ಟ ಧನವೆಲ್ಲ ಬಹುತರ ಕರಗಿಹೋಗುವದು ಮತ್ತು ಧನವೇ ಇಲ್ಲದವರು ಸಾಲವನ್ನೇ ಮಾಡಬೇಕಾಗುವದು. ಸ್ಥಾವರ ಉತ್ಪನ್ನಕ್ಕೆ ಈ ವರ್ಷ ಅಷ್ಟು ಚೆನ್ನಾಗಿಲ್ಲ. ಬರುವ ಪೀಕು ಕೈಸೇರಲು ನೂರೆಂಟು ಅಡೆತಡೆಗಳು ಒದಗುವವು. ವಾಹನ ಸುಖಕ್ಕೂ ಹೀಗೆಯೇ ಆತಂಕಗಳಿವೆ. ನೌಕರ ಚಾಕರರಲ್ಲಿ ನಿಮ್ಮ ಬಗ್ಗೆ ಮಾರ್ಚದ ವರೆಗೆ ತಪ್ಪುತಿಳುವಳಿಕೆಯಾಗುವದು. ಯಾವ ಕೆಲಸವನ್ನೇ ಆಗಲಿ ಅದೆಷ್ಟು ಶ್ರಮಪೂರ್ವಕವಾಗಿ ಹಾಗು ಸಾವಧಾನಚಿತ್ತದಿಂದ ಮಾಡಿದರೂ ಯಶ ದೊರಕುವದು ಕಠಿಣವೇ. ತಾ ೬ ಜೂನ ವರೆಗೆ ಕೆಟ್ಟಕೆಟ್ಟ ಕನಸುಗಳು ಬಹಳ ಬೀಳುವವು. ಇದರಂತೆ ಆ ಅವಧಿಯಲ್ಲಿ ಇಟ್ಟ ವಸ್ತುಗಳು ಇಟ್ಟಲ್ಲಿಯೇ ಕಾಣದಾಗುವವು. ದಾಯಾದಿಗಳಿಗೆ ಈ ವರ್ಷವು ಉತ್ಕರ್ಷಕಾರಕವಾಗಿದ್ದರೂ ಅವರು ನಿಮ್ಮೊಡನೆ ಸರಳಭಾವದಿಂದ ವರ್ತಿಸುವದಿಲ್ಲ. ಮಾರ್ಚದಿಂದ ಮುಂದೆ ಮಿತ್ರಸುಖ ಮಾತ್ರ ಚೆನ್ನಾಗಿ ಲಭಿಸುವದು. ದುಗ್ರಹಗಳ ಮೂಲಕ ನಿಮಗೆ ಒದಗುವ ಅಡಚಣೆಗಳನ್ನು ನಿವಾರಿಸಲು ನಿಮ್ಮ ಮಿತ್ರರು ತಮ್ಮ ಜೀವವನ್ನು ಪಣಕ್ಕಿಟ್ಟು ಪ್ರಯತ್ನಿಸುವರು. ಹಗೆಗಳು ಮಾತ್ರ ಬಹಳ ತೊಂದರೆ ಕೊಡುತ್ತಲೇ ಸಾಗುತ್ತಾರೆ. ಅವರು ನಿಮ್ಮನ್ನು ಬಗ್ಗುಬಡಿಯಲು ಸಾಧು ಅಸಾಧು ಉಪಾಯಗಳನ್ನೆಲ್ಲ ಹೂಡುವರು. ಪ್ರತ್ಯಕ್ಷ ವಾದ ವಿವಾದದಲ್ಲಿಯೂ ಸ್ಪರ್ಧೆಯಲ್ಲಿಯೂ ಮಾರ್ಚದಿಂದ ತುಸು ಅನುಕೂಲ ಕಾಲ ಬರುವದು ಮತ್ತು ಜಯವೂ ದೊರಕುವದು. ಪ್ರವಾಸವು ವಿರಳವಾಗಿದ್ದರೂ ಒಂದು ತೀರ್ಥಯಾತ್ರೆ ಘಟಿಸುವ ಯೋಗವಿದೆ. ಪೂಜ್ಯ ವ್ಯಕ್ತಿಗಳ ದರ್ಶನ ಮತ್ತು ಸಹವಾಸ ಲಭಿಸುವದು. ಪತ್ರವ್ಯವಹಾರ ಲೇಖನ ಕಾರ್ಯ, ಪ್ರತ್ಯಕ್ಷ ಭೆಟ್ಟಿ ಇವೆಲ್ಲ ಒಟ್ಟಿನ ಮೇಲೆ ಚೆನ್ನಾಗಿವೆ. ತಾ ೫-೧೧-೪೮ ರಿಂದ ತಾ ೨೫-೧೧-೪೮, ಡಿಸೆಂಬರ ತಾ ೧೫ ರಿಂದ ತಾ ೩೧, ಎಪ್ರಿಲ ತಾ ೨೮ ರಿಂದ ಜುಲೈ ತಾ ೩ ಜುಲೈ ತಾ ೨೨ ರಿಂದ ಅಗಸ್ಟ ತಾ ೬ ಮತ್ತು ಅಗಸ್ಟ ತಾ ೨೫ ರಿಂದ ವರ್ಷಾಂತ್ಯದ ವರೆಗೆ ಹೀಗೆ ಈ ಅವಧಿಯು ಮೇಲ್ಕಾಣಿಸಿದ ವಿಷಯಗಳ ಬಗ್ಗೆ ಮಹತ್ವಪೂರ್ಣವಾಗಿದೆ.

ಈ ವರ್ಷ ವಿದ್ಯಾರ್ಥಿಗಳು ಮನಃಪೂರ್ವಕ ಅಭ್ಯಾಸಮಾಡಿದ್ದಾದರೆ ಉತ್ತೀರ್ಣವಾಗುವಷ್ಟು ಗುಣಗಳು ಮಾತ್ರ ಲಭಿಸುವವು. ಕಾಯದೆ, ನೀರಾವರಿ ಮತ್ತು ಭೂಗರ್ಭ ಸಂಶೋಧನ ಶಾಸ್ತ್ರ ಅಥವಾ ಇಲೆಕ್ಟ್ರಿಕ್ ಕೋರ್ಸ, ಇವುಗಳನ್ನು ಅಭ್ಯಾಸಮಾಡುವ ವಿದ್ಯಾರ್ಥಿಗಳಿಗೆ ಈ ವರ್ಷ ಅನುಕೂಲವಾಗಿದೆ. ಅದರಲ್ಲಿಯೂ ತಾ ೨೫ ನವೆಂಬರ ವರೆಗೆ ಮತ್ತು ತಾ ೧ ಜಾನೇವರಿಯಿಂದ ತಾ ೯

ಮಾರ್ಚ, ಎಪ್ರಿಲ ತಾ ೨೯ ರಿಂದ ಜುಲೈ ತಾ ೩, ಜುಲೈ ತಾ ೨೨ ರಿಂದ ಅಗಸ್ಟ ತಾ ೬ ಮತ್ತು ಅಕ್ಟೋಬರದಿಂದ ಮುಂದೆ ಹೀಗೆ ಈ ಅವಕಾಶದಲ್ಲಿ ಪರೀಕ್ಷೆಗೆ ಕೂಡತಕ್ಕವರು ಬಹುತರ ಹತಾಶರಾಗುವದಿಲ್ಲವೆಂದು ಅವರಿಗೆ ಆಶಾಪೂರ್ಣ ಸಂದೇಶ ಕೊಡುವಾ.

೭. ತುಲಾ

ಈ ವರ್ಷ ಈ ರಾಶಿಯ ಜನಗಳಿಗೆ, ಪತಿ ಪತ್ನಿಯರಿಬ್ಬರಿಗೂ ಜೂನ ತಾ. ೬ ರ ವರೆಗೆ ಪ್ರಕೃತಿಗೆ ಕ್ಲೇಶಕಾರಕವಾಗಿದೆ. ಅದರಲ್ಲಿಯೂ ಹೆಂಡತಿಗೆ ತಾ. ೧೩ ಮಾರ್ಚದಿಂದ ತಾ. ೨೧ ಎಪ್ರಿಲದ ವರೆಗೆ ಕ್ಲೇಶವಿನ್ನೂ ಹೆಚ್ಚೆಂದು ಕಂಡು ಬರುವದು. ಪಿತ್ತವಿಕಾರವು ಬಹಳ ವೆನಿಸಬಹುದು. ಈ ಮೂಲಕ ತಲೆನೋವು, ತಲೆತಿರುಗುವದು, ಮೂರ್ಛೆ, ಮಳ ಮಳಿಕೆ, ಬಾಯಿಗೆ ನೀರುಕತ್ತರಿಸುವದು, ಕಿಬ್ಬೊಟ್ಟೆ ಕಡಿಯುವದು ಹೀಗೆ ಮುಂತಾಗಿ ಲಕ್ಷಣಗಳು ತೋರಿಬರುವವು. ಒಮ್ಮೊಮ್ಮೆ ಮೃತಾತ್ಮರನ್ನು ಕಂಡಹಾಗೆ ಭಾಸವಾಗಿ ಮನಸ್ಸಿಗೆ ಉಲ್ಲಾಸವಿಲ್ಲದಾಗುವದು. ಈ ಬಗೆಯ ಯೋಗವು ಮಾರ್ಚದಿಂದ ಜೂನದ ವರೆಗೆ ಒದಗುವ ಸಂಭವ - ವಿಶೇಷವಾಗಿದೆ. ತಂದೆತಾಯಂದಿರಿದ್ದರೆ ಅವರಿಗೂ ಬಹಳ ಕ್ಲೇಶವಾಗುವದಲ್ಲದೆ ಅವರಲ್ಲಿ ಒಬ್ಬರನ್ನು ಕಡೆತನಕ ಕಳೆದುಕೊಳ್ಳುವ ಸಂಭವವೂ ಉಂಟು. ಮಕ್ಕಳ ಆರೋಗ್ಯಕ್ಕೂ ಅವರ ಉನ್ನತಿಗೂ ಮತ್ತು ಅವರಿಂದ ದೊರೆವ ಸುಖಕ್ಕೂ ಈ ವರ್ಷದಲ್ಲಿ ಒಳ್ಳೆ ಉತ್ತಮ ಯೋಗಗಳಿವೆ. ಆದರೆ ಅವರ ನಡೆವಳಿಯ ಬಗ್ಗೆ ಮಾತ್ರ ಜನರಲ್ಲಿ ವಿಪರೀತ ಕಲ್ಪನೆಯಾಗುವದು. ಇದರಂತೆ ಫೆಬ್ರುವರಿ ತಾ. ೩ ರಿಂದ ಮಾರ್ಚ ತಾ. ೧೩ ರ ವರೆಗೆ ಮಕ್ಕಳಲ್ಲಿ ಒಬ್ಬರಿಗೆ ಸಣ್ಣದೊ ದೊಡ್ಡದೊ ಅಪಘಾತವಾಗುವ ಭಯವಿದೆ. ಪತಿಪತ್ನಿಯರು ಪ್ರೇಮದ ವಿಷಯದಲ್ಲಿ ಜೂನದ ವರೆಗೆ ವಿಮುಖರಾಗಿರುವರು. ಆದರೆ ಅನಂತರ ಅನ್ಯೋನ್ಯ ಪ್ರೇಮವು ಅತ್ಯಂತವಾಗುವದು. ಆದರೂ ನಿಮ್ಮ ಮನಸ್ಸು ಅನ್ಯ ಸ್ತ್ರೀವಿಷಯದಲ್ಲಿ ಗುಪ್ತಾಸಕ್ತಿಯನ್ನು ಇಟ್ಟುಕೊಳ್ಳುವದು ಹಾಗೂ ಸ್ತ್ರೀ ವರ್ಗದಲ್ಲಿ ಈ ಬಗ್ಗೆ ಕಿವಿಕಚ್ಚಾಟವು ಜುರುಕಿನಿಂದ ನಡೆಯುವದು. ಮಾರ್ಚ ತಿಂಗಳಿಂದ ಸ್ವಭಾವದಲ್ಲಿ ಇಲ್ಲದ ಹೆಮ್ಮೆ ಡಾಂಭಿಕತೆ ಹೆಚ್ಚುವದು. ಆದರೂ ಪ್ರಾಸಂಚಿಕ ಸುಖವು ಉತ್ತಮವಾಗಿಯೇ ಲಭಿಸುವದು. ಅಣ್ಣ ತಮ್ಮಂದಿರ ಅಥವಾ ಸ್ವತಃ ನಿಮ್ಮ ಮದುವೆಯಾಗುವದಿದ್ದಲ್ಲಿ ಅದು ಮಾರ್ಚ ತಿಂಗಳು ಮುಗಿವ ಮುನ್ನವೇ ಬಹುತರ ನೆರವೇರುವದು. ಆದರೆ ಮದುವೆಯ ಕಾಲಕ್ಕೆ ಸಮೀಪದ ಆಪ್ತರು ಸಿಟ್ಟು ಸೆಡವುಗಳನ್ನು ಸಾಕಷ್ಟು ತೋರ್ಪಡಿಸುವರು. ಮೇ ತಾ. ೩೧ ರಿಂದ ಜುಲೈ ತಾ. ೧೨ ರ ವರೆಗೆ ನೀವು ನಿಮ್ಮ ಪ್ರಕೃತಿಯ ಬಗ್ಗೆ ಹೆಚ್ಚು ಎಚ್ಚರಿಕೆ ವಹಿಸಬೇಕು.

ಒಟ್ಟಿನ ಮೇಲೆ ಈ ರಾಶಿಯ ಸ್ತ್ರೀಯರಿಗೆ ಈ ವರ್ಷವು ಪತಿಸುಖಕ್ಕೆ ಅಷ್ಟೇನು ಕೆಡಕಿಲ್ಲ. ಜೂನ ತಿಂಗಳಿಂದ ಮುಂದೆ ಪತಿಸುಖವು ಹೆಚ್ಚಾಗಿ ಲಭಿಸುವದು. ಹೆರಿಗೆಯಾಗತಕ್ಕವರು ನಿರಾಯಾಸವಾಗಿಯೂ ಚೊಕ್ಕಾಗಿಯೂ ಪ್ರಸವಿಸುತ್ತಾರೆ. ಆದರೂ ಫೆಬ್ರುವರಿ ತಾ. ೩ ರಿಂದ ಮಾರ್ಚ ತಾ. ೧೩ ರ ವರೆಗೆ ಮತ್ತು ತಾ. ೧೭ ಅಕ್ಟೋಬರದ ನಂತರ ಪ್ರಸವವಾಗತಕ್ಕವರ ಬಗ್ಗೆ ತುಸು ತಕ್ಕ ವಿರ್ಪಾಡು ಮಾಡಿಟ್ಟುಕೊಳ್ಳುವದು ನೆಟ್ಟಗೆ. ಯಾಕಂದರೆ ಹೆರಿಗೆಯ ವೇದನೆಯು ಸಾಕಷ್ಟು ವೇಗವಾಗಿ ಬರುವದಿಲ್ಲ. ಮಾರ್ಚ ತಿಂಗಳ ವರೆಗೆ ಪುತ್ರ ಲಾಭವೂ ಅನಂತರ ಕನ್ಯಾಜನನವೂ ಆಗುವ ಸಂಭವವು ವಿಶೇಷವಾಗಿದೆ. ತವರಿನ ಜನರಿಗೆಲ್ಲ ಈ ವರ್ಷವು ಜೂನದ ತರುವಾಯದಿಂದ ಒಳ್ಳೆ ಉತ್ತಮವಾಗಿದೆ.

ಧಂದೆಗಾರರಿಗೂ ಕೂಲಿಕಾರರಿಗೂ ಈ ವರ್ಷ ಅತಿಶಯ ವಿರಾಟಕೆಯಲ್ಲಿ ಸಾಗುವ ಯೋಗವಿದೆ. ಈ ರಾಶಿಯ ಅತ್ಯುಚ್ಚ ರಾಜಯೋಗ ಕಾರಕ ಗ್ರಹವಾದ ಶನಿ ಮಹಾರಾಜನು ೧೧ ನೆಯ ಅಂದರೆ ಲಾಭಸ್ಥಾನದಲ್ಲಿ ಬಂದಿದ್ದಾನೆಂದ ಮೇಲೆ ಕೇಳುವದೇನು? ಹಿಡಿದದ್ದೆಲ್ಲ ಬಂಗಾರವೇ. ಉಪ್ತವಾದ, ಸುಪ್ತವಾದ, ಜಾಗ್ರತವಾದ ಆಶೆ ಆಕಾಂಕ್ಷೆಗಳೆಲ್ಲವೂ ಬಹುತರ ಫಲಿಸುವವು. ಧಂದೆಗಾರರಿಗಂತೂ ಇನ್ನೂ ಉರ್ಜಿತ ಯೋಗವಿದೆ. ಮಣ್ಣು ಕೂಡ ಬಂಗಾರದಂತೆ ಮಾರಿಹೋಗುವದು. ಖಂಡಿತ ಹಾನಿಯೇ ತಟ್ಟುವದೆಂದುಕೊಂಡ ಸಂಗತಿಗಳೂ ದ್ವಿಗುಣಿತ ಲಾಭವನ್ನೇ ಕೊಡುವವು. ಧಂದೆಗಾರರಿಗೆ ಮಾರ್ಚ ತಿಂಗಳ ವರೆಗೆ, ಹಾಗೂ ನೌಕರದಾರರಿಗೆ ಅನಂತರದ ಕಾಲವು ಹೆಚ್ಚು ಉಲ್ಲಾಸ ಉತ್ಸಾಹಗಳಿಂದ ಸಾಗುವದು, ನಿವೃತ್ತರಾದ ನೌಕರರನ್ನು ಸಹ ಮತ್ತಿನ್ನಾವುದೊ ಕೆಲಸ ಕೊಟ್ಟು ಪುನಃ ನೌಕರಿಯಲ್ಲಿ ಸೇರಿಸಿಕೊಳ್ಳುವ ಯೋಗ ಕಂಡುಬರುವದು. ಕೂಲಿಕಾರರ ಜೇಬೂ ದಿನದಿನ ಭಾರವಾಗಿಯೇ ಇರುವದು. ಬಡತಿ, ಅಧಿಕಾರದಲ್ಲಿ ಹೆಚ್ಚಳ, ನಿಮಗೆ ಬೇಕಾದ ಸ್ಥಳಕ್ಕೆ ವರ್ಗವಾಗುವದು. ಇವೇ ಮೊದಲಾದ ಸಂಗತಿಗಳು ಅಲ್ಪಶ್ರಮದಿಂದ ಅಥವಾ ಪ್ರಯತ್ನವಿಲ್ಲದೆ ತಾವಾಗಿ ನಿರೀಕ್ಷೆಗಿಂತ ಚನ್ನಾಗಿಯೇ ಕೈಗೂಡುವವು.

ಸ್ಥಾವರ ಮತ್ತು ಜಂಗಮ ಸಂಗ್ರಹವು ವರ್ಧಿಸುವ ಯೋಗಗಳಿವೆ ಮತ್ತು ಬಹುತರ ಅಂದಾಜಿಗಿಂತ ಕಡಮೆ ಬೆಲೆಗೇ ಆಸ್ತಿ ಲಭಿಸುವದು. ವಾಹನ ಸುಖ ಮಾತ್ರ ಸಿಗುವದಿಲ್ಲವೆನ್ನಬಹುದು. ಆಪ್ತರೂ ನೆರೆಹೊರೆಯವರೂ ನಿಮ್ಮ ಉತ್ಕರ್ಷದ ಬಗ್ಗೆ ಜನರಲ್ಲಿ ಸುಳ್ಳು ಅಪಪ್ರಚಾರವನ್ನು ಎಬ್ಬಿಸುತ್ತಾರೆ. ಕೀರ್ತಿಕಾರಕ ಕಾರ್ಯಗಳೇನು ಆಗದಿದ್ದರೂ ಸಮಾಜದಲ್ಲಿ ಪ್ರತಿಷ್ಠೆಯನ್ನು ಹೆಚ್ಚಿಸುವಂತಹ ಉಪಯುಕ್ತ ಕೆಲಸಗಳನ್ನು ಒಳ್ಳೆ ನಿಷ್ಠೆಯಿಂದ ಮನಃಪೂರ್ವಕ ಮಾಡುವಿರಿ. ಸ್ವಾರ್ಥದ ಕಡೆಗೆ ವಿಶೇಷ ಸೆಳೆತ ಕಂಡುಬರುವದು. ಮಿತ್ರಸುಖವು ಬಹಳ ಚನ್ನಾಗಿ ಲಭಿಸುವದು. ಪುತ್ರರಲ್ಲಿ ಕೆಲವರು ಲಾಭಪ್ರದ ಸಂದರ್ಭಗಳನ್ನು ಒದಗಿಸಿಕೊಡುವರು. ಆದರೆಮಿತ್ರರಲ್ಲಿ ಕೆಲವರಿಗೆ ಫೆಬ್ರುವರಿ

ತಾ. ೧೩ ರಿಂದ ಮಾರ್ಚ ತಾ. ೧೩, ಮೇ ತಾ. ೧೪ ರಿಂದ ಜೂನ ತಾ. ೧೪ ಮತ್ತು ಆಗಸ್ಟ ತಾ. ೧೬ ರಿಂದ ಸಪ್ಟೆಂಬರ ತಾ. ೧೬ ರ ವರೆಗೆ ಹೀಗೆ ಈ ಕಾಲದಲ್ಲಿ ತುಸು ಹೆಚ್ಚುಕಡಮೆ ಅನಾರೋಗ್ಯವಾಗುವ ಯೋಗವಿದ್ದು ವಯಸ್ಸಿನಿಂದ ತರುಣರಿದ್ದವರಿಗೆ ಬಹಳ ತೊಂದರೆಯಾಗುವದು. ಈ ವರ್ಷ ನಿಮ್ಮ ಶತ್ರುಗಳು ಸೋಲುವರಲ್ಲದೆ ಜೂನದಿಂದ ಮುಂದಿನ ಕಾಲದಲ್ಲಿ ಬಹುತರ ಎಲ್ಲರೂ ಮಣ್ಣುಮುಕ್ಕಿ ಹೋಗುವರು. ಹೊರಗಿನ ಹಗೆಗಳಿಗಿಂತ ಮನೆಯೊಳಗಿನ ಹಿತಶತ್ರುಗಳ ಬಗ್ಗೆಯೇ ಹೆಚ್ಚು ಎಚ್ಚರದಿಂದಿರಬೇಕೆಂದು ಈ ವರ್ಷವು ನಿಮಗೆ ಸಂಜ್ಞೆ ಮಾಡುತ್ತದೆ. ಮನೆಯ ಒಬ್ಬ ಸ್ತ್ರೀಯು ಉದ್ದ ನೀರಿಗೆ ಬೀಳುವಳು. ಬಹಳ ದೂರದ ಮತ್ತು ಅನಿರೀಕ್ಷಿತ ಪ್ರವಾಸ ಘಟಿಸುವದು ಹಾಗೂ ಅಗ ಹಿತಕಾರಕ ಮತ್ತು ಆಶ್ಚರ್ಯಕಾರಕ ಸಂಗತಿಗಳು ಘಟಿಸುವವು. ಪತ್ರ ವ್ಯವಹಾರ ಅಷ್ಟು ಅನುಕೂಲದ್ದಿಲ್ಲ. ಆದರೆ ಇನ್ನುಳಿದ ಲೇಖನ ಕಾರ್ಯಗಳು ಮನೋನುಗುಣವಾಗಿ ನಡೆಯುವವು. ಪ್ರತ್ಯಕ್ಷ ಭೆಟ್ಟಿಯ ಕಾರ್ಯಗಳು ಅಷ್ಟು ಸಮರ್ಪಕವಾಗಿ ಕೈಗೂಡವು. ನವೆಂಬರ ತಾ. ೨೧ ರಿಂದ ಡಿಸೆಂಬರ ತಾ. ೧೪, ಫೆಬ್ರುವರಿ ತಾ. ೧ ರಿಂದ ತಾ. ೨೪, ಎಪ್ರಿಲ ತಾ. ೧೪ ರಿಂದ ಮೇ ತಾ. ೭. ಜೂನ ತಾ. ೧ ರಿಂದ ಜುಲೈ ತಾ. ೧೯, ಸಪ್ಟೆಂಬರ ತಾ. ೭ ರಿಂದ ಅಕ್ಟೋಬರ ತಾ. ೪ ಈ ಸಮಯದಲ್ಲಿ ದೊಡ್ಡ ದೊಡ್ಡ ಪಲ್ಲಟಗಳು ಮತ್ತು ದೊಡ್ಡ ದೊಡ್ಡ ಜನರ ಭೆಟ್ಟಿಯ ಯೋಗ ಬರುವವು.

ಒಟ್ಟಿನಲ್ಲಿ ಈ ವರ್ಷವ ಅನೇಕಾನೇಕ ಲಾಭದ ಸೆಲೆಗಳನ್ನುಂಟುಮಾಡುವದು. ಧನದ ಕೆಲ ಭಾಗವು ವಿಲಾಸದಲ್ಲಿ ವ್ಯಯವಾದರೂ ಬಹ್ವಂಶವು ಸದ್ವಿನಿಯೋಗವಾಗುವ ಯೋಗಗಳೇ ಉಂಟು.

ವಿದ್ಯಾರ್ಥಿಗಳು ಈ ವರ್ಷ ಬೇಕಾದಷ್ಟು ಅಭ್ಯಾಸ ಮಾಡಿದರೂ ಅದು ಉತ್ತೀರ್ಣರಾಗುವದಕ್ಕಷ್ಟೇ ಸಾಲುವದು. ಆದರೆ ಇದಕ್ಕೂ ಹೆಚ್ಚು ಪರಿಶ್ರಮ ವಹಿಸಿ ಓದಿದರೆ ಪ್ರಥಮ ಶ್ರೇಣಿಯಲ್ಲಿಯೋ ದ್ವಿತೀಯ ಶ್ರೇಣಿಯಲ್ಲಿಯೋ ಹೆಸರು ಬಂದರೆ ಅದರಲ್ಲಿ ಆಶ್ಚರ್ಯವೇನು? ಲಾ, ಇಂಜನಿಯರಿಂಗ, ವಾಣಿಜ್ಯ, ಸಂಗೀತ ಈ ವಿಷಯಗಳ ವಿದ್ಯಾರ್ಥಿಗಳಿಗೆ ಈ ವರ್ಷವು ವಿಶೇಷ ಫಲಪ್ರದವಾಗಿದೆ.

೮. ವೃಶ್ಚಿಕ

ಈ ರಾಶಿಯವರಿಗೆ ಈ ವರ್ಷವು ಸ್ವತಃದ ಪ್ರಕೃತಿಗೆ ಸ್ವಲ್ಪ ಪಿತ್ತವಿಕಾರದ್ದೆನಿಸಿದರೂ ಒಟ್ಟಾರೆ ಆರೋಗ್ಯದಾಯಕವೇ ಎನ್ನಲಿಕ್ಕೆ ಅಡ್ಡಿಇಲ್ಲ. ಹೆಂಡತಿಯ ಪ್ರಕೃತಿಗೆ ಮಾರ್ಚದಿಂದ ಮುಂದೆ ಹೆಚ್ಚು ಅನುಕೂಲ. ಆದರೆ ಜೂನದಿಂದ ಮಕ್ಕಳಿಗೆ ಸಣ್ಣ ದೊಡ್ಡ ಕಾಯಿಲೆ ಆಗಬಹುದು ಆದರೂ ಒಟ್ಟಾರೆ ಪ್ರಾಪಂಚಿಕ ಸುಖ ಅನುಕೂಲ ದೊರೆತು ಶಾಶ್ವತ ಸುಖದ ಅನೇಕ ಸಂಗತಿಗಳು ಸಂಭವಿಸುವವು. ಪ್ರಿಯ ಜನರ ಸಹವಾಸ ಮೇಲಿಂದ ಮೇಲೆ ಆಗುವದು. ತಂದೆ ಇದ್ದರೆ ಮಾತ್ರ ಅವರ ವಿಯೋಗದ ಸಂಭವವಿದೆ. ಪತಿಪತ್ನಿಯಲ್ಲಿ ಒಳ್ಳೆ ಸೌಹಾರ್ದತೆ ಮಕ್ಕಳು ಮರಿಗಳು ಹೊರಹೊರಗೆ ಅನುಕೂಲವಾಗಿ ವರ್ತಿಸಿದರೂ ಮನೆಯಲ್ಲಿ ತಲೆತಿರುಗಿದವರಂತೆ ಮಾಡುವರು. ನಿಮ್ಮ ಸ್ವಭಾವದಲ್ಲಿ ಆತ್ಮವಿಶ್ವಾಸ ಮತ್ತು ಮಹತ್ವಾಕಾಂಕ್ಷಾ ಇವು ಬೆಳೆದು ಅದರ ವಿರುದ್ಧ ಯಾರಾದರೂ ಮಾತಾಡಿದರೆ ಬಹಳ ರೊಚ್ಚು ಏಳುವದು. ಸ್ವತಃ ನಿಮ್ಮ ಆರೋಗ್ಯವನ್ನು ಜುಲಾಯಿ ೧೨ ರಿಂದ ಆಗಸ್ಟ ೨೮ ರ ವರೆಗೆ ಹೆಚ್ಚು ಸಂಭಾಳಿಸಿಕೊಳ್ಳಬೇಕು. ಸಿಕ್ಕು ಬೀಳುವ ಇಲ್ಲವೆ ಯಾವದೇ ಬಗೆಯಿಂದ ಶ್ರಮ ಸಹಿಸಬೇಕಾದ ಪ್ರಸಂಗವಿದೆ. ನಿಮ್ಮ ಬಂಧುಗಳ ಇಲ್ಲವೆ ಪ್ರೀತಿಪಾತ್ರ ಮಿತ್ರರ ವಿವಾಹ ಆಗುವದಿದ್ದರೆ ಅದು ಮಾರ್ಚದಿಂದ ಮುಂದೆ ಸಹಜವಾಗಿ ಸಂಭವಿಸುವದು.

ಈ ರಾಶಿಯ ಹೆಣ್ಣುಮಕ್ಕಳಿಗೆ ಪತಿಸುಖ ಒಟ್ಟಾರೆ ಅನುಕೂಲವಾಗಿದೆ. ಆದರೂ ನವಂಬರ ೨೧ ರಿಂದ ಡಿಸೆಂಬರ ೧೪ ಜಾನೇವಾರಿ ೮ ರಿಂದ ೩೧, ಎಪ್ರಿಲ ೧೩ ರಿಂದ ಮೇ ೭ ಮತ್ತು ಸಪ್ಟೆಂಬರ ೭ ರಿಂದ ಅಕ್ಟೋಬರ ೪ ಈ ಅವಧಿಯನ್ನು ಅವರ ವಿರಹದಿಂದ ಇಲ್ಲವೆ ಉಭಯತರ ಮತಭಿನ್ನತೆಯಿಂದ ಬಹಳ ಖಿನ್ನತೆಯಿಂದ ಕಳೆಯಬೇಕಾಗುವದು. ಹಡೆಯುವವರಿದ್ದರೆ ಅವರಿಗೆ ಫೆಬ್ರುಅರಿ ಕೊನೆಯ ವರೆಗೆ ಕಿಂಚಿತ್ ತೊಂದರೆಯಾಗುವದು. ಅದರಲ್ಲಿಯೂ ನವಂಬರ ೧೭ ರಿಂದ ಡಿಸೆಂಬರ ೨೭ ರ ವರೆಗೆ ಹಡೆಯುವವರು ಬಹಳ ಎಚ್ಚರದಿಂದಿರಬೇಕು. ಮಾರ್ಚದಿಂದ ಮುಂದೆ ಹಡೆಯುವರು ಸಹಜ ಸುಲಭವಾಗಿ ಹಡೆಯುವರು. ಜೂನದಿಂದ ಮುಂದೆ ಮಗನು ಹುಟ್ಟಿದರೆ ಮಾತ್ರ ಅವನು ದೀರ್ಘಾಯು ಆಗುವ ಸಂಭವ ಕಡಮೆ. ಧಂದೆ–ಕೂಲಿ ಮಾಡುವವರಿಗೆ ಈ ವರ್ಷ ಬಹಳ ಪ್ರಭಾವಿಯಾಗಿದೆ. ಅದರಲ್ಲಿಯ ಪ್ರಾವೀಣ್ಯದ ಬಗ್ಗೆ ಎಲ್ಲರೂ ಪ್ರಶಂಸೆಯನ್ನೇ ಮಾಡುವರು. ಆದರೆ ಈ ಗುಣಕ್ಕಾಗಿಯೇ ಅನೇಕರ ಮನಸ್ಸಿನಲ್ಲಿ ಮತ್ಸರ ಭಾವ ಹೆಚ್ಚುವದು ಮತ್ತು ತಮ್ಮ ಮುಳ್ಳನ್ನು ಬೇರೆಯವರಿಂದ ತೆಗೆಯಿಸುವ ಪ್ರಯತ್ನವನ್ನು ಅನೇಕರು ಮಾಡುವರು. ಧಂದೆ ಮಾಡುವವರು ಕಾಯಿದೆಯಂತೆ ಮತ್ತು ನ್ಯಾಯ್ಯರೀತಿಯಿಂದ ವರ್ತಿಸುವದರಿಂದ, ಅನೇಕರು ಕೈಯಲ್ಲಿದ್ದ ಅಧಿಕಾರದ ಉಪಯೋಗವನ್ನು ನ್ಯಾಯ್ಯ ನಿಷ್ಠುರತೆಯಿಂದ ಮಾಡುವದರಿಂದ ಬಹಳ ಅಪ್ರೀತಿಗೆ ಪಾತ್ರರಾಗುವರು ಆದರೂ ವ್ಯವಹಾರದಲ್ಲಿ ಇಲ್ಲವೆ ನೋಕರಿಯಲ್ಲಿ ನಿಮ್ಮ ಅಚ್ಚುಕಟ್ಟು ಮತ್ತು ನಿರಲಸತೆಯ ಕಾರಣ ಯಾರೂ ಹುಳುಕು ತೆಗೆಯಲಾರರು. ಅರ್ಥಾತ್ ಬೊಟ್ಟು ಮುರಿಯುವದಿಲ್ಲ. ಗುಪ್ತ ರೀತಿಯಿಂದಲೇ ನಡೆಯುವದು. ಈ ವಿಷಯದಲ್ಲಿ ಬರುವ ಕಟು ಅನುಭವಗಳು ಬಹಳವಾಗಿ ನವಂಬರ ೧೫ ವರೆಗೆ ಮತ್ತು ಫೆಬ್ರುಅರಿ ೧೩ ರಿಂದ ಮಾರ್ಚ ೧೩ ಮತ್ತು ಆಗಸ್ಟ ೧೬ ರಿಂದ ಸಪ್ಟಂಬರ ೧೬ ರ ವರೆಗೆ ಬರುವವು. ವಿಶೇಷ ದ್ರವ್ಯಲಾಭಕ್ಕೆ ನವಂಬರ ೨೬ ರಿಂದ ಮಾರ್ಚ ೯, ಮಾರ್ಚ ೩೦ ರಿಂದ ಎಪ್ರಿಲ ೧೧, ಎಪ್ರಿಲ ೨೯ ರಿಂದ ಜುಲೈ ೩, ಆಗಸ್ಟ ೨೪ ರಿಂದ ವರ್ಷದ ಕೊನೆಯ ವರೆಗೆ ಈ ಅವಧಿಯು ಅನುಕೂಲ ಇರುವದು. ಅದರಂತೆ ಜುಲೈ ೪ ರಿಂದ ಆಗಸ್ಟ ೫ ರ ವರೆಗಿನ ಒಂದು ತಿಂಗಳಲ್ಲಿ ಯಾವದೇ ಬಗೆಯಿಂದ ಅಲ್ಪಸ್ವಲ್ಪ ಗುಪ್ತ ಇಲ್ಲವೆ ಅಕಲ್ಪಿತದ್ರವ್ಯಲಾಭವಾಗುವಸಂಭವವೂ ಇದೆ. ನೌಕರಿಯಲ್ಲಿಮೇಲಿನ ದರ್ಜೆ ಸಿಕ್ಕವದು, ಅಧಿಕಾರದಲ್ಲಿ ಹೆಚ್ಚಳ, ವ್ಯವಸಾಯದಲ್ಲಿ ಪ್ರಭುತ್ವ ಬೆಳೆಯುವದು ಇಲ್ಲವೆ ಸಾರ್ವಜನಿಕ ಅಥವಾ ರಾಜಕೀಯ ಸಂಸ್ಥೆಯಲ್ಲಿಯ ಆಯ್ಕೆಯಲ್ಲಿ ಆರಿಸಿಬರುವದು ಮೊದಲಾದ ಸಂಗತಿಗಳ ಪ್ರತ್ಯಯವು ೨೬ ಡಿಸೆಂಬರ ವರೆಗೆ ಇಲ್ಲ. ಆದರೆ ಎಪ್ರಿಲ ೨೧ ರಿಂದ ಮೇ ೩೦ ಮತ್ತು ಅಗಷ್ಟ ೨೮ ರಿಂದ ಅಕ್ಟೋಬರ ೧೭ ರ ಸುಮಾರಕ್ಕೆ ಮೇಲ್ಕಾಣಿಸಿದ ಲಾಭ ದೊರೆಯುವದು. ಕೆಲ ವಿಷಯಗಳಲ್ಲಿ ಕೌಟುಂಬಿಕ ಹೊಣೆಗಾರಿಕೆ ಬಹಳ ಹೆಚ್ಚುವದು. ಇಲ್ಲವೆ ಮನಸ್ಸಿನಲ್ಲಿ ಇಲ್ಲದಿದ್ದರೂ ಒಪ್ಪಬೇಕಾಗುವದು. ಸ್ಥಾವರ ಜಂಗಮ ಸಂಗ್ರಹ, ಜೂನದಿಂದ ಸ್ವಲ್ಪ ಮುಟ್ಟಿಗಾ

ದರೂ ಹೆಚ್ಚುವದು ಮಾರ್ಚದಿಂದ ಕೆಲದಿನ ಬೇಡಾದವರ ಸಹವಾಸವನ್ನು ಕೆಲ ತೊಡಕಿನ ಪ್ರಶ್ನೆಗಳನ್ನು ಬಿಡಿಸುವದನ್ನು ಜೇಕೆಂತಲೆ ಮಾಡಬೇಕಾಗುವದು. ವಾಹನಗಳನ್ನು ಇಡುವ ಯೋಗ್ಯತೆ ಇದ್ದರೂ ಅದರಿಂದ ಸುಖಕ್ಕಿಂತ ತೊಂದರೆ ಮತ್ತು ಹಾನಿಯ ಪ್ರಮಾಣ ಹೆಚ್ಚಾಗುವದು. ನೋಕರ ಚಾಕರರು ಮೋರೆಯ ಮುಂದೆ ಒಳ್ಳೇದೆನ್ನುವರು ಆದರೆ ಒಪ್ಪಿಸಿಕೊಟ್ಟ ಕೆಲಸವನ್ನು ಗದ್ದರಿಕೆಯಿಲ್ಲದೆ ವ್ಯವಸ್ಥಿತ ರೀತಿಯಿಂದ ಮಾಡಲಾರರು. ಒಕ್ಕಲಿಗರಿಗೆ ಮುಂಗಾರಿಗಿಂತ ಬಿಳಿಜೋಳದ ಬೆಳೆ ಹೆಚ್ಚು ಲಾಭಕರವಾಗುವದು. ನಿಮ್ಮ ಊರಿನಲ್ಲಿಗಿಂತ ಪರಗ್ರಾಮಗಳಲ್ಲಿ ನಿಮ್ಮ ವರ್ಚಸ್ಸು ಮತ್ತು ಮಾತಿಗೆ ಮರ್ಯಾದೆ ಹೆಚ್ಚು. ಮಾರ್ಚದಿಂದ ಮಿತ್ರಸುಖ ಬಂಧುವರ್ಗದವರ ಸುಖ ಬಹಳ ಅನುಕೂಲ. ಆದರೂ ಅವರಲ್ಲಿ ಒಬ್ಬರು ಅನೈತಿಕ ಹೇತುವಿನಿಂದ ವರ್ತಿಸುವರೆಂದು ಎನಿಸುವದು. ಸ್ವಲ್ಪ ಪ್ರಮಾಣ ಮೀರಿ ವೆಚ್ಚವಾದರೂ ಅದರಲ್ಲಿಯು ಹೇತುಮಾತ್ರ ಸಾಧ್ಯವಾಗುವದು. ಶತ್ರುಗಳಿಂದ ಜೂನದ ವರೆಗೆ ಬಹಳ ತೊಂದರೆಯಾಗುವದು ಆದರೆ ಅನಂತರ ಅವರ ಬಾಯಿ ಯದೃಚ್ಛೆಯಿಂದಲೆ ನಿಲ್ಲುವದು ಮತ್ತು ಪ್ರತ್ಯಕ್ಷವಾಗಿ ನಡೆಯುವ ವಾದವಿವಾದಗಳ ಮತ್ತು ಸ್ಪರ್ಧೆಯ ಅನೇಕ ಕೆಲಸಗಳಲ್ಲಿ ಒಳ್ಳೆ ವಿಜಯ ದೊರೆಯುವದು. ಶತ್ರುಗಳಲ್ಲಿ ಒಬ್ಬರು ಮೋಸಮಾಡುವ ಸಂಭವವೂ ಇದೆ. ಒಟ್ಟಾರೆ ಸುಖದಲ್ಲಿ ದುಃಖಗಳ ಮಂಥನವನ್ನು ಬಹಳ ಮಟ್ಟಿಗೆ ಮಾಡುವ ಆದರೆ ಕೊನೆಯಲ್ಲಿ ನಿಮ್ಮ ಕೈಯಲ್ಲಿ ಯಶೋರೂಪಿಯಾದ ಬೆಣ್ಣೆಯನ್ನು ಕೊಡುವ ವರುಷ ನಿಶ್ಚಿತವಾಗಿ ಇದೆಂದು ತಿಳಿದುಕೊಂಡು ವರ್ತಿಸತಕ್ಕದ್ದು.

ವಿದ್ಯಾರ್ಥಿಗಳಿಗೆ ಈ ವರ್ಷ ಬಹಳ ಉತ್ತಮ ಇದೆ. ಸಿವಿಲ್ ಎಂಜಿನಿಯರಿಂಗ್ ವೈದ್ಯಕೀಯ ಮತ್ತು ವಾಙ್ಮಯದ ಅಭ್ಯಾಸಿಗಳಿಗೆ ಬಹಳ ಅನುಕೂಲ ಮತ್ತು ಯಾರ ಪರೀಕ್ಷೆ ಡಿಸೆಂಬರ ೧೫ ರಿಂದ ೩೧, ಮಾರ್ಚ ೨೯ ರಿಂದ ಎಪ್ರಿಲ ೧೧, ಎಪ್ರಿಲ ೨೯ ರಿಂದ ಜುಲೈ ೨, ಜುಲೈ ೨೨ ರಿಂದ ಅಗಷ್ಟ ೬ ಮತ್ತು ಅಗಷ್ಟ ೨೫ ರಿಂದ ಸಪ್ಟಂಬರ ೧೫ ಈ ಅವಧಿಯಲ್ಲಿ ಇದೆಯೋ ಅವರಿಗೆ ಯಶಸ್ಸು ಸಿಕ್ಕದೆ ಇರಲಾರದು.

೯. ಧನು

ಈ ರಾಶಿಯ ಜನರಿಗೂ ಅವರ ಸ್ವಂತ ಪ್ರಕೃತಿಅನುಕೂಲವೇ ಇದೆ. ಆದರೆ ಸಪ್ಟೆಂಬರ ೧೬ರಿಂದ ಅಕ್ಟೋಬರ ೧೬ರ ಮಧ್ಯದಲ್ಲಿ ಭೂತಬಾಧೆ ಜಾದೂ ಮೊದಲಾದವುಗಳಿಂದ ಇಲ್ಲವೆ ಕೆಲವೊಂದು ಭಯಂಕರ ಸಂಗತಿ ಇಲ್ಲವೆ ಅಪಘಾತ ನೋಡುವದರಿಂದ ಮನಸ್ಸು ಗಾಬರಿಗೊಂಡು ಸ್ವಲ್ಪ ತೊಂದರೆಯಾಗುವ ಸಂಭವ. ಹೆಂಡತಿಗೆ ಕೆಮ್ಮಿನ ವಿಕಾರ, ಸ್ತನವಿಕಾರ, ಬಾಯಿಬರುವದು ಮತ್ತು ತನ್ನ ವಿರುದ್ಧ ಎಲ್ಲರೂ ವರ್ತಿಸುವರು ಎಂಬ ತಿಳುವಳಿಕೆಯಿಂದ ಮಾನಸಿಕ ಕ್ಷೋಭ ಮಾಡಿಕೊಳ್ಳುವದು ಇವೆ ಮೊದಲಾದ ಕಾರಣಗಳಿಗಾಗಿ ಕೆಲ ಸಮಯ ಬಹಳ ತೊಂದರೆಯಾಗುವದು ಆದರೂ ಹಾಸಿಗೆ ಹಿಡಿಯುವ ಅಂಜಿಕೆ ಇಲ್ಲ. ಈ ಬಗೆಯ ತೊಂದರೆ ಮಾರ್ಚದಿಂದ ಮುಂದೆ ಮತ್ತು ಬಹುಶಃ ಮಾರ್ಚ ೧೨ ರಿಂದ ಎಪ್ರಿಲ ೨೧ ಮತ್ತು ಜುಲೈ ೧೨ ರಿಂದ ಅಗಸ್ಟ ೨೮ ರ ಮಧ್ಯದಲ್ಲಿ ಆದರೆ ಆಗುವದು. ಅದರಂತೆ ಮಕ್ಕಳು ಮರಿಗಳಿಗೆ ಜೂನ ೬ ರಿಂದ ಮತ್ತು ಅನಂತರ ನಿಮ್ಮ ತಾಯಿತಂದೆಗಳಿದ್ದರೆ ಅವರಿಗೆ ಅಲ್ಪ ಸ್ವಲ್ಪ ಕಾಯಿಲೆ ಆಗುವದು. ಪ್ರಾಪಂಚಿಕ ಸುಖ ಜೂನ ವರೆಗೆ ಬಹಳ ಉತ್ತಮ ದೊರೆಯುವದು ಆದರೆ ಅನಂತರ ಕೆಲ ಕ್ಷುಲ್ಲಕ ಕಾರಣದಿಂದ ಮನೆಯಲ್ಲಿ ಕಲಹ ಬಹಳಮಟ್ಟಿಗೆ ಹೆಚ್ಚುವದು ಅದೆ ಕಾಲಕ್ಕೆ ಬೇಡ ಎಂತ ಹೇಳಲಿಕ್ಕೆ ಬಾರದಿದ್ದಂಥ ಆಪ್ತರು ಆದರೆ ಕುಬುದ್ಧಿಕರಾದ ಕೆಲ ಅತಿಥಿಗಳು ಬಹಳ ದಿನಗಳ ವರೆಗೆ ಮನೆಯಲ್ಲಿ ಬಂದು ಉಳಿದು ಕೊಳ್ಳುವರು ಮತ್ತು ಅವರು ಹೊತ್ತಿದ ಉರಿಯಲ್ಲಿ ಮೇಲಿಂದ ಮೇಲೆ ಎಣ್ಣೆಯನ್ನು ಸುರುವುತ್ತ ನಡೆಯುವರು. ಆದ್ದುದರಿಂದ ಅವರು ಬಾರದಂತೆ ಮೊದಲೆ ನಿಷ್ಠುರರಾಗುವದು ಒಳಿತು. ಪತಿಪತ್ನಿಯರಲ್ಲಿ ಬಹಳ ಮತೈಕ್ಯ ಉಳಿಯುವದು

ಆದರೆ ಮಕ್ಕಳು ಮಾತ್ರ ಒಳ್ಳೆ ರೀತಿಯಿಂದ ವರ್ತಿಸುವದಿಲ್ಲ; ಬೇಡಾದ ಕೆಲಸಗಳನ್ನು ಆಗ್ರಹದಿಂದ ಮಾಡುವರು. ನಿಮ್ಮ ವರ್ಚಸ್ಸು ಕಡಿಮೆಯಾಗುವ ರೀತಿಯಲ್ಲಿಯೇ ಅವರು ನಡೆಯುವರು. ಈ ವಿಷಯದಲ್ಲಿ ತಾ. ೩ ಫೆಬ್ರುಅರಿಯಿಂದ ೧೨ ಮಾರ್ಚ, ೩೧ ರಿಂದ ಮೇ ದಿಂದ ಜುಲೈ ೧೨ ಮತ್ತು ೧೭ ಅಕ್ಟೋಬರ ನಂತರದ ಅವಧಿ ವಿಶೇಷ ನೆನಪಿನಲ್ಲಿ ಉಳಿಯುವದು. ಒಟ್ಟಿಗೆ ಮೇಲೆ ಮೇಲೆ ಅನುಕೂಲ ಆದರೆ ಒಳಗೆ ತೊಂದರೆಯುದು. ಪ್ರಾಪಂಚಿಕಸುಖದ ರೀತಿ ಅಂತೆಯೇ ಎಂದು ತಿಳಿದುಕೊಳ್ಳತಕ್ಕದ್ದು.

ಈ ರಾಶಿಯ ಹೆಣ್ಣುಮಕ್ಕಳಿಗೆ ಪತಿಸುಖ ಪ್ರೇಮದೃಷ್ಟಿಯಿಂದ ಅನುಕೂಲ ಆದರೆ ಅವರ ಆರೋಗ್ಯದ ಬಗ್ಗೆ ಒಂದೇ ಸವನೆ ಚಿಂತೆ ಹತ್ತುವದು. ಹಡೆಯಲು ಇದ್ದ ಸ್ತ್ರೀಯರಿದ್ದರೆ ಅವರಿಗೆ ಮಾರ್ಚದಿಂದ ಜೂನದ ವರೆಗೆ ಆಗುವ ಬಾಣಂತಿತನವು ಬಹಳ ತೊಂದರೆಯಿಂದ ಸಾಗುವದು. ಕೆಲ ಪ್ರಸಂಗಗಳಲ್ಲಿ ಶಸ್ತ್ರಕ್ರಿಯೆ ಮಾಡಬೇಕಾಗುವದು. ಜೂನದಿಂದ ಆಗುವ ಪ್ರಸೂತಿಯು ಸುಲಭವಾಗುವದು ಆದರೆ ಬಾಣಂತಿತನ ಮುಗಿವ ವರೆಗಿನ ಅವಧಿ ಕೆಲ ಜನರಿಗೆ ಮಾನಸಿಕ ತೊಂದರೆಯಿಂದ ಹೋಗುವದು. ಗಂಡಸು ಮಕ್ಕಳಿಗಿಂತ ಕನ್ಯಾ ಹುಟ್ಟುವದರಲ್ಲಿಯೇ ಹೆಚ್ಚು ಹಿತವಿದೆ ಎಂದು ತಿಳಿಯತಕ್ಕದ್ದು.

ಉದ್ಯೋಗ ಧಂದೆಗೆ ಇಲ್ಲವೆ ನೋಕರಿಗೆ ಈ ವರ್ಷ ಬಹಳ ಉತ್ತಮ ಇರುವದು. ನುಡಿದುದೆಲ್ಲ ಸಂಭವಿಸುವದು. ಬಹಳ ದಿನಗಳಿಂದ ಮನಸ್ಸಿನಲ್ಲಿ ಇಟ್ಟುಕೊಂಡ ಇಚ್ಛೆ ಫಲದ್ರೂಪವಾಗುವದು. ಉದ್ಯೋಗದಲ್ಲಿ ಬಹಳ ಸಾಹಸ ದೀರ್ಘ ಪ್ರಯತ್ನ ಆಳವಾದ ವಿಚಾರ ಮತ್ತು ಪ್ರಸಂಗಾವಧಾನ ಈ ಚತುರ್ಭುಜದ ಮೇಲೆ ದೊಡ್ಡ ದೊಡ್ಡ ಪ್ರಗತಿಪರ ವಿಜಯ ದೊರೆಯುತ ಹೋಗುವದು. ಧಂದೆ ಮಾಡುವವರಿಗೆ ಫೆಬ್ರುವರಿ ಕೊನೆಯ ವರೆಗೆ ಮತ್ತು ಮಾರ್ಚದಿಂದ ಮುಂದೆ ನೋಕರ ವರ್ಗದವರಿಗೆ ಹೆಚ್ಚು ಸುಯಶ ಸಿಕ್ಕುವದು. ಯಾರು ಮೇಲಿನ ದರ್ಜೆಗೆ ಹೋಗುವದನ್ನು ಬಹಳ ದಿನಗಳಿಂದ ನಿರೀಕ್ಷಿಸುತಿದ್ದರೋ ಅವರು ಮೇ ೩೦ ರಿಂದ ಜುಲೈ ೧೨ ಮತ್ತು ಅಗಸ್ಟ೧೫ ರಿಂದ ಅಕ್ಟೋಬರ ೧೫ ರ ವರೆಗೆ ತಡೆಯಬೇಕಾಗುವದು. ಮನೋಭಂಗ ಸಹಸಾ ಸಂಭವಿಸಲಾರದು. ಬದಲಿ ಆಗುವ ಶಾಖೆಗಳಲ್ಲಿ ನೀವು ಇದ್ದರೆ ಅದು ಬಹಳದೂರವಾದ ಮತ್ತು ಸುಖಸೋಯಿ ಸ್ಥಳಕ್ಕೆ ಬದಲಿ ಆಗುವದು. ಧಂದೆ ಮಾಡುವರು ಮಾಡಿದ ಸಟ್ಟಾ ಇಲ್ಲವೆ ಖರೀದಿಮಾಡಿದ ಮಾಲು ಅಂದಾಜಿಗಿಂತ ಹೆಚ್ಚು ಲಾಭದ್ದು ಎನಿಸುವದು. ಕೇವಲ ದ್ರವ್ಯ ಲಾಭಕ್ಕೆ ನವಂಬರ ೨೦ ರಿಂದ ಡಿಸೆಂಬರ ೧೪ ಜಾನೇವಾರಿ ೮ ರಿಂದ ಮಾರ್ಚ ೨೦, ಎಪ್ರಿಲ ೧೪ ರಿಂದ ಮೇ ೭, ಜೂನ ೧ ರಿಂದ ೨೫, ಜುಲೈ ೨೧ ರಿಂದ ಅಗಸ್ಟ ೧೪ ಮತ್ತು ಸಪ್ಟೆಂಬರ ೮ ರಿಂದ ಅಕ್ಟೋಬರ ೪ ಈ ಅವಧಿಯು ಹೆಚ್ಚು ಅನುಕೂಲ ಇರುವದು. ಸಾಮಾಜಿಕ ಮತ್ತು ರಾಜಕೀಯ ಪ್ರತಿಷ್ಠೆ ಉತ್ತಮ ಉಳಿಯುವದು. ಕೀರ್ತಿ ಹೆಚ್ಚುವದು. ನಿರರ್ಥಕ ವೆಚ್ಚವೂ ಆದರೆ ಸ್ಥಾವರ ಸಂಗ್ರಹವೂ ಬಹಳ ಮಟ್ಟಿಗೆ ಹೆಚ್ಚುವದು. ಯಾರ ಹೊಲಗಳು ನೀರಿನಲ್ಲಿ ಮುಳುಗುವಂಥವಿರುವವೊ ಅವರ ಬೆಳೆಗಳು ಮಾತ್ರ ಮುಳುಗುವವು. ಜೂನದಿಂದ ನೋಕರ ಚಾಕರರು ಸ್ವಲ್ಪ ಎದ್ದು ಕೂಡ್ರುವರು. ಇಲ್ಲವೆ ಕೆಲಸ ತಪ್ಪಿಸಿ ನಡೆದುಕೊಳ್ಳುವರು ವಾಹನಸುಖಕ್ಕೂ ಈ ಅವಧಿಅಷ್ಟೊಂದು ಅನುಕೂಲ ಇಲ್ಲ. ಆಪ್ತರು ಮತ್ತು ನೆರೆಹೊರೆಯವರು ವಿರೋಧದಿಂದ ವರ್ತಿಸುವರು. ಕ್ಷುಲ್ಲಕಮಾತಿಗಾಗಿ ವಾದವಿವಾದದ ತಿಕ್ಕಾಟದ, ಕೆಲಸಮಯ ಕೈಗೆ ಕೈ ಹತ್ತುವ ಪ್ರಸಂಗವೂ ಆಗಾಗ ಜರಬಹುದು. ಮಿತ್ರಸುಖಕ್ಕೆ ಈ ವರ್ಷ ಅಷ್ಟೊಂದು ಅನುಕೂಲ ಇರುವದಿಲ್ಲ. ಪರಸ್ಪರರಲ್ಲಿ ಬಹಳ ತಪ್ಪು ತಿಳಿವಳಿಕೆಯಾಗುವದು. ಮಕ್ಕಳ ಮದಿವೆಯಾಗುವದಿದ್ದರೆ ಇಲ್ಲವೆ ಇನ್ನೂ ನಿಮ್ಮದೆ ಆಗುವದಿದ್ದರೆ ಫೆಬ್ರುಅರಿ ಕೊನೆಯೊಳಗಾಗಿ ಬಹುಶಃ ಆಗೇತೀರುವದು. ಅದರ ಮುಂದೆಯಾದರೂ ಆಗುವದು. ಆದರೆ ಸ್ವಲ್ಪ ತೊಂದರೆಯಿಂದ. ಶತ್ರುಗಳು ಮಾತ್ರ ಬಹಳ ಫಜೀತಿಮಾಡಿಬಿಡುವರು. ಅವರ ಸಂಖ್ಯೆ ಹೆಚ್ಚುವದು. ಘಾತಪಾತದ ಪ್ರಯತ್ನವನ್ನೂ ಅವರು ಮಾಡುವರು ಡಿಸೆಂಬರ ೧೫ ರಿಂದ ಜಾನೇವಾರಿ ೭, ಫೆಬ್ರುಅರಿ ೧ ರಿಂದ ೨೪ ಮೇ ೭ ರಿಂದ ೩೧, ಜೂನ ೧೫ ರಿಂದ ಜುಲೈ ೨೧ ಮತ್ತು ಅಕ್ಟೋಬರ ೪ ರಿಂದ ಮುಂದೆ ಈ ಅವಧಿಯಲ್ಲಿ ಅವರಿಂದ ಬಹಳ ಉಪದ್ರವಾಗುವದು ಆದರೂ ವಾದವಿವಾದದಲ್ಲಿ ಮತ್ತು ಸ್ಪರ್ಧೆಯಲ್ಲಿ ಬಹಳ ಯಶಸ್ಸು ಸಿಕ್ಕುವದು. ನಿಧಾನ ಒಂದೆರಡು ದೊಡ್ಡ ಖಟ್ಲೆ ಇಲ್ಲವೆ ಪ್ರಕರಣಗಳಲ್ಲಿ ನಿಶ್ಚಯವಾಗಿ ಯಶಸ್ಸು ದೊರೆಯುವದು. ತೀರ್ಥಯಾತ್ರೆಯೂ ಸಂಭವಿಸಬಹುದು ಆದರೆ ಒಟ್ಟಾರೆ ಪ್ರವಾಸ ಬಹಳಾಗುವ ಯೋಗವಿದ್ದರೂ ಅವು ಉತ್ಸುಕತೆಯಿಂದ ಜರುಗದೆ ನಿರ್ವಾಹವಿಲ್ಲದೆ ಜರುಗುವವು. ಭೆಟ್ಟಿಯ ಕೆಲಸ ಪತ್ರವ್ಯವಹಾರ ಮತ್ತು ಲೇಖೀ ಕೆಲಸಗಳು ಮಾರ್ಚದಿಂದ ಬಹಳ ಉತ್ತಮವೆನಿಸುವವು. ಬಂಧುವರ್ಗದವರ ಉತ್ಕರ್ಷ ಬಹಳಾಗುವದು ಆದರೆ ಅವರ ಪತಿ ಇಲ್ಲವೆ ಪತ್ನಿಯ ಆರೋಗ್ಯ ಚೆನ್ನಾಗಿ ಉಳಿಯುವದಿಲ್ಲ. ಅಲ್ಲದೆ ಅವರದು ನಿಮ್ಮದೂ ಕೂಡಿ ನಡೆಯುವದಿಲ್ಲ. ಒಟ್ಟಾರೆ ಔದ್ಯೋಗಿಕ ಉನ್ನತಿಯನ್ನು ಆದರೆ ಪ್ರಾಪಂಚಿಕ ತೊಂದರೆಯನ್ನು ಈ ವರ್ಷ ಸೂಚಿಸುವದು.

ಈ ವರ್ಷ ವಿದ್ಯಾರ್ಥಿಗಳ ಮನಃಸ್ಥಿತಿ ಚೆನ್ನಾಗಿ ಉಳಿಯುವದಿಲ್ಲ. ಒಳ್ಳೆ ಜೋರಿನಿಂದ ಅಭ್ಯಾಸಮಾಡುವವರಿಗೆ ಸಹ ಅದನ್ನು ಮಾಡಬಾರದೆಂದೆನಿಸುತ್ತದೆ. ಉಚ್ಚ ಶಿಕ್ಷಣ ತೆಗೆದುಕೊಳ್ಳುವವರ ಮನಸ್ಸು ಪ್ರೇಮಾರಾಧನೆಯಲ್ಲಿ ತೊಡಗಿ ಅದರಲ್ಲಿಯ ಪ್ರಗತಿಯೇ ಅಭ್ಯಾಸವೆಂದು ತಿಳಿಯುವರು. ಕೆಲ ಜನರಿಗೆ ಸುಸಂಗತ ಇಲ್ಲವೆ ಮನೆತನದ ಅಡಚಣಿ ನಡುವೆ ಬರುವವು. ಅದರಲ್ಲಿಯೂ ಯಾರ ಪರೀಕ್ಷೆಮಾರ್ಚದೊಳಗೆ ಆಗುವದಿದೆಯೋ ಇಲ್ಲವೆ ಎಪ್ರಿಲ ೧೧ ರಿಂದ ಮೇ ೨೦ ಜುಲೈ ೧೨ ಮತ್ತು ರಿಂದ ಅಗಸ್ಟ ೨೮ ಈ ಅವಧಿಯಲ್ಲಿ ಆಗುವದೊ ಅವರು ಬಹುಶಃ ನಪಾಸಾಗಲಾರರು. ಕಾಯದೆ, ಪೋಲಿಸ, ಸೈನಿಕ, ನೌಕಾ ಇಲ್ಲವೆ ಕಂದಾಯಶಾಖೆಯ ಪರೀಕ್ಷೆಗೆ ಕೂಡ್ರುವವರಿಗೆ ಬಹಳ ಯಶ ದೊರೆಯುವದು.

೧೦. ಮಕರ

ಈ ರಾಶಿಯವರಿಗೆ ರಾಶಿಸ್ವಾಮಿಯಾದ ಶನಿಯು ಎಂಟನೆಯವನಾಗುವದರಿಂದ ಪ್ರಕೃತಿಗೆ ಅನುಕೂಲ ಇಲ್ಲ. ಹೊಟ್ಟೆಯಲ್ಲಿ ಗ್ಯಾಸ ಆಗುವದು, ಜಲೋದರ ಅರ್ಧಾಂಗವಾಯು, ಆನೆಕಾಲು ಇವುಗಳಲ್ಲಿ ಯಾವುದಾದರೊಂದು ವಿಕಾರದ ಅಂಜಿಕೆ ಇದೆ. ತಾ. ೧೨ ಫೆಬ್ರುವರಿಯಿಂದ ೧೩ ಮಾರ್ಚ, ೧೪ ಎಪ್ರೆಲದಿಂದ ಮೇ ೧೫ ಮತ್ತು ೧೬ ಅಗಸ್ಟದಿಂದ ೧೬ ಸಪ್ಟೆಂಬರ ಈ ಅವಧಿ ಬಹಳ ತೊಂದರೆಯದು. ಅಂತೆಯೇ ಅರಿಷ್ಟ ಪರಿಹಾರಾರ್ಥ ಮಹಾಮೃತ್ಯುಂಜಯ ಜಪ, ಕನಿಷ್ಠ ೧೧೦೦೦, ರವಿ ಮತ್ತು ಶನಿ ಜಪ ಮತ್ತು ದಾನ, ಕುಲದೇವತಾರಾಧನ ಮೊದಲಾದ ದೈವಿಕ ಉಪಾಯ ಅವಶ್ಯವಾಗಿ ಮಾಡತಕ್ಕದ್ದು. ಇದರಲ್ಲಿಯೇ ಮಾರ್ಚ ವರೆಗೆ ೧೨ ನೇ ಗುರುವಿನ ಫಲ ಸಿಕ್ಕುವದು. ಅದರಿಂದ ಅನೇಕರೊಡನೆ ನಿರರ್ಥಕ ತಿಕ್ಕಾಟ. ಹೆಂಡತಿಯ ಪ್ರಕೃತಿಯೂ ತಾ. ೬ ಜೂನ ದ ವರೆಗೆ ಚೆನ್ನಾಗುಳಿಯುವದಿಲ್ಲ. ರೋಗವಿಲ್ಲದಿದ್ದರೂ ಬೇನೆ ಬಂದಿದೆಎಂದು ಅವಳಿಗೆ ಮೇಲಿಂದ ಮೇಲೆ ಎನಿಸುವದು. ಅನೇಕರ ಹೆಂಡಂದಿರಿಗೆ ಹುಚ್ಚು ಇಲ್ಲವೆ ಭಯದ ತೊಂದರೆ ಎನಿಸುವದು. ಆದರೂ ಮಾರ್ಚದಿಂದ ಬಹಳ ವಿಕೋಪಕ್ಕೆ ಬರಲಾರದು. ಮಕ್ಕಳು ಮರಿಗಳ ಪ್ರಕೃತಿ ಅನುಕೂಲ. ಆದರೆ ಅವರಲ್ಲಿ ಕೆಲ ಜನರಿಗೆ ಅಪಘಾತದಿಂದ ಅಲ್ಪಸ್ವಲ್ಪ ಕ್ಲೇಶ. ತಾ. ೧೭ ನವಂಬರ ವರೆಗೆ ಮತ್ತು ೩ ಫೆಬ್ರವರಿಯಿಂದ ತಾ. ೧೩ ಮಾರ್ಚ ಮತ್ತು ೩೦ ಮೇದಿಂದ ೧೨ ಜುಲೈ ಈ ಮಧ್ಯಂತರ ಅವಧಿಯಲ್ಲಿ ಜಪ್ಪಿಸಿಕೊಂಡಿರತಕ್ಕದ್ದು. ಆಪ್ತರಲ್ಲಿ ಅತ್ಯಂತಪ್ರೀತಿ ಪಾತ್ರರೊಬ್ಬರ ಮೋಸದ ಸಂಭವ. ಮನೆ

ಯಲ್ಲಿ ಭೂತಚೇಷ್ಟೆಯಂಥ ವಿಸ್ಮಯ ಜನಕ ಪ್ರಕಾರಗಳು ಕೆಲ ಸಮಯ ಸಂಭವಿಸುವವು. ಜೂನ ವರೆಗೆ ಅಶುಭ ಸ್ವಪ್ನಗಳು ಬಹಳ ಬೀಳುವವು. ಇಲ್ಲವೆ ಅಶುಭ ಶಕುನಗಳಾಗುವವು. ಪತಿಪತ್ನಿಯರಲ್ಲಿ ಮಾರ್ಚ ತಿಂಗಳ ವರೆಗೆ ಕೂಡಿ ನಡೆಯುವದಿಲ್ಲ. ಜೂನದಿಂದ ಮಾತ್ರ ಪ್ರಾಪಂಚಿಕ ಸುಖ ಬಹಳ ಉತ್ತಮ ದೊರೆಯುವದು. ಮತ್ತು ಮಕ್ಕಳಲ್ಲಿ ಕೆಲವರ ಉನ್ನತಿಯಾಗುವದು. ಸ್ವತಃ ನಿಮ್ಮ ಮಕ್ಕಳ ವಿವಾಹವಾಗುವದಿದ್ದರೆ ಮಾರ್ಚ ತಿಂಗಳಿಂದ ಸುಲಭವಾಗಿ ಆಗುವದು. ಅಪ್ತರು ಮತ್ತು ನೆರೆಹೊರೆಯವರಿಂದ ಕಿರುಕಳ ಉಪದ್ರವ ಜೂನ ವರೆಗೆ ಬಹಳ ಆಗುವದು. ಆದರೆ ಅನಂತರ ಅವು ಬಹಳ ಉಪಯೋಗಕ್ಕೆ ಬರುವವು. ನೋಕರ ವರ್ಗದವರಲ್ಲಿ ಕೆಲವರು ಜೂನದೊಳಗಾಗಿ ಬಿಟ್ಟುಹೋಗುವರು. ಮತ್ತು ಯಾರು ಬರುವರೋ ಅವರು ಮೊದಲಿನವರಿಗಿಂತ ಬಹಳ ಅನುಕೂಲ ಮತ್ತು ಪ್ರತಿಕೆಲಸದಲ್ಲಿ ವಿಶ್ವಾಸಿಕರಾಗುಳಿಯುವರು. ಜೂನದಿಂದ ಮುಂದೆ ವಾಹನ ಸುಖ ಅನುಕೂಲ. ಮಾರ್ಚದಿಂದ ದೇವಧರ್ಮದತ್ತ ಹೆಚ್ಚು ಲಕ್ಷ ಹತ್ತುವದು. ಮತ್ತು ಕೆಲ ಸಮಯ ಉಪಾಸ್ಯ ದೇವತೆಯ ದೃಷ್ಟಾಂತ ಇಲ್ಲವೆ ಸಾಕ್ಷಾತ್ಕಾರವಾಗುವದು.

ಈ ರಾಶಿಯ ಹೆಂಗಸರಿಗೆ ಪತಿಸುಖದ ವಿಷಯದಲ್ಲಿ ಮಾರ್ಚ ವರೆಗೆ ಬಹಳ ಕಷ್ಟವಾಗುವದು. ನಿಮ್ಮ ಮೇಲಿನ ಅವರ ಪ್ರೇಮ ಮತ್ತು ನಿಷ್ಠೆಯ ಬಗ್ಗೆ ಸಂಶಯದ ವಾತಾವರಣವುಳಿಯುವದು. ಮಾರ್ಚದಿಂದ ಜೂನ ವರೆಗೆ ಕೆಲ ಸಮಯ ಸಂತೋಷದ ಕೆಲ ಸಮಯ ಸಿಟ್ಟಿನ ಸಮಯ ಸಂದುವವು. ಆದರೆ ಜೂನ ನಂತರ ಮುಂದೆ ಯಾವನೇ ಬಗೆಯ ಕಿಟಿಕಿಟಿಯಾಗುವ ಅಂಜಿಕೆಯಿಲ್ಲ. ಗರ್ಭಿಣಿಯಿದ್ದು ಮಾರ್ಚ ತಿಂಗಳೊಳಗಾಗಿ ಹಡೆಯುವವರಿದ್ದರೆ ಅವರು ಹಡೆಯುವ ದಿನಗಳು ಬಹಳ ಕಠಿಣಹೋಗುವವು. ಆದರೆ ಮಾರ್ಚದಿಂದ ಮುಂದೆ ಸುಲಭ ಪ್ರಸೂತಿಯ ಯೋಗವಿದ್ದು ಬಹುಶಃ ಗಂಡು ಮಗು ಹುಟ್ಟುವದು. ಆದರೆ ಹುಟ್ಟುವ ಮಗು ವರ್ಷ ಮುಗಿಯುವ ವರೆಗೆ ಬಹಳ ಕಿಟಿಕಿಟಿ ಮಾಡುವದು. ಇದರ ಹೊರತಾಗಿ ಎರಡನೆ ಅಂಜಿಕೆ ಸಹಾ ಇಲ್ಲ.

ಈ ವರ್ಷ ಧಂದೆಮಾಡುವವರಿಗೆ ನೋಕರ ವರ್ಗದವರಿಗೆ ಕೆಟ್ಟದುವದಿಲ್ಲ. ಖೊಟ್ಟರೀತಿಯಿಂದ ವರ್ತಿಸುವವರಿಗೆ ಅಂತೂ ಮಾರ್ಚ ವರೆಗೆ ಬಹಳ ತೊಂದರೆ. ಸ್ವತಂತ್ರ ಧಂದೆಯವರಿಗೆ ನೋಕರರಿಗಿಂತ ಈ ವರ್ಷ ಪ್ರಗತಿ ಪ್ರತಿಷ್ಠೆ ಮತ್ತು ಲಾಭಕ್ಕೆ ಹೆಚ್ಚು ಉತ್ತಮ. ನೋಕರದಾರರಿಗೆ ಮೇಲಿನ ವರ್ಗದ "ಚಾನ್ಸು" ತೀರ ಕೈಗೆ ಬಂದಂತಾಗಿ ಕೈಗೆ ಬರಬೇಕಾದರೆ ಸಾಕುಬೇಕಾಗಿ ಹೋಗುವದು ಮರಿಸ್ಕರು ಸಲ್ಲದ ಕೆಲಸ ಮಾಡಲು ಹೇಳುವರು. ಅನೇಕರ ಬದಲಿ ಅನನುಕೂಲ ಮತ್ತು ಅನವಶ್ಯಕ ಸ್ಥಳಕ್ಕೆ ಆಗುವದು. ಲೋಕಮತವೂ ಕಲುಷಿತವಾಗುವದು. ಕಾಯಿಂಲೆಯಾದರೆ ರಜೆನೂರಯುಬೇಕಾದರೆ ಸಾಕುಬೇಕುಗುವದು. ಜೂನ ನಂತರ ಮಾತ್ರ ಸಾವಕಾಶವಾಗಿ ತೊಂದರೆ ಕಡಿಮೆಯಾಗುತ್ತ ಹೋಗುವದು. ಸತ್ಯಕ್ಕಿಂತ ಅಸತ್ಯಕನದಿಂದ ನಡೆಯುವವರಿಗೆ ಬಹಳ ಪ್ರಯೋಜನವಾಗುವದು. ಆದರೂ ಕೇವಲ ದ್ರವ್ಯಲಾಭಕ್ಕೆ ಬಹಳ ಉತ್ತಮವಿದ್ದು ತಾ. ೧೬ ನವಂಬರ ವರೆಗೆ ಮತ್ತು ಅನಂತರ ಡಿಸೆಂಬರ ೨೬ ರಿಂದ ಫೆಬ್ರವರಿ ತಾ. ೨, ಮಾರ್ಚ ೧೪ ರಿಂದ ಎಪ್ರಿಲ ೨೧, ಮೇ ೩೦ ರಿಂದ ಜುಲೈ ೧೧ ಮತ್ತು ಆಗಷ್ಟ ೨೮ ರಿಂದ ಅಕ್ಟೋಬರ ೧೬ ಈ ಅವಧಿ ಬಹಳ ಅನುಕೂಲ ಹೋಗುವದು. ನೌಕರರು ಮತ್ತು ಧಂದೆದವರಿಗಿಂತ ಒಕ್ಕಲಿಗರಿಗೆ ಈ ವರ್ಷ ಬಹಳ ಲಾಭದ್ದು ಇರುವದು. ಅದರಂತೆ ವೈದ್ಯರಿಗೆ, ಡಾಕ್ಟರರಿಗೆ, ಔಷಧ ಮಾಡುವವರಿಗೆ, ಜ್ವಾಲಾಗ್ರಾಹಿವಿಷಪದಾರ್ಥಗಳ ವ್ಯಾಪಾರ ಮಾಡುವವರಿಗೆ ಈ ಅವಧಿ ಬಹಳ ಲಾಭದ್ದು ಎನಿಸುವದು. ಪಾರಮಾರ್ಥಿಕ ವಿಷಯಗಳಲ್ಲಿ ಬಹಳ ವೆಚ್ಚಮಾಡಲ್ಪಡುವದು. ನಿಮ್ಮಕಿಂತ ಎರಡನೆಯವರ ಕೆಲಸ ಮಾಡುವಲ್ಲಿ ತ್ವರಿತ ಮತ್ತು ಹೆಚ್ಚು ಯಶಸ್ಸು ಸಿಕ್ಕುವದು. ಮಿತ್ರಸುಖ ಮಾರ್ಚ ನಂತರ ಉತ್ತಮ. ಕೆಲ ಹೊಸ ಮಿತ್ರರೂ ಕೇವಲ ಮನೆಯವರಂತೆ ವರ್ತಿಸುವರು. ಜೂನದಿಂದ ಉದ್ಯೋಗದಲ್ಲಿಯ ಸಾಹಸ, ಉತ್ಸಾಹ, ಮತ್ತು ಆವಶ್ಯಕ ಪರಿಸ್ಥಿತಿಯ ಅನುಕೂಲತೆ ಬಹಳಮಟ್ಟಿಗೆ ಹೆಚ್ಚುವದು. ಮಾರ್ಚದಿಂದ ಸ್ವಜಾತೀಯ ಮತ್ತು ಇತರ ಶತ್ರುಗಳು ಹೆಚ್ಚುವರು. ಮತ್ತು ಅವರಿಂದ ಬಗೆಬಗೆಯ ಗುಪ್ತ ಮತ್ತು ಪ್ರತ್ಯಕ್ಷ ರೀತಿಯಿಂದ ತೊಂದರೆಯಾಗುತ್ತಲೇ ನಡೆಯುವದು. ಆದರೆ ಮಾರ್ಚದಿಂದ ಅವರು ಮೆಲ್ಲ ಮೆಲ್ಲಗೆ ಹಿಂದೆ ಸರಿಯಬೇಕಾಗುವದು. ಜೂನದಿಂದಂತೂ ಅವರು ಪೂರ್ಣ ರೀತಿಯಿಂದ ಹಿಂದೆ ಸರಿಯುವರು. ಇಷ್ಟೇ ಅಲ್ಲ ಅವರು ನಿಮ್ಮ ವಿರುದ್ಧ ಹಾಕಿದ ಪೇಚು ತಿರುಗಿ ನಿಮಗೆ ಕಲ್ಯಾಣಪ್ರದವೇ ಆಗುವದು. ಅದರಲ್ಲಿ ಒಂದು ಅಪಘಾತದಿಂದ ಮೈಮೇಲೆ ಬರುವ ಸಂಭವವಿದೆ. ಸ್ಥಾವರದ ಬಗ್ಗೆ ಜೂನ ವರೆಗೆ ಕೆಲ ಕಿಟಿ ಕಿಟಿ ಇದ್ದುದೇ ಆದರೆ ಅನಂತರ ಅವು ತಾವಾಗಿಯೇ ಬಗೆಹರಿಯುವವು. ವೆಚ್ಚ ಹೆಚ್ಚು ಆದರೆ ಅದರಲ್ಲಿಯ ಹೇತು ಬಹಳ ಮಟ್ಟಿಗೆ ಸಾಧ್ಯವಾಗುದರಿಂದ ಮನಸ್ಸಿಗೆ ಆರಾಮವೇ ಎನಿಸುವದು. ತಾ. ೧೫ ಡಿಸೆಂಬರ ವರೆಗೆ ಮತ್ತು ತಾ. ೧೨ ಫೆಬ್ರವರಿಯಿಂದ ಮಾರ್ಚ ೧೪ ರ ವರೆಗೆ ಮತ್ತು ತಾ. ೧೬ ಸಪ್ಟೆಂಬರದಿಂದ ೧೬ ಅಕ್ಟೋಬರ ಈ ಅವಧಿಯಲ್ಲಿ ಅಲ್ಪಸ್ವಲ್ಪ ಆಕಸ್ಮಿಕ ಲಾಭವಾಗುವ ಸಂಭವವಿದೆ. ಒಟ್ಟಾರೆ ಉತ್ಕರ್ಷದತ್ತವೇ ಈ ವರ್ಷದ ಒಲವು ಇದೆ ಎಂದು ಹೇಳಲಿಕ್ಕೆ ಅಡ್ಡಂಕವಿಲ್ಲ.

'ಅಭ್ಯಾಸ ವ್ಯವಸ್ಥಿತ ಆಗಲಿಲ್ಲ' ಎಂದು ಮಾರ್ಚದಿಂದ ವಿದ್ಯಾರ್ಥಿಗಳ ಕುರಕುರಿ ಬಹಳ ಮಟ್ಟಿಗೆ ಇದ್ದುವೇ. ಆದರೆ ಮುಂದೆ ಒಮ್ಮೆಲೇ ಅದನ್ನು ಜೋರಿನಿಂದ ಮಾಡುವ ಹುರುಪು ಅವರಿಗೆ ಬರುವದರಿಂದ ಮತ್ತು ದೈವೀ ಹಾಗು ಗುರುಗ್ರಹದ ಕೃಪೆಯಿಂದ ನಾಪಾಸ ಆಗುವ ಕಳಂಕ ಸಾಹಸಾ ಹತ್ತುವದಿಲ್ಲ. ಕಾಯದೆ, ವಾಣಿಜ್ಯ, ಭೂಸ್ತರ, ಖನಿಜ, ಸೌಕರ್ಯ ಮತ್ತು ವೈದ್ಯಕೀಯ ವಿಷಯಗಳ ಅಭ್ಯಾಸಿಗಳಿಗೆ ಈ ವರ್ಷ ನಿಶ್ಚಿತವಾಗಿ ಯಶಸ್ಸನ್ನು ದಯಪಾಲಿಸುವದು ಯಾರ ಪರೀಕ್ಷೆ ಡಿಸೆಂಬರ ೧೬ ರಿಂದ ಜಾನೇವರಿ ೭ ರ ವರೆಗೆ, ಫೆಬ್ರವರಿ ೧ ರಿಂದ ೨೪, ಮಾರ್ಚ ೨೧ ರಿಂದ ಎಪ್ರಿಲ ೧೪, ಮೇ ೮ ರಿಂದ ೩೧, ಜೂನ ೨೫ ರಿಂದ ಜುಲೈ ೨೨ ಮತ್ತು ಅಕ್ಟೋಬರ ೪ ರಿಂದ ಮುಂದೆ ಈ ಅವಧಿಯಲ್ಲಿ ಆಗುವದಿದೆಯೋ ಅವರು ಬಹುಶಃ ಯಶಸ್ವಿಯಾಗಿಯೇ ಬಿಡುವರು.

೧೧. ಕುಂಭ

ಈ ರಾಶಿಯ ಜನರ ಆರೋಗ್ಯಕ್ಕೆ ಈವರ್ಷ ಅನುಕೂಲವೂ ಇಲ್ಲ ಪ್ರತಿಕೂಲವೂ ಇಲ್ಲ. ಎಂದರೆ ಮಧ್ಯಮವೇ ಇದೆ. ತಿನಸು ಕುಡಿಯುವದರಲ್ಲಿ ವಾತಕಾರಕ ಮತ್ತು ಥಂಡಿ ಪದಾರ್ಥಗಳನ್ನು ಹೆಚ್ಚಿಗೆ ಇಟ್ಟುಕೊಳ್ಳಬಾರದು ಮತ್ತು ಒಂದರ ವಿರುದ್ಧ ಮತ್ತೊಂದು ಪದಾರ್ಥವನ್ನು ಕೂಡಲೆ ತಿನ್ನಬಾರದು. ಅದೇರೀತಿಯಾಗಿ ಶಾರೀರಿಕ ಶ್ರಮದ ಅತಿರೇಕ ಆಗದಂತೆ ನೋಡಿಕೊಳ್ಳಬೇಕು. ಕೆಲ ಜನರಿಗೆ ಮಧುಮೇಹ, ನಿರರ್ಥಕ ವೀರ್ಯಹ್ರಾಸವಾಗುವದು, ಸಂಗ್ರಹಣೀ, ಮತ್ತು ಕೆಮ್ಮು ಈ ಉಪದ್ರವ ಆಗುವ ಸಂಭವ ಇದೆ. ಪ್ರಕೃತಿ ಅನುಕೂಲವಿಲ್ಲ ಎಂದು ಅನೇಕರು ಮಾರ್ಚದಿಂದ ತಕರಾರು ನಡೆಸಿದ್ದರೆ ಹಲವರು ಜೂನದಿಂದ ಆ ತಕರಾರು ಮಾಡುವರು. ಹೆಂಡತಿಗೆ ಜೂನದಿಂದ ಕಿರಕಳ ಕಾಹಿಲೆಯಾದರೂ ಯಾವಾಗಲೂ ಅದು ಇದ್ದುದೆ. ಮಕ್ಕಳುಮರಿಗಳ ಆರೋಗ್ಯಕ್ಕೆ ಮಾತ್ರ ಈ ವರ್ಷ ಬಹಳ ಉತ್ತಮವಿದೆ. ಕೆಮ್ಮು ನೆಗಡಿ ಕೂಡ ಬಹುಶಃ ಆಗುವದಿಲ್ಲ. ಆದರೆ ಅವರು ಅದರ ಸೇಡನ್ನೆ ನಿಮ್ಮ ವಿರುದ್ಧ ವರ್ತಿಸಿ ತೀರಿಸಿಕೊಳ್ಳುವರು. ಜೂನದಿಂದ ಪುತ್ರ ಪುತ್ರಿಯರು ತಮ್ಮ ತಮ್ಮ ಮಟ್ಟಿಗೆ ನಿಮ್ಮನ್ನು ಬಹಳ ಪೀಡಿಸಿಬಿಡುವರು. ಪುತ್ರನು ವಿವಾಹಿತನಿದ್ದರೆ ಹೆಂಡತಿಯ ಮಾತುಕೇಳಿ ಬೇರೆಯಾಗುವ ಮಾತು ಸುರು ಮಾಡುವನು. ಒಂದು ವೇಳೆ ಬೇರೆ ಹೋಗಿಯೇ ಬಿಡುವನು. ಕನ್ಯಾ ಅವಿವಾಹಿತ

ಇಷ್ಟರೆ ತಾನು ವರಿಸಬಯಸಿದವರನೊಡನೆಯೆ ವಿವಾಹಮಾಡಿಕೊಳ್ಳುವ ಆಗ್ರಹಹಿಡಿಯುವಳು ಮತ್ತು ಅದು ಬಹುಶಃ ನಿಮ್ಮ ಮನಸ್ಸಿಗೆ ಬರಲಿಕ್ಕಿಲ್ಲ. ಹೆಂಡತಿಯ ಅಭಿಪ್ರಾಯಮಗಳ ಅಭಿಪ್ರಾಯಕ್ಕೆ ಸರಿಹೋಗುವದರಿಂದ ಇಬ್ಬರೂ ಬಹಳ ಗದ್ದಲ ಎಬ್ಬಿಸುವರು. ಕಲಹಪ್ರಿಯ ಮತ್ತು ನಾಸ್ತಿಕರಾದ ಕೆಲ ಅತಿಥಿಗಳು ಇದೇ ಕಾಲಕ್ಕೆ ಬೇರೆ ಬೇರೆ ಕಾರಣಗಳ ಸಲುವಾಗಿ ನಿಮ್ಮಲ್ಲಿಗೆಬಂದು ಬಿಡಾರಬಿಡುವರು. ಒಟ್ಟಾರೆ ಪ್ರಾಪಂಚಿಕ ಸುಖವು ಓಕರಿಕೆ ಬರುವಂತೆ ಈ ವರ್ಷ ಸಂಗತಿಗಳು ಸಂಭವಿಸುವವು. ನಿಮ್ಮ ಇಲ್ಲವೆ ನಿಮ್ಮ ಮಕ್ಕಳ ವಿವಾಹವಾಗುವದಿದ್ದರೆ ಮಾರ್ಚದೊಳಗಾಗಿ ಅದನ್ನು ತೀರಿಸಿಬಿಡುವದು ಬಹಳ ಮಟ್ಟಿಗೆ ಹಿತಕಾರಕ. ಅನಂತರವಾದರೂ ಕಾರ್ಯವು ನಿರ್ವಿಘ್ನವಾಗಿ ಸಾಗುವದು. ಆದರೆ ವೆಚ್ಚ, ಮತಭೇದ ಪ್ರಿಯ ಮತ್ತು ಸಹಾಯಕ ಜನರ ಅಭಾವ, ಅನಾಹುತ, ಅಡಚಣಿ ಮತ್ತು ಅನೇಕ ಪ್ರಕಾರದ ಅನನುಕೂಲತೆಯಿಂದ ಅದರಲ್ಲಿದ್ದ ಆನಂದ ಪೂರ್ಣವಾಗಿ ಇಲ್ಲದಂತಾಗುವದು. ನಿಮ್ಮ ಪ್ರಕೃತಿಗೆ ಫೆಬ್ರುವರಿ ೩ ರಿಂದ ಮಾರ್ಚ ೧೨ ಮೇ ೩೦ ರಿಂದ ಜುಲೈ ೧೨ ಮತ್ತು ಹೆಂಡತಿಯದು ಮಾರ್ಚ ೧೩ ರಿಂದ ಎಪ್ರಿಲ ೨೦ ಮತ್ತು ಅಕ್ಟೋಬರ ೧೭ ರಿಂದ ಮುಂದೆ ಈ ಅವಧಿಅನುಕೂಲವಿಲ್ಲ. ಮಾರ್ಚದಿಂದ ಮುಂದೆ ಯಾರೊಡನೆಯೂ ಎಷ್ಟೊಂದು ಒಪ್ಪಿಸಿ ಮಾತಾಡಿದರೂ ಅವರು ಅರ್ಥಕ್ಕೆ ಅನರ್ಥ ಮಾಡುವರು.

ಈ ರಾಶಿಯ ಹೆಣ್ಣುಮಕ್ಕಳಿಗೆ ಮಾರ್ಚದಿಂದ ಪತಿಸುಖ ಚೆನ್ನಾಗಿ ದೊರೆಯಲಾರದು. ಅವರ ಮರ್ಜಿ ಮತ್ತು ಲಹರಿಯಂತೆ ನಡೆದುಕೊಂಡು ಸಾಕುಬೇಕಾಗಿ ಹೋಗುವದು. ಎಷ್ಟೋಸ್ತ್ರೀಯರ ಪತಿರಾಜರು ಸುಳ್ಳು ಸುಳ್ಳೆ ಬಡಿದಾಡುವರು ಮತ್ತು ಅನೇಕರ ಪತಿರಾಜ ವಿಪರೀತ ಚಟಕ್ಕೆ ಬಿದ್ದಂತೆ ಸಂಶಯ ಬರಹತ್ತುವದು. ಜೂನದಿಂದಂತೂ ಬಗೆಬಗೆಯ ಚಿಂತೆ ಹತ್ತುವದು. ಮನೆಯಲ್ಲಿ ಬಹುತರ ಜನರು ಕೊಂಕಾಗುವರು. ಗರ್ಭಿಣಿಯಿದ್ದ ಸ್ತ್ರೀಯರು ಮಾರ್ಚದೊಳಗಾಗಿ ಸುಲಭವಾಗಿ ಪ್ರಸೂತ ಆಗುವರು. ಅನಂತರ ಆಗುವ ಪ್ರಸೂತಿಯೂ ಅನುಕೂಲವೆನಿಸುವದು. ಆದರೆ ಮುಂದಿನ ಬಾಣಂತಿತನವು ಮಾತ್ರ ಪ್ರಕೃತಿಗೆ ಅಷ್ಟೊಂದು ಸರಿಹೋಗುವದಿಲ್ಲ. ಆದರೆ ಕನ್ಯಾ ಹುಟ್ಟಿದರೆ ಎಷ್ಟು ತೊಂದರೆಯೋ ಅಷ್ಟು ಗಂಡುಮಗುಹುಟ್ಟಿದರೆ ಆಗಲಾರದು. ಆದರೆ ಮಾರ್ಚದಿಂದ ಕನ್ಯಾ ಹುಟ್ಟುವ ಸಂಭವವೇ ಹೆಚ್ಚು. ಜೂನದಿಂದ ಮುಂದೆ ಹಡೆಯುವ ಹೆಣ್ಣುಮಗಳ ಪ್ರಸೂತಿಯನ್ನು ನಿಷ್ಣಾತ ಡಾಕ್ಟರರ ಸಲಹೆಯಿಂದಲೆ ಮನೆಯಲ್ಲಿ ಇಲ್ಲವೆ ಪ್ರಸೂತಿಗೃಹದಲ್ಲಿ ಮಾಡುವದನ್ನು ನಿರ್ಧರಿಸಬೇಕು. ಏಕಂದರೆ ಅದು ಅಷ್ಟೊಂದು ಸುಲಭವಾಗಿ ನಡೆಯಲಿಕ್ಕಿಲ್ಲ.

ಧಂದೆ ಕೂಲಿಕಾರರಿಗೆ ಈ ವರ್ಷ ಬಹಳ ಅನುಕೂಲವಿರುವದು. ಸಟ್ಟಾ ಕುದುರೆಜೂಜು ಲಾಟ್ರಿ ಮುಂತಾದ ಗುಪ್ತ ಭಾಗ್ಯಗಳನ್ನು ಹುಡುಕುವವರಿಗೆ ಇದು ಬಹಳ ಅನುಕೂಲ. ಅವರ ಅಂಕಿ, ಕುದುರೆ, ನಂಬರು ಮುಂತಾದ್ದೆಲ್ಲ ಭವಿಷ್ಯವಾದಿಗಳ ಅಂದಾಜಿಗೆ ಪೂರ್ಣವಾಗಿ ಸರಿಹೋಗುವವು. ಮಾರ್ಚದಿಂದ ಇಂಥ ವಿಷಯದಲ್ಲಿ ಬಹಳ ಲಾಭವಾಗುವದು. ನೌಕರ ವರ್ಗದವರಿಗೆ ಮತ್ತು ವ್ಯಾಪಾರಿಗಳಿಗೆ ಮಾರ್ಚದಿಂದ ಕೆಲಸದ ತೊಂದರೆಬಹಳೆನಿಸುವದು. ಆದರೆ ಲಾಭವೂ ಅದಕ್ಕೆ ಸರಿಯಾಗಿ ಸಿಕ್ಕುವದು. ಪಾರಿತೋಷಕಸಿಕ್ಕುವ ಶಾಖೆಗಳಿದ್ದರೆ ಈ ಅವಧಿಯಲ್ಲಿ ಅದು ಬಹಳ ಸಿಕ್ಕುವದು. ಸಾಲ ಇದ್ದರೆ ಬಹುಶಃ ಅದು ಮುಟ್ಟುವದು. ಆದರೆ ಪ್ರತಿಷ್ಠೆ, ಲೌಕಿಕ, ಅಧಿಕಾರ, ವರ್ಚಸ್ಸು ಇವು ಹಿಂದಿನ ವರ್ಷಕ್ಕಿಂತ ಈ ವರ್ಷ ಹೆಚ್ಚು. ಈ ವಿಷಯದಲ್ಲಿ ನವಂಬರ ೧೮ ರಿಂದ ಡಿಸೆಂಬರ ೨೬, ಎಪ್ರಿಲ ೨೧ ರಿಂದ ಮೇ ೩೦ ಅಗಸ್ಟ ೨೮ ರಿಂದ ಅಕ್ಟೋಬರ ೧೭ ಈ ಅವಧಿಯು ವಿಶೇಷ ಅನುಕೂಲದ್ದಾಗಿ ಪರಿಣಮಿಸುವದು. ಜೂನದಿಂದ ಮಾತ್ರ ಮಿತಿಮೀರಿ ವೆಚ್ಚವಾಗಹತ್ತುವದು. ಅದರಿಂದ ಆಗುವ ಲಾಭ ನಿಸ್ತೇಜವೆನಿಸುವದು. ಆದರೂ ಸಾಲ ಮುಂತಾದ್ದೇನೂ ಆಗುವದಿಲ್ಲ. ಸ್ಥಾವರ ಆಸ್ತಿಯಲ್ಲಿ ಉತ್ಪನ್ನ ಹೆಚ್ಚುವ ಸುಧಾರಣೆಯು ಬಹಳ ಮಟ್ಟಿಗೆ ಮಾಡಲ್ಪಡುವದು- ಕೆಲ ಉತ್ತಮಪದಾರ್ಥಗಳ ಸಂಗ್ರಹವಾಗುವದು. ಒಕ್ಕಲಿಗರಿಗೆ ಬೆಳೆ ಮತ್ತು ದುಡ್ಡು ಧಾರಾಳದೊರೆಯುವದು ವಾಹನಸುಖ ಸಿಕ್ಕುವದು. ನೋಕರ ಜನರು ಮಾತ್ರ ಜೂನದಿಂದ ಮನೆಮುರುಕ ಧೋರಣ ವಹಿಸುವರು. ಪರಸ್ತ್ರೀ ಬಗ್ಗೆ ಪಾಪ ವಿಚಾರ ಬಹಳ ಹೆಚ್ಚು, ಸಭೆ, ಆಯ್ಕೆಮಂಡಳ ಮೊದಲಾದ ಸ್ಥಳಗಳಲ್ಲಿ ಮಾತ್ರ ಮಾನ ಇಲ್ಲವೆ ಅಂಥ ಸ್ಥಾನ ಸಿಕ್ಕುವದು. ಮಿತ್ರ ಸುಖ ಮಾರ್ಚದ ವರೆಗೆ ಬಹಳ ಉತ್ತಮ. ಆದರೆ ಮುಂದೆ ಒಬ್ಬರೊಬ್ಬರಲ್ಲಿ ತಪ್ಪು ತಿಳವಳಿಕೆಯಾಗುವ ಸಂಭವ ಇದೆ. ಜೂನದಿಂದ ಒಬ್ಬ ಶತ್ರುವೂ ಮೋರೆ ಮೇಲಕ್ಕೆ ಮಾಡಲಾರ. ಆದರೆ ಮುಂದೆ ಮಾತ್ರ ಅವರು ನಿಮ್ಮನ್ನು ಬಹಳ ಪೀಡಿಸಿಬಿಡುವರು ಆದರೂ. ವಾದವಿವಾದ ಮತ್ತು ಸ್ಪರ್ಧೆಯ ಕೆಲಸಗಳು ಬಹುಶಃ ಹತ್ತಾಹೆಯಷ್ಟು ಯಶಸ್ವಿಯಾಗುವವು. ದೂರಪ್ರವಾಸ ಬಹಳ ಆಗುವದು. ಆದರೆ ಅವುಗಳಲ್ಲಿ ಕೆಲಸಲ ಆನಂದ ಇಮ್ಮಡಿ. ಆದರೆ ಕೆಲ ಸಲ ಚಿಂತೆ ಬಹಳುಂಟಾಗುವದು. ಪತ್ರವ್ಯವಹಾರ ಮತ್ತು ಲೇಖನ ಕೆಲಸ ಒಟ್ಟಾರೆ ಇಮ್ಮಡಿ ವೆಚ್ಚದ್ದಾದರೂ ಕೊನೆಗೆ ಇಷ್ಟವೇ ಆಗುವದು. ಪ್ರತ್ಯಕ್ಷ ಭೆಟ್ಟಿಯ ಬಹುತರ ಎಲ್ಲ ಕೆಲಸ ಅನುಕೂಲವಾಗಿ ಸಂಭವಿಸುವವು. ಆದರೆ ನವಂಬರ ೨೭ ರಿಂದ ಫೆಬ್ರುವರಿ ೨, ಫೆಬ್ರುವರಿ ೧೪ ರಿಂದ ಜುಲೈ ೨೧, ಅಗಸ್ಟ ೧೨ ರಿಂದ ೨೮ ಮತ್ತು ಅಕ್ಟೋಬರ ೧೭ ರಿಂದ ಮುಂದೆ ಈ ಅವಧಿಯಲ್ಲಿ ಸಂಭವಿಸುವವೆಲ್ಲ ಬಹುಶಃ ವಿರುದ್ಧವಾಗಬಹುದು. ಕೇವಲ ದ್ರವ್ಯಲಾಭಕ್ಕೆ ನವಂಬರ ೨೧ ರಿಂದ ಡಿಸೆಂಬರ ೧೪, ಜಾನೇವರಿ ೮ ರಿಂದ ೩೧, ಫೆಬ್ರುವರಿ ೨೫ ರಿಂದ ಎಪ್ರೀಲ ೧೩, ಮೇ ೮ ರಿಂದ ೩೧, ಜುಲೈ ತಾ. ೨೧ ರಿಂದ ಅಗಸ್ಟ ೧೪, ಸಪ್ಟಂಬರ ೮ ರಿಂದ ಅಕ್ಟೋಬರ ೪ ಈ ಅವಧಿಯು ಬಹಳ ಅನುಕೂಲವಾಗಿ ಪರಿಣಮಿಸುವದು. ಒಟ್ಟಾರೆ ವ್ಯವಸಾಯ ಮತ್ತು ಲಾಭಕ್ಕೆ ಈ ವರ್ಷ ಬಹಳ ಅನುಕೂಲವಿದ್ದರೂ ಪ್ರಾಪಂಚಿಕ ತೊಂದರೆಯಿಂದ ಉದಾಸೀನರಾಗಬೇಕಾಗುವದು ಎಂದು ತಿಳಿಯತಕ್ಕದ್ದು. ಆದರೆ ವಿದ್ಯಾರ್ಥಿಗಳಿಗೆ ಬಹಳ ಯಶಸ್ಸು. ಮಾರ್ಚದಲ್ಲಿ ಆಗುವ ಪರೀಕ್ಷೆಯಲ್ಲಿ ನೂರಕ್ಕೆ ೮೦ ರಷ್ಟು ಆದರೆ ಮುಂದೆ ಜೂನದ ವರೆಗೆ ನೂರಕ್ಕೆ ೫೦ ರಷ್ಟು ಪಾಸಿನ ಪ್ರಮಾಣ ಬೀಳುವದು. ಜೂನದಿಂದ ಮುಂದೆ ಯಾವ ಪರೀಕ್ಷೆ ಆಗುವದದೆಯೋ ಅದರಲ್ಲಿ ಮಾತ್ರ ನೂರಕ್ಕೆ ೨೦—೨೫ ರಷ್ಟು ಮಾತ್ರ ಯಶಸ್ವಿಯಾಗುವ ಸಂಭವವಿದೆ. ಯಾಂತ್ರಿಕ, ಎಂಜಿನಿಯರಿಂಗ, ಸರ್ವೆ, ರೆವಿನ್ಯೂ ಹಾಯರ, ವೈದ್ಯಕೀ, ಸಂಸ್ಕೃತ, ಗಣಿತ, ವೈದಿಕ ಮತ್ತು ಕಾವ್ಯ ಅಭ್ಯಾಸ ಮಾಡುವ ವಿದ್ಯಾರ್ಥಿಗಳು ಸಹಸಾ ಈ ವರ್ಷ ನಪಾಸಾಗಲಾರರು.

೧೨. ಮೀನ

ಈ ರಾಶಿಯು ಜನರಿಗೆ ಆರೋಗ್ಯ ದೃಷ್ಟಿಯಿಂದ ಬಹಳ ಅನುಕೂಲವಿರುವದು. ಅದರಂತೆ ಹೆಂಡತಿಯು ಪ್ರಕೃತಿಯಾದರೂ ಅನುಕೂಲವಿದ್ದು ಉಭಯತರಲ್ಲಿ ಉತ್ಕೃಷ್ಟ ಪ್ರೇಮ ಮತ್ತು ಐಕಮತ್ಯವುಳಿಯುವದು. ಮಕ್ಕಳ ಪ್ರಕೃತಿಯಲ್ಲಿಯೂ ಅಷ್ಟೇನು ಹೆಚ್ಚು ಕಡಮೆ ಇಲ್ಲ. ಆದರೂ ನಿಮ್ಮ ಪ್ರಕೃತಿ ಫೆಬ್ರುಅರಿ ೩ ರಿಂದ ಮಾರ್ಚ ೧೨ ಮತ್ತು ಅಗಸ್ಟ ೧೬ ರಿಂದ ಸಪ್ಟಂಬರ ೧೬ ರ ವರೆಗೆ ಪಿತ್ತ ಇಲ್ಲವೆ ವಾತದಿಂದ ಸ್ವಲ್ಪ ತೊಂದರೆಯಾಗುವದು, ಹೆಂಡತಿಗೆ ಜೂನದಿಂದ ಟೊಂಕಸೂಲಿ ವಿಪರೀತ ಎನಿಸಿ ಜೂನ ೨೩ ರಿಂದ ಅಗಸ್ಟ ೮ ರ ವರೆಗೆ ಉಳಿದ ಕಡೆಗೂ ಸ್ವಲ್ಪ ಕಾಯಿಲೆಯಾಗುವ ಸಂಭವ. ಅದರಂತೆ ಮಕ್ಕಳ ಮರಿಗಳಿಗೆ ಎಪ್ರಿಲ ೨೧ ರಿಂದ ಮೇ ೩೧ ರ ವರೆಗೆ ಕಾಯಿಲೆ ಇಲ್ಲವೆ ಅಪಘಾತದಿಂದ ತೊಂದರೆಯಾಗುವದು. ಪತಿಪತ್ನಿಯರಲ್ಲಿ ಕೂಡಿ ನಡೆದರೂ ಮನೆಯಲ್ಲಿಯ ಇತರರೊಡನೆ ಮಾತ್ರ ಸರಿಹೋಗುವದಿಲ್ಲ. ತಾ. ೬ ಜೂನದ ವರೆಗೆ ಮೇಲಿಂದ ಮೇಲೆ ಕಲಹವಾಗುವದು ಮತ್ತು ಅನೇಕ ಜನರು ಏಕತ್ರ ಕುಟುಂಬದಿಂದ ವಿಭಕ್ತರಾಗುವರು. ಮೇಲಿನ ತಾರೀಕಿನ ವರೆಗೆ ತಿನ್ನುಣ್ಣುವರಲ್ಲಿ ಕುಪಥ್ಯ ತಿನ್ನಬೇಕಾಗಿ ಎನಿಸುವದು. ಮಾತಾಡುವದು ಬಹಳ ಅಭದ್ರವೆನಿಸುವದು. ಜೂನದಿಂದ ಕಲಹ ನಿಲ್ಲುವದು. ಆದರೆ ಸ್ವಭಾವ ಬಹಳ ಸಂಶಯಿತ ಉಳಿದು ನಿಮಗೇ ನಿಮ್ಮಲ್ಲಿಯೆ ವಿಶ್ವಾಸವೆನಿಸುವದಿಲ್ಲ. ಜೂನದ ವರೆಗೆ ಕಾಲ್ಪನಿಕ ಮಾತುಗಳ ಮೇಲೆ ವಿಶ್ವಾಸವಿಟ್ಟು ಮೋಸಹೋಗಬೇಕಾಗುವದು. ಆದರೂ ಒಟ್ಟಾರೆ ಪ್ರಾಪಂಚಿಕ ಉನ್ನತಿಯುದೇ ಈ ವರ್ಷ ಇದ್ದು ಮಾರ್ಚದಿಂದ ಮಕ್ಕಳ ಉನ್ನತಿ ತೀವ್ರವಾಗಿ ಆಗುವದು. ಆಪ್ತರಲ್ಲಿ ನೆರೆಯುವರಲ್ಲಿ ಮತ್ತು ಊರಲ್ಲಿ ನಿಮ್ಮ ಬಗ್ಗೆ ಬಹಳ ಆದರಹೆಚ್ಚುವದು. ಬಂಧುವರ್ಗದವರ, ನಿಮ್ಮ, ಮಿತ್ರರ ಇಲ್ಲವೆ ಮಕ್ಕಳ ವಿವಾಹ ಆಗುವದಿದ್ದರೆ ಮಾರ್ಚದಿಂನ ಮುಂದೆ ಸುಲಭವಾಗಿ ಆಗುವದು. ಸಹಸಾ ಯಾವ ಬಗೆಯ ಅಡಚಣೆಯೂ ಅಡ್ಡಬರಲಾರದು. ಪ್ರಾಪಂಚಿಕ ಸುಖದ ವಿಷಯದಲ್ಲಿ ನವಂಬರ ೨೫ ರಿಂದ ಡಿಸೆಂಬರ ೧೪, ಜಾನೇವಾರಿ ೨ ರಿಂದ ಮಾರ್ಚ ೮, ಮಾರ್ಚ ೨೯ ರಿಂದ ಎಪ್ರಿಲ ೧೧, ಎಪ್ರಿಲ ೨೯ ರಿಂದ ಜುಲೈ ೩ ಮತ್ತು ಅಗಸ್ಟ ೨೪ ರಿಂದ ಮುಂದಿನ ಅವಧಿಯು ಬಹಳ ಅನುಕೂಲ ಹೋಗುವದು.

ಈ ರಾಶಿಯು ಹೆಣ್ಣುಮಕ್ಕಳಿಗೆ ಪತಿಸುಖ ಅನುಕೂಲ ಆದರೆ ಆ ಬಗ್ಗೆ ಇತರರು ಪ್ರತ್ಯಕ್ಷ ಮತ್ತು ಗುಪ್ತರೀತಿಯಿಂದ ಬಹಳ ದ್ವೇಷ ಮಾಡುವರು. ನೆರೆಯುವರು ಮೇಲಿಂದ ಮೇಲೆ ತೊಂದರೆ ಕೊಡುವರು ಗರ್ಭಿಣಿಯಿದ್ದವರು ಮಾರ್ಚದಲ್ಲಿ ಹಡೆದರೆ ಪ್ರಸೂತಿ ನಂತರದ ಹತ್ತು ದಿವಸ ಅವರ ಇಲ್ಲವೆ ಮಗುಗಳ ಪ್ರಕೃತಿ ಬಹಳ ಜಡವಾಗುವದು. ಮಾರ್ಚದಿಂದ ಜೂನ ವರೆಗೆ ಹಡೆದವರ ಬಾಣಂತಿತನದ ಶುಶ್ರೂಷೆ ಅಷ್ಟಕ್ಕಷ್ಟೇ ಪರಿಣಮಿಸುವದು ಜೂನದ ನಂತರ ಹಡೆಯುವವರಿಗೆ ಮಾತ್ರ ಎಲ್ಲ ಬಗೆಯ ಸುಖ. ಬಹುಶಃ ಗಂಡು ಮಗು ಹುಟ್ಟಿದರೆ ಒಳ್ಳೇ ಒಯ್ಯಾರದಿಂದ ವರ್ತಿಸುವರು.

ಉದ್ಯೋಗ ಧಂದೆಗೆ ಈ ವರ್ಷ ಬಹಳ ಉತ್ತಮವಿದೆ. ಬುದ್ಧಿ ಜೀವಿ ಧಂದೆಯುವರಿಗೆ ಬಹಳ ಉತ್ಕರ್ಷವಾಗುವದು, ತಾ. ೨೬ ನವಂಬರದಿಂದ ಮಾರ್ಚ ೯, ಎಪ್ರಿಲ ೨೯ ರಿಂದ ಜುಲೈ ೩, ೨೧ ಜುಲೈಯಿಂದ ಅಗಸ್ಟ ೬ ಮತ್ತು ೨೫ ಅಗಸ್ಟದಿಂದ ವರ್ಷ ಮುಗಿಯುವದರೊಳಗಿನ ಅವಧಿಯಲ್ಲಿ ಅನೇಕ ವಿದ್ವಾನ್ ಮತ್ತು ಶ್ರೀಮಂತರಿಂದ ಬಗೆ ಬಗೆಯ ಸಹಾಯ ಮತ್ತು ಉತ್ತೇಜನ ಸಿಕ್ಕುವದು. ಸಭೆಯಲ್ಲಿ ಪ್ರತಿಷ್ಠೆ ಮತ್ತು ಯಾವದೇ ಬಗೆಯ ತಾತ್ವಿಕ ಸಂಸ್ಥೆಯ ಆಯ್ಕೆಯಲ್ಲಿ ಉಮೇದವಾರ ಆಗಿ ನಿಂತರೆ ಬಹುಶಃ ಆರಿಸಿಬರಬಹುದು. ಪ್ರೀತಿಯ ವಿಷಯದ ಮೇಲೆ ಗ್ರಂಥ ಬರೆಯಲ್ಪಟ್ಟು ಅದರ ಪ್ರಕಾಶನವು ಅಲ್ಪಾಯಾಸದಿಂದ ಆಗಿ ಅದು ಸರ್ವಮಾನ್ಯವಾಗುವದು. ವಕೀಲರು, ಬ್ಯಾರಿಸ್ಟರರು, ವೈದ್ಯರು ಡಾಕ್ಟರರು ವೃತ್ತಪತ್ರದ ಸಂಪಾದಕರು ಮತ್ತು ಶಿಕ್ಷಕರು, ಅಧ್ಯಾಪಕರು ಈ ಬಗೆಯ ಧಂದೆ ಮಾಡುವವರಿಗೆ ಈ ವರ್ಷ ಅತ್ಯಂತ ಏರಿಕೆಯದಾಗಿ ಪರಿಣಮಿಸುವದು. ಠೋಕ ವ್ಯಾಪಾರಿಗಳಿಗಿಂತ ಕಿರಕಳ ಅಂಗಡಿಯುವರಿಗೆ ಹೆಚ್ಚು ಪ್ರಗತಿ ಮತ್ತು ಲಾಭದ್ದಾಗಿ ಪರಿಣಮಿಸುವದು. ಠೋಕ ವ್ಯಾಪಾರಿಗಳಿಗೆ ಲಾಭ ಕಡಿಮೆಯಾಗಲಾರದು, ನಿಜ ಆದರೆ ರಾಜ ಮತ್ತು ಲೋಕಮತದಲ್ಲಿ ಅವರ ಬಗ್ಗೆ ವಿಪರೀತ ಅಪ್ರೀತಿಯಾಗುವದು. ಎಷ್ಟೊ ವ್ಯಾಪಾರಿಗಳು ಮೊದಲು ಹೊಟ್ಟೆತುಂಬಿಕೊಳ್ಳುವದಕ್ಕಾಗಿ ತೀರಕೆಟ್ಟ ಮಾರ್ಗಗಳನ್ನು ಅವಲಂಬಿಸುವರು. ಮತ್ತು ಅನಂತರ ಕೃತ್ರಿಮ ದಿವಾಳಿ ತೆಗೆದು ಬಗಲೆತ್ತುವರು. ನೋಕರರಿಗೆ ಈ ವರ್ಷ ಬಹಳ ಉಮೇದಿಯದು. ಮೇಲಿನ ಗ್ರೇಡ ದೊರೆಯುವದು. ಅಧಿಕಾರ ಮತ್ತು ಸತ್ತಾ ಬೆಳೆಯುವದು. ಸುಸ್ಥಳಕ್ಕೆ ಬದಲಾಗುವದು. ವರಿಷ್ಠರ ಮರ್ಜಿ ಸುಪ್ರಸನ್ನವಿರುವದು. ಮತ್ತು ಜನತೆ ಹಾಗು ಕೈಕೆಳಗಿನ ಜನರಿಂದ ಸತ್ತೆಯ ಸದುಪಯೋಗ ಮಾಡಲ್ಪಟ್ಟ ಬಗ್ಗೆ ಪ್ರಶಂಸೆ ಮೊದಲಾದ ಒಳ್ಳೇ ಅನೇಕ ಸಂಗತಿಗಳು ಸಂಭವಿಸುವವು. ಮತ್ತು ಅಬಕಾರಿ, ಜಕಾತಿ, ನೊಂದಣಿ ತುರಂಗ ಈ ಶಾಖೆಗಳಲ್ಲಿಯ ನೋಕರರಿಗೆ ಮತ್ತು ವಿಶೇಷವಾಗಿ ಅಧಿಕಾರಿಗಳಿಗೆ ಲಂಚತಿಂದ ಬಗ್ಗೆ ನಿಜ ಮತ್ತು ಸುಳ್ಳು ಆರೋಪ ಬರುವ ಅಂಜಿಕೆ ಇದೆ. ಆದರೂ ಅವರು ನವಂಬರ ೯೫ ರ ವರೆಗೆ ಮತ್ತು ನಂತರ ಫೆಬ್ರುವರಿ ೧೩ ರಿಂದ ಮಾರ್ಚ ೧೩, ಎಪ್ರಿಲ ೧೪ ರಿಂದ ಮೇ ೧೪ ಮತ್ತು ಅಗಸ್ಟ ೧೭ ರಿಂದ ಸಪ್ಟಂಬರ ೧೬ ರ ವರೆಗಿನ ಅವಧಿಯಲ್ಲಿ ನಿಮ್ಮ ಕೈ ಮತ್ತು ನಾಲಿಗೆಯನ್ನು ಪೂರ್ಣ ಹತ್ತಿಕ್ಕಿಕೊಳ್ಳಬೇಕು. ಖಾಸಗಿ ನೌಕರರು ಕೂಡ ಈ ಅವಧಿಯಲ್ಲಿ ಬಹಳ ಜಪ್ಪಿಸಿಕೊಂಡು ಇರಬೇಕು. ಏಕೆಂದರೆ ನಿಮ್ಮ ವಿರೋಧಿಗಳು ನಿಮ್ಮ ವಿರುದ್ಧ ಒಡೆಯರ ಮುಂದೆ ವಿಪರೀತ ಚಾಡಿಹೇಳುವ ಸಂಭವವಿದೆ. ಇರಲಿ. ಕೇವಲ ದ್ರವ್ಯಲಾಭಕ್ಕೆ ಮಾರ್ಚದಿಂದ ಏರಿಕೆಯ ಸಮಯವಿದೆ. ಅದರಲ್ಲಿಯೂ ಮಾರ್ಚ ೧೪ ರಿಂದ ಎಪ್ರಿಲ ೧೪, ಮೇ ೧೫ ರಿಂದ ೧೫ ಅಗಸ್ಟ ಮತ್ತು ತಾ ೧೭ ಸಪ್ಟಂಬರ ದಿಂದ ೧೭ ಅಕ್ಟೋಬರ ಈ ಕಾಲದಲ್ಲಿ ಅಂದಾಜಿಗಿಂತ ಹೆಚ್ಚು ಲಾಭ. ಸ್ವತಃದ ಇಲ್ಲವೆ ಪರಕೀಯ ವಾಹನ ಸುಖ ತುಂಬ ಸಿಕ್ಕುವದು. ನೌಕರರು ವಿಶ್ವಾಸದಿಂದ ಮತ್ತು ಒಳ್ಳೆ ಕಾರ್ಯತತ್ಪರತೆಯಿಂದ ವರ್ತಿಸುವರು. ಮಿತ್ರಸುಖ ಮಾತ್ರ ಅನುಕೂಲ ಸಿಕ್ಕಲಾರದು. ಅದರಲ್ಲಿ ಕೆಲವರು ನಿಮ್ಮ ಸವಲತ್ತಿನ ದುರುಪಯೋಗ ಮಾಡಿಕೊಳ್ಳುವರು. ಕೆಲವರು ನಿಮ್ಮ ಉತ್ಕರ್ಷದ ಬಗ್ಗೆ ಒಳಗೊಳಗೇ ಬಹಳ ದ್ವೇಷ ಮಾಡುವರು. ಶತ್ರುಗಳನ್ನು ಸರ್ವಸ್ವೀ ಪರಾಜಯ ಮಾಡುವ ವರ್ಷ ಇದಾಗಿದ್ದು ದಾವೆ, ಖಟ್ಲೆ ಮತ್ತು ಸ್ಪರ್ಧೆಯ ಕೆಲಸಗಳಲ್ಲಿ ಸುಮಾರು ಹದಿನಾಲ್ಕುಆಣೆ ಪೂರ್ಣ ಯಶ

ದೊರೆಯುವದು. ಬಂಧುವರ್ಗದವರ ಉತ್ಕರ್ಷವಾಗುವದು. ಆದರೆ ಮಿತ್ರರಂತೆ ಅವರೂ ನಿಮ್ಮ ದ್ವೇಷಮಾಡುವರು. ಪ್ರಿಯ ಮತ್ತು ನಿಕಟ ಆಪ್ತರಲ್ಲಿ ನಿಮ್ಮ ಮುಂದಾಳತನದ ಬಗ್ಗೆ ಇಲ್ಲವೆ ಹೊಣೆಗಾರಿಕೆಯ ಮೇಲೆ ಮಂಗಳ ಕಾರ್ಯಗಳು ಇಲ್ಲವೆ ಹಾರ್ದಿಕ ಆನಂದದ ಕೆಲಸಗಳು ಸುಭವಿಸುವವು. ಸ್ಥಾವರ ಜಂಗಮ ಸಂಗ್ರಹ ಬಹಳವಾಗುವದು. ಜೂನ ದಿಂದ ಅವು ಅಲ್ಪಾಯಾಸದಿಂದ ಮತ್ತು ಅಲ್ಪ ಬೆಲೆಯಲ್ಲಿ ಆಗುವ ಯೋಗವಿದೆ. ಸ್ವತಃ ನಿಮ್ಮ ಮನೆಯಲ್ಲಿ ಇಲ್ಲವೆ ಚಾಳದಲ್ಲಿ ಇರುವದಕ್ಕೆ ಮನಸ್ಸು ಬೇಸರಗೊಂಡು ಎರಡನೆಯ ಸ್ಥಳದಲ್ಲಿ ಇದ್ದರೆ ಅವರು ಬಹಳ ಆನಂದದಲ್ಲಿ ಉಳಿಯುವರು. ಜೂನ ವರೆಗೆ ಚಮತ್ಕಾರಿಕ ಸ್ವಪ್ನ ಬಹಳ ಬೀಳುವವು. ಪ್ರವಾಸ ಎರಡು ಮೂರುಸಲ ಬಹಳ ದೂರದ್ದು ಆಗಿಅದರಲ್ಲಿಯ ಹೇತು ಮನಸ್ಸಿನಲ್ಲಿ ಎಣಿಸಿದಷ್ಟು ಸಾಧ್ಯವಾಗುವದು ಆದರೆ ಜೂನದೊಳಗಾಗಿ ಪ್ರವಾಸದ ಗದ್ದಲದಲ್ಲಿ ಕೆಲ ಪದಾರ್ಥ ಉರುಳುವ ಇಲ್ಲವೆ ಕಳೆದುಹೋಗುವ ಭೀತಿ ಬಹಳ ಇದೆ. ಪತ್ರವ್ಯವಹಾರ ಮತ್ತು ಲೇಖೀ ಕೆಲಸ ತಾ ೫ ರಿಂದ ೨೫, ನವಂಬರ ತಾ ೧೫ ರಿಂದ ೩೦ ಡಿಸೆಂಬರ, ಎಪ್ರಿಲ ೨೯ ರಿಂದ ಜುಲೈ ೨, ಮತ್ತು ಅಗಸ್ಟ ೨೫ ರಿಂದ ವರ್ಷ ಮುಗಿವ ವರೆಗೆ ಬಹಳ ಅನುಕೂಲ ಆದರೆ ಪ್ರತ್ಯಕ್ಷ ಭೆಟ್ಟಿಯ ಕೆಲಸ ಯಾವಾಗಲೂ ಅನುಕೂಲ. ಆದರೆ ಅದರಲ್ಲಿಯೂ ಮಾರ್ಚದ ವರೆಗಿನ ಭೆಟ್ಟಿ ಬಹಳ ಅನುಕೂಲ. ಒಟ್ಟಾರೆ ಪ್ರಾಪಂಚಿಕ ಸುಖಕ್ಕೆ ಸಾಮಾನ್ಯ ಆದರೆ ಔದ್ಯೋಗಿಕ ಉತ್ಕರ್ಷಕ್ಕೆ ಅತ್ಯುತ್ತಮವಿದ್ದ ಬಗ್ಗೆ ಈ ವರ್ಷ ಬಹಳ ಪ್ರಖ್ಯಾತವಿದೆ ವಿದ್ಯಾರ್ಥಿಗಳಿಗೆ ಸ್ವಲ್ಪ ಚಮತ್ಕಾರಿಕವಾಗಿದೆ ಈ ವರ್ಷ ಅಭ್ಯಾಸಿಗಳಿಗೆ ಹತಾಶೆಯಾದರೆ ಉಂಡಾಡಿ ಜನರಿಗೆ ಹರ್ಷಗೊಳಿಸುವಂಥ ತಿರುವುಮುರುವು ಪ್ರಕಾರದ್ದಿದೆ. ಆದರೂ ಮಾರ್ಚದಿಂದ ಬಹಳ ಕೆಡಕೇನೂ ಇಲ್ಲ. ಅದರಲ್ಲಿಯೂ ಪರೀಕ್ಷೆ ನವಂಬರ ೧೭ ರ ವರೆಗೆ ಮತ್ತು ಅನಂತರ ಮಾರ್ಚ ೧೨ ರಿಂದ ಎಪ್ರಿಲ ೨೧, ಮೇ ೩೧ ರಿಂದ ಜುಲೈ ೧೨ ಅಗಸ್ಟ ೨೮ ರಿಂದ ಅಕ್ಟೋಬರ ೧೭ ಈ ಅವಧಿಯಲ್ಲಿ ಆಗುವದಿದ್ದರೆ ಅವರಿಗೆ ಬಹುಶಃ ಯಶಸ್ಸು ಸಿಕ್ಕದೆ ಇರಲಾರದು. ಬಣ್ಣದ ಕೆಲಸ, ಹಸ್ತ ಕೌಶಲ್ಯದ ಕಲೆ, ವಾದನಕಲೆ, ಡ್ರಾಯಿಂಗ, ಪೆಂಟಿಂಗ ಫೋಟೊಗ್ರಾಫಿ, ಅಂಚೆತಂತಿ, ವೈಮಾನಿಕ ಮತ್ತು ನೌಕಾ ಹಾಗು ವೈದ್ಯಕೀಯ ಶಾಖೆಗಳಲ್ಲಿರುವ ವಿದ್ಯಾರ್ಥಿಗಳಿಗೆ ಮಾರ್ಚದಿಂದ ಮುಂದೆ ಬಹುಶಃ ಯಶಸ್ಸು ಸಿಕ್ಕುವದು.

—ಶುಭಂ ಭವತು—

<u>ಸೂಚನೆ</u> — ಕೇವಲ ಪ್ರತಿಯೊಂದು ಜನ್ಮ ರಾಶಿಯ ಮೇಲೆ ಸಾಕಲ್ಯವಾಗಿ ಗ್ರಹ ವಿಚಾರ ಮಾಡಿ ಒಳಿತು ಕೆಡಕು ಫಲಗಳ ಪರಿಣಾಮ ಎಷ್ಟರ ಮಟ್ಟಿಗೆ ಸಂಭವಿಸಬಹುದೆಂಬದರ ಸ್ಥೂಲದಿಗ್ದರ್ಶನವನ್ನು ಮಾಡಲಾಗಿದೆ ಇಷ್ಟೇ. ವಾಸ್ತವಿಕವಾಗಿಜನ್ಮಕುಂಡಲಿಯ ಮೇಲೆಯೇ ವೈಯಕ್ತಿಕ ಭವಿಷ್ಯವು, ತಂತೋತಂತವಾಗಿ ಕೂಡಿಬರುವದೆಂಬುದು ಬಹುಶಃ ಅನೇಕರಿಗೆ ಗೊತ್ತಿರಲು ಸಾಕು.

ಆದರೆ ಈ ವರ್ಷಭವಿಷ್ಯದ ಮೇಲಿಂದ ಆಯಾ ರಾಶಿಯವರನ್ನು ಈ ವರ್ಷವು ಯಾವ ಸುಖದುಃಖ ಮಾರ್ಗದಿಂದ ಒಯ್ಯುವದಿದೆ ಎಂಬುದರ ತಿಳಿವಳಿಕೆ ಮಾಡಿಕೊಳ್ಳಲಿಕ್ಕೆ ಬರುವದು, ಇಷ್ಟು ಮಾತ್ರ ನಿಜ. ಅದರಂತೆ ಜನ್ಮ ಲಗ್ನ ಮತ್ತು ಜನ್ಮರಾಶಿ ಇವೆರಡರ ಭವಿಷ್ಯ ಓದಿ ಮತ್ತು ತಾರತಮ್ಯದಿಂದ ಯಾವದು ಹೆಚ್ಚು ಸರಿಬರುವದು ಇದರ ಅನುಭವ ತೆಗೆದುಕೊಂಡು ಅದರಂತೆ ನಡೆಯತಕ್ಕದ್ದು. ಅಂದರೆ ಬರೆದದ್ದರ ಫಲ ಬಹಳ ಅಂಶದಲ್ಲಿ ಪ್ರಾಪ್ತವಾದದ್ದರ ಬಗ್ಗೆ ಅನುಭವ ಬರುವದು.

ಕನ್ನಡ ಏಕಾಂಕ ನಾಟಕ

ಲೇ: ಪ್ರೊ. ರಂ. ಶ್ರೀ. ಮುಗಳಿ,
ಎಂ. ಎ., ಬಿ. ಟಿ.

(ಕೆಲವು ಮಾದರಿಗಳು)

ಕನ್ನಡದಲ್ಲಿ ಏಕಾಂಕ ನಾಟಕವೆಂಬುದು ಕಳೆದ ಇಪ್ಪತ್ತೈದು ವರ್ಷಗಳಲ್ಲಿಯೇ ಹುಟ್ಟಿಬೆಳೆದ ಸಾಹಿತ್ಯರೂಪವಾಗಿದೆ. ಬೆಳೆದ ಎಂಬ ಮಾತು ವಿಮಾನವೇಗದ ಈ ಯುಗದಲ್ಲಿ ಅದು ಎಷ್ಟು ಬೇಗ ವಿಧ ವಿಧದ ಬೆಳೆಯನ್ನು ತಳೆದಿದೆ ಎಂಬುದಕ್ಕೆ ಸರಿಯಾದುದು. ಆದರೆ ಕಲೆಯ ದೃಷ್ಟಿಯಿಂದ ಅದಿನ್ನೂ ಬೆಳೆಯುತ್ತಿರುವ ರೂಪ ಎಂದು ಹೇಳಬೇಕು. ಹೊಸ ಸಾಹಿತ್ಯವೆಲ್ಲ ಹೀಗೆ ತಲೆಮಾಸಾರದ ತರಳನಂತೆ ನಿನ್ನೆಮೊನ್ನೆಯದೇ ಆಗಿದೆ. ಬೇರೆ ಕಡೆಗೆ ಮುಂದರಿದ ಸಾಹಿತ್ಯಕ್ಕೆ ಅದನ್ನು ಹೋಲಿಸಿ ದೊಡ್ಡ ನಿರೀಕ್ಷೆಗಳನ್ನು ಕಲ್ಪಿಸಿಕೊಂಡು ಅವಕ್ಕೆ ನಮ್ಮ ಸಾಹಿತ್ಯ ಸರಿತೂಗದೆಂದು ನಾವೂ ಕೆಲವು ಸಲ ನಿರಾಶೆಯ ನಿಟ್ಟುಸಿರು ಬಿಡುತ್ತೇವೆ. ಈ ಅತೃಪ್ತಿ ಪ್ರಗತಿಗೆ ಸಾಧಕವೇ ಆದರೂ ಇದರಲ್ಲಿ ವಿಮರ್ಶಕನ ರಸಗ್ರಹಣದೃಷ್ಟಿ ಮುಸುಕಾಗಬಾರದು. ಹೀಗಿರಬೇಕು ಎಂಬ ಎತ್ತರದಿಂದ ನೋಡುವಾಗ ಆಗಲಿ, ಹೀಗಿರಬೇಕು ಎಂಬ ಸ್ವಂತದ ಹತ್ತಿರದಿಂದ ನೋಡುವಾಗ ಆಗಲಿ, ಹೀಗಿದೆ ಎಂಬ ಕಣ್ಣು ಮುಂದಿನ ಕೃತಿಯ ಸವಿಗಾರಿಕೆಗೆ ಎರವಾಗಬಾರದು. ಏಕಾಂಕ ನಾಟಕಗಳ ವಿಮರ್ಶೆಯಲ್ಲಿ ಆಗಾಗ ಇಂಥ ಒಲವು ಕಂಡುಬಂದಿದೆ.

ಈ ವರೆಗೆ "ಸಂಭಾವನೆ" ಹಾಗೂ "ಪ್ರಬುದ್ಧ ಕರ್ನಾಟಕ"ದ ಬೆಳ್ಳಿಯ ಸಂಚಿಕೆಗಳಲ್ಲಿ ಈ ವಿಷಯವಾಗಿ ತಂತ್ರ ಹಾಗೂ ಚರಿತ್ರೆಗೆ ಸಂಬಂಧಿಸಿದ ಒಳ್ಳೆಯ ಲೇಖಗಳು ಬಂದಿವೆ. "ಛಾಯಾ"ದಂಥ ಪತ್ರಿಕೆಗಳಲ್ಲಿ ವಾರ್ಷಿಕ ಸಮೀಕ್ಷೆಗಳೂ ಆಗಿವೆ. ಈ ಲೇಖನಕ್ಕೆ ಇದ್ದ ಅವಕಾಶ ಹಾಗೂ ಲೇಖಕನಿಗೆ ಇದ್ದ ಅವಕಾಶ ಇವೆರಡೂ ಸಮಗ್ರ ವಿವೇಚನೆಗೆ ಸಾಲವು. ಅಂತೇ ಏಕಾಂಕ ನಾಟಕದಲ್ಲಿ ತಲೆಯೆತ್ತಿದ ಕೆಲವು ಮಾದರಿಗಳನ್ನು ಕುರಿತು ಮಾತ್ರ ಇಲ್ಲಿ ಬರೆಯುವ ಉದ್ದೇಶವಿದೆ.

ಆ ಮಾದರಿಗಳೆಂದರೆ ಮುಖ್ಯವಾಗಿ ಮೂರು– ಬಾನುಲಿನಾಟಕ, ಅಶುನಾಟಕ, ಗೀತನಾಟಕ; ಇವು ಕ್ರಮದಿಂದ ಹೆಚ್ಚು ಇತ್ತೀಚೆಯವು ಆಗಿವೆ. ಗೀತನಾಟಕ ಏಕಾಂಕದ ಹುಟ್ಟಿನಿಂದಲೇ ಒಂದು ತರವಾಗಿ ತಲೆದೋರಿದೆ, ಆ ಮೇಲೆ ತನ್ನ ಶುದ್ಧ ಸ್ವರೂಪ ಪಡೆದಿದೆ. ಅದು ಹೆಚ್ಚು 'ಪ್ರಾಚೀನ.' ಆ ಮೇಲೆ ಅಶುನಾಟಕ, ಅನಂತರ ಬಾನುಲಿ ನಾಟಕ ಇವು ಕಣ್ದೆರೆದಿವೆ. ಅಶುನಾಟಕ, ಬಾನುಲಿ ನಾಟಕ ಇದರಲ್ಲಿ ಯಾವುದು ಪ್ರದರ್ಶನದಲ್ಲಿ ಮೊದಲು ಎಂಬುದರ ಬಗ್ಗೆ ಮೇಲಾಟಕ್ಕೆ ಎಡೆಯಿದೆ. ಆದರೆ ಪ್ರಕಟನದಲ್ಲಿ ಅಶುನಾಟಕವೇ ಮೊದಲೆನ್ನಬಹುದು. ಮೇಲಿನ ಕ್ರಮದಲ್ಲಿಯೇ ಕೆಳಗಿನ ವಿವೇಚನೆಯನ್ನು ಮಾಡಲಾಗಿದೆ.

ಕನ್ನಡದಲ್ಲಿ ಏಕಾಂಕ ನಾಟಕ ಹುಟ್ಟಿದ್ದು ಈಚೆಗೆ ಆದರೂ ಅದು ಇಂದಿನ ವೇಗದ ಯುಗದಲ್ಲಿ ನಾನಾಮುಖವಾಗಿ ಬೆಳೆದಿದೆ. ಈ ಲೇಖದಲ್ಲಿ ಪ್ರಸಿದ್ಧ ವಿದ್ವಾಂಸರಾದ ಪ್ರೊ. ರಂ. ಶ್ರೀ. ಮುಗಳಿಯವರು ಏಕಾಂಕದ ಸಂಸಾರದಲ್ಲಿ ತೀರ ಈಚೆಗೆ ಬೆಳೆದು ಬಂದ ಬಾನುಲಿ ನಾಟಕ, ಆಶು ನಾಟಕ ಮತ್ತು ಗೀತ ನಾಟಕ ಇವುಗಳ ವಿವೇಚನೆ ಮಾಡಿದ್ದಾರೆ. ಕಲಾದೃಷ್ಟಿಯಿಂದ ಏಕಾಂಕಗಳ ಬೆಳವಣಿಗೆ ಅಷ್ಟು ಸೊಗಸಾಗಿ ಆಗಿಲ್ಲ. ಶ್ರೀ ಮುಗಳಿಯವರ ಲೇಖದಿಂದ ಸರಿಯಾದ ಮಾರ್ಗದಲ್ಲಿ ಅವುಗಳು ಮುನ್ನಡೆಯಲು ಸಹಾಯವಾಗಬಹುದು.

ಬಾನುಲಿ ನಾಟಕದ ಲಕ್ಷಣ

ಬಾನುಲಿ ನಾಟಕ ಎಂದರೆ ರೇಡಿಯೋ ಕೇಂದ್ರದಿಂದ ಪ್ರಸಾರ ಮಾಡುವ ನಾಟಕ. ರೇಡಿಯೋ ನಾಟಕ, ಪ್ರಸಾರ ನಾಟಕ ಎಂದೂ ಇದನ್ನು ಕರೆಯುತ್ತಾರೆ. ಶ್ರುತಿಕಾ ಶ್ರವಣಿಕಾ ಎಂಬ ಹೆಸರುಗಳನ್ನು ಬಳಸುತ್ತಿದ್ದಾರೆ. ನಾಟಕ ಎಂದರೆ ಮುಖ್ಯವಾಗಿ ಕಣ್ಣಿನ ವಿಷಯ. ಆದರೆ ಬಾನುಲಿ ನಾಟಕದಲ್ಲಿ ಅದು ಕೇವಲವಾಗಿ ಕಿವಿಯ ವಿಷಯವಾಗಿದೆ. ಕಿವಿಯ ಮೂಲಕ ಕಣ್ಣಿಗೆ ವಿಷಯ ಕಟ್ಟುವಂತೆ ಮಾಡುತ್ತದೆ. ಅಷ್ಟೇ ಯಾಕೆ, ಕೇಶಿರಾಜ ಹೇಳಿದಂತೆ ಶಬ್ದದಿಂದ ಆಯಾ ಎಲ್ಲ ಇಂದ್ರಿಯದ ವಿಷಯವನ್ನು ಉದ್ಭಾವಿಸುವ ವಾಗ್ದೇವಿಯ ಹಾಗೆ, ಅದು ಶಬ್ದರೂಪಕವಾಗಿದೆ. ಇದರಲ್ಲಿ ಅದರೆಲ್ಲ ಚಮತ್ಕೃತಿ ಮತ್ತು ವೈಶಿಷ್ಟ್ಯ ಅಡಕವಾಗಿವೆ. ರಂಗಸ್ಥಳದ ಮೇಲೆ ನೋಡಲೆಂದು ಬರೆದ ನಾಟಕಗಳನ್ನಾಗಲಿ, ನೋಡಲಾಗದು ಎಂದು ಬರೆದ ದೃಶ್ಯಗಳನ್ನಾಗಲಿ, ಬಾನುಲಿ ಕೇಂದ್ರದಿಂದ ಪ್ರಸಾರಗೊಳಿಸಿದ ಮಾತ್ರಕ್ಕೆ ಬಾನುಲಿ ನಾಟಕವಾಗುವದಿಲ್ಲ. ಅದರ ಮುಖ್ಯ ಲಕ್ಷಣಕ್ಕೆ ಅನುಸರಿಸಿ ಅದರ ತಂತ್ರವೊಂದು ರೂಪಗೊಳ್ಳುತ್ತಲಿದೆ. ಸಂಗೀತ, ಸಂವಾದ, ಅನುಕರಣ ಮುಂತಾದ ಚಲನಶೀಲವಾದ ಸಾಭಿಪ್ರಾಯವಾದ ವಿವಿಧ ಧ್ವನಿಗಳ ಸವೇಗ ಸಂಯೋಜನೆಯಿಂದ ಅದು ಶಬ್ದವನ್ನು ರೂಪರಸಾದಿ ಇತರ ವಿಷಯಗಳಿಗೆ ಪಲ್ಲಟಿಸುತ್ತದೆ. ಗಾಳಿಯಲ್ಲಿ ಹರಡಿದ ಧ್ವನಿಯ ಸೂಕ್ಷ್ಮ ಅಲೆಗಳನ್ನು ರೇಡಿಯೋ ಯಂತ್ರವು ಗ್ರಹಿಸಿ ಶಬ್ದಕ್ಕೆ ತಿರುಗಿಸಿ ಕೇಳುವ ಹಾಗೆ ಮಾಡುವಂತೆ, ಬಾನುಲಿ ನಾಟಕವು ಆ ಶಬ್ದದ ಬಲದಿಂದ ಒಂದು ಇಂದ್ರಿಯದ ಅನುಭವವು ಇತರ ಇಂದ್ರಿಯದ ಅನುಭವಗಳಲ್ಲಿ ಪಲ್ಲಟ ಹೊಂದಿ ಅವಕ್ಕೆ ಮುಟ್ಟುವಂತೆ ಮಾಡುತ್ತದೆ. ಈ ಪಲ್ಲಟದಲ್ಲಿಯೇ ಅದರ ತಂತ್ರದ ಮಂತ್ರಶಕ್ತಿಯಿದೆ. ತಂತ್ರದ ವಿವರಗಳಲ್ಲಿ ಬರುವ ನಿವೇದಕನೆಂಬ ಸೂತ್ರಧಾರನ ಪ್ರಾಮುಖ್ಯ, ಸಂಗೀತ ಮತ್ತು ಇತರ ಧ್ವನಿಗಳಿಂದ ವಾತಾವರಣ ಕಲ್ಪನೆ, ಇಂದಿನ ಕಥನದಲ್ಲಿ ಎಂದೋ ಆಗಿ ಹೋದ ವ್ಯಕ್ತಿಪಾತ್ರಗಳ ಸಜೀವ ಸಂವಾದ ರಚನೆ, ಚಲಚಿತ್ರದಂತೆ ಕಡಿಮೆ ಹೊತ್ತಿನಲ್ಲಿ ಹೆಚ್ಚು ತಿಳಿಸುವ ಕಲೆಯ ಓಟ ಮತ್ತು ಮೊನೆ ಇವನ್ನೆಲ್ಲ ಗಮನಿಸಬಹುದು. ಬಾನುಲಿ ನಾಟಕದಿಂದ ಕಲ್ಪನೆಯ ಕಣ್ಣು ನಿಚ್ಚಳವಾಗುವುದು, ಭಾವನೆಯ ಕಾವು ಹೆಚ್ಚುವುದು. ಬೆಳೆಯುತ್ತಿರುವ ಮಕ್ಕಳ ಮನೋವಿಕಾಸಕ್ಕೆ ಅದೊಳ್ಳೆಯ ಪ್ರಭಾವಿ ಸಾಧನವಾಗಿದೆ. ಅದನ್ನು ಕುರುಡನಿಗಾಗಿ ಆಡಿದ ನಾಟಕ ಎನ್ನುವದಕ್ಕಿಂತ, ಕಣ್ಣಿದ್ದು ಕುರುಡರಾದ, ಅಂದರೆ ಒಳಗಣ್ಣಿನಿಂದ ನೋಡಲಾರದವರಿಗೆ, ಕಿವಿಯ ಮೂಲಕ ಅಂಥ ನೋಟವನ್ನು ಒದಗಿಸುವ ನಾಟಕ ಎಂದು ಬೇಕಾದರೆ ಕರೆಯಬಹುದು.

ಮೈಸೂರಿನ ಆಕಾಶವಾಣಿಯಲ್ಲಿಯೂ, ಮುಂಬಯಿ ಕೇಂದ್ರದ ಕನ್ನಡ ವಿಭಾಗದಲ್ಲಿಯೂ, ಇಂಥ ನಾಟಕಗಳ ಪ್ರಸಾರ ಕನ್ನಡದಲ್ಲಿ ಆಗುತ್ತಿದೆ. ಹಲವು ಯಶಸ್ವಿಯಾದ ಪ್ರಯೋಗಗಳಾಗಿವೆ. ಆದರೆ ತಂತ್ರದ ಹಿಡಿತ ಸಿಗದೆಇದ್ದ ಕಾರಣ ಅವು ಅನೇಕ ಸಲ ಬರೀ ಪ್ರಯೋಗಗಳೇ ಆಗಿವೆ. ಇಂಥ ನಾಟಕಗಳು ಪತ್ರಿಕೆಗಳಲ್ಲಿ ಅಲ್ಲದೆ ಪುಸ್ತಕರೂಪವಾಗಿಯೂ ಹೊರಬರುತ್ತಿವೆ. ಅವುಗಳಲ್ಲಿ ರೇಡಿಯೋ ನಾಟಕಗಳು (ಬೀಚಿ) ಹಾಗೂ ದುರಂತ ಮತ್ತು ಇತರ ಪ್ರಸಾರ ನಾಟಕಗಳು—(ಎಚ್. ಕೆ. ರಂಗನಾಥ) ಇವನ್ನು ಉಲ್ಲೇಖಿಸಬಹುದು. ಇದಕ್ಕೂ ಹೆಚ್ಚಾಗಿ ಇವುಗಳ ನಿರ್ಮಿತಿ ಕನ್ನಡದಲ್ಲಿ ಆಗಿಲ್ಲವೆಂಬುದೇ ಇವು ಎಷ್ಟು ನವೀನ ಎಂಬುದಕ್ಕೆ ಸಾಕ್ಷಿ. ಬೀಚಿಯವರ ರೇಡಿಯೋ ನಾಟಕಗಳು ಹೆಚ್ಚಾಗಿ ಸಾಮಾನ್ಯ ಲಕ್ಷಣದ ಏಕಾಂಕಗಳಾಗಿವೆ. ಅವುಗಳಲ್ಲಿ ಬಾನುಲಿ ನಾಟಕದ ಧ್ವನಿಕೇಂದ್ರಿತವಾದ ತಂತ್ರಸರಣಿಯಿಲ್ಲ. ಎಲ್ಲ ನಾಟಕದಲ್ಲಿ ಬರುವ ರಂಗಸೂಚನೆಗಳು ಅವುಗಳಲ್ಲಿವೆ. ಅವುಗಳನ್ನು ಓದಿ ಹೇಳಿದರೆ ವಿರಸ, ಓದದಿದ್ದರೆ ದೃಶ್ಯದ ಹಿನ್ನೆಲೆ ದೊರೆಯುವದಿಲ್ಲ. ಏಕಾಂಕದೃಷ್ಟಿಯಿಂದ ಅವುಗಳಲ್ಲಿ ಮೆಚ್ಚತಕ್ಕ ಗುಣವಿದೆ. ಹವಣಾದ ಸನ್ನಿವೇಶ, ಮುಕ್ತಾಯದ ಅಚ್ಚರಿ, ಸ್ವಭಾವಚಿತ್ರಣ, ವಾಸ್ತವ ಸಂವಾದ, ಸಹಜವಾದ ನಗೆ ಈ ಮುಂತಾದ ಗುಣಗಳಿಂದ ಅವು ಏಕಾಂಕಪಟ್ಟಕ್ಕೆ ಒಟ್ಟಿನಲ್ಲಿ ಅರ್ಹತೆಯನ್ನು ಪಡೆದಿವೆ. ಆದರೆ ಸಂವಿಧಾನ ಇನ್ನಿಷ್ಟು ಬಿಕ್ಕಟ್ಟಾಗಿಯೂ ಸತ್ಯಕ್ಕೆ ಹೊಂದಿ ಅಪರಿಹಾರ್ಯವಾಗಿಯೂ ಆಗಬೇಕು. ವಸ್ತುವಿನೊಡನೆ ಚೆಲ್ಲಾಟವಾಡುತ್ತ ಪ್ರಹಸನದ ಅಡ್ಡದಾರಿಗೆ ಬೀಳಬಾರದು. ಮಾತು ಸುಮ್ಮನೆ ಹರಡಿಕೊಳ್ಳಬಾರದು. ರೇಡಿಯೋ ನಿಲಯದಲ್ಲಿ ಇವುಗಳಲ್ಲಿ ಹೆಚ್ಚು ನಾಟಕಗಳನ್ನು ಪ್ರಸಾರಗೊಳಿಸಿರುವರಂತೆ. ಆದರೆ ಅದರಿಂದ ರೇಡಿಯೋ ನಾಟಕ ಎಂಬ ವಿಶಿಷ್ಟ ಪದವಿಗೆ ಇವು ಪಾತ್ರವಾಗಲಾರವು. ಅಳು, ಪೆಟ್ಟು ಮುಂತಾದ ಧ್ವನಿಗಳನ್ನು ಇಲ್ಲಿ ಬಳಸಿಲ್ಲವೆಂತಲ್ಲ. ಆದರೆ ಧ್ವನಿಯಲ್ಲಿಯೇ ಲಕ್ಷ್ಯ ಕೇಂದ್ರಿತವಾಗಿಲ್ಲ. ನಿವೇದಕನಿಗೆ ಇಲ್ಲಿ ಸ್ಥಾನ ಇಲ್ಲವೇ ಇಲ್ಲ. ಅವನಿದ್ದರೆ ರಂಗಸೂಚನೆಗಳನ್ನು ಸಜೀವಚಿತ್ರಗಳನ್ನಾಗಿ ಧ್ವನಿಸಾಮಗ್ರಿಯಿಂದ ಮಾಡಬಹುದಾಗಿತ್ತು. ಪತ್ರಿಕೆಗಳಲ್ಲಿ ಪ್ರಕಟಹೊಂದಿದ ಬಾನುಲಿ ನಾಟಕಗಳಲ್ಲಿ ಎನ್ಕೆಯವರ 'ಶಾಕುಂತಲ'ವು ಉಲ್ಲೇಖಯೋಗ್ಯವಾಗಿದೆ. ಈ ಮಾದರಿಯ ಸುಳುವು ಸೂಕ್ಷ್ಮಗಳನ್ನು ಅರಿಯಲು ಅದನ್ನು ನೋಡಬಹುದು. ಕಾಲಿದಾಸನ ಶಾಕುಂತಲ ನಾಟಕದ ಸಾರವೆಲ್ಲ ಧ್ವನಿಯಿಂದ ಚಿತ್ರರೂಪವಾಗಿ ತತ್ವಸೂಚಕವಾಗಿ ಇದರಲ್ಲಿ ಸಂಗ್ರಹಗೊಂಡಿದೆ.

ನಟರೆಲ್ಲ ನಾಟಕಕಾರರಾದರೆ ಆಶುನಾಟಕದ ಸಾಫಲ್ಯ

ಕನ್ನಡಕ್ಕೆ ಆಶುನಾಟಕ ತೀರ ಹೊಸದಲ್ಲ. ಹಿಂದಿನ ಕಾಲದ ಪಗರಣ, ಇಂದಿನ ಯಕ್ಷಗಾನ ಪ್ರಸಂಗ, ಬಯಲಾಟಗಳಲ್ಲಿ ಅದರ ಸಮಯಸ್ಫೂರ್ತಿಯ ಲಕ್ಷಣ ತೋರಿದೆ. ಅಂತೇ ಕನ್ನಡನಾಡಿನಲ್ಲಿ ರಂಗಭೂಮಿ ಎಂದಿನಿಂದಲೂ ಜನಪ್ರಿಯವಾಗಿ ಇದ್ದಿತಾದರೂ ಬರೆದ ನಾಟಕ ಗ್ರಂಥಗಳು ದೊರೆತಿಲ್ಲ. ಬರೆದ ನಾಟಕಗಳನ್ನು ಆಡುವದಕ್ಕಿಂತ ಸುಪರಿಚಿತವಾದ ವಸ್ತು-ಪಾತ್ರಗಳ ರೂಪರೇಷೆಯನ್ನು ಇಟ್ಟುಕೊಂಡು ಅದನ್ನು ಆ ಆ ಸಮಯಕ್ಕೆ ಒದವಿದ ಆವೇಶದಿಂದ ಬಿತ್ತರಿಸುವ ಸಂಪ್ರದಾಯವು ಹೆಚ್ಚು ಪ್ರಚುರವಾಗಿರಬೇಕು. ನಟರೆಲ್ಲ ತಾವೇ ನಾಟಕಕಾರರಾಗುವಷ್ಟು ಸಹಜಪ್ರತಿಭೆ, ಲೋಕಾನುಭವ, ಮಾತಿನ ಜಾಣ್ಮೆ, ಆತ್ಮವಿಶ್ವಾಸ ಇವುಗಳಿಂದ ಕೂಡಿದವರಾಗಿ ಕಲಾತಿಶಯವನ್ನು ತೋರಿ ನೋಟಕರನ್ನು ಬೆರಗುಗೊಳಿಸಿರಬೇಕು. ಇಂದಿಗೂ ನಾಡಿನ ಮೂಲೆ ಮೂಲೆಯಲ್ಲಿ ಅಂಥ ನಟರು ದೊರೆಯುತ್ತಾರೆ. ಅವರ ಶಕ್ತಿ ಶ್ರದ್ಧೆಗಳ ಮೇಲೆಯೇ ಆಶುನಾಟಕದ ಭವಿತವ್ಯ ನಿಂತಿದೆ. ಆಶುಕವಿತೆಯ ಮೇಲಿಂದ ಆಶುನಾಟಕವೆಂಬ ಹೆಸರು ಬಂದಿತು. ಆಶುಕವಿತೆಯಲ್ಲಿ ವಿಷಯ ಕೊಟ್ಟೊಡನೆ ಕವಿತಾರಚನೆಗೆ ಪ್ರಾರಂಭವಾಗಬೇಕು. ವಿಷಯ ಸೂಚನೆಗೂ ರಚನೆಗೂ ನಡುವೆ ದೊರೆಯುವ ಬಿಡುವು ತೀರ ಕಡಿಮೆ. ಇಂಥ ಕವಿಗಳು ಹಿಂದೆ ಪಂಡಿತವರ್ಗದಲ್ಲಿಯೂ ಪಾಮರರಲ್ಲಿಯೂ ಇದ್ದರು. ಆಶುನಾಟಕವೆಂಬುದು ಒಬ್ಬರಿಗಿಂತ ಹೆಚ್ಚು ಜನರ ಸಂಯೋಜಕ ಕಲೆಯಾಗಿದ್ದರಿಂದಲೂ ರಂಗಸ್ಥಲಕ್ಕೆ ಸಂಬಂಧಪಟ್ಟುದಾಗಿದ್ದರಿಂದಲೂ ಆಶುಕವಿತೆಗಳಷ್ಟು ಅದು ಆಶು ಇಲ್ಲವೆ ಶೀಘ್ರವಾಗದು. ಮೂರು ನಾಲ್ಕು ಘಂಟೆಗಳ ಅವಧಿಯನ್ನು ಕೊಡಬೇಕಾಗುತ್ತದೆ. ಈ ಅವಧಿಯಲ್ಲಿ ಕೊಟ್ಟ ವಿಷಯವನ್ನು ಕಥಾವಸ್ತುವಿನ ಸ್ವರೂಪಕ್ಕೆ ತಂದು ಪಾತ್ರಗಳನ್ನು ಕಲ್ಪಿಸಿ ನಟರಿಗೆ ಹಂಚಿ ಮೊದಲು ಕೊನೆಗಳನ್ನು ಮುಂಗಾಣಬೇಕಾಗುತ್ತದೆ. ಪಾತ್ರ ವಹಿಸುವ ಎಲ್ಲ ನಟರ ಸಾಮೂಹಿಕವಾದ ನಿರ್ಮಾಣಶೀಲಪ್ರತಿಭೆ ಇಲ್ಲಿ ಚುರುಕಾಗಿ ತೋರಬೇಕು. ಅಂದರೇ ಆಶುನಾಟಕ ಅರ್ಥಕ್ಕಿಂತ ಹೆಚ್ಚು ಯಶಸ್ವಿಯಾದಂತೆ. ಸಂನಿವೇಶಕಲ್ಪನೆಯನ್ನು ಮಾಡಿ ಸಂವಾದಗಳ ಒಲವನ್ನು ಒಟ್ಟಾಗಿ ಗುರುತಿಸಿದರೂ ಆಶುನಾಟಕದಲ್ಲಿ ಎಲ್ಲವನ್ನು ಬರೆಯಲಿಕ್ಕಾಗುವದಿಲ್ಲ, ಬರೆಯಲೂ ಕೂಡದು. ಮುಂದೆ ನಾಟಕ ಪ್ರಯೋಗಕಾಲಕ್ಕೆ ಆಶುನಾಟಕದ ಸತ್ವಪರೀಕ್ಷೆಯಾಗುತ್ತದೆ. ಯಾಕಂದರೆ ಸಮಯಸ್ಫೂರ್ತಿ ಇದು ಎಲ್ಲರಲ್ಲಿ ಪ್ರತ್ಯೇಕವಾಗಿ ಚೆನ್ನಾಗಿ ಮೂಡಬಹುದು. ಆದರೆ ಅದು ವಸ್ತುವಿನ ಸಂಕಲ್ಪಿತ ಯೋಜನೆಗೆ ಬಾಧಕವಾಗದಂತೆ, ಮಾತಿಗೆ ಮಾತು ತಾಕಲಾಡದಂತೆ, ಗತಿಶೂನ್ಯವಾದ ಹಾಳುಹರಟೆ ಇಲ್ಲವೆ ಹುಸಿನಗೆಯಾಗದಂತೆ ಸಾಮೂಹಿಕ ಸ್ಫೂರ್ತಿಯಾಗಿ ಪರಿಣಮಿಸಬೇಕು. ಬರೆಯದ ನಾಟಕವಾದರೂ ಬರೆದ ನಾಟಕವೆಂಬ ಆಭಾಸವನ್ನು ಉಂಟುಮಾಡಬೇಕು. ಇಲ್ಲಿ ಆಶುನಾಟಕದ ಸಿದ್ಧಿ, ಸ್ವಾರಸ್ಯ ಅಡಕವಾಗಿವೆ. ಪ್ರತಿಯೊಬ್ಬ ನಟನಿಗೂ ಕಥಾವಸ್ತುವಿನ ಪರಿಜ್ಞಾನ, ಅದರ ನಡೆಯ ಎಚ್ಚರ, ಸ್ವಂತ ಪಾತ್ರದ ಸ್ವಭಾವಶೈಲಿಗಳ ಮೇಲಿನ ಪ್ರಭುತ್ವ ಇವು ಆಶುನಾಟಕದಲ್ಲಿ ತೀರ ಅಗತ್ಯವಾದವು. ಒಂದೇ ನಾವೆಯಲ್ಲಿ ಹೊರಟ ದಾರಿಗರಲ್ಲಿ ಒಬ್ಬನ ಜೋಲಿ ತಪ್ಪಿದರೆ ಎಲ್ಲರೂ ಮುಳುಗುವಂತೆ ಒಬ್ಬ ನಟನ ತಪ್ಪಿತದಿಂದ ಇಡೀ ನಾಟಕವೇ ಹಸಗೆಡಬಹುದು. ಆಶುನಾಟಕದಲ್ಲಿ ಈ ರೀತಿಯಾಗಿ ಕಲಾವಂತಿಕೆಯು ಮೇಲ್ತರವಿರುವಂತೆ ಬಾಳಿಕೆಗೆ ಬೇಕಾದ ಸಂಸ್ಕಾರದ ಎತ್ತರವೂ ಇದೆ.

ಆಶುನಾಟಕದ ಪ್ರಯೋಗಗಳು ಹಲವು ವರ್ಷಗಳಿಂದ ಕ್ವಚಿತ್ತಾಗಿ ಮೊದಲು ನಡೆದು, ಆ ಮೇಲೆ 'ಮನೋಹರ ಗ್ರಂಥಮಾಲೆ' ೧೯೪೩ ರಲ್ಲಿ ಏರ್ಪಡಿಸಿದ ಸ್ಪರ್ಧೆಯಲ್ಲಿ ಪ್ರಾಮುಖ್ಯ ಪಡೆದುವು. ಆಶುನಾಟಕಗಳು ಎಂಬ ಗ್ರಂಥಮಾಲೆಯ ಪ್ರಕಟನೆಯಿಂದ ಅವುಗಳ ಆಶ್ಚರ್ಯಕರವಾದ ಯಶಸ್ಸನ್ನು ಅರಿತುಕೊಳ್ಳಬಹುದು. ಆ ಪುಸ್ತಕದಲ್ಲಿ ಪ್ರಕಟವಾದ ಮೇಲೆ ಆಶುನಾಟಕಗಳು ಹೋಗಿ ಬರೆದ ನಾಟಕಗಳಾದವು. ಆದರೂ ಅವುಗಳ ಸ್ವಾರಸ್ಯಕ್ಕೆ ಕುಂದಿಲ್ಲ. ಕನ್ನಡಕ್ಕೆ ಸಹಜಕಲೆಯ ನಾಟಕಗಳನ್ನು ಒದಗಿಸುವದಕ್ಕೆ ಇಂಥ ಪ್ರಯೋಗಗಳು ನೆರವಾಗುತ್ತವೆ. ನಾಡಿನ ತುಂಬ ಆಶುನಾಟಕವನ್ನು ಪ್ರಚಾರದಲ್ಲಿ ತರುವ ಹೆಚ್ಚಿನ ಪ್ರಯತ್ನಗಳಾಗಬೇಕು. ರಂಗಭೂಮಿಯ ಶಿಕ್ಷ

ಕಾಲಯವೆಂದೇ ರೂಪಗೊಳ್ಳಲಿ, ಅದರಲ್ಲಿ ಆಶುನಾಟಕದ ವಿಭಾಗ ವೊಂದು ನಿರ್ಮಿಸಡಬೇಕು.

ಗೀತನಾಟಕದ ಯಶಸ್ವಿ ದೃಷ್ಟಾಂತಗಳು

ಗೀತನಾಟಕ–ಇದು ಮೂರನೆಯ ಮಾದರಿ. ಇದರಲ್ಲಿ ಅಳವಟ್ಟ ಪ್ರಕಾರಗಳನ್ನು ನೋಡಿದರೆ ಇದು ಒಂದೇ ಮಾದರಿಯಲ್ಲಿ ಅನ್ನುವಷ್ಟು ವಿವಿಧವಾಗಿದೆ. ತೀರ ಮೊದಲು ಮಾಸ್ತಿಯವರ 'ಶಾಂತಾ', 'ಸಾವಿತ್ರಿ', 'ಉಷಾ' ಈ ನಾಟಕಗಳಲ್ಲಿ, ಶ್ರೀಯವರ 'ಅಶ್ವತ್ಥಾಮನ್' ದಲ್ಲಿ, ಪುಟ್ಟಪ್ಪನವರ 'ಯಮನ ಸೋಲು' ಮುಂತಾದ ದೃಶ್ಯಗಳಲ್ಲಿ ಗೀತ ನಾಟಕ ರೂಪತಾಳಿ ವೈವಿಧ್ಯತೋರಿದೆ; ಗೀತನಾಟಕ ಎಂದರೇನು ಎಂಬ ಪ್ರಶ್ನೆಯನ್ನು ಕೆಣಕಿದೆ. ಗೀತನಾಟಕ ಎಂದರೆ ಹಾಡುಗಳ ಮೂಲಕವಾಗಿಯೇ ಸಂವಾದಕಟ್ಟಿ ಒಂದು ವಸ್ತುವಿಗೆ ನಾಟ್ಯಸ್ವರೂಪ ಕೊಟ್ಟ ನಾಟಕ ಎಂದು ಸ್ಥೂಲವಾಗಿ ಹೇಳಬಹುದು. ಆದರೆ ಗೀತ ಅಥವಾ ಹಾಡು ಎಂದರೇಸರಿ, ಪದ್ಯಕ್ಕೆ ಅದರಲ್ಲಿ ಎಡೆಯಿದೆಯೆ ಮುಂತಾಗಿ ಪ್ರಶ್ನೆಗಳು ಏಳುತ್ತವೆ. ಕೇವಲ ಗದ್ಯ ಇಲ್ಲದೆ ಇದ್ದುದೆಲ್ಲ ಗೀತನಾಟಕ ಎಂದು ವ್ಯಾಪಕವಾಗಿ ಉತ್ತರವನ್ನು ಹೇಳಬಹುದು. ಆದರೂ ಅದರಿಂದ ಸಮಾಧಾನವಿಲ್ಲ. ಸಂಗೀತದ ಎರಡು ಮುಖ್ಯ ಅಂಗಗಳಾದ ರಾಗ ಮತ್ತು ತಾಳ ಇವುಗಳ ಯೋಜನೆಯಿಂದ ಪಲ್ಲವಿ, ನುಡಿ ಎಂಬ ಕ್ರಮದಿಂದ ಕಟ್ಟಿದ ಹಾಡು ಎಂಬುದು ಗೀತದ ಮರ್ಯಾದಿತವಾದ ಅರ್ಥ. ಗೀತನಾಟಕ ಎಂದು ಹೇಳುವಾಗ ಇದಿಷ್ಟೇ ಅರ್ಥ ನಮ್ಮ ಕಣ್ಣಮುಂದೆ ಇರುವದಿಲ್ಲ. ಸಮಯೋಚಿತ ಭಾವವನ್ನು ರಾಗ ತಾಳಗಳ ನೆರವಿನಿಂದ ಅರಳಿಸಿ ತೋರಿಸಬಲ್ಲ ಪದ್ಯ, ಅದರಲ್ಲಿಯೂ, ಮಾತ್ರಾವೃತ್ತ ಹಾಗೂ ಜಾನಪದ ಧಾಟಿಗಳು ಗೀತದಲ್ಲಿ ಸೇರಿಕೊಳ್ಳುತ್ತವೆ. ಅವನ್ನು ಪದ್ಯ ಎಂದು ನಾವು ಕರೆಯಬಹುದಾದರೂ ಗೀತನಾಟಕದಲ್ಲಿ ಅವಕ್ಕೆ ಸ್ಥಾನವಿದೆ. ಕಂದಪದ್ಯಗಳು ಇದಕ್ಕೆ ಉದಾಹರಣೆ. ಇನ್ನು ಅಕ್ಷರವೃತ್ತಗಳು ತಾಳಕ್ಕೆ ಸರಿಹೋಗದಿದ್ದರೂ ನಮ್ಮ ಗಮಕ ಕಲೆಯಲ್ಲಿಯ ರಾಗಸಂಗೀತಕ್ಕೆ ಹೊಂದಿಕೊಳ್ಳುತ್ತವೆ. ಸ್ವಚ್ಛಂದ ಛಂದವೆಂಬುದು ಸಹ ವಿವಿಧ ಸೂಕ್ಷ್ಮ ಲಯಗಳ ಮೂಲಕ ಪದ್ಯದ ಒಂದು ಪ್ರಕಾರವೇ ಆಗಿ ಗೀತನಾಟಕದಲ್ಲಿ ಪ್ರವೇಶ ಪಡೆಯಬಹುದು.

ಸಾಮಾನ್ಯವಾಗಿ ಗೀತನಾಟಕದಲ್ಲಿ ಶುದ್ಧ, ಸಂಮಿಶ್ರ ಎಂದು ವಿಶಾಲಭಾಗಗಳನ್ನು ಮಾಡಿ ಅದರಲ್ಲಿಯ ಒಳವಿಭಾಗಗಳನ್ನು ಗುರುತಿಸಬಹುದು. ಶುದ್ಧದಲ್ಲಿ ಕೇವಲ ಪದ್ಯ,ಪದ್ಯ–ಗೀತಮಿಶ್ರ ಎಂದು ಎರಡು ಪ್ರಕಾರಗಳಿವೆ. ಕೇವಲ ಪದ್ಯದಲ್ಲಿ 'ಯಮನ ಸೋಲು', 'ಸೈರಂಧ್ರಿ', 'ತಪಸ್ವಿನಿ' ಇಂಥಲ್ಲಿಯ ಸರಳ ರಗಳೆಯ ಪ್ರಭೇದವನ್ನೂ, 'ಪಾವನ ಪಾವಕ,' ದಲ್ಲಿಯ ಪ್ರಾಸಬದ್ಧವಾದ ವಿವಿಧ ಪದ್ಯದ ಪ್ರಭೇದವನ್ನೂ ಕಾಣಬಹುದು. ಸರಳ ರಗಳೆಯಿದ್ದಲ್ಲಿ ಒಂದೆರಡು ಗೀತಗಳೂ ಸೇರಿಕೊಂಡ ಉದಾಹರಣೆಗಳಿವೆ. ಸ್ವಚ್ಛಂದಕ್ಕೆ ಮಾಸ್ತಿಯವರ 'ಚಿತ್ರಾಂಗದಾ' ನಿದರ್ಶನವಾಗಿದೆ.ಪದ್ಯಗೀತ ಮಿಶ್ರಕ್ಕೆ 'ಶಬರಿ', 'ತೀರದ ದಾರಿ,' ಅಲ್ಲದೆ ಕಾರಂತರ ಗೀತನಾಟಕಗಳು ಎಂಬ ಬಗೆಯ ಕೃತಿಗಳನ್ನು ಉದಾಹರಿಸಬಹುದು.ಗದ್ಯಪದ್ಯ ಗೀತಸಂಮಿಶ್ರಕ್ಕೆ 'ಶಾಂತಾ' 'ಸಾವಿತ್ರಿ' ಇವನ್ನು ನೋಡಬೇಕು. ಗೀತನಾಟಕಗಳಲ್ಲಿ ಅಂದರೆ ಪದ್ಯಗೀತಮಿಶ್ರವಾದ ಅದರ ಪ್ರಕಾರದಲ್ಲಿ ಕೃತಿಗಳನ್ನು ರಚಿಸಿ ಯಶಸ್ವಿಯಾದವರೆಂದರೆ ಕಾರಂತರು ಮತ್ತು ಪು. ತಿ. ನರಸಿಂಹಾಚಾರ್ಯರು. ಅವನ್ನು ಬರೆಯುವದಲ್ಲದೆ ರಂಗಭೂಮಿಯ ಮೇಲೆ ಆಡಿ, ಆಡಿಸಿ, ಛಾಯಾನಾಟಕವಾಗಿ ತೋರಿಸಿ ಜನತೆಯ ಮೇಲೆ ಉತ್ಕಟ ಪರಿಣಾಮವನ್ನುಂಟು ಮಾಡಿದ ಶ್ರೇಯಸ್ಸು ಇಂದಿನ ನಾಟಕಪ್ರಪಂಚದಲ್ಲಿ ಹೆಚ್ಚಾಗಿ ಕಾರಂತರಿಗೆ ಸಲ್ಲುತ್ತದೆ. ಅವರ ಗೀತನಾಟಕಗಳಲ್ಲಿ ಪದ್ಯಗೀತಗಳ ವಿಶಿಷ್ಟ ಮಿಶ್ರಣವು 'ಕಿಸಾಗೋತಮಿ', 'ಮುಕ್ತದ್ವಾರ', 'ಋತುಯಾತ್ರೆ' ಇವುಗಳಲ್ಲಿ ಮೂಡಿದ್ದರೆ ಜಾನಪದ ರೀತಿಯ ಗೀತಭೂಯಿಷ್ಠ ಸರಣಿ 'ಸೋಮಿಯ ಸೌಭಾಗ್ಯ'ದಲ್ಲಿ ತಲೆದೋರಿದೆ. ಜಾನಪದ ಪದ್ಯ ಸರಣಿ 'ಯಾರೋ ಅಂದರು,' ಇದರಲ್ಲಿದೆ. ಸರಳ ರಗಳೆಯ ಪ್ರಕಾರವೊಂದು 'ದೇವಿ–ದೇಹಿ', 'ಹಿರಿಯ ದೇವರು' ಇವುಗಳಲ್ಲಿದ್ದರೆ ಪ್ರಾಸಬದ್ಧ ಪದ್ಯವು 'ಗೆದ್ದವರ ಸತ್ಯ', 'ಇಸ್ಪೀಟು ಗುಲಾಮ'ದಲ್ಲಿದೆ. ಈ ಎಲ್ಲ ವೈವಿಧ್ಯದಲ್ಲಿಯೂ ಪದ್ಯಗೀತಗಳ ಮಿಶ್ರಣ ತಂತ್ರವನ್ನೇ ಹೆಚ್ಚಾಗಿ ಅವರು ಬಳಸಿದ್ದಾರೆ. ಎಲ್ಲ ಏಕಾಂಕಗಳಲ್ಲಿ ಅವರು ತಮ್ಮ ಸಮಾಜ ವಿಡಂಬನೆ, ಕಾವ್ಯಕಲ್ಪನೆ, ಶೈಲಿಯ ಸಾಮರ್ಥ್ಯ ಮುಂತಾದ ಗುಣಗಳನ್ನು ಹೊರಗೆಡವಿದ್ದಲ್ಲದೆ ಮಾನವ ಧರ್ಮದ ಸಂದೇಶವನ್ನು ಸಾರಿದ್ದಾರೆ. ಕಥೆಗೆ, ಅಲ್ಲಲ್ಲಿಯ ಭಾವಕ್ಕೆ––ಸ್ಥಾಯಿಯಿರಲಿ, ಸಂಚಾರಿಯಿರಲಿ — ಎಲ್ಲಕ್ಕೂ ಸರಿಹೋಗುವ ಪದ್ಯದ ನಡೆ, ಗೀತದ ಕುಣಿತ ಇವನ್ನು ಬೇಸಾಗಿ ತರತರವಾಗಿ ಬಳಸಿದ್ದರಲ್ಲಿ ಅವರ ಗೀತನಾಟಕಗಳ ಹಿರಿಮೆ ಎದ್ದು ಕಾಣುತ್ತದೆ. ಯಾವುದೇ ಒಂದು ಛಂದಸ್ಸಿನ ಇಲ್ಲವೆ ಗೀತದ ಪಡಿಯಚ್ಚಿಗೆ ಕಟ್ಟುಬೀಳದೆ, 'ನಿಯತಿಕೃತ ನಿಯಮರಹಿತ' ವಾಗಿ ಭಾವಕ್ಕೆ ಅನುಗುಣವಾದ ನುಡಿಯ ಉದ್ದಗಲಗಳನ್ನೂ ಗತಿ–ಶ್ರುತಿಗಳನ್ನೂ ಸಹಜ ಪ್ರತಿಭೆಯಿಂದ ಅಭಿನಯಕ್ಕೆ ಅನುಕೂಲವಾಗುವಂತೆ ಅವರು ಜೋಡಿಸಿದ್ದಾರೆ. ಒಮ್ಮೊಮ್ಮೆ ಅವರ ಶೈಲಿ ಪದ್ಯದ ಗೆರೆ ದಾಟಿ ಗದ್ಯದ ಮನೆಯಲ್ಲಿ ಹಣಿಕುತ್ತದೆ. ಪು. ತಿ. ನ. ಅವರ ಕಾವ್ಯ ಶೈಲಿಯ ಸಂಸ್ಕಾರ, ಕುಸುರುಗೆಲಸ ಕಾರಂತರಲ್ಲಿ ದೊರೆಯದು. ಕೆಲವು ಸಲ ಪ್ರಾಸಯೋಜನೆ ಕುಂಟುತ್ತದೆ, ಛಂದಸ್ಸು ಜಾರುತ್ತದೆ. ಆದರೆ ಈ ವರೆಗೆ ಪ್ರಕಟವಾದ, ಪ್ರಯೋಗವಾದ ಈ ಬಗೆಯ ಕೃತಿಗಳಲ್ಲಿ ಕಾರಂತರ ಗೀತನಾಟಕಗಳು ಮೇಲಾದ ಸ್ಥಾನವನ್ನು ಪಡೆಯುತ್ತವೆ. ಕನ್ನಡ ಏಕಾಂಕ ಸೃಷ್ಟಿಯ ಗದ್ಯವಿಭಾಗದಲ್ಲಿ ಕೈಲಾಸಂ–ಶ್ರೀರಂಗರು ತೋರಿದ ಮೇಲ್ಮೆಯನ್ನು ಕಾರಂತರು ಪದ್ಯಗೀತವಿಭಾಗದಲ್ಲಿ ತೋರಿದ್ದಾರೆ ಎಂಬುದು ಹೆಮ್ಮೆಯ ಮಾತು.

ಕನ್ನಡ ಏಕಾಂಕ ನಾಟಕದ ಬೆಳೆ ಹುಲುಸಾಗಿಲ್ಲ, ಕಳೆಯೇರಿಲ್ಲ. ನಮ್ಮ ವಿವಿಧ ಜೀವನದ ನೂರಾರು ಮುಖಗಳನ್ನು ಎತ್ತಿ ತೋರಿಸುವ ಒಮ್ಮೊನೆಯ ಸನ್ನಿವೇಶದ 'ಕ್ರಿಯಾಸಿದ್ಧಿ,' ಯನ್ನು ಪಡೆದಿಲ್ಲ. ರಂಗಸ್ಥಳದ ಮೇಲೆ ಊರೂರಿನಲ್ಲಿ ಕಾಲಕಾಲಕ್ಕೆ ಉತ್ತಮ ನಟನೆಯಿಂದ ಪ್ರಯೋಗವಾಗಿ ಜನರ ಮನಸ್ಸನ್ನು ಸೆರೆ ಹಿಡಿದಿಲ್ಲ. ಇಲ್ಲಿಯ ವರೆಗೆ ಅದು ಪಡೆದ ಕೀರ್ತಿಯನ್ನು ಅಲ್ಲಗಳೆಯದೆ ಸಹ ನಮ್ಮ ಕೊರತೆಯನ್ನು ನಾವು ಅರಿತುಕೊಳ್ಳಬೇಕು. ಅದು ಮುಂದಿನ ಹೆಜ್ಜೆಗೆ ಪ್ರೇರಣೆ. ಕೊರತೆಯನ್ನು ಅರಿಯುವಾಗ ಇದ್ದುದರಲ್ಲಿಯ ಗುಣವನ್ನು ಅರಿಯಬೇಕು: ಅಂಥ ಗುಣದ ಅರಿವಿಗೆಂದು ಈ ಲೇಖನದಲ್ಲಿ ಮೂರು ಮಾದರಿಗಳನ್ನು ವಿವೇಚಿಸಲಾಗಿದೆ. ಈ ಮಾದರಿಗಳಿಂದ ಕನ್ನಡಕ್ಕೆ ಶೋಭೆಯಲ್ಲದೆ ಭಾರತದ ಸಾಹಿತ್ಯಕ್ಕೂ ಶೋಭೆಯಿದೆ ಎಂಬುದನ್ನು ನಾವು ಅರಿಯಬೇಕು, ತೋರಿಸಬೇಕು.

' ಆಧುನಿಕ ಭಾರತೀಯ ಮಹಿಳೆಯ ಗುರಿಯೇನು? '

ಲೇ :— **ಕುಂ. ವೈದೇಹಿ ಡಂಬಳ, ಎಂ. ಎ.**

ಭಾರತೀಯ ಮಹಿಳೆಯರ ವಿಷಯದಲ್ಲಿ ಮಾತನಾಡುವಾಗ ಪ್ರಾಚೀನ ಭಾರತದಲ್ಲಿ ಮಹಿಳೆಯರಿಗೆ ಉಚ್ಚಸ್ಥಾನವಿದ್ದಿತೆಂದೂ ತತ್ವಜ್ಞಾನ ವೇದಾಂತದಂತಹ ವಿಷಯಗಳಲ್ಲಿ ಕೂಡ ಅವರು ಒಳ್ಳೆಯ ಪ್ರಾಶಸ್ತ್ಯ ಪಡೆದಿದ್ದರೆಂದೂ ಹೇಳುವದು ರೂಢಿಯ ಮಾತಾಗಿದೆ. ಗಾರ್ಗಿ ಮೈತ್ರೇಯಿಯರಂತಹ ಉದಾಹರಣೆಗಳಿದ್ದರೂ ಇವುಗಳ ಹೊರತಾಗಿ ಜನಸಾಮಾನ್ಯರಲ್ಲಿ ಮಹಿಳೆಯರ ಸ್ಥಾನವೇನಿದ್ದಿರಬಹುದು ಎಂಬದನ್ನು ಐತಿಹಾಸಿಕ ಆಧಾರಗಳ ಮೇಲಿಂದ ನಿರ್ಧರಿಸುವದು ಕಷ್ಟಸಾಧ್ಯವಾದ ಮಾತು. ಅದೇರೀತಿಯಿಂದ ಮನುವಿನ "ಯತ್ರ ನಾರ್ಯಸ್ತು ಪೂಜ್ಯಂತೇ" ಎಂಬ ಉಕ್ತಿಯ ಅನುರೋಧದಿಂದಲೋ "ನ ಸ್ತ್ರೀಃ ಸ್ವಾತಂತ್ರ್ಯಮರ್ಹತಿ" ಎಂಬ ಮಾತಿನ ಬಲದಿಂದಲೋ ಸ್ತ್ರೀಯರ ಸ್ಥಾನಮಾನಗಳನ್ನು ನಿರ್ಧರಿಸುವದು ಸಮಾಧಾನಕರವಾಗಲಾರದು.

ಪ್ರಾಚೀನ ಭಾರತೀಯ ಮಹಿಳೆಯರ ಸ್ಥಾನಮಾನಗಳೇನೆ ಇದ್ದರೂ ಮುಸಲ್ಮಾನರ ಆಳಿಕೆಯಿಂದ ಮೊದಲಾಗಿ ಭಾರತೀಯ ಮಹಿಳೆಯರಿಗೆ ಒಂದು ಬಗೆಯ ಸಾಮಾಜಿಕ ಅಜ್ಞಾತವಾಸ, ಬಂದೊದಗಿತೆಂಬದು ಧೃಢವಾದ ಮಾತು. ಈ ಅಜ್ಞಾತವಾಸದ ಪರಿಣಾಮವಾಗಿ ಸ್ತ್ರೀಯರ ಕಾರ್ಯಕ್ಷೇತ್ರ ಬಹಳ ಮರ್ಯಾದಿತವಾಯಿತು. ನಿಸರ್ಗಸಿದ್ಧವಾದ ಮನೆತನದ ಕಾರ್ಯಕೆಲಸ ಮತ್ತು ಮಕ್ಕಳ ಪಾಲನೆ ಪೋಷಣೆಯಂತಹ ಮೂಲಭೂತವಾದ ಹೊಣೆಗಾರಿಕೆ ಮಾತ್ರ ಸ್ತ್ರೀಯರ ಕರ್ತವ್ಯವಾಯಿತು. ಈ ಬಗೆಯ ಪರಿಸ್ಥಿತಿಯಲ್ಲಿ ಮಹಿಳೆಯರು ತಮ್ಮ ಗೊತ್ತುಗುರಿಗಳ ಬಗೆಗೆ ವಿಚಾರಮಾಡುವ ಪ್ರಸಂಗವೇ ಇರಲಿಲ್ಲ. ಸಾಮಾಜಿಕ ಹಕ್ಕುಬಾಧ್ಯತೆಗಳಿಲ್ಲದಾಗ ಕರ್ತವ್ಯಕರ್ಮಗಳೂ ಇಲ್ಲದಾದುವು.

ಆದರೆ ಭಾರತದ ಇತಿಹಾಸದಲ್ಲಿ ಪಾಶ್ಚಿಮಾತ್ಯ ಸಂಸ್ಕೃತಿಯ ಪ್ರಭಾವಕ್ಕೆ ಮೊದಲಾದೊಡನೆ ಸಾಮಾನ್ಯ ಭಾರತೀಯ ಜೀವನದಲ್ಲಿ ಉಂಟಾದ ಕ್ರಮೇಣ ಕ್ರಾಂತಿಯಿಂದ ಆನುಷಂಗಿಕವಾಗಿ ಮಹಿಳೆಯರಲ್ಲಿಯೂ ವಿಚಾರಕ್ರಾಂತಿಗೆ ಮೊದಲಾಯಿತು. ರಾಜಕೀಯ ಸ್ವಾತಂತ್ರ್ಯದ ವಿಚಾರದಲ್ಲಿ ಜಾಗೃತಿಯನ್ನು ಉಂಟುಮಾಡಿದಾಗ, ಮಹಿಳೆಯರಿಗೂ ತಮ್ಮ ಸ್ಥಾನಮಾನದ ವಿಷಯವಾಗಿಯೂ ರಾಜಕೀಯ ಸ್ವಾತಂತ್ರ್ಯದ ಹೋರಾಟದಲ್ಲಿ ತಾವು ಸಲ್ಲಿಸಬಹುದಾದ ಸೇವೆಯ ವಿಷಯವಾಗಿಯೂ ಮೊದಲಿಗೆ ಅರಿವುಂಟಾಯಿತು. ರಾಜಕೀಯ ರಂಗದಲ್ಲಿ ಸ್ತ್ರೀಯರು ಧುಮುಕಬೇಕಾದರೆ ಅವರಿಗೊಂದು ವ್ಯಕ್ತಿತ್ವವೂ ಅವರ ವ್ಯಕ್ತಿತ್ವಕ್ಕೆ ಸಾಮಾಜಿಕ ದೃಷ್ಟಿಯಿಂದ ಗೌರವವೂ ಇಲ್ಲದೆ ಹೋದರೆ, ಅವರು ಯಾವ ಕಾರ್ಯವನ್ನೂ ಯಶಸ್ವಿಯಾಗಿ ಮಾಡಲಾರರೆಂದು ನಂಬಿಕೆಯುಂಟಾಯಿತು.

ಹೊಸ ಹಕ್ಕು ಬಾಧ್ಯತೆಗಳು

ಒಂದು ಮಹತ್ವದ ಆಂದೋಲನದ ಪರಿಣಾಮವಾಗಿ ಅದರೊಡನೆ ನಿಕಟವಾಗಿ ಸಂಬದ್ಧವಾದ ಅನೇಕ ಸಮಸ್ಯೆಗಳ ಚರ್ಚೆಗೂ ಪರಿಹಾರಕ್ಕೂ ಮೊದಲಾಯಿತು. ಇದರಿಂದ ಇಂಗ್ಲಂಡದಂತಹ ಮುಂದುವರಿದ ರಾಷ್ಟ್ರಗಳ ಮಹಿಳೆಯರಿಗಿಂತ ಅಲ್ಪ ಶ್ರಮದಿಂದ ಭಾರತದ ಮಹಿಳೆಯರು ಮತದಾನ, ಉದ್ಯೋಗ ಧಂದೆಗಳಲ್ಲಿ ಪ್ರವೇಶ ಮೊದಲಾದ ಅನೇಕ ಹಕ್ಕುಗಳನ್ನು ಸಂಪಾದಿಸಿದರು. ಪರಂಪರಾಗತವಾಗಿ ಬಂದ ಕಾನೂನುಗಳೂ ಧರ್ಮಶಾಸ್ತ್ರದ ನಿಯಮಗಳೂ ಮಹಿಳೆಯರ ಆರ್ಥಿಕ ಸ್ವಾತಂತ್ರ್ಯವನ್ನು ಕಸಿದುಕೊಂಡು ಮಹಿಳೆಯರನ್ನು ಒಂದು "ಹೊರೆ" ಯನ್ನಾಗಿ ಮಾಡಿದ್ದವು. ಈಗಲೂ ಭಾರತೀಯ ಮಹಿಳೆಯರಿಗೆ ಆಸ್ತಿಯಲ್ಲಿ ನ್ಯಾಯವಾದ ಹಕ್ಕು ಇಲ್ಲದೆ ಇದ್ದರೂ ಮಹಿಳೆಯರ ಆರ್ಥಿಕ ಪರಾವಲಂಬನವನ್ನು ದೂರಮಾಡುವ ಅನೇಕ ಕಾನೂನು ಕಾಯಿದೆಗಳು ಶೀಘ್ರದಲ್ಲಿಯೇ ಅಸ್ತಿತ್ವದಲ್ಲಿ ಬರಲಿವೆ. ಆಸ್ತಿಯಲ್ಲಿಯ ಹಕ್ಕುದಾರಿಕೆಯು ಹೊರತಾಗಿಯೂ ಸ್ತ್ರೀಯರು ನಿಜವಾಗಿ ಆರ್ಥಿಕ ಹೊರೆಯಲ್ಲವೆಂಬ ಕಲ್ಪನೆ ಸಮಾಜದಲ್ಲಿ ರೂಢವಾಗಬೇಕಾದರೆ ಭಾರತೀಯರ ಸಾಂಪ್ರದಾಯಕ ದೃಷ್ಟಿಕೋನ ಬದಲಾಗಬೇಕು. ಆಸ್ತಿಯೇ ಇಲ್ಲದಿರುವಾಗ ಎಷ್ಟೋ ಮಹಿಳೆಯರಿಗೆ ತಂದೆಯ ಇಲ್ಲವೆ ಪತಿಯ ಆಸ್ತಿಯಲ್ಲಿ ಪಾಲು ದೊರೆಯಬೇಕಾದ ಪ್ರಸಂಗವೇ ಇಲ್ಲದಾಗುವದು. ಪ್ರತಿಯೊಬ್ಬ ಮಹಿಳೆಯೂ ಯಾವದಾದರೊಂದು ಹೊರಗಿನ ಉದ್ಯೋಗವನ್ನು ಮಾಡಿ ಹಣ ಸಂಪಾದಿಸುವದು ಸಾಧ್ಯವೂ ಇಲ್ಲ; ಮತ್ತು ಅನೇಕ ಸಲ ಅವಳ ಶಕ್ತಿಯ ಅಪವ್ಯಯವೂ ಆಗಬಹುದು. ಆದರೆ ಪ್ರತ್ಯಕ್ಷವಾಗಿ ಯಾವದೇ ರೀತಿಯಿಂದ ಹಣ ಸಂಪಾದಿಸದ ಮಹಿಳೆಗೆ ಆರ್ಥಿಕ ಸ್ವಾತಂತ್ರ್ಯವಿರಬಹುದೇ ಹೇಗೆ? ನಿಸರ್ಗತಃ ಜೀವನಕ್ಕೆ ಅವಶ್ಯವಾದ ಕೆಲವು ಕರ್ತವ್ಯ ಕರ್ಮಗಳನ್ನು ಸ್ತ್ರೀಯು ಮಾಡುತ್ತಲೇ ಇರುತ್ತಾಳೆ. ಮನೆಗೆಲಸದ ಇಲ್ಲವೆ ಮಕ್ಕಳ ಪಾಲನ-ಪೋಷಣೆಯ ಕಾರ್ಯದಲ್ಲಿ ಉದ್ಯೋಗಗಳಲ್ಲಿರುವಂತೆ ಮೇಲಾಟ (Competition) ಮತ್ತು ಪೇಟೆ (Market) ಗಳ ಆರ್ಥಿಕ ಸ್ವರೂಪವಿಲ್ಲದಿದ್ದರೂ ಅವ್ಯಾಹತವಾದ, ಪ್ರಾಮಾಣಿಕವಾದ, ಬಹುಮುಖವಾದ ಸೇವೆ ಮತ್ತು ಶ್ರಮ (Labour) ನಿಶ್ಚಯವಾಗಿಯೂ ಇದೆ. ಸಮಾಜದಲ್ಲಿ ಮಹಿಳೆಯರ ಈ ಕಾರ್ಯಕ್ಷೇತ್ರದ ಮೂಲಕವೇ ಅವರಿಗೆ ಆರ್ಥಿಕ ಹೊಣೆಯಾಗದೆ ಆರ್ಥಿಕ ಸೊತ್ತೆಂಬ ಮನ್ನಣೆ ದೊರೆಯಬೇಕು.

ಇನ್ನು ಕೆಲವು ಪ್ರಸಂಗಗಳಲ್ಲಿ ಆರ್ಥಿಕ ಸ್ವಾವಲಂಬನದ ವಿಕೃತ ಕಲ್ಪನೆಯಿಂದ ನಮ್ಮ ಮಹಿಳೆಯರು ಪುರುಷವರ್ಗದೊಡನೆ ಒಂದು ರೀತಿಯ ಸ್ಪರ್ಧೆಯ ವಾತಾವರಣವನ್ನು ನಿರ್ಮಿಸಿಕೊಂಡ ಉದಾಹರ

ಕುಮಾರಿ ವೈದೇಹಿ ಡಂಬಳ ಇವರು ಕರ್ನಾಟಕ ಕಾಲೇಜಿನಲ್ಲಿ 'ಫೆಲೊ' ಆಗಿ ಸಂಸ್ಕೃತವನ್ನು ತೆಗೆದುಕೊಂಡು ಎಂ. ಎ. ಆಗಿ ಈಗ ಧಾರವಾಡದ ಕೆ. ಈ. ಬೋರ್ಡ ಆರ್ಟ್ಸ ಕಾಲೇಜಿನಲ್ಲಿ ಸಂಸ್ಕೃತ ಪ್ರಾಧ್ಯಾಪಕರಾಗಿದ್ದಾರೆ. ಕುಮಾರಿಯವರು ಬರೆದ ಈ ಲೇಖವನ್ನು ಓದಿದರೆ ಅವರ ವಿವೇಚನಾಶಕ್ತಿಯ ಸಾಮಂಜಸ್ಯ, ದೃಷ್ಟಿಯ ಸಮತ್ವ, ಶೈಲಿಯ ಅರ್ಥವ್ಯಕ್ತಿ ಇವು ತಿಳಿಯಬರುತ್ತವೆ. ಸಮಾಜದ ಶೀಲಸಿರಿ, ಸಾಹಿತ್ಯ ಸಂಸ್ಕೃತಿಗಳಿಗೆ ನೀರೆರೆವ ಕೆಲಸ ಇವರಿಂದ ಇನ್ನೂ ಹೆಚ್ಚಾಗಿ ಆಗಬಹುದೆಂಬ ನಿರೀಕ್ಷೆಯಿದೆ. ಈ ಬರಹದಲ್ಲಿಯ ದೃಷ್ಟಿಕೋನವನ್ನು ಸುವಿಚಾರಿಗಳೂ ಸುಶೀಲೆಯರೂ ಆದ ವಿದ್ಯಾವತಿಯರು ತಮ್ಮದನ್ನಾಗಿ ಮಾಡಿಕೊಳ್ಳುವದರಲ್ಲಿ ಏನೂ ಸಂದೇಹವಿಲ್ಲ.

ಣೆಗಳಿವೆ. ಆದರೆ ಈ ರೀತಿಯ ಉದಾಹರಣೆಗಳು ಮಹಿಳೆಯರಿಗೆ ತಮ್ಮ ವಿಶಿಷ್ಟ ಕಾರ್ಯಕ್ಷೇತ್ರದಲ್ಲಿಯ ತಮ್ಮ ಕಾರ್ಯದ ನಿಜವಾದ ಮಹತ್ವದ ಅರಿವಿಲ್ಲದೆ, ಮತ್ತು ಒಂದು ಬಗೆಯ ಸಂಪ್ರದಾಯದ ಕಟ್ಟಿನಲ್ಲಿ ಬೆಳೆದ ಸಂಕುಚಿತ ಮನೋವೃತ್ತಿಯ ಕೀಳ್ಮೆಯ ಪ್ರಭಾವದಿಂದ, ಉಂಟಾದ ಪ್ರಸಂಗಗಳೇ ಹೊರತು ಸ್ತ್ರೀಸಾಮಾನ್ಯರ ಮನೋವೃತ್ತಿಯ ನಿದರ್ಶನಗಳಾಗಲಾರವು.

ಕಾಯದೆಗಳಿಗೆ ಅತಿ ಮಹತ್ವವಿಲ್ಲ, ಯೋಗ್ಯತೆ ಬೆಳೆಯಬೇಕು

ಶೀಘ್ರದಲ್ಲಿಯೇ ಬರಲಿರುವ ವಿವಾಹ ಮತ್ತು ವಿವಾಹ-ವಿಚ್ಛೇದದ ಕಾಯದೆಗಳು ಮಹಿಳೆಯರ ಸಾಮಾಜಿಕ ನ್ಯೂನತೆಯನ್ನು ಹೋಗಲಾಡಿಸಿ ಅವರಿಗೂ ಸಮಾಜದಲ್ಲಿ ಸಮಾನತೆಯನ್ನು ತಂದು ಕೊಡಬಹುದು. ಆದರೆ ವಿವಾಹ-ವಿಚ್ಛೇದ ಕಾಯದೆಯಂತಹ ಕಾಯದೆಗಳು ಆಪತ್ತಿನಲ್ಲಿ ಮಹಿಳೆಯರಿಗೊಂದು ಮಾರ್ಗವನ್ನು ಮಾಡಿ ಕೊಟ್ಟರೂ ಸಾಮಾನ್ಯ ವ್ಯವಹಾರಕ್ಕಾಗಿ ಅವುಗಳಿಗೆ ಯಾವ ಮಹತ್ವವೂ ಇಲ್ಲ. ವಿವಾಹಗಳು ಸುಖಮಯವಾಗುವದರ ಸಲುವಾಗಿ ಮಹತ್ವದ ಒಂದು ಹೊಣೆಯನ್ನು ಮಹಿಳೆಯರು ಹೊರಬೇಕಾಗಿದೆ. ಮತ್ತು ಸದ್ಯದ ಪರಿಸ್ಥಿತಿಯಲ್ಲಿ ಸಾಮಾನ್ಯ ಮಹಿಳೆಗೆ ಆರ್ಥಿಕ ಮತ್ತು ಸಾಮಾಜಿಕ ಭದ್ರತೆಗಳಲ್ಲದೆ ವಿವಾಹ-ವಿಚ್ಛೇದದಂತಹ ಕಾಯದೆಗಳಿಂದ ಉಪಯೋಗವಾಗದೆ ತೊಂದರೆಯೇ ಉಂಟಾಗಬಹುದು. ಇದಕ್ಕಾಗಿ ಮಹಿಳೆಯರು ಸಮಾಜದಲ್ಲಿ ತಮಗೆ ಸಮಾನತೆ ಮತ್ತು ಭದ್ರತೆ ಬೇಕೆಂದು ಹಂಬಲಿಸುವಾಗ ಅದಕ್ಕೆ ಬೇಕಾದ ಪಾತ್ರತೆಯನ್ನು ತಂದು ಕೊಳ್ಳುವದು ಬಹು ಮುಖ್ಯವಾದ ಕರ್ತವ್ಯ.

ನಮ್ಮಲ್ಲಿಯ ವೈವಾಹಿಕ ವೈಷಮ್ಯವಾಗಲಿ, ಮಹಿಳೆಯರ ಸಾಮಾಜಿಕ ದೈನ್ಯವಾಗಲಿ ಹೆಚ್ಚು ಕಡಿಮೆ ಅವರ ಅತಿ ಕೆಳಗಿನದಾದ ಶೈಕ್ಷಣಿಕ ಮತ್ತು ಸಾಂಸ್ಕೃತಿಕ ಅವಸ್ಥೆಯಿಂದ ಉಂಟಾಗುವದೆಂದು ಹೇಳಬಹುದು. ವ್ಯಕ್ತಿ ವ್ಯಕ್ತಿಗಳಲ್ಲಿ ಶೈಕ್ಷಣಿಕ ಮತ್ತು ಸಾಂಸ್ಕೃತಿಕ ವೈಷಮ್ಯವಿದ್ದರೆ ಸಮಾನತೆಯ ಭಾವನೆ ಬೆಳೆಯುವದು ತೀರ ಅಸಂಭವ. ಎಲ್ಲಿಯ ವರೆಗೆ ಸ್ತ್ರೀಯರಿಗೆ ವ್ಯಕ್ತಿತ್ವವನ್ನು ವಿಕಾಸಗೊಳಿಸುವ ಅವಕಾಶವೂ ಇಚ್ಛೆಯೂ ಇಲ್ಲವೋ ಅಲ್ಲಿಯ ವರೆಗೆ ಅವರ ದೈನ್ಯ ಒಂದಿಲ್ಲೊಂದು ಕ್ಷೇತ್ರದಲ್ಲಿ ಅವರನ್ನು ಬೆನ್ನಟ್ಟದೆ ಬಿಡದು. ಸಾಮಾಜಿಕ ಮತ್ತು ಆರ್ಥಿಕ ಸ್ವಾತಂತ್ರ್ಯಕ್ಕಾಗಿ ಹೋರಾಡಬೇಕಾದರೆ ಮಹಿಳೆಯರು ಮೊದಲು ತಮ್ಮ ಯೋಗ್ಯತೆಯನ್ನು ಬೆಳೆಸಿಕೊಳ್ಳಬೇಕು. ಇಲ್ಲವಾದರೆ ಸ್ವಾತಂತ್ರ್ಯವಾಗಲಿ ಸಮಾನತೆಯಾಗಲಿ ಬರಿ ಒಣ ಮಾತುಗಳಾಗಿ ಮಹಿಳೆಯರಿಗಿದ್ದ ಅಲ್ಪ ಸ್ವಲ್ಪ ಯೋಗ್ಯತೆಯನ್ನೂ ಪೊಳ್ಳುಗಳೆಯಬಹುದು.

ಆದರೆ ಮಹಿಳೆಯರ ಸಮಸ್ಯೆಗಳೆಂದು ವಿಚಾರ ಮಾಡುವಾಗ ಯಾವ ಸಮಸ್ಯೆಯಾದರೂ ಕೇವಲ ಮಹಿಳೆಯರಿಗೆ ಮಾತ್ರ ಸಂಬಂಧಿಸಿ ಇರಲಾರದು, ಅದರ ಮೂಲ ಸಾಮಾನ್ಯ ಜನರ ಯಾವದಾದರೊಂದು ಸಮಸ್ಯೆಯಲ್ಲಿಯೇ ಇರುವದೆಂದರೆ ತಪ್ಪಾಗಲಿಕ್ಕಿಲ್ಲ. ಮಹಿಳೆಯರ ಸಮಸ್ಯೆಗಳ ಪರಿಹಾರವಾಗಬೇಕಾದರೆ ಅದರ ಹಿನ್ನೆಲೆಯಲ್ಲಿದ್ದ ಇತರ ಸಾಮಾಜಿಕ ಸಮಸ್ಯೆಗೊಂದು ಪರಿಹಾರ ಮೊದಲು ಬೇಕು. ಮತ್ತು ಈ ಸಾಮಾನ್ಯ ಸಮಸ್ಯೆಗಳ ಪರಿಹಾರಕ್ಕಾಗಿ ಯಥಾಶಕ್ತಿ ಶ್ರಮ ವಹಿಸುವದು ಸ್ತ್ರೀಯರ ಕರ್ತವ್ಯವಾಗಬಹುದು. ಮಹಿಳೆಯರು ಸಮಾಜದ ಒಂದು ಬಹುಮುಖ್ಯವಾದ ಘಟಕವೆಂದು ಎಣಿಸುವಾಗ ಮಹಿಳೆಯರು ತಮ್ಮ ಮಟ್ಟಿಗೆ ಸಂಕುಚಿತವಾದ ಪ್ರತ್ಯೇಕತೆಯ ದೃಷ್ಟಿಯನ್ನು ಇಟ್ಟುಕೊಳ್ಳುವದು ತೀರ ತಪ್ಪು. ಹಕ್ಕು ಬಾಧ್ಯತೆಗಳ ಹಿಂದಿನಿಂದ ಹೊಣೆಗಾರಿಕೆಯು ಬಂದೇ ಬರುತ್ತದೆ. ತಮಗೆ ನ್ಯಾಯವಾಗಿ ದೊರೆಯಬೇಕಾದ ಹಕ್ಕುಗಳನ್ನೂ ಅಧಿಕಾರಗಳನ್ನೂ ಪಡೆಯುವದಕ್ಕಾಗಲಿ, ಪಡೆದವುಗಳಿಂದ ಪೂರ್ಣ ಲಾಭ ಹೊಂದುವದಕ್ಕಾಗಲಿ

ಸ್ತ್ರೀಯರ ಹೊಸ ಹಕ್ಕುಗಳು




ದಕ್ಷತೆ ಮತ್ತು ಹೊಣೆಗಾರಿಕೆ ಅವಶ್ಯವಾಗಿ ಬೇಕು.

ಸಾಮಾಜಿಕ ಅನ್ಯಾಯಗಳಿಗೆ ಮದ್ದು

ಈ ದಕ್ಷತೆ ಮತ್ತು ಹೊಣೆಗಾರಿಕೆ ಭಾರತೀಯ ಮಹಿಳೆಯರಿಗೆ ಬರಬೇಕಾದರೆ ಅವರಿಗೆ ಶಿಕ್ಷಣಸೌಲಭ್ಯವಿರಲೇಬೇಕು. ಮಹಿಳೆಯರಿಗೂ ಶಿಕ್ಷಣ ಅವಶ್ಯವೆಂಬ ಮಾತನ್ನು ಸಾಮಾನ್ಯ ರೀತಿಯಿಂದ ಒಪ್ಪುತ್ತಿದ್ದರೂ ಕೆಲವು ಪರಂಪರಾಗತ ಸಂಪ್ರದಾಯಗಳ ಕಟ್ಟಿನಲ್ಲಿ ಸಿಕ್ಕ ಮಹಿಳೆಯರಿಗೆ ಯೋಗ್ಯವಾದ ಶಿಕ್ಷಣ ಪಡೆಯುವದಕ್ಕಾಗಿ ಅನುಕೂಲತೆಗಳೂ ಅವಕಾಶವೂ ದೊರೆಯುವದು ತೀರ ವಿರಳ. ಇದಕ್ಕೆ ಹೊರತಾಗಿ ಮೊದಲಿನಿಂದಲೂ ಸ್ತ್ರೀಯರು ಆರ್ಥಿಕ ಹೊರೆಯೆಂಬ ಕಲ್ಪನೆ ಮತ್ತು ರೂಢಿ ಸಮಾಜದಲ್ಲಿರುವಾಗ ಸ್ತ್ರೀಯರಿಗೆ ಹೆಚ್ಚಿನ ಶಿಕ್ಷಣ ಅನವಶ್ಯಕವೆಂದೂ ಹಣದ ಅಪವ್ಯಯವೆಂದೂ ಭಾವಿಸಲಾಗುತ್ತಿದೆ. ಆದರೆ ಸ್ತ್ರೀಯು ಒಂದು ನಿರ್ಜೀವ ಮಾರಾಟದ ವಸ್ತುವಾಗಿರದೆ ವ್ಯಕ್ತಿತ್ವ ಮತ್ತು ಕರ್ತೃತ್ವವುಳ್ಳ ಸಮಾಜದ ಮತ್ತು ಕುಟುಂಬದ ಮಹತ್ವದ ಒಂದು ಘಟಕವೆಂಬ ಕಲ್ಪನೆ ರೂಢವಾಗುವಂತೆ ಮಹಿಳೆಯರು ಪ್ರಯತ್ನಿಸಬೇಕಾಗಿದೆ. ವರದಕ್ಷಿಣೆಯಂತಹ ಪದ್ಧತಿಗಳು ಸ್ತ್ರೀಯನ್ನು ತಂದೆಗೆ ಒಂದು ಆರ್ಥಿಕ ಹೊರೆಯನ್ನಾಗಿ ಮಾಡಿದರೆ ಆಶ್ಚರ್ಯವಿಲ್ಲ. ಆದರೆ ಈ ಪದ್ಧತಿಯ ಆರ್ಥಿಕ ಸ್ವರೂಪ ಹೇಗೇ ಇದ್ದರೂ ಇದರಿಂದ ಸ್ತ್ರೀಯ ವ್ಯಕ್ತಿತ್ವಕ್ಕೆ ಯಾವ ಬೆಲೆಯೂ ಇಲ್ಲದೆ ಅವಳ ಮನುಷ್ಯತ್ವಕ್ಕೂ ಅವಳ ಕಾರ್ಯ, ಸೇವೆಗಳಿಗೂ ಯಾವ ಮಹತ್ವವೂ ಇಲ್ಲದೆ ಅವಳನ್ನು ಅಂಶತಃ ಒಂದು ನಿರ್ಜೀವ ವಸ್ತುವನ್ನಾಗಿ ಮಾಡಲಾಗಿದೆ. ಈ ರೀತಿಯ ಕತ್ತಲುಗೂಡಿಸುವ ಸಾಮಾಜಿಕ ಅನ್ಯಾಯಗಳ ವಿರುದ್ಧ ಪ್ರತಿಭಟಿಸುವದು ಮಹಿಳೆಯರ ಕರ್ತವ್ಯ. ಮತ್ತು ಈ ದೃಷ್ಟಿಕೋನ ಬದಲಾಗಬೇಕಾದರೆ ಸ್ತ್ರೀಯರು ತಮ್ಮ ಕರ್ತವ್ಯ ಕರ್ಮಗಳಿಗೆ ಬೇಕಾದ ಅವಶ್ಯಕ ಜ್ಞಾನವನ್ನೂ ಕೌಶಲ್ಯವನ್ನೂ ಮೊದಲು ದೊರಕಿಸಿಕೊಳ್ಳಬೇಕು. ನಿಜವಾದ ಯೋಗ್ಯತೆ ಅವರಲ್ಲಿ ಬರುವುದಾದರೆ ಈ ರೀತಿಯ ಸಾಮಾಜಿಕ ಅನ್ಯಾಯಗಳು ತಾವಾಗಿಯೇ ಇಲ್ಲದಾಗಬಹುದು.

ಪಾಶ್ಚಿಮಾತ್ಯ ದೇಶಗಳಲ್ಲಿ ಸ್ತ್ರೀಯರ ಹಕ್ಕು ಬಾಧ್ಯತೆಗಳ ಸಲುವಾಗಿ ಆಂದೋಲನಗಳೆಷ್ಟೋ ನಡೆದವು: ಅವುಗಳ ಪರಿಣಾಮವಾಗಿ ಸ್ತ್ರೀಯರಿಗೊಂದು ಮಹತ್ವದ ಸ್ಥಾನವಿದೆಯೆಂಬ ಮಾತನ್ನು ಒಪ್ಪಿದರೂ ಸ್ತ್ರೀ ಪುರುಷರಲ್ಲಿ ಒಂದು ರೀತಿಯ ವಿರೋಧ, ಶಿಕ್ಕಾಟ, ಸ್ಪರ್ಧೆ ಅಸ್ತಿತ್ವದಲ್ಲಿ ಬಂದಿದೆ. ಭಾರತೀಯ ಮಹಿಳೆಯರು ಈ ರೀತಿಯ ವಿರೋಧದ ಕಲ್ಪನೆಗೆ ಬಲಿಬೀಳಬಾರದು. ಈ ಪ್ರಸಂಗದಲ್ಲಿ ಸಹಕಾರ ಮತ್ತು ಪರಸ್ಪರ ಪೂರಕಗಳೆಂಬ ಭಾವನೆಯಿಂದ ವಿಕಾಸ ಹೊಂದಬೇಕಾದರೆ ನಮ್ಮ ಮಹಿಳೆಯರಿಗೆ ಭಾರತೀಯ ಸಂಸ್ಕೃತಿಯಿಂದ ಬಹಳ ಮಹತ್ವದ ಸಹಾಯವಾಗಬಹುದು. ವ್ಯಕ್ತಿಯ ಸರ್ವಾಂಗೀಣ ವಿಕಾಸ ನಮ್ಮ ಮಹಿಳೆಯರ ಗುರಿಯಾಗಿರಬೇಕಲ್ಲದೆ ಸಾಮಾಜಿಕ ಅನ್ಯಾಯಗಳನ್ನು ಪ್ರತಿಭಟಿಸುವಾಗ ಪ್ರತೀಕಾರ ಇಲ್ಲವೆ ಅಸಹಕಾರದ ಭಾವನೆ ಬರಕೂಡದು.

ಭಾರತೀಯ ಮಹಿಳೆಯರ ಗೊತ್ತುಗುರಿಗಳನ್ನು ನಿರ್ದಿಷ್ಟವಾಗಿ ಗೊತ್ತುಪಡಿಸುವದಕ್ಕೆ ಮೊದಲು ಭಾರತೀಯ ಮಹಿಳೆಯರಲ್ಲಿ, ಸಮಾಜದಲ್ಲಿ ತಾವೂ ಮಾಡಬೇಕಾದ ಒಂದು ಕಾರ್ಯವಿದೆಯೆಂದೂ ಅದರ ನಿರ್ವಹಣೆಯ ಹೊಣೆ ತಮ್ಮ ಮೇಲಿರುವದೆಂದೂ ಮೊದಲಿಗೆ ಅವರಲ್ಲಿ ಅರಿವುಂಟಾಗಬೇಕು. ಅಂದರೆ ಮಾತ್ರ ಮಹಿಳೆಯರು ಸಾಮಾಜಿಕ ಮತ್ತು ಸಾಂಸ್ಕೃತಿಕ ಕಾರ್ಯಗಳಲ್ಲಿ ಭಾಗವಹಿಸಿ ತಮ್ಮ ಸೇವೆಯನ್ನು ಸಲ್ಲಿಸಬಹುದು. ಇಲ್ಲವಾದರೆ ಯಾರಿಗಾಗಿ ಈ ಹಕ್ಕು ಬಾಧ್ಯತೆಗಳೂ ಕರ್ತವ್ಯಕರ್ಮಗಳೂ ಇರುವವೆಂದು ಹೇಳಲಾಗುತ್ತಿದೆಯೋ ಅವರಿಗೇ ಅವುಗಳ ಅರಿವು ಮತ್ತು ಅವಶ್ಯಕತೆ ಇರದಿದ್ದರೆ ಎಲ್ಲವೂ ನಿರರ್ಥಕವೇ ಸರಿ. ಅನಿರ್ವಾಹವೆಂದು ನಿಸರ್ಗವೇ ಅವರ ಮೇಲೆ ಹೊರಿಸಿದ ಮನೆತನದ ಮತ್ತು ಮಕ್ಕಳ ಕ್ಷೇತ್ರದಲ್ಲಿ ಮಾತ್ರ ಶ್ರಮಿಸುತ್ತ, ಅದು ಕೂಡ ನಿರ್ದಿಷ್ಟವಾದ ಧ್ಯೇಯ ಧೋರಣೆ ಮತ್ತು ಕೌಶಲಗಳಿಲ್ಲದೆ ಸ್ವಯಂ ನಿರ್ಮಿತವಾದ ಪಂಜರದಲ್ಲಿಯೇ ಅವರು ಉಳಿಯಬಹುದು. ತದ್ವಿರುದ್ಧವಾಗಿ ತಮ್ಮ ಕರ್ತವ್ಯವನ್ನು ಮನೆಯ ಮಟ್ಟಿಗೆ ಮಾತ್ರ ಮರ್ಯಾದಿತವಾಗಿಡದೆ ಸಾಧ್ಯವಾದಷ್ಟು ವಿಶಾಲವಾಗಿ ಮಾಡಿದರೆ ತಮ್ಮ ಎಲ್ಲ ಕಾರ್ಯಗಳನ್ನೂ ಅವರು ಜಾಣ್ಮೆಯಿಂದ ನಿರ್ವಹಿಸಬಹುದು.



ಇನ್ನು ಬ್ರಿಟಿಷರಂತೂ ಮರಳಿ ಬರಲಾರರು. ಭಾರತೀಯ ಬಿರುದುಬಾವಲಿಗಳಿಗಾಗಿ ನಾವೇಕೆ ಚಳವಳಿ ಮಾಡಬಾರದು?



ನಿಮ್ಮ ಮುಂಬಯಿ ಸೀದಾ ಪದ್ಧತಿ ಅದ್ಭುತವಾಗಿದೆ. ಒಂದೇ ತಿಂಗಳಲ್ಲಿ ನನ್ನ ತೂಕ ೧೦ ಪೌಂಡ್ ಕಡಿಮೆಯಾಯಿತು.

ಆಧುನಿಕ ಕನ್ನಡ ಸಾಹಿತ್ಯದ ಒಲವು–ನಿಲವು

(ಲೇಖಕರು:— ಪ್ರೊ. ಸ. ಸ. ಮಾಳವಾಡ, ಎಂ. ಎ.)

ಹೊಸಗನ್ನಡದ ಕಾಲವನ್ನು ಒಂದು ದೃಷ್ಟಿಯಲ್ಲಿ ಮುಮ್ಮಡಿ ಕೃಷ್ಣರಾಜರ ಆಳಿಕೆಯಿಂದ ಅಂದರೆ ಸುಮಾರು ೧೮೨೦ ರಿಂದ ಆರಂಭಿಸಬಹುದು. ಆದರೂ 'ಆಧುನಿಕ' ಪದದ ನಿಜವಾದ ಅರ್ಥದಲ್ಲಿ ೧೯೨೦ ರಿಂದ ಈಚೆಗೆ ನಮ್ಮ ಸಾಹಿತ್ಯದ ಆಧುನಿಕ ಕಾಲವನ್ನು ಆರಂಭಿಸಬೇಕಾಗುತ್ತದೆ. ಅಂದಿನಿಂದ ನಮ್ಮ ಸಾಹಿತ್ಯರಂಗದಲ್ಲಿ ಹೊಸದೊಂದು ಮಟ್ಟವು ಕಾಣಬರುತ್ತಿದೆ. ಸ್ವಾತಂತ್ರ್ಯದ ಕೂಗು ನಮ್ಮನ್ನು ಬಡಿದೆಬ್ಬಿಸಿದ ಕಾಲವದು. ರಾಜಕೀಯ ಸ್ವಾತಂತ್ರ್ಯದಾಹವು ನಮ್ಮ ರಾಷ್ಟ್ರದಲ್ಲಿ ಹಬ್ಬಿದಾಗ ಒಂದು ಹೊಸ ಗಾಳಿ ಬೀಸಿದಂತಾಯಿತು. ಆ ಗಾಳಿ ಕನ್ನಡ ಜನತೆಯಲ್ಲಿ, ಕನ್ನಡ ಸಾಹಿತ್ಯದಲ್ಲಿ ನವಚೇತನವನ್ನು ತುಂಬಿತು. ಅಂತು, ೧೯೨೦ ರಿಂದ ೧೯೪೭ ರ ವರೆಗಿನ ಕಾಲವನ್ನು ಆಧುನಿಕ ಕನ್ನಡ ಸಾಹಿತ್ಯದ ಒಂದು 'ವಿಭಾಗ' ವೆಂದಿಟ್ಟುಕೊಳ್ಳಬೇಕಾಗುತ್ತಿದೆ.

ಹೊಸತನಕ್ಕೆ ಸ್ಫೂರ್ತಿ

ಸ್ವಾತಂತ್ರ್ಯಾಭಿಲಾಷೆಯ ಅರುಣೋದಯದಲ್ಲಿ 'ಕನ್ನಡ'ವಕ್ಕಿಗಳ ಕಿಲಕಿಲಾಟ ಕೇಳಬಂದಿತು. ಜನತೆಯನ್ನು ನಿದ್ರೆಯಿಂದೆಚ್ಚರಿಸಲು ಅರುಣೋದಯದ ಮಂಗಲರವ ಆವಶ್ಯಕವಾಗಿತ್ತು. ಸೃಷ್ಟಿಯ ಶೋಭೆ ನಮ್ಮ ಕವಿಗಳಿಗೆ ಹೊಸ ಹುರುಪನ್ನು ತಂದಿತು. ಆಂಗ್ಲ ಕವನಗಳ ಅಭ್ಯಾಸದಿಂದಾಗಿ ಹೊಸ ದೃಷ್ಟಿ ತಲೆದೋರಿತ್ತು. ಅದರ ಪ್ರಭಾವ ಅಲ್ಲಲ್ಲಿ ಕಂಡುಬರಹತ್ತಿತ್ತು. ಭಾರತದ ಎಲ್ಲ ಪ್ರಾಂತಗಳಲ್ಲಿಯೂ ಈ ನವೀನ ದೃಷ್ಟಿ ಕಂಡುಬಂದಿತು. ಮುಖ್ಯವಾಗಿ ವಂಗ, ಮಹಾರಾಷ್ಟ್ರ ಪ್ರಾಂತಗಳಲ್ಲಿಯ ಜಾಗೃತಿಯು ನಮ್ಮಲ್ಲಿಯೂ ಮೂಡಿಬಂದಿತು. ೧೯೨೦ ರಲ್ಲಿ ಕೋಗಿಲೆಯ ಕುಕಿಲು ಕೇಳಬಂದರೆ ೧೯೪೭ ರಲ್ಲಿ ಸ್ವಾತಂತ್ರ್ಯದ ಘೋಷ ನಮ್ಮ ಸಾಹಿತ್ಯರಂಗದಲ್ಲಿ ಗಡಚಿಕ್ಕಿತು. ಆಂಗ್ಲ ಕವಿಗಳ ಬಾನಾಡಿ ನಮ್ಮ ಮಲೆನಾಡಿನ ಕಾಜಾಣನ ಇಂಚರವನ್ನು ಹೊರಹೊಮ್ಮಿಸಿತು, ಆಗ. ಸೋವಿಯೆಟ್ ರಸಿಯಾದ ವರೆಗೆ ಕೈಚಾಚಿದೆ ಕನ್ನಡ ಕವನವೀಗ. ಒಮ್ಮೆ ಕವೀಂದ್ರ ರವೀಂದ್ರರ ವಾಣಿ ನಮ್ಮ ಕವಿಕುಲಕ್ಕೆ ಸ್ಫೂರ್ತಿಯನ್ನಿತ್ತಿತು. ಇಂದು ಮಹಾತ್ಮರ ದಿವ್ಯ ಸಾಧನೆ ನಮ್ಮ ಬರೆಹಗಾರರ ಸ್ಫೂರ್ತಿಯ ಚಿಲುಮೆಯಾಗಿದೆ. ಈ ಮಧ್ಯೆ ಮಹರ್ಷಿ ಅರವಿಂದರ ದಿವ್ಯ ದೃಷ್ಟಿಗೆ, ಮನಸೋತಿದೆ ನಮ್ಮ ಕಾವ್ಯ. ಸುತ್ತಲಿನ ಜೀವನದಲ್ಲಿ ಹೊಸ ಬಗೆಯ ಆಸ್ಥೆಯು ಹೊಸತನದೊಂದಿಗೆ ಶಾಶ್ವತ ತತ್ವಗಳ ಪ್ರಾಚೀನ ಪರಂಪರೆಯನ್ನು ನಮ್ಮ ಸಾಹಿತ್ಯ ಕಾಯ್ದುಕೊಂಡು ಬರಹತ್ತಿದೆ. ವಸ್ತು ಹಾಗು ರೂಪಗಳ ವೈವಿಧ್ಯ, ಭಾಷೆಯ ವೈಚಿತ್ರ್ಯ, ಸ್ವಚ್ಛಂದ ಛಂದ ಇವೆಲ್ಲವೂ ಸಹಜವಾಗಿಯೇ ಬೆಳೆದುಬಂದಿವೆ. ಹೊಸತನದ ಉತ್ಸಾಹದಲ್ಲಿ ಲಘುವಾದ ರೀತಿ, ಪ್ರಯೋಗಪ್ರಿಯತೆ, ಅಲ್ಪತೃಪ್ತಿ, ಹೆಸರಿನ ಪ್ರಕಟನೆಯ ಆಸೆ ಇವುಗಳ ಪರಿಣಾಮವೂ ಆಗಾಗ ಎದ್ದು ಕಾಣುತ್ತಿದೆ. ಕಸಬರಿಗೆ, ಅಂಚೆಯಾಳು ಈ ವಸ್ತುಗಳನ್ನು ಕವನಗಳಿಗಾಗಿ ಉಪಯೋಗಿಸಿಕೊಂಡ ನಮ್ಮಲ್ಲಿ ಈಚೆಗೆ ಗೋಡಸೆ, ಕಾಸೀಮ ರಜವಿಯನ್ನು ಕುರಿತು ಪದ್ಯಗಳೂ ಪ್ರಕಟವಾಗಿವೆ. 'ಮಂಕು ತಿಮ್ಮನ ಕಗ್ಗ'ದಂತಹ ಉದಾತ್ತ ಅನುಭವ, ತತ್ತ್ವ ಪ್ರಣಾಲಿಯೊಂದಿಗೆ 'ಮೈಸೂರು ಮಲ್ಲಿಗೆ'ಯ ಹೊಸ ಸೌರಭವೂ ಸೂಸಿ ಬಂದಂತೆ ಆಗಾಗ ನಿಜವಾದ 'ಕಗ್ಗ'ಗಳೂ ಬಂದಿವೆ. ಬೆಳೆಯುತ್ತಿರುವ ಹೊಲದಲ್ಲಿ ಕಸಕಡ್ಡಿ ಅನಿವಾರ್ಯವೇ ಸರಿ.

ಗತವೈಭವದ ನೆನಪು

ರಾಷ್ಟ್ರ ಸ್ವಾತಂತ್ರ್ಯದ ಭವಿಷ್ಯವನ್ನು ರೂಪಿಸಲು ತೊಡಗಿದಾಗ ಪ್ರಾಚೀನ ವೈಭವದ ಅಭಿಮಾನದ ನೆನಪು ಆವಶ್ಯಕವಾಗಿ ಬೇಕು. ಈ ಮಾತು ನಾಡಿಗೂ ಅನ್ವಯಿಸುತ್ತಿದೆ. ನಾಡು ರಾಷ್ಟ್ರದ ಘಟಕವೇ ಆಗಿದೆ. ಅಂತೆಯೆ ಆಧುನಿಕ ಯುಗದ ಆರಂಭದಲ್ಲಿ ಕರ್ನಾಟಕದ ಪ್ರಾಚೀನ ವೈಭವದ ನೆನಪನ್ನು ಎತ್ತಿ ತೋರಿಸುವ ಕೃತಿಗಳು ಹೆಚ್ಚಾಗಿ ಬಂದವು. ಕರ್ನಾಟಕ ಗತ ವೈಭವದ' ನಿರೂಪಣೆಯು ನಮ್ಮನ್ನು ಹೊಡೆದೆಬ್ಬಿಸಿತು. ವಿಜಯ ನಗರದ ಘನತೆಯು ನಮ್ಮಲ್ಲಿ ಹುಮ್ಮಸ್ಸನ್ನು ತುಂಬಿತು. ಪುಲಿಕೇಶಿ, ಹುಕ್ಕ ಬುಕ್ಕರು, ಪಂಪ, ರನ್ನ, ಹರಿಹರ ಈ ಹೆಸರುಗಳು ನಮಗೆ ಸ್ಫೂರ್ತಿಯನ್ನಿತ್ತವು. ಹೊಯ್ಸಳರ ಶಿಲ್ಪಕಲೆಯ ನೆನಪು ನಮ್ಮಲ್ಲಿ ಅಭಿಮಾನವನ್ನು ಜಾಗೃತಗೊಳಿಸಿತು. ಬೇಲೂರಿನ ಶಿಲಾಬಾಲಿಕೆಯರು ಶಿಲ್ಪದಲ್ಲಿಯಲ್ಲದೆ ಆಧುನಿಕ ಕನ್ನಡ ಕವನ ಪ್ರಪಂಚದಲ್ಲಿಯೂ ಅಮರಸ್ಥಾನ ಪಡೆದರು. ಬಸವಣ್ಣ ವಿದ್ಯಾರಣ್ಯರ ಮಹಾ ಸಾಧನೆಗಳು ನಮ್ಮಲ್ಲಿ ಉದಾತ್ತ ಪ್ರೇರಣೆಯನ್ನುಂಟು ಮಾಡಿದವು. ಪ್ರಾಚೀನ ಕರ್ನಾಟಕದ ಇತಿಹಾಸ ಸಂಶೋಧನೆಯೊಂದಿಗೆ ಐತಿಹಾಸಿಕ ವಸ್ತುವನ್ನು ಕುರಿತು ಲಲಿತ ಸಾಹಿತ್ಯವೂ ಸೃಷ್ಟಿಯಾಗಿದೆ.

ಹೊಸರೂಪ ಮತ್ತು ಹೊಸ ಸಮಸ್ಯೆಗಳ ಉದಯ

ಆಂಗ್ಲ ವಿದ್ಯಾಭ್ಯಾಸದ ಫಲವಾಗಿ ನಮ್ಮ ಸಮಾಜವು ಹೊಸ ರೀತಿಯಲ್ಲಿ ರೂಪುಗೊಳ್ಳಹತ್ತಿದಾಗ ಸಾಮಾಜಿಕ ಸಾಹಿತ್ಯವೂ ನಮ್ಮಲ್ಲಿ ಉದಯಿಸಹತ್ತಿತು. ಆಂಗ್ಲ ಶಿಕ್ಷಣದಿಂದುಂಟಾದ ವೈಚಿತ್ರ್ಯಗಳು ಆಗಿನ ಕೃತಿಗಳಲ್ಲಿ ರೂಪವೆತ್ತಿವೆ. ನಮ್ಮ ಸಣ್ಣ ಕತೆಗಳಲ್ಲಿ ಒಮ್ಮೆ ಕಾಲೇಜಿನ ರೋಮಾನ್ಸ್ ಜೀವನ, ನವದಂಪತಿಗಳ ಪ್ರಣಯ ಇವುಗಳ ಚಿತ್ರವೇ ಹೆಚ್ಚಾಗಿತ್ತು. ಇಂತಹ ಚಿತ್ರ ರಚಿಸಲು ಅನುಕೂಲವಾದಂತೆ ಓದಲು ರುಚಿಕರವೂ ಎನಿಸಿತು. ಮುಂದೆ ಕನ್ನಡ ಸಣ್ಣ

ಧಾರವಾಡದ ಕರ್ನಾಟಕ ಕಾಲೇಜಿನಲ್ಲಿ ಕನ್ನಡ ಪ್ರಾಧ್ಯಾಪಕರಾಗಿರುವ ಶ್ರೀ ಸ. ಸ. ಮಾಳವಾಡರ ಆಳವಾದ ಸಾಹಿತ್ಯಾಭ್ಯಾಸಕ್ಕೆ ಅವರ ಸರಳ ಸುಂದರ ವ್ಯಾಖ್ಯಾನವೇ ನಿದರ್ಶನವಾಗಿದೆ. ಕಾಠಿನ್ಯ ಅವರ ಶೈಲಿಗೆ ಗೊತ್ತೇ ಇಲ್ಲ. ಬಹಳ ತಿಳಿಯಾದ ಮಾತುಗಳಿಂದ ಸಾಹಿತ್ಯ ಕೃತಿಗಳ ಸಾರಾಸಾರವನ್ನು ವಿವೇಚಿಸಿ ಹೇಳುವ ಅವರ ವೈಶಿಷ್ಟ್ಯವನ್ನು ಪ್ರಸ್ತುತ ಲೇಖನದಲ್ಲಿ ಯಾರಾದರೂ ಕಾಣಬಹುದು. ನಾನಾಮುಖವಾಗಿ ಬೆಳೆದು ಬರುತ್ತಿರುವ ಕನ್ನಡ ಸಾಹಿತ್ಯದ ಉತ್ಪಥಗಳಿಗೆ ಅವರಿಲ್ಲಿ ಕನ್ನಡಿ ಹಿಡಿದಿದ್ದಾರೆ. ಆಯಾ ಸಾಹಿತ್ಯವಿಭಾಗಗಳಲ್ಲಿ ಸಾಧಿಸಿದ ಮತ್ತು ಸಾಧಿಸಬೇಕಾದ ಅಂಶಗಳೇನೆಂಬುದನ್ನು ತಿಳಿದುಕೊಳ್ಳಬಯಸುವವರು ಈ ಲೇಖನವನ್ನು ಅಗತ್ಯವಾಗಿ ಓದಬೇಕು.—

ಕತೆಯು ಜೀವನದ ವಿವಿಧ ಅಂಶಗಳನ್ನು ಪ್ರತಿಬಿಂಬಿಸಲು ತೊಡಗಿತು. ಗಂಭೀರತೆಯೊಂದಿಗೆ ಸಣ್ಣ ಕತೆಯ ತಂತ್ರವೂ ಸ್ಪಷ್ಟವಾಗತೊಡಗಿತು. ಕನ್ನಡದಲ್ಲಿ ಸಣ್ಣ ಕತೆಯ ಬೆಳೆಯು ವಿಪುಲವಾಗಿ ಬಂದಿದೆ. ಹಲಕೆಲವು ಶ್ರೇಷ್ಠ ಕೃತಿಗಳ ಸೃಷ್ಟಿ ಕನ್ನಡದಲ್ಲಿ ಕಂಗೊಳಿಸುತ್ತಿದೆ. 'ವಸುಮತ್ತಿ' ಯಂತಹ ಕತೆಗಳಲ್ಲಿಯ ದೃಷ್ಟಿ ಉದ್ಬೋಧಕವಾಗಿದೆ. ಪರಭಾಷೆಯಲ್ಲಿ ಅನುವಾದವಾಗಿರುವ ಕೆಲವು ಕನ್ನಡದ ಸಣ್ಣ ಕತೆಗಳು ಹೊರಗಿನವರ ಮೆಚ್ಚುಗೆಗೆ ಕಾರಣವಾಗಿರುವವಲ್ಲದೆ ಕನ್ನಡದ ಕೀರ್ತಿಯನ್ನು ಬೆಳಿಸಲು ಕಾರಣವಾಗಿವೆ. ರೂಪುಗೊಳ್ಳುತ್ತಿರುವ ಹೊಸ ಸಮಾಜದ ಚಿತ್ರ ಸಣ್ಣಕತೆಗಳಿಗಿಂತ ನಾಟಕ, ಕಾದಂಬರಿಗಳಲ್ಲಿ ಹೆಚ್ಚು ವಿವರವಾಗಿ ಬರಬಲ್ಲದು. ಸಾಮಾಜಿಕ ನಾಟಕ, ಕಾದಂಬರಿ, ಏಕಾಂಕಗಳು ನಮ್ಮ ಸಾಹಿತ್ಯದ ಹೊಸ ರೂಪಗಳೇ ಆಗಿವೆ. ಅಂತೂ ನಮ್ಮ ಸಾಹಿತ್ಯದಲ್ಲಿ ಹೊಸ ರೂಪಗಳು, ಸಾಹಿತ್ಯ ಕೃತಿಗಳಲ್ಲಿ ಹೊಸ ಸಮಸ್ಯೆಗಳು ಬಂದಿವೆ.

ಯಥಾರ್ಥ ದರ್ಶನ

ನಮ್ಮ ಸಮಾಜದ "ಟೊಳ್ಳು-ಗಟ್ಟಿ" ಗಳ ವಿರೋಧ ಚಿತ್ರ ಬಹು ಸ್ಫುಟವಾಗಿ ಕೆಲವು ಕೃತಿಗಳಲ್ಲಿ ಬಂದಿದೆ. ಹಾಯ್‌ಸ್ಕೂಲ್, ಕಾಲೇಜುಗಳ ವಿದ್ಯಾರ್ಥಿಗಳಲ್ಲಾಗಲಿ, ಕುಟುಂಬದಲ್ಲಿಯಾಗಲಿ, ಸಮಾಜದಲ್ಲಿ ಪ್ರತಿಷ್ಠಿತರೆಂದೆನಿಸಿಕೊಳ್ಳುವವರಲ್ಲಾಗಲಿ ಈ ವಿರೋಧ ಚಿತ್ರವಿದ್ದೇಯಿದೆಯೆಂಬುದನ್ನು ನಮ್ಮ ಪ್ರತಿಭಾವಂತ ನಾಟಕಕಾರರೊಬ್ಬರು ಪರಿಣಾಮಕಾರಕವಾಗಿ ತೋರಿಸಿದ್ದಾರೆ. ಇನ್ನೂ ಕೆಲವು ನಾಟಕಕಾರರು ವಕೀಲರ ಬಾರರೂಮಿನ ದೃಶ್ಯವನ್ನು, ನಿರುದ್ಯೋಗಿ ಪದವೀಧರರ 'ಸರ್ಕಸಿನ' ಕರುಣಾಮಯ ನೋಟವನ್ನು ತೋರಿಸಿದ್ದಾರೆ. ಬಡತನದ ಭೂತ, ನಿರುದ್ಯೋಗದ ಭೀಕರತೆ ಇವುಗಳ ಹೃದಯಸ್ಪರ್ಶಿಯಾದ ಚಿತ್ರ ಇನ್ನು ಕೆಲವು ಕೃತಿಗಳಲ್ಲಿದೆ. ಒಡೆದುಹೋಗುತ್ತಿರುವ ಒಟ್ಟುಕುಟುಂಬದ ವಿಷಮಚಿತ್ರ ಕಾದಂಬರಿಗಳಲ್ಲಿ ಬಂದಿದೆ. 'ಪುರೋಗಾಮಿ' ಎಂಬ ಹೆಸರುಳ್ಳ ಕೃತಿಗಳಲ್ಲಿ ಮುಖ್ಯವಾಗಿ ಬರಗಾಲದ ಬವಣೆ, ಹಸಿವಿನ ಕೂಗು ಇವುಗಳ ಮಾರ್ದನಿಯಿದೆ. ಅಸ್ಪೃಶ್ಯತೆಯ ಕಲಂಕ ಸಮಾಜದಲ್ಲಿ ತಾಂಡವವಾಡುತ್ತಿರುವದನ್ನು ನಮ್ಮ ಸಾಹಿತ್ಯ ನಿರೂಪಿಸಿದೆ. ಸೂಳೆಯ ಸಂಸಾರದ ಒಳಹೊರಗುಗಳ ಭೀಷಣ ಚಿತ್ರ ಹೃದಯವನ್ನು ಕಲಕುವಂತಿದೆ. ವೇಶ್ಯಾವೃತ್ತಿಯನ್ನು ಪ್ರಕಟವಾಗಿ ಕೈಕೊಂಡವರಂತೂ ಸರಿಯೇ. ಆದರೆ ಕುಲೀನರೆಂಬವರು ಮನೆಯಲ್ಲಿ ನಡೆಯಿಸುವ ಸೂಳೆಯ ಸಂಸಾರದ ಅನಿವಾರ್ಯವೋ, ಅವಿವೇಕದ್ದೋ ಆಗಿರುವ ಚಿತ್ರಕ್ಕೆ ನಮ್ಮ ಸಾಹಿತ್ಯ ರೂಪುಗೊಟ್ಟಿದೆ. ಪೂರ್ವಾಚಾರದ ಮೂಢ ರೂಢಿಗಳ ಹಿಂದೆ ನಡೆದಿರುವ ಅನಾಚಾರ ನಾಟಕದ ತೆರೆಯನ್ನೂ ಕೆಲವು ನಾಟಕಕಾರರು ನಿಷ್ಠುರವಾಗಿ ತೆರೆದು ತೋರಿಸಿದ್ದಾರೆ. ಶಾಂತಿಯ ಆಗರ, ಧರ್ಮದ ಮಂದಿರಗಳಾಗಬೇಕಾಗಿರುವ ಗುಡಿಗಳ ಗರ್ಭದಲ್ಲಿ ಕರಾಳ ನೃತ್ಯ ನಡೆಯಿಸಿರುವ ಅನಾಚಾರ, ಕೋಲಾಹಲಗಳು, ಪಂಡರ ಪುಂಡತನ ಇವುಗಳ ನಿರ್ಭೀತ ಚಿತ್ರ ಧಾರ್ಮಿಕರೆಂಬವರ ಪಿತ್ತವನ್ನು ಹೆಚ್ಚಿಸಿವೆ. ಆಧುನಿಕ ಕನ್ನಡ ಸಾಹಿತ್ಯರಂಗದಲ್ಲಿಯ ಇಂತಹ ಕೆಲವು ಚಿತ್ರಗಳು ಕಟುವಾಗಿರುವದು ನಿಜ. ಆದರೆ ನಮ್ಮ ಸಾಹಿತ್ಯದಲ್ಲಿ ಯಥಾರ್ಥ ಚಿತ್ರವನ್ನು ಕೊಡುವ ಒಲವೂ ಇದೆಯೆಂಬ ಸಮಾಧಾನ ನಮಗಿದೆ.

ಪೌರಾಣಿಕ ಪಾತ್ರಗಳ ಪರಿವರ್ತನ

ಇಂದಿನ ಸಮಾಜದಲ್ಲಿಯ ಲೋಪ, ದೋಷಗಳನ್ನೂ ವೈಚಿತ್ರ್ಯಗಳನ್ನೂ ವಾಸ್ತವ ರೂಪದಲ್ಲಿ ಮಂಡಿಸುವ ಸಾಹಿತ್ಯ ಕೃತಿಗಳೊಂದಿಗೆ ಪೌರಾಣಿಕ ಸಂದರ್ಭಗಳನ್ನು ವ್ಯಂಗ್ಯವಾಗಿ ನಿರೂಪಿಸಿದ ಸಾಹಿತ್ಯವೂ ನಮ್ಮಲ್ಲಿ ಸೃಷ್ಟಿಯಾಗಿದೆ. ಅನೇಕ ಆಧುನಿಕ ಅಹಲ್ಯೆಯರನ್ನು ಉದ್ಧಾರ ಮಾಡಬೇಕಾದ ರಾಮನ ಗೋಳು! ತಂಬೂರಿ ಬಿಟ್ಟುಕೊಟ್ಟು ಹ್ಯಾಟು ಬೂಟು ಹಾಕಬೇಕಾದ ನಾರದ, ಉತ್ತರ ಕರ್ನಾಟಕದ 'ಖಾನಾವಳಿ' ಗಳ ಭೋಜನದ ಶಿಕ್ಷೆಯನ್ನು ಅನುಭವಿಸುವ ದೇವತೆಗಳ ವೃಂದ, ಹೌಹಾರಿದ ಹರಿಶ್ಚಂದ್ರ, ಬುದ್ಧಿ ಭ್ರಮೆಯಾದ ಬ್ರಹ್ಮ ಇವರೆಲ್ಲರ 'ಪರೇಡು' ಆಧುನಿಕ ಕನ್ನಡ ಸಾಹಿತ್ಯದಲ್ಲಿ ನೋಡಲು ದೊರೆಯುತ್ತಿದೆ. ಇಲ್ಲಿ ಪೌರಾಣಿಕ ವ್ಯಕ್ತಿಗಳನ್ನು ವ್ಯಂಗ್ಯವಾಗಿ ಚಿತ್ರಿಸುವ ಜಾಣ್ಮೆಯಿದೆ. ಆದರೆ ಅವರನ್ನು ಹೊಸ ದೃಷ್ಟಿಯಿಂದ ನೋಡುವ ಪ್ರತಿಭೆಯೂ ಕನ್ನಡದಲ್ಲಿ ಕೆಲವು ಕೃತಿಗಳಲ್ಲಿದೆ. ಪ್ರಸಿದ್ಧವಿರುವ ಪೌರಾಣಿಕ ಸಂದರ್ಭಗಳಿಂದ ಆ ಆ ವ್ಯಕ್ತಿಗಳಿಗೆ ಕುಂದು ತಟ್ಟಿದೆಯೆಂದು ಅನಿಸಿದಾಗ ನಮ್ಮ ಸಾಹಿತಿಗಳು ದಿಟ್ಟತನದಿಂದ ಆ ಪಾತ್ರಗಳ ವ್ಯಕ್ತಿತ್ವದ ಶೋಭೆಯನ್ನು ಹೆಚ್ಚಿಸಲು ನವೀನ ರೀತಿಯಲ್ಲಿ ಒಪ್ಪವಿಟ್ಟು ತೋರಿಸಿದ್ದಾರೆ. ಪ್ರಾಚೀನ ಕನ್ನಡ ಕಾವ್ಯದಲ್ಲಿ ದುರ್ಯೋಧನ, ರಾವಣ ಈ ಪಾತ್ರಗಳಿಗೆ ಜೈನ ಕವಿಗಳು ಒಪ್ಪವಿಟ್ಟು ತೋರಿಸಿದರು. ಆಧುನಿಕ ಕನ್ನಡದಲ್ಲಿ ಏಕಲವ್ಯ, ಕರ್ಣ ಇವರ ಗುರುಭಕ್ತಿಯ ಹಿನ್ನೆಲೆಯನ್ನು ಸೂಚಿಸುವಾಗ ಮಾಡಿಕೊಂಡ ಮಾರ್ಪಾಟು ಹೊಸಗನ್ನಡ ಸಾಹಿತ್ಯದ ಹೊಸತಾದ ಪ್ರತಿಭೆಗೆ ಗುರುತಾಗಿದೆ. 'ಶೂದ್ರ ತಪಸ್ವಿ' ಯಲ್ಲಿ ರಾಮನ ಉದಾತ್ತತೆಯನ್ನು ಹೆಚ್ಚಿಸುವ ದೃಷ್ಟಿಯಿದೆ. 'ಮಂಡೋದರಿ' ನಾಟಕದ ರಾವಣನು ಶ್ರೇಷ್ಠ. ಕೈಲಾಸಂರ ಮರಣಾನಂತರ ಪ್ರಕಟವಾದ 'ಕೀಚಕ' ಗ್ರಂಥವು ಸಾಹಿತ್ಯಕೃತಿ ರಚನೆಯ ನವೀನತೆಗೆ ಕಳಸವಿಟ್ಟಿದೆ. ಅಲ್ಲಿಯ 'ಕೀಚಕ' ನ ಪಾತ್ರದ ಮಾರ್ಪಾಡು ಕನ್ನಡವು ಸಾಹಿತ್ಯ ಪ್ರಪಂಚಕ್ಕೆ ಸಲ್ಲಿಸಿದ ಹೆಮ್ಮೆಯ ಕಾಣಿಕೆಯಾಗಿ ಉಳಿಯಬಲ್ಲದು. 'ಅಶ್ವತ್ಥಾಮ' ನ ಚಿರಂಜೀವಿ ಪದವನ್ನು ಕಸಿದುಕೊಳ್ಳುವ ಧೈರ್ಯದೊಂದಿಗೆ ಅವನನ್ನು 'ಕೊಂದೂ ಅಮರನನ್ನಾಗಿ ಮಾಡಿದ' ಶ್ರೇಯಸ್ಸು ಕನ್ನಡಕ್ಕಿದೆ. ಗ್ರೀಕ ರುದ್ರ ನಾಟಕಗಳ ತಂತ್ರವನ್ನು ಕನ್ನಡಕ್ಕೆ ಅಳವಡಿಸಿಕೊಂಡಿರುವದರಲ್ಲಿಯೂ ನಮ್ಮ ಸಾಹಿತ್ಯ ತನ್ನ ವಾಡಿಕೆಯ ಪ್ರಯೋಗಪ್ರಿಯತೆಯನ್ನು ಕಾಯ್ದುಕೊಂಡಿದೆ. ಈ ಪ್ರಯೋಗಪ್ರಿಯತೆ 'ಇಂಗ್ಲಿಷ ಗೀತೆಗಳು' ಗ್ರಂಥದಿಂದಲೇ ಆರಂಭವಾಯಿತೆನ್ನಬಹುದು.

ಪ್ರಯೋಗನಾವೀನ್ಯ

ಹಿಂದೊಮ್ಮೆ ಕನ್ನಡವು ಸಂಪ್ರದಾಯಶರಣತೆಗೆ ಪಕ್ಕಾಗಿತ್ತು. ಆದರೆ ಇಂದು ಪ್ರಯೋಗಪ್ರಿಯತೆಯ ಸಾಹಸದಲ್ಲಿ ನಮ್ಮ ಸಾಹಿತ್ಯ ಮುಂದುವರಿದಿದೆ. ಪಾಶ್ಚಿಮಾತ್ಯ ದೇಶದಲ್ಲಿ ಕೆಲವೊಂದು ದಿನ ನೆಲಸಿದ್ದ ಕನ್ನಡಿಗರೊಬ್ಬರು ಅಲ್ಲಿಯ ಸಾಮಾಜಿಕ ಜೀವನದಲ್ಲಿಯ ನೃತ್ಯ ವಿಲಾಸವನ್ನು ಕನ್ನಡ ಕಾವ್ಯಕ್ಕೆ ಯಶಸ್ವಿಯಾಗಿ ಅಳವಡಿಸಿಕೊಂಡರು. ಇದು ನಮ್ಮ ಪ್ರಯೋಗಪ್ರಿಯತೆಯ ಸಾಹಸದ ಗುರುತಾಗಿದೆ. ಅಂತಹ ಅನುಭವವನ್ನು ಪಡೆದ ಇನ್ನೊಬ್ಬ ಕನ್ನಡ ರಸಿಕರು ಪಾಶ್ಚಾತ್ಯ ಸಮಾಜದ ಬಗೆಬಗೆಯ ಪದರುಗಳನ್ನು ಕನ್ನಡ ಸಾಹಿತ್ಯ ಕೃತಿಗಳಲ್ಲಿ ಪಡಿಮೂಡಿಸಿದ್ದಾರೆ. 'ಮುಕ್ತದ್ವಾರ' ದಲ್ಲಿ ಕಲ್ಪನೆಯ ಭವ್ಯತೆಯೊಂದಿಗೆ ಹೊಸ ತಂತ್ರದ ಸಾಹಸವೂ ಇದೆ. ಹಡಗಿನಲ್ಲಿಯ ಜೀವನವನ್ನು ಕಾವ್ಯವಸ್ತುವನ್ನಾಗಿಟ್ಟುಕೊಂಡ ಕವನಗಳ ಕವಿದೃಷ್ಟಿಗೆ ವಿಜ್ಞಾನದೃಷ್ಟಿಯ ಹಿನ್ನೆಲೆ ದೊರೆತಿದೆ. ಅದರ ಪರಿಣಾಮವೇನೆಂಬುದನ್ನು ಆ ಕವನಗಳಲ್ಲಿ ನಾವು ಕಾಣುತ್ತೇವೆ. ಪ್ರಾಚೀನ ಕಾವ್ಯಗಳ 'ಉಲ್ಲೇಖಾಲಂಕಾರ' ದ ಕಲ್ಪನೆಯನ್ನೇ ಹಿಗ್ಗಿಸಿಕೊಂಡು ಕಚೇರಿಯ ಕಾರಕೂನನೊಬ್ಬನ ಜೀವನವನ್ನು ಬಿತ್ತರಿಸಿದ 'ಚಕ್ರದೃಷ್ಟಿ'ಯೂ ನಮ್ಮ ಸಾಹಿತ್ಯ ರಂಗದಲ್ಲಿ ಉದಯವಾಗಿದೆ.

ಹಳ್ಳಿಯ ಜೀವನದ ಚಿತ್ರ

ನಾವು ಹೊಸ ಸಮಾಜವೆಂದು ಹೇಳುವುದು ಮುಖ್ಯವಾಗಿ ಪಟ್ಟಣಗಳಲ್ಲಿಯ ಜೀವನಕ್ಕೆ ಅನ್ವಯಿಸುತ್ತಿದೆ. ನಮ್ಮ ಅಸಂಖ್ಯ ಹಳ್ಳಿಗಳಲ್ಲಿಯ ಸಾಮಾಜಿಕ ಜೀವನದಲ್ಲಿ ಹೊಸ ಪ್ರಭಾವ ಹೇಳಿಕೊಳ್ಳುವಷ್ಟು ಕಾಣುವದಿಲ್ಲ. ಅಲ್ಲಿಯೂ ಮಾರ್ಪಾಟು ಆಗದೆ ಇಲ್ಲ. ಆದರೆ ಕೆಲವೊಂದು ಶಾಶ್ವತವಾದ ಅಂಶಗಳು ಹಾಗೆಯೇ ಉಳಿದಿವೆ. ನವೀನ ವಾತಾವರಣದ ಹಾವಳಿಯೂ ಇದೆ. ಈ ಸನ್ನಿವೇಶದ ಹಿನ್ನೆಲೆಯಲ್ಲಿ ಹಳ್ಳಿಯ ಜೀವನದ ಸ್ವಾರಸ್ಯವನ್ನೋ ವಿಷಮತೆಯನ್ನೋ ಪ್ರತಿಬಿಂಬಿಸುವ ಕಾರ್ಯವನ್ನು ನಮ್ಮ ಸಾಹಿತ್ಯ ಮಾಡಿದೆ. 'ನಮ್ಮೂರಿನ ರಸಿಕರು' ಗ್ರಂಥವು ಹಳ್ಳಿಗಳ ರಸಿಕತೆಯನ್ನು ಎತ್ತಿ ತೋರಿಸುತ್ತಿದ್ದರೆ, 'ಮುಗಿದ ಯುದ್ಧ' 'ನಿಸರ್ಗ' ಕಾದಂಬರಿಗಳು ಹಳ್ಳಿಯ ವಿಷಮ ಜೀವನವನ್ನು ನಿರೂಪಿಸುತ್ತಿವೆ. 'ನಿಸರ್ಗ'ದಲ್ಲಿ ಲೈಂಗಿಕ ಸಮಸ್ಯೆಯ ನಿರಂತರ ಘರ್ಷಣೆಯು ಕಲಾಪೂರ್ಣವಾಗಿ ಬಂದಿದೆ. ಹಳೆಯ ಹೊಸ ಜೀವನದ ಘರ್ಷಣೆಯು 'ಮರಳಿ ಮಣ್ಣಿಗೆ' 'ಕಾನೂರು ಸುಬ್ಬಮ್ಮ' ಈ ಮಹಾಕಾದಂಬರಿಗಳಲ್ಲಿ ಮೂರ್ತಿವೆತ್ತು ನಿಂತಿದೆ. 'ಹಳ್ಳಿಯ ಹತ್ತು ಸಮಸ್ತರು' ನಮ್ಮ ಇಂದಿನ ಹಳ್ಳಿಗಳ ಅಪ್ರಿಯ ಚಿತ್ರವನ್ನು ಕೊಟ್ಟರೆ 'ಬೈಲ ಹಳ್ಳಿಯ ಸರ್ವೆ'ಯಲ್ಲಿ ಸ್ವಾರಸ್ಯದ ಭಾಗವನ್ನು ಹೆಚ್ಚಾಗಿ ನಿರೂಪಿಸಲಾಗಿದೆ. ಹಳ್ಳಿಯ ರಸಿಕರ ಚಿತ್ರಗಳನ್ನು ಓದುತ್ತಿರುವಾಗ ಮಹಾತ್ಮರ 'ಹಳ್ಳಿಗೆ ಹಿಂತಿರುಗು' ಎಂಬ ಸಂದೇಶದ ನೆನಪಾಗುತ್ತಿದೆ. ಉಳಿದ ಸಂದರ್ಭಗಳಲ್ಲಿ ಅದನ್ನು ಮರೆಯಬೇಕೆನ್ನಿಸುತ್ತಿದೆ. ಉತ್ತರ ಕರ್ನಾಟಕದ ಹಳ್ಳಿಯ ಪಾತ್ರಗಳನ್ನು, ಅವರ ಸಮಸ್ಯೆಗಳನ್ನು ನಮ್ಮ ಸಣ್ಣ ಕತೆಗಾರರೊಬ್ಬರು ಸುಂದರವಾಗಿ ಚಿತ್ರಿಸಿದ್ದಾರೆ. ಇನ್ನೊಬ್ಬರು ರಸ ನಿಮಿಷಗಳನ್ನು ನಿರೂಪಿಸುತ್ತಿದ್ದರೂ ದುರಂತ ಹಿನ್ನೆಲೆಯನ್ನು ಎತ್ತಿ ಹೇಳುತ್ತಾರೆ. ಆದರೆ ಅಲ್ಲಿಯ ಪಾತ್ರಗಳ ಬಗೆಗೆ ನಮಗೆ ಆತ್ಮೀಯತೆಯುಂಟಾಗುತ್ತಿದೆ. ಉತ್ತರ ಕನ್ನಡ (ಕಾರವಾರ) ಜಿಲ್ಹೆಯ ಚಿತ್ರಗಳು ಈಚೆಗೆ ಒಂದು ಚಿಕ್ಕ ಪುಸ್ತಕದಲ್ಲಿ ಬಂದಿವೆ.

'ನಿಸರ್ಗ'ಕಾದಂಬರಿಯಲ್ಲಿ ಬೆಳಗಾವಿ ಜಿಲ್ಹೆಯ ಹಳ್ಳಿಗಳಲ್ಲಿಯ ಮನೆ ಮಾತಿನ ಕನ್ನಡದ ಪರಿಚಯವಿದೆ. ಮಾತನಾಡುವ ಭಾಷೆಯ ವೈಚಿತ್ರ್ಯಗಳು ಅತಿಯಾದ ಆಂಗ್ಲ ಭಾಷಾಮಿಶ್ರಿತ ಪದಗಳೊಂದಿಗೆ 'ಕರ್ನಾಟಕ್ಕೊಬ್ಬನೇ ಆದ' ನಾಟಕಕಾರರ ಎಲ್ಲ ನಾಟಕಗಳಲ್ಲಿಯೂ ಕಂಡು ಬರುತ್ತಿವೆ. 'ಹೋಂರೂಲ್' ನಾಟಕದ ಭಾಷೆ 'ನಿಸರ್ಗ' ಕಾದಂಬರಿಯ ಭಾಷೆ ಇವುಗಳಲ್ಲಿಯ ವ್ಯತ್ಯಾಸ ನಮ್ಮ 'ಕನ್ನಡಂಗಳ್' ಎರಡು ತುದಿಗಳೆನ್ನಬಹುದು. ಬಾಯಮಾತು, ಗ್ರಂಥಸ್ಥ ಭಾಷೆ ಇವುಗಳ ಮಿಶ್ರಣದ ಪ್ರಯೋಗವೂ ನಮ್ಮ ಸಾಹಿತ್ಯದಲ್ಲಿ ನಡೆದಿದೆ.

ಜ್ಞಾನದಾಯಕ ಸಾಹಿತ್ಯದ ಮುಂದಪ್ರಗತಿ

ಸಣ್ಣ ಕತೆ, ಸಣ್ಣ ಕವನ, ಏಕಾಂಕಗಳಿಂದ ಸಮಾಧಾನ ಪಡೆಯುತ್ತಿದ್ದ ಆಧುನಿಕ ಕನ್ನಡ ಸಾಹಿತ್ಯವಿಂದು ಗಂಭೀರ ಜ್ಞಾನದಾಯಕ ಸಾಹಿತ್ಯದ ಕಡೆಗೆ ಹೆಚ್ಚಾಗಿ ಗಮನವಿತ್ತಿದೆ. ಇದು ಮಹತ್ವದ ಒಲವೆನ್ನಬಹುದು. ರಾಜಕೀಯ ಸ್ವಾತಂತ್ರ್ಯದ ಹೋರಾಟ, ಮಹಾತ್ಮಾ ಗಾಂಧಿಯವರ ಪ್ರಭಾವ, ನಮ್ಮ ಜನತೆಯಲ್ಲಿ ಹೆಚ್ಚುತ್ತಿರುವ ಜ್ಞಾನತೃಷೆ, ಎರಡನೆ ಜಾಗತಿಕ ಮಹಾಯುದ್ಧ ಇವೆಲ್ಲವೂ ಇದಕ್ಕೆ ಕಾರಣಗಳಾಗಿವೆ. ಗಾಂಧಿ ಸಾಹಿತ್ಯವನ್ನು ವ್ಯವಸ್ಥಿತವಾಗಿ ಪ್ರಕಟಿಸುವ ಕೆಲವು ಪ್ರಯತ್ನಗಳು ನಡೆದಿವೆ. ಮಹಾತ್ಮರ ಪ್ರಭಾವದಿಂದುಂಟಾದ ಬರೆವಣಿಗೆಯು ಬಹಳವಾಗಿ ಬಂದಿದೆ. ಅದನ್ನೆಲ್ಲ ವ್ಯವಸ್ಥಿತ ನಿರೂಪಿಸುವ ಪ್ರಯತ್ನ ಇನ್ನೂ ತೃಪ್ತಿಕರವಾಗಿ ನಡೆದಿಲ್ಲ. ಕೆಲವೊಂದು ಪತ್ರಿಕೆಗಳಲ್ಲಿ ಬಂದ ಲೇಖನಗಳು ಅಪೂರ್ಣವೂ ಆಗಿವೆ. ವಿವಿಧ ಜಾಗತಿಕ ಜ್ಞಾನವನ್ನು ಕನ್ನಡಿಸಬೇಕೆಂಬ ಉದ್ದೇಶದಲ್ಲಿ ಕೆಲ ಮಟ್ಟಿಗೆ ನಾವು ಮುಂದುವರಿಯುತ್ತಿದ್ದೇವೆ. ಆದರೆ ಅಲ್ಲಿಯ ಪ್ರಗತಿ ಇನ್ನೂ ತೃಪ್ತಿಕರವಾಗಿಲ್ಲ. ಮೈಸೂರು ವಿಶ್ವವಿದ್ಯಾಲಯದ ಕೆಲವೊಂದು ಪ್ರಕಟನೆಗಳು ಈ ದಿಶೆಯಲ್ಲಿ ಕಾರ್ಯಾರಂಭ ಮಾಡಿವೆ. ಆದರೆ ಬೇಗನೆ ಕರ್ನಾಟಕ ವಿಶ್ವವಿದ್ಯಾಲಯವು ಅಸ್ತಿತ್ವದಲ್ಲಿ ಬರಲಿದೆ. ಅಲ್ಲಿ ಬೋಧಕಭಾಷೆ ಕನ್ನಡವೇ ಆಗಬೇಕೆಂಬ ತತ್ವಕ್ಕೆ ಮನ್ನಣೆಯೂ ದೊರೆಯಲಿದೆ. ಒಪ್ಪಿಕೊಂಡ ತತ್ವವನ್ನು ಆಚರಣೆಯಲ್ಲಿ ತರಬೇಕಾದಾಗ ಮಾತ್ರ ನಿರಾಶೆಯಾಗದಂತೆ ನಾವು ಸಿದ್ಧತೆ ಮಾಡಿಕೊಳ್ಳಬೇಕಾಗಿದೆ. ಈ ದೃಷ್ಟಿಯಿಂದ ಈಗ ರಚಿತವಾದ ಗ್ರಂಥರಾಶಿ ಅಪೂರ್ಣವೂ ಅತೃಪ್ತಿಕರವೂ ಆಗಿದೆ. ಪೂರ್ಣವಾಗಿ, ತೃಪ್ತಿಕರವಾಗಿ ಆ ಕಾರ್ಯವನ್ನು ನೆರವೇರಿಸುವ ಯೋಜನೆಗಳ ಸುಳಿವು ಇನ್ನೂ ಕಾಣುವದಿಲ್ಲ. ಕನ್ನಡದ ಅಭಿಮಾನವೇನೋ ಸರಿಯೇ. ಆದರೆ ಬರಿಯ ಕನ್ನಡ ಪುಸ್ತಕಗಳನ್ನು ಓದಿ ಇಂದಿನ ಜಗತ್ತಿನಲ್ಲಿ ಸಾರ್ಥಕತೆ ಪಡೆಯಬಹುದೇ? ಎಂಬ ಪ್ರಶ್ನೆಯನ್ನು ಕನ್ನಡಿಗರು ವಿಚಾರಿಸಬೇಕಾಗಿದೆ. ಸಹಕಾರದ ಧೋರಣೆ, ಸುಸಂಘಟಿತ ಪ್ರಯತ್ನ, ಸಿರಿವಂತರ ಇಲ್ಲವೆ ಸರಕಾರದ ನೆರವು ಇವುಗಳ ಮೂಲಕ ಈ ಕಾರ್ಯವನ್ನು ಸಾಧಿಸಿಕೊಳ್ಳಬೇಕಾದ ಕಾಲ ಈಗ ಪ್ರಾಪ್ತವಾಗಿದೆ. ರಾಜಕೀಯ ಸ್ವಾತಂತ್ರ್ಯದ ನಂತರ ಹೋರಾಟದಲ್ಲಿ ವಿನಿಯೋಗವಾಗುತ್ತಿದ್ದ ನಮ್ಮ ನಾಡಿನ ಶಕ್ತಿಯನ್ನು ಈ ದಿಶೆಯಲ್ಲಿ ಹರಡಿಸಬಹುದು. ಈಚೆಗೆ ಕರ್ನಾಟಕದಲ್ಲಿ ಉಚ್ಚ ಶಿಕ್ಷಣ ಸಂಸ್ಥೆಗಳು ಹೆಚ್ಚುತ್ತಿವೆ. ಜ್ಞಾನಾಭಿಲಾಷೆಯೂ ಬೆಳೆಯುತ್ತಿದೆ. ಇದರ ಉಪಯೋಗವನ್ನು ನಾವು ಸಕಾಲದಲ್ಲಿ ಮಾಡಿಕೊಳ್ಳದೆ ಹೋದರೆ ಆ ತಪ್ಪಿನ ಹೊಣೆ ನಮ್ಮದೇ ಆಗುತ್ತದೆ. ನಮ್ಮ

ನಾಙ್ಮಯದಲ್ಲಿ ಈ ನಿಲವನ್ನಿಟ್ಟುಕೊಂಡು ನಾವು ಮುಂದುವರಿಯಬೇಕಾಗಿದೆ.

ರಾಜಕೀಯದ ಹಿನ್ನೆಲ

೧೯೪೨ ರಿಂದ ಈಚೆಗೆ ರಾಜಕೀಯ ಹಿನ್ನೆಲದ ಲಲಿತ ಸಾಹಿತ್ಯ ಬರಹತ್ತಿದೆ. ೧೯೪೨ರ ಆಗಸ್ಟ್ ಆಂದೋಲನದ ಫಲವೇ ಇದು. ಅದರ ಪೂರ್ಣ ಪರಿಚಯ ೧೯೪೨ ರಲ್ಲಿಯೇ ನಮಗೆ ಸಿಗುವದು ಸಾಧ್ಯವಿದ್ದಿಲ್ಲ. ಆಗಿನ ಚಟುವಟಿಕೆಗಳು ಗುಪ್ತವಾಗಿಯೇ ನಡೆಯುತ್ತಿದ್ದವು. ಸುದ್ದಿಯ ಮೇಲೆ ಭೀಕರವಾದ ನಿಯಂತ್ರಣವಿತ್ತು. ಆಗಿನ ಯೋಜನೆಯನ್ನೂ ಕಾರ್ಯಕ್ರಮವನ್ನೂ ಪ್ರಕಟಿಸುವದು ಇಷ್ಟವಾಗಿರಲಿಲ್ಲ. ಆಗಿನ ಪರಿಸ್ಥಿತಿಯನ್ನು ಅರಿತುಕೊಂಡು, ಅರಗಿಸಿಕೊಂಡು ಅದನ್ನು ಸಾಹಿತ್ಯದಲ್ಲಿ ಪ್ರತಿಬಿಂಬಿಸುವದಕ್ಕೆ ಕೆಲವೊಂದು ಅವಧಿ ಬೇಕಾಯಿತು. ೧೯೪೫ ರ ಈಚೆಗೆ ಅದಕ್ಕೆ ಅನುಕೂಲ ಸಂದರ್ಭಗಳೂ ಒದಗಹತ್ತಿದವು. ಮಹಾಯುದ್ಧದ ಮುಕ್ತಾಯ, ನಮ್ಮ ಸರಕಾರವು ಅಸ್ತಿತ್ವದಲ್ಲಿ ಬಂದುದು ಇವೇ ಆ ಸಂದರ್ಭಗಳು. ಈ ಸಂದರ್ಭಗಳಿಂದುಂಟಾದ ಅನುಕೂಲ ಸನ್ನಿವೇಶದಲ್ಲಿ ೧೯೪೨ ರ ಚಳವಳಿಯನ್ನು ಹಿನ್ನೆಲೆಯನ್ನಾಗಿಟ್ಟುಕೊಂಡ ಲಲಿತ ಸಾಹಿತ್ಯ ಸೃಷ್ಟಿಯಾಯಿತು. ಈಚಿನ ಕೆಲವು ಕಾದಂಬರಿಗಳಿಗೆ ಇದೇ ಮುಖ್ಯ ವಸ್ತುವೂ ಆಗಿದೆ. ಅಂತಹ ಕಾದಂಬರಿಗಳು ಜನಪ್ರಿಯವೂ ಆಗಿವೆ. ರಾಜಕೀಯ ಹೋರಾಟದ ನಿರೂಪಣೆಯೊಂದಿಗೆ ಅದರಲ್ಲಿ ಭಾಗವಹಿಸಿದವರ ಮನೋಭೂಮಿಕೆಯನ್ನು ವಿಭಜಿಸುವ ಪ್ರಯತ್ನಗಳೂ ನಡೆದಿವೆ. ಕಾಂಗ್ರೆಸ್ ಹೋರಾಟದ ಆರಂಭದಿಂದ ಸ್ವಾತಂತ್ರ್ಯ ಸಾಧನೆಯ ಪೂರ್ವಪೀಠಿಕೆಯ ವರೆಗಿನ ಮಾರ್ಮಿಕ ಚಿತ್ರ 'ಔದಾರ್ಯದ ಉರುಳಲ್ಲಿ' ಎಂಬ ದೀರ್ಘ ಕಾದಂಬರಿಯಲ್ಲಿ ಮನೋವೇಧಕವಾಗಿ ಬಂದಿದೆ. ಈ ರಾಜಕೀಯ ವಿಪ್ಲವದೊಂದಿಗೆ ಇನ್ನೂ ಕೆಲವು ಚಳವಳಿಗಳು ತಲೆದೋರಿದವು. ಇಲಿಯಂತಿದ್ದ ಪ್ರಾಥಮಿಕ ಅಧ್ಯಾಪಕರ ವರ್ಗ ತಮ್ಮ ಸಂಪಿನ ಯಶಸ್ವಿತೆಯಿಂದ ಒಮ್ಮೆ ನಮ್ಮ ಆಡಳಿತಗಾರರಿಗೆ ಹುಲಿಯಂತೆ ತೋರಿದರು. ಆ ಆಂದೋಲನದ ಒಂದು ಅಧ್ಯಾಯವನ್ನು 'ರಾಮಣ್ಣ ಮಾಸ್ತರರು' ಕಾದಂಬರಿ ಚಿತ್ರರಿಸುತ್ತಿದೆ. ಪ್ರಾಥಮಿಕ ಶಾಲೆಯ ಮಾಸ್ತರನು ಕಾದಂಬರಿಯ ನಾಯಕನ ಪಟ್ಟವನ್ನು ಪಡೆದ ಹೊಸತನದೊಂದಿಗೆ ಇಂದಿನ ಹಳ್ಳಿಗಳ ರಾಜಕಾರಣವನ್ನು ನಿರೂಪಿಸುವ, ವಿಭಜಿಸುವ ಜಾಣ್ಮೆಯೂ ಅಲ್ಲಿದೆ.

ಜೀವನಚರಿತೆಗಳ ಕೊರತೆ

ಉತ್ತಮ ರೀತಿಯಲ್ಲಿ ರಚಿಸಿದ ಜೀವನ ಚರಿತೆಗಳ ಅಭಾವವೊಂದು ನಮ್ಮ ಸಾಹಿತ್ಯದ ಕೊರತೆಯಾಗಿದೆ. ಕರ್ನಾಟಕದಲ್ಲಿ ಆದರ್ಶ ವ್ಯಕ್ತಿಗಳ ಸಂಖ್ಯೆ ಕಡಿಮೆಯಾಗಿರುವದೇ ಇದಕ್ಕೆ ಕಾರಣವೆಂಬ ವಾದವೂ ಒಮ್ಮೊಮ್ಮೆ ಮುಂದೆ ಬರುತ್ತಿದೆ. ಸಾಹಿತ್ಯದ ದೃಷ್ಟಿಯಿಂದ ವಿಚಾರಿಸುವದಾದರೆ ಆತ್ಮಚರಿತೆಗೇ ಹೆಚ್ಚಿನ ಮಹತ್ವವನ್ನು ನಾವು ಕೊಡಬೇಕಾಗುತ್ತಿದೆ. ಈ ಕ್ಷೇತ್ರದಲ್ಲಿಯೂ ನಾವು ಸಾಕಷ್ಟು ಮುಂದುವರಿದಿಲ್ಲ. ಆದರೂ ನಮ್ಮ ಸಾಹಿತ್ಯಜೀವನದ ಹಿನ್ನೆಲೆಯನ್ನು ಸಾಹಿತಿಗಳ ಮನೋಭೂಮಿಕೆಯನ್ನು ಅರಿತುಕೊಳ್ಳಲು ಉಪಯುಕ್ತವಾಗುವ ಕೆಲವು ಕೃತಿಗಳು ರಚಿತವಾಗಿವೆ. ಹಾಗೆ ಉಪಯುಕ್ತವಾಗಿರುವ ಒಳ್ಳೆಯ ಕೃತಿಗಳೆಂದು 'ಹತ್ತು ವರುಷ' 'ಹುಚ್ಚು ಮನಸ್ಸಿನ ಹತ್ತು ಮುಖಗಳು' 'ಸಾಹಿತ್ಯಜ್ಞರ ಆತ್ಮಕಥನ' ಎಂಬ ಹೆಸರುಗಳನ್ನು ಎತ್ತಿ ಹೇಳಬಹುದು.

ಉಪಸಂಹಾರ

ಸ್ವಾತಂತ್ರ್ಯಾನಂತರದ ಸಾಹಿತ್ಯವನ್ನು ವಿವರಿಸುವ, ಇಲ್ಲವೆ ವಿಮರ್ಶಿಸುವ ಕಾಲವಿನ್ನೂ ಬಂದಿಲ್ಲ. ಅದಕ್ಕೆ ಇನ್ನೂ ಕೆಲವೊಂದು ಅವಧಿ ಬೇಕಾಗುತ್ತಿದೆ.

ಈ ಲೇಖನದಲ್ಲಿ ಅನಿವಾರ್ಯವಾದ ಒಂದು ಹೆಸರನ್ನಲ್ಲದೆ ಕನ್ನಡ ಸಾಹಿತಿಗಳ ಯಾವ ಹೆಸರನ್ನೂ ನಾನು ಬಳಸಲಿಲ್ಲ. ಕೆಲವೊಂದು ಕೃತಿಗಳ ಹೆಸರುಗಳು ಅಲ್ಲಲ್ಲಿ ಬಂದರೂ ಕೃತಿಗಳ ನಿರ್ದೇಶ ಮಾಡುವುದೇ ನನ್ನ ಉದ್ದೇಶವಾಗಿರಲಿಲ್ಲ. ನಮ್ಮ ಸಾಹಿತ್ಯದ ಒಲವನ್ನು ತೋರಿಸಲು ನನಗೆ ಉಪಯುಕ್ತವೆಂದು ತೋರಿದ ಕೆಲವು ಕೃತಿಗಳ ಹೆಸರುಗಳನ್ನು ಮಾತ್ರ ಉಪಯೋಗಿಸಿಕೊಂಡಿದ್ದೇನೆ.

ಬದಲಾಗುತ್ತಿರುವ ನಮ್ಮ ಜೀವನ, ನಮ್ಮ ಮನೋಭೂಮಿಕೆ ಇವುಗಳನ್ನು ಪಡಿಮೂಡಿಸುವ ಒಲವು ನಮ್ಮ ಸಾಹಿತ್ಯದಲ್ಲಿ ಕಂಡು ಬಂದಿದೆ. ಜಾಗತಿಕ ಸ್ಪರ್ಧಾರಂಗದಲ್ಲಿ ಕನ್ನಡ ಸಾಹಿತ್ಯವೂ ತನ್ನದೊಂದು ಸ್ಥಾನವನ್ನು ಕಲ್ಪಿಸಿಕೊಳ್ಳುವ ನಿಲವನ್ನಿಟ್ಟುಕೊಂಡು ಮುಂದುವರಿಯಬೇಕಾಗಿದೆ.




"ಅಯ್ಯಬ್ಬಾ, ಯಾವ ನಾಯಿ ಯಾವ ಜಾತಿಯದೋ ಯಾರು ಬಲ್ಲ!"

ಕೈಗೊಂಬೆಗಳ ಇತಿಹಾಸ

ಲೇ :— **ಪ್ರೊ. ಕೆ. ಎಸ್. ಸವಣೂರ**, ಎಮ್. ಎಸ್‌ಸಿ.

ಇತ್ತೀಚೆಗೆ, ವಿಜ್ಞಾನವು ಮಾನವನ ಭೌತಿಕ ಜೀವನಕ್ರಮವನ್ನು ಪೂರ್ತಿಯಾಗಿ ನಿಯಂತ್ರಿಸುವ ಕಾರ್ಯವನ್ನು ಮಾಡಿರುವ ವಿಷಯುವು ಎಲ್ಲರಿಗೂ ತಿಳಿದ ಮಾತೇ ಆಗಿದೆ. ಈ ಸಂದರ್ಭದಲ್ಲಿ ನಾವು ಯಾವುದೇ ವಿಷಯುವನ್ನು ಕೂಲಂಕಷವಾಗಿ ವಿವೇಚಿಸಿದಲ್ಲಿ, ವಿಜ್ಞಾನದಿಂದ ಉಪಕೃತನಾಗದ ಮನುಷ್ಯಪ್ರಾಣಿಯು ಸಿಗುವುದೇ ದುರ್ಲಭವೆಂದು ಹೇಳಬಹುದು. ಉದಾಹರಣಾರ್ಥವಾಗಿ— ನಮ್ಮ ನಿತ್ಯದ ಸೌಕರ್ಯಗಳನ್ನು ಒದಗಿಸುವಲ್ಲಿ, ಆಹಾರ ಧಾನ್ಯಗಳ ಉತ್ಪಾದನೆಯ ವಿಷಯದಲ್ಲಿ, ರೇಡಿಯೋ ಇತ್ಯಾದಿಗಳಿಂದ ಸಮಸ್ತ ಜನತೆಯನ್ನು ಸಮೀಪವರ್ತಿಗಳಾಗುವಂತೆ ಮಾಡುವಲ್ಲಿ—ಇವೇ ಮುಂತಾದವುಗಳ ಮೂಲಕ, ವಿಜ್ಞಾನವು ತನ್ನ ಸೌಕರ್ಯಗಳ ಉಪಭೋಗಕ್ಕೆ ಯೋಗ್ಯವಾಗಿರುವ ಮತ್ತು ತನ್ನದೇ ಆದ ವೈಜ್ಞಾನಿಕ ಸಮಾಜವನ್ನಾದರೂ ನಿರ್ಮಿಸಿದೆ. ಹೇಗೆ ಯಾವುದೇ ಸಮಾಜವು ತನ್ನ ಘಟಕಗಳಿಂದ ಹಲವು ನಿಯಮಗಳ ಪರಿಪಾಲನೆಯನ್ನು ಅಪೇಕ್ಷಿಸುವದೋ ಹಾಗೆಯೆ, ಸಹಕಾರ ತತ್ವವನ್ನು ಅವಲಂಬಿಸಿ ತಜ್ಞರ ನೇತೃತ್ವದಲ್ಲಿ ಕಾರ್ಯ ಮಾಡಲಿರುವ ಇಂದಿನ ವೈಜ್ಞಾನಿಕ ಸಮಾಜವು ಸುಗಮವಾದ ಚಾಲನೆಗೆ ತನ್ನ ಘಟಕಗಳಿಂದ— ತನ್ನ ಪೋಷಣೆ ಹಾಗು ಬೆಳವಣಿಗೆಗೆ ಅನುಗುಣವಾದ ಹಲವು ನಿಯಮಗಳ ಪಾಲನೆಯನ್ನು ಅಪೇಕ್ಷಿಸುವುದು ಅನಿವಾರ್ಯವಿದೆ.

ಇಪ್ಪತ್ತನೇ ಶತಮಾನದಲ್ಲಿ ಆದಂತಹ ವಿಜ್ಞಾನದ ವಿವಿಧ ಭಾಗಗಳಲ್ಲಿಯ ಬೆಳವಣಿಗೆಯನ್ನು ಪರೀಕ್ಷಿಸಿದಲ್ಲಿ, ಈ ತರದ ಬೆಳವಣಿಗೆಯು ಇತಿಹಾಸದಲ್ಲಿಯೇ ಅಪೂರ್ವವೆಂದೆನಿಸಬಹುದಾಗಿದೆ. ವಿಜ್ಞಾನವು ತನ್ನ ಬೆಳವಣಿಗೆಗೆ ಆತಂಕವನ್ನೇ ತಂದೊಡ್ಡಬಹುದಾದ ಶಕ್ತಿಯ ಸಮಸ್ಯೆಯನ್ನೇ ಎದುರಿಸಿ, ಎಂದೂ ಬತ್ತದ ಶಕ್ತಿಯ ಖಣಿಯನ್ನೇ ಕಂಡುಹಿಡಿದಿದೆ. ಏಕೆಂದರೆ ಎಲ್ಲ ಯಾಂತ್ರಿಕ ಬೆಳವಣಿಗೆಯು ಇಂಧನರೂಪವಾದ ಕಲ್ಲಿದ್ದಲು, ಪೆಟ್ರೋಲ್ ಮುಂತಾದವುಗಳನ್ನು ಅವಲಂಬಿಸಿದ್ದು, ಇವುಗಳ ಕೊರತೆಯು ನಮ್ಮ ವೈಜ್ಞಾನಿಕ ಪ್ರಗತಿಯನ್ನು ತಡೆಯುಬಹುದಾಗಿದೆ. ಆದರೆ ಇಂದು ಅಣುಭೇದನವು ಸಾಧ್ಯವಾಗಿದ್ದು ಶಕ್ತಿಯ ಈ ಸಮಸ್ಯೆಯು ಇಲ್ಲದಂತಾಗಿದೆ. ಇನ್ನು ಹಲವೇ ವರುಷಗಳಲ್ಲಿ ಈ ಶಕ್ತಿಯ ನಿಯಂತ್ರಣವಾದರೂ ಸಾಧ್ಯವಾಗುವಲ್ಲಿ ಏನೂ ಸಂದೇಹವಿಲ್ಲ.



ವಿಜ್ಞಾನಚಕ್ರವರ್ತಿ ಪ್ರೊ. **ಈನ್‌ಸ್ಟೀನ್**
ಅಣುವಿಚ್ಛೇದದ ಸಾಧ್ಯತೆಯನ್ನು ಮೊದಲು ಗಣಿತಬಲದಿಂದ ಕಂಡವರು.

ವಿಜ್ಞಾನದ ಮೇಲೆ ಗಂಭೀರ ಆರೋಪ

ಹಿಂದಿನ ಕಾಲದಲ್ಲಿ ರಾಜರಿಗೆ ಸಹ ಅನುಭವಿಸಲು ಸಾಧ್ಯವಿಲ್ಲದ ಅನೇಕ ಸೌಕರ್ಯಗಳನ್ನು ಇಂದಿನ ಕಾಲದಲ್ಲಿ ಜನಸಾಮಾನ್ಯರಿಗೆ ಸಹ ಒದಗಿಸಿದ ವಿಜ್ಞಾನವು, ಇಂದು ಒಂದು ಗಂಭೀರವಾದ ಆರೋಪವನ್ನು ಎದುರಿಸಬೇಕಾಗಿದೆ. 'ವಿಜ್ಞಾನಿಗಳು ರಾಜಕಾರಣಿಗಳ ಕೈಗೊಂಬೆಗಳಾಗಿದ್ದಾರೆ; ಅವರ ತಾಳಕ್ಕೆ ಕುಣಿಯುವವರಾಗಿ ಮಾನವ ಕೋಟಿಯನ್ನು ನಿರ್ನಾಮಗೊಳಿಸುವ ಅಸ್ತ್ರಗಳನ್ನು ಶೋಧಿಸಿ ಸಮಾಜಕ್ಕೆ ಕಂಟಕಪ್ರಾಯರಾಗಿದ್ದಾರೆ' ಎಂಬುದೇ ಈ ಆರೋಪದ ಹಿನ್ನೆಲೆಯು. ಈ ಅಭಿಪ್ರಾಯವನ್ನು ಕೂಲಂಕಷವಾಗಿ ವಿವೇಚಿಸುವುದೇ ಈ ಲೇಖನದ ಉದ್ದೇಶವು.

ಈ ವಿಷಯದ ವಿವೇಚನೆಗೆ ಮೊದಲನೆಯದಾಗಿ ವಿಜ್ಞಾನವೆಂದರೆ ಏನು ಮತ್ತು ಎರಡನೆಯದಾಗಿ ನಿಜವಾದ ವಿಜ್ಞಾನಿಯೆಂದರೆ ಯಾರು ಎಂಬ ವಿಷಯಗಳನ್ನು ತಿಳಿಯಬೇಕಾಗುವದು, ಜನಸಾಮಾನ್ಯರಿಗೆ ವಿಜ್ಞಾನವೆಂದೊಡನೆ ಕಾರಖಾನೆಗಳಲ್ಲಿ ತಯಾರಾದ ಸರಕುಗಳು ಹಾಗು ವಿಜ್ಞಾನಿಯೆಂದೊಡನೆ ಇಂತಹ ಸರಕುಗಳನ್ನು ತಯಾರಿಸುವ ಯಂತ್ರಗಳನ್ನು ರಚಿಸಿದವನು ಎಂಬ ಕಲ್ಪನೆಯಾಗುವದು ಸಹಜವಿದೆ. ಹೀಗೆ ವಿಚಾರ ಮಾಡುವವರು ಪರಿಸ್ಥಿತಿಯ ನಿಜ ಸ್ವರೂಪವನ್ನು ತಿಳಿಯದವರೆಂದೇ ಹೇಳಬೇಕಾಗುವದು.

ಸಾಮಾನ್ಯವಾಗಿ ವಿಜ್ಞಾನಿಯೆಂದರೆ ವಿಶೇಷ ಜ್ಞಾನವುಳ್ಳವನೆಂದು ಹೇಳಬಹುದಾದರೂ ಯಾವ ವಿಜ್ಞಾನಿಯೂ ಜ್ಞಾನವನ್ನು ರಚಿಸುವ ಕಾರ್ಯವನ್ನು ಮಾತ್ರ ಮಾಡಲಾರನು. ನಿಸರ್ಗವು ತನ್ನ ಕಾರ್ಯವನ್ನು ನಡೆಯಿಸಲು ಅನುಸರಿಸುವ ನಿಯಮಗಳನ್ನು ಗುರುತಿಸುವ ಹಾಗು ಹೀಗೆ ದೊರೆತ ಜ್ಞಾನವನ್ನು ಜನತೆಯ ಹಿತಕ್ಕೆಂದು ಉಪಯೋಗಿಸುವ ಕಾರ್ಯವು ಮಾತ್ರ ವಿಜ್ಞಾನಿಯ ಕಕ್ಷೆಯಲ್ಲಿ ಬರುವದು. ನಿಸರ್ಗ ನಿಯಮಗಳನ್ನು ಅನುಸರಿಸಿ ಕೆಲಸ ಮಾಡುವ ಸರಕುಗಳ ಹಿತವಾದ ಉಪಯೋಗಕ್ಕೆ ವಿಜ್ಞಾನಿಯಷ್ಟೇ ಇತರರೂ ಜವಾಬುದಾರರೆಂಬ ಮಾತನ್ನು ಈ ಸಂದರ್ಭದಲ್ಲಿ ನಾವು ಲಕ್ಷ್ಯದಲ್ಲಿ

ಮಾನವ ಸಮಾಜದ ಅದ್ಭುತ ಪ್ರಗತಿಗೆ ಕಾರಣವಾದ ವಿಜ್ಞಾನವಿಂದು ರಾಜಕಾರಣಿಗಳ ಕೈಗೊಂಬೆಯಾಗಿ ಮಾನವಕುಲದ ಮೂಲಕ್ಕೇ ಕೊಡಲಿಯಂತಾಗಿದೆಯೆಂಬ ಆರೋಪ ಬಂದಿದೆ. ಅಣುಭೇದನದ ವಿದ್ಯೆಯಿಂದ ಮತ್ತಾವ ಮಾನವ ಹಿತ ಕಾರ್ಯವನ್ನು ಮಾಡುವ ಮೊದಲು ಘಾತಕವಾದ ಅಣು ಬಾಂಬೇ ನಿರ್ಮಿಸಲ್ಪಟ್ಟದ್ದು ವಿಜ್ಞಾನಿಯ ಹೆಸರಿಗೆ ಕಲಂಕವನ್ನು ಹಚ್ಚಿದೆ. ಈ ಘೋರ ವಿನಾಶಪಥದಿಂದ ಮಾನವ ಕುಲ ಉಳಿಯಬೇಕಾದರೆ ಆದೊಂದು ಸಮನ್ವಯ ಮಾರ್ಗ ಹಿಡಿಯಬೇಕೆಂದು ಧಾರವಾಡದ ಕರ್ನಾಟಕ ಕಾಲೇಜಿನ ವಿಜ್ಞಾನಾಧ್ಯಾಪಕರಾದ ಪ್ರೊ. ಸವಣೂರರು ಇಲ್ಲಿ ಸೂಚಿಸಿದ್ದಾರೆ.

ಡಬೇಕಾಗುವದು. ಆದರೂ ಯುದ್ಧವೇ ಮೊದಲಾದವುಗಳ ಮೂಲಕ ಉದ್ಭೂತವಾದ ಮತ್ತು ಇಂತಹ ವಾದಕ್ಕೆ ಪುಟವನ್ನು ಕೊಟ್ಟಂತಹ ಕಾರಣಗಳ ಹಿನ್ನೆಲೆಯನ್ನು ವಿವೇಚಿಸಿ ವಿಜ್ಞಾನಿಗಳ ಸಂಬಂಧವಾದ ವಿಚಾರವನ್ನು ತಿಳಿಯೋಣ.

ವಿಜ್ಞಾನದ ಪ್ರಗತಿಯಲ್ಲ, ಆಧ್ಯಾತ್ಮಿಕ ಅಪ್ರಗತಿಯೇ ಆರೋಪಿ

ಇನ್ನು ವಿಜ್ಞಾನವು ವಿನಾಶಕಾರಿಯಾದ ಕಾರ್ಯದಲ್ಲಿ ತೊಡಗಿದೆ ಎಂಬ ಮಾತನ್ನು ಒಪ್ಪಿದರೂ ಸಹ, ಇದ್ದ ಜ್ಞಾನವೆಲ್ಲವನ್ನು ಮರೆತು ಹೆಚ್ಚಿನದರ ಹವ್ಯಾಸವನ್ನು ಬದಿಗಿರಿಸಿ ಮನುಷ್ಯಪ್ರಾಣಿಯು ಅಜ್ಞಾನದ ಆರಾಧನೆಯನ್ನು ಮಾಡಬಹುದೇ ಅಥವಾ ಹೀಗೆ ಮಾಡುವುದು ವಿಹಿತವೆನಿಸಬಹುದೇ, ಎಂಬ ಪ್ರಶ್ನೆಯನ್ನು ನಾವು ಈಗ ಎದುರಿಸಬೇಕಾಗುವದು. ಹೀಗೆ ಮಾಡುವುದೇ ಉಚಿತವೆಂದು ಹೇಳುವ ಹಲವರು ಇದ್ದರೂ ಅನೇಕರು ಮನುಷ್ಯನು ಭೌತಿಕ ವಿಷಯದಲ್ಲಿ ಹೊಂದಿದ ಪ್ರಗತಿಯು ಆಧ್ಯಾತ್ಮ ವಿಷಯಗಳಲ್ಲಿ ಹೊಂದಿದ ಪ್ರಗತಿಗಿಂತಲೂ ಹೆಚ್ಚಾಗಿರುವದೇ ಈ ಚರ್ಚೆಯ ಹಿನ್ನೆಲೆಯೆಂದು ವಾದಿಸುವರು. ಇವರ ವಾದವು ಸರಿಯೆಂದು ಒಪ್ಪಿದಲ್ಲಿ, ಇಂದು ವಿಜ್ಞಾನದ ಪ್ರಗತಿಗೆ ದೋಷವನ್ನು ಆರೋಪಿಸುವದರ ಬದಲಾಗಿ, ಆಧ್ಯಾತ್ಮ ವಿಷಯಗಳ ಸಂಬಂಧವಾದ ನಮ್ಮ ಮಂದತನದ ಧೋರಣೆಯನ್ನು ಆರೋಪಿಸಿದರೆ ತಪ್ಪಾಗಬಹುದೇ? ಇಂದು ಮನುಷ್ಯನಿಗೆ ವಿಜ್ಞಾನದ ಕೊಡುಗೆಗಳು ಬೇಕು; ಆದರೆ ತನ್ನಲ್ಲಿಯ ಸ್ವಾರ್ಥಪರ ಧೋರಣೆಯ ಮೂಲಕ ಈ ಕೊಡುಗೆಗಳು ವಿಷಮಯದಾಗಿ ಪರಿಣಮಿಸಿದಲ್ಲಿ ಮಾತ್ರ ಈತನು ಸಹಿಸನು. ನಮ್ಮಲ್ಲಿ ಭೌತಿಕ ಪ್ರಗತಿಯು ಹೆಚ್ಚಾಗಿದೆಯೆಂದು ದುಃಖಿಸುವದಕ್ಕಿಂತ, ಇಂತಹ ಪ್ರಗತಿಯನ್ನು ಅರಗಿಸುವ ಮನೋಭಾವವು ಮೂಡಿಲ್ಲವೆಂದು ದುಃಖಿಸಿ, ಈ ದಿಶೆಯಲ್ಲಿ ಪ್ರಯತ್ನಿಸುವುದೇ ಮೇಲೆಂದು ತೋರುತ್ತದೆ.

ಇನ್ನು ವಿಜ್ಞಾನಿ ಹಾಗು ರಾಜಕಾರಣಿಗಳ ವಿಚಾರವನ್ನು ತಿಳಿಯುವ ಪೂರ್ವದಲ್ಲಿ ಇದಕ್ಕೆ ಹಿನ್ನೆಲೆಯಾಗಬಹುದಾದ ಮತ್ತು ಜಗತ್ತಿನಲ್ಲಿಯೆ ಶ್ರೇಷ್ಠ ತರದ ರಾಜ್ಯಾಂಗ ಪದ್ಧತಿಯೆನಿಸಿದ ಪ್ರಜಾಸತ್ತೆಯನ್ನು ಕುರಿತು ಒಂದೆರಡು ಮಾತುಗಳನ್ನು ನಾವು ತಿಳಿಯುವವರಾಗಬೇಕು. ನಮ್ಮ ಹಿಂದುಸ್ತಾನವು ಸ್ವಾತಂತ್ರ್ಯವನ್ನು ಸಂಪಾದಿಸಿದ ದಿನ ಮುಖ್ಯಮಂತ್ರಿ ಪಂಡಿತ ನೆಹರೂರವರು ಭಾರತದ ಜನತೆಗೆ ಕೊಟ್ಟ ಸಂದೇಶವು, ಪ್ರಜಾಸತ್ತಾತ್ಮಕ ರಾಷ್ಟ್ರವು ಸಾಧಿಸಲಿರುವ ಕಾರ್ಯದ ರೂಪರೇಷೆಯನ್ನು ಒಳಗೊಂಡಿದೆ. ಇದರ ಆಶಯವು "........ ಜನಸಾಮಾನ್ಯರಿಗೆ, ರೈತರಿಗೆ ಹಾಗು ಕೆಲಸಮಾಡುವವರಿಗೆ ಸ್ವಾತಂತ್ರ್ಯ ಹಾಗು ಸುಸಂಧಿಯನ್ನು ಒದಗಿಸೋಣ. ದಾರಿದ್ರ್ಯ, ಅಜ್ಞಾನ ಹಾಗು ರೋಗಗಳನ್ನು ಎದುರಿಸೋಣ ಮತ್ತು ಕಡೆಗಾಣಿಸೋಣ, ಭಾಗ್ಯವಂತ ಪ್ರಜಾಸತ್ತಾತ್ಮಕ ಹಾಗು ಪ್ರಗತಿಪರ ರಾಷ್ಟ್ರವನ್ನು ಕಟ್ಟೋಣ ಮತ್ತು ಎಲ್ಲ ಸ್ತ್ರೀ ಪುರುಷರಿಗೆ ನ್ಯಾಯ ಹಾಗು ಜೀವನದಲ್ಲಿ ಪೂರ್ಣತೆಯನ್ನು ಕೊಡಲಿರುವ ಸಾಮಾಜಿಕ, ಆರ್ಥಿಕ ಸಂಬಂಧವಾದ ಹಾಗು ರಾಜಕೀಯ ಸಂಸ್ಥೆಗಳನ್ನು ಕಟ್ಟೋಣ. ಜಯ್ ಹಿಂದ" ಹೀಗಿದೆ. ಇಂತಹ ಉಚ್ಚ ಧ್ಯೇಯಸಾಧನೆಗೆ ಹಿತಕಾರಿಯಾದ ವಿಜ್ಞಾನ ಮತ್ತು ರಾಜಕಾರಣ ಹಾಗು ಹಣದ ವಿಹಿತವಾದ ಉಪಯೋಗ ಇವುಗಳೇ ಕಾರಣವಾಗಬಲ್ಲವು; ಎಂದರೆ ವಿಜ್ಞಾನಿಗಳು ಮತ್ತು ರಾಜಕಾರಣಿಗಳು, ಹಾಗೆಯೆ ಬಂಡವಾಳಗಾರರು ಮತ್ತು ಹಣಕಾಸಿನ ತಜ್ಞರು ಇವರೇ ಪ್ರಜಾಸತ್ತೆಯನ್ನು ಸರಿಯಾದ ರೀತಿಯಲ್ಲಿ ನಡೆಯಿಸಿಕೊಂಡು ಹೋಗಬಲ್ಲರು.

ವಿಜ್ಞಾನಿಯ ಕೈಯಲ್ಲಿ ಅಧಿಕಾರವಿಲ್ಲ

ಇವರಲ್ಲಿ ವಿಜ್ಞಾನಿಯು ಹಣ ಹಾಗು ಅಧಿಕಾರ ಇವೆರಡೂ ಇಲ್ಲದವನು. ಇವನು ಜ್ಞಾನವನ್ನು ಗುರುತಿಸುವ ಹಾಗು ಹಲವು ಉಪಯುಕ್ತ ಸರಕುಗಳನ್ನು ತಯಾರಿಸುವ ಕಾರ್ಯವನ್ನು ಮಾಡಿದರೆ,— ಈ ಜ್ಞಾನವು ಕೊಡಬಹುದಾದ ಶಕ್ತಿಯನ್ನು–ಅದು ಹೇಗೆಯೇ ಉಪಯೋಗವಾಗಲಿ, ರಾಜಕಾರಣಿಗಳಿಗೆ ಒಪ್ಪಿಸಬೇಕಾಗುವದು. ಮತ್ತು ಹಣವನ್ನು–ಕರಗಳ ರೂಪದಿಂದ ಸರಕಾರಕ್ಕೂ ಹಾಗು ಲಾಭರೂಪದಿಂದ ಬಂಡವಾಳಗಾರರಿಗೂ ಸಲ್ಲಿಸಬೇಕಾಗುವದು. ವಿಜ್ಞಾನಯುಗದಲ್ಲಿ ಬೆಳೆಯಬೇಕೆಂದಿರುವ ಪ್ರಜಾಸತ್ತೆಯದಲ್ಲಿ ಜ್ಞಾನ, ಅಧಿಕಾರ ಹಾಗು ಹಣ ಈ ಮೂರು ಮುಖ್ಯ ವಿಷಯಗಳು ಒಂದನ್ನೊಂದು ಪೋಷಿಸುವ ಕಾರ್ಯವನ್ನು ಮಾಡದಿದ್ದಲ್ಲಿ ಪರಿಣಾಮವನ್ನು ಸಮಾಜವು ಭೋಗಿಸಬೇಕಾಗುವದು. ಎಂದರೆ ಸಮಾಜದಲ್ಲಿ 'ಇದ್ದವರು' 'ಇಲ್ಲದವರು' ಎಂಬ ಎರಡು ವರ್ಗಗಳು ಉತ್ಪನ್ನವಾಗುವವು; ಹೀಗೆ ವರ್ಗಗಳು ಉತ್ಪನ್ನವಾದಲ್ಲಿ ವರ್ಗಕಲಹಗಳು ಕಟ್ಟಿಟ್ಟಂತೆಯೆ. ಇಂದಿನ ಯುದ್ಧಗಳ ಕಾರಣಗಳನ್ನು ಪರಿಶೀಲಿಸಿದಲ್ಲಿ, ಸಮಾಜ ಘಟಕಗಳಲ್ಲಿಯ ಅನ್ಯಾಯವಾದ ಹಣದ ಹಂಚಿಕೆಯೆ ಪ್ರಾಮುಖ್ಯವಾದ ಕಾರಣವೆಂದು ಕಂಡುಬರುವದು. ಹಣವಂತರು ಹಾಗೂ ಇವರ ತಾಳಕ್ಕೆ ಕುಣಿಯುವ ಮತ್ತು ಅಧಿಕಾರಯುತರಾದ ರಾಜಕಾರಣಿಗಳು ಯೋಗ್ಯವಾದ ಮನೋಭಾವವನ್ನು ತಾಳಿದಲ್ಲಿ, ಮೇಲೆ ಕಾಣಿಸಿದ 'ಇಲ್ಲದವರು' ಎಂಬ ವರ್ಗವನ್ನೇ ನಿರ್ನಾಮಮಾಡಿ ಅವರನ್ನಾದರೂ 'ಉಳ್ಳವರನ್ನಾಗಿ' ಮಾಡುವ ಸಾಮರ್ಥ್ಯವು ಇಂದು ವಿಜ್ಞಾನದಲ್ಲಿದೆ. ನಿಜವಾಗಿ ಹೇಳಬೇಕೆಂದರೆ ಇಂದಿನ ಪರಿಸ್ಥಿತಿಯು ಮನುಷ್ಯನಿರ್ಮಿತ ಹೊರತು ವಿಜ್ಞಾನನಿರ್ಮಿತವಲ್ಲ. ವಿಜ್ಞಾನವು ನಿರ್ಮಿಸಬಹುದಾದ ಸಮೃದ್ಧಿಯನ್ನು ಕೊರತೆಯನ್ನಾಗಿಸುವಂತಹ ಧೋರಣೆಯನ್ನು ಅನುಸರಿಸುವ ಅಧಿಕಾರಯುತನಾದ ರಾಜಕಾರಣಿಯು ಮತ್ತು ಇವನಿಗೆ ಬೆಂಬಲಿಗನಾಗಿ ಸ್ವಾರ್ಥಸಾಧಿಸುವ ಹಣವಂತನು–ಇವರೇ ಮುಖ್ಯವಾಗಿ ಇಂದಿನ ಅಧೋಗತಿಗೆ ಕಾರಣರೆಂದು ಹೇಳಬಹುದು ಮತ್ತು ವಿಜ್ಞಾನಿಯು ಜ್ಞಾನಾರಾಧನೆಯ ತನ್ನ ಗುರಿಯನ್ನು ಬದಲಿಸಿ ಅಧಿಕಾರ ಹಾಗು ಹಣದ ಲಾಲಸೆಯ ಜನರಿಗೆ ಬೆಂಬಲಿಗನಾದರಂತೂ ತೀರಿಯೇಹೋಯಿತು. ಒಟ್ಟಿನ ಮೇಲೆ ಹೇಳುವುದಾದರೆ, ಸಮಾಜವೆಂಬ ಪೈರನ್ನು ರಕ್ಷಿಸುವ ಹೊಣೆಯಿದ್ದ ವಿಜ್ಞಾನಿ, ರಾಜಕಾರಣಿ ಹಾಗು ಹಣವಂತ ಈ ಮೂವರೂ ಸ್ವಾರ್ಥಪರರಾದರೆ–ಬೇಲಿಯೇ ಎದ್ದು ಹೊಲವನ್ನು ಮೇಯಿದಂತಾಗುವದು. ಸಮಾಜ ಘಟಕಗಳ ನೀತಿಯ ಮಟ್ಟವು ಏರುವುದೊಂದೇ ಇದರ ಪರಿಹಾರ ರೂಪವಾದ ಉಪಾಯವೆಂದು ಒಪ್ಪಿದರೂ ಸಮಾಜರಕ್ಷಕರೆನಿಸುವ ಜನರೇ ಮೊದಲು ತಮ್ಮ ನೀತಿಯ ಮಟ್ಟವನ್ನು ಏರಿಸುವ ಕಾರ್ಯವನ್ನು ಸಾಧಿಸುವವರಾಗಬೇಕು. ಮತ್ತು ಹೀಗಾದಲ್ಲಿ ಶಕ್ತಿಯ ಅಪವ್ಯಯಕ್ಕೆ ಸ್ಥಾನವೇ ಉಳಿಯಲಾರದು. ಮೇಲಾಗಿ ಯಾವ ಪ್ರಜಾಪ್ರಭುತ್ವದಲ್ಲಿ ತಮ್ಮ ದೇಶದ ಸಂಸ್ಕೃತಿಯನ್ನು ಬೆಳೆಯಿಸಿಕೊಳ್ಳಲು ಸ್ವಾತಂತ್ರ್ಯವಿರುವದೋ ಮತ್ತು ಅನ್ಯದೇಶಗಳಿಗೆ ಇಂತಹ ಸ್ವಾತಂತ್ರ್ಯವು ನಿರಾಕರಿಸಲ್ಪಡುವದಿಲ್ಲವೋ, ಇಂಥ ಜಗತ್ತಿನ ಹೊಸ ರಚನೆಯು ಮಾತ್ರ ಸ್ಥಿರವಾಗಿ ಉಳಿಯಲು ಸಾಧ್ಯ. ಹೀಗಾದಲ್ಲಿ ಅಹಂಕಾರರಹಿತ ದೇಶಪ್ರೇ

ಮವೂ ಕಲಹಪ್ರಿಯ ರಾಜನೀತಿಯಿಂದ ದೊರಕಿಸದ ಐಕ್ಯವೂ ಇವೆರಡೂ ಸಾಧಿಸುವವು; ಹಾಗು ಯಾವ ವಿಜ್ಞಾನದ ಕೊಡುಗೆಗಳು ಮೊದಲಿನ ಪರಿಸ್ಥಿತಿಯಲ್ಲಿ ಕಂಟಕಪ್ರಾಯವೆನಿಸಬಹುದಾಗಿದ್ದವೋ ಅವುಗಳೇ ಈಗ ನಾಗರಿಕತೆಗೆ ಅಲಂಕಾರಪ್ರಾಯವೆನಿಸುವವು.

ವಿಜ್ಞಾನೋಪಾಸನೆ ದುರಾಶಾದೂಷಿತವಾಗಿರಬಾರದು

ಮೇಲೆ ವಿವರಿಸಿದ ಮತ್ತು ಸಮಾಜದ ಆಧಾರಸ್ತಂಭರೆನಿಸಿದ ಮೂವರೂ ತಮ್ಮ ತಮ್ಮ ರೀತಿಯಲ್ಲಿ ವಿಜ್ಞಾನಿಗಳೆಂದೇ ಹೇಳಬಹುದು. ಸ್ಥೂಲವಾಗಿ ವಿಜ್ಞಾನಿಯೆಂದೇ ಸಂಬೋಧಿಸಲ್ಪಡುವವನ ಕಕ್ಷೆಯಲ್ಲಿ ಬರುವ ಮತ್ತು ನಿಸರ್ಗನಿಯಮಗಳನ್ನು ತಿಳಿಯುವದರಲ್ಲಿ ಜನಿಸಿದ ಶಕ್ತಿರೂಪ ಜ್ಞಾನವು ಮಾನವ ಜನಾಂಗದ ಅನುಕೂಲತೆಗೆ ಇಲ್ಲವೆ ವಿನಾಶಕ್ಕೆ ಉಪಯೋಗಿಸಲ್ಪಡಬಹುದಾಗಿದೆ. ಹಾಗೆಯೇ ಅಧಿಕಾರಯುತನಾದ ರಾಜಕಾರಣಿಯೂ ವಿಜ್ಞಾನಿಯೇ ಇದ್ದು-- ತನ್ನ ಅಧಿಕಾರ ಬಲದಿಂದ ವಿಜ್ಞಾನಿಯ ಶೋಧಗಳನ್ನು ಹೇಗೆ ಬೇಕೋ ಹಾಗೆ ಉಪಯೋಗಿಸಬಹುದಾಗಿದೆ. ಕಡೆಯದಾಗಿ ಹಣವಂತನೂ ಇವನಿಗೆ ಸಹಾಯಕನಾದ ಹಣಕಾಸಿನ ತಜ್ಞನೂ (ಇವನೂ ವಿಜ್ಞಾನಿಯೇ)- ಇವರೀರ್ವರೂ ಸಹ ದುರಾಶೆಯಿಂದ ಪ್ರೇರಿತರಾದಲ್ಲಿ ಸಮಾಜವೃಕ್ಷವು ಕುಸಿದು ಬೀಳುವದರಲ್ಲಿ ಏನೂ ಸಂದೇಹವಿಲ್ಲ. ಈ ಸಂದರ್ಭದಲ್ಲಿ ಜಗದ್ವಿಖ್ಯಾತ ಶಾಸ್ತ್ರಜ್ಞರಾದ ಐನ್‌ಸ್ಟಿನ್‌ರವರು ದಿವಂಗತ ಜರ್ಮನ್ ವಿಜ್ಞಾನಿಗಳೂ ನೋಬೆಲ್ ಬಹುಮಾನಾನ್ವಿತರೂ ಆದ ಪ್ಲಾಂಕರವರ ವಿಷಯದಲ್ಲಿ ಉಲ್ಲೇಖಿಸಿದ ಮಾತುಗಳು ವಿಜ್ಞಾನದ ವಿವಿಧ ಭಾಗಗಳಲ್ಲಿಯ ಎಲ್ಲ ಉಪಾಸಕರಿಗೂ ಅನ್ವಯಿಸುವಂತಿವೆಯಾದ ಕಾರಣ, ಅವುಗಳನ್ನು ನಾವು ತಿಳಿದಲ್ಲಿ ಪರಿಸ್ಥಿತಿಯ ನಿಜ ಸ್ವರೂಪವೇ ನಮ್ಮೆದುರು ನಿಲ್ಲಬಹುದಾಗಿದೆ. "ವಿಜ್ಞಾನಕ್ಕೆ ತಮ್ಮನ್ನೇ ಮೀಸಲಾಗಿರಿಸಿದವರು ಅನೇಕರಿರುವರು. ಆದರೆ ಎಲ್ಲರೂ ಇದನ್ನೇ ನಿಮಿತ್ತರಾಗಿರಿಸಿದವರಲ್ಲ. ಜ್ಞಾನಮಂದಿರಕ್ಕೆ ಹಲವರು ತಮ್ಮ ಪ್ರತಿಭೆಯನ್ನು ತೋರಲು ಬಂದರೆ ಬೇರೆ ಕೆಲವರು ಇದು ಕೊಡಬಹುದಾದ ಹಣದ ನಿಮಿತ್ತವಾಗಿ ಬರಬಹುದು. ಕಾರಣಾಂತರಗಳಿಂದ ವಿಜ್ಞಾನೋಪಾಸನೆಯನ್ನು ಮಾಡುವ ಈ ಎರಡೂ ವರ್ಗದವರನ್ನು ಹೊರತುಪಡಿಸಿದರೂ ಮೂರನೆಯ ವರ್ಗದ ಹಲವು ಕಾರ್ಯಕರ್ತರು ಉಳಿಯುವರು. ಈ ವರ್ಗದವರು ಮಾತ್ರ ಜ್ಞಾನವನ್ನು ಜ್ಞಾನನಿಮಿತ್ತವಾಗಿಯೇ ಸಾಧಿಸುವಂತಹರು ಮತ್ತು ಪ್ಲಾಂಕರವರು ಈ ವರ್ಗಕ್ಕೆ ಸೇರಿದವರಾದ್ದರಿಂದ ನಾವು ಅವರನ್ನು ಅತೀವ ಪ್ರೀತಿಯಿಂದ ಕಾಣುತ್ತೇವೆ. ಮೇಲಿನ ಎಲ್ಲ ಮಾತುಗಳನ್ನು ಕ್ರೋಡೀಕರಿಸಿದಲ್ಲಿ, ದುರಾಶೆಯನ್ನೇ ಧ್ಯೇಯವಾಗಿರಿಸಿದ ಹಾಗು ಸಮಾಜದ ಆಧಾರಸ್ತಂಭರೆನಿಸಿದ ಈ ಜನರೇ ಸಮಾಜದ ಅವನತಿಗೆ ಕಾರಣರೆಂದು ಕಂಡುಬರುವದು. ಇವರಲ್ಲಿ ಒಬ್ಬರು ಹೆಚ್ಚಿನ ತಪ್ಪುಗಾರರು ಇಲ್ಲವೆ ಬೇರೆಯವರು ಕಡಿಮೆಯವರೆಂಬ ಪ್ರಶ್ನೆಯೇ ಉದ್ಭೂತವಾಗುವದಿಲ್ಲ. ಸ್ವಾರ್ಥರಹಿತ ಜೀವನವೇ ಈ ದುರಾಶೆಯೆಂಬ ದುರ್ಜಯ ರೋಗಕ್ಕೆ ಔಷಧವು. ಜನತೆಯ ನೀತಿಯ ಮಟ್ಟವನ್ನು ಏರಿಸುವಲ್ಲಿ ಮೇಲೆ ವಿವರಿಸಿದ ಎಲ್ಲ ವಿಜ್ಞಾನಿಗಳೂ ಸ್ವಾರ್ಥರಹಿತ ಧೋರಣೆಯನ್ನು ಅನುಸರಿಸಿ, ಅನುಕರಣೀಯರಾಗುವಂತೆ ತಮ್ಮನ್ನು ಪರಿವರ್ತಿಸಲು ಪ್ರಯತ್ನಿಸುವದೇ ಇಂದಿನ ಪರಿಸ್ಥಿತಿಗೆ ಪಥ್ಯಕರವಾದ ಉಪಾಯವೆನಿಸಬಹುದಾಗಿದೆ.

ನಮ್ಮ ಆದರ್ಶ

ಇಪ್ಪನೆಯ ಶತಮಾನದೊಳಗೆ ಜರುಗಿದ ಎರಡನೆಯ ಮಹಾಯುದ್ಧದ ಬೀಜಗಳು ಬಿತ್ತಲ್ಪಡದಿರುವ ಪೂರ್ವದಲ್ಲಿ ಎಂದರೆ ೧೯೨೧ ರಿಂದ ೧೯೩೭ ರ ವರೆಗಿನ ಕಾಲದಲ್ಲಿ, ಭೌತಿಕ ಹಾಗು ರಸಾಯನ ವಿಭಾಗಗಳಲ್ಲಿ ೨೫ ನೋಬೆಲ್ ಪಾರಿತೋಷಿಕಗಳನ್ನು ಪಡೆದು, ಜಗತ್ತಿನಲ್ಲಿಯೇ ವಿಜ್ಞಾನದ ಉಚ್ಚ ಪರಂಪರೆಯನ್ನು ಸ್ಥಾಪಿಸಿದ ಜರ್ಮನಿದೇಶವು—ನೀತಿಯ ತತ್ವವನ್ನು ಬದಿಗಿರಿಸಿ, ವಿಜ್ಞಾನದ ಕೊಡುಗೆಗಳನ್ನು ವಿನಾಶಕ್ಕೆಂದು ಉಪಯೋಗಿಸಿ ತನ್ನ ವಿನಾಶವನ್ನೇ ಮಾಡಿಕೊಂಡ ಉದಾಹರಣೆಯು ನಮ್ಮೆದುರು ನಿಚ್ಚಳವಾಗಿದೆ. ಹಾಗೆಯೇ ಇದೇ ಕಾಲದಲ್ಲಿ ಮತ್ತು ಇದೇ ವಿಭಾಗಗಳಲ್ಲಿ ಕೇವಲ ೭ ಪಾರಿತೋಷಿಕಗಳನ್ನು ಪಡೆದ ಅಮೇರಿಕೆಯ ಉದಾಹರಣೆಯಿಂದಲೂ ನಾವು ಒಂದು ಪಾಠವನ್ನು ಕಲಿಯಬಹುದಾಗಿದೆ. ಈ ಜನರು ವಿಜ್ಞಾನವನ್ನು ವಿಜ್ಞಾನನಿಮಿತ್ತವಾಗಿ ಆರಾಧಿಸುವಲ್ಲಿ ಪ್ರಮುಖರಲ್ಲ. ಆದರೆ ವಿಜ್ಞಾನದ ಕೊಡುಗೆಗಳನ್ನು ಕೇವಲ ಹಣಕ್ಕೆ ಪರಿವರ್ತಿಸುವಲ್ಲಿ ಪ್ರಮುಖರಾಗಿರುವರೆಂಬ ಮಾತನ್ನು ಎಲ್ಲ ರಾಷ್ಟ್ರಗಳಿಗೂ ಸಾಲವನ್ನು ಕೊಡುವಲ್ಲಿ ಮುಂದಾಗಿರುವ ಅಮೇರಿಕೆಯಿಂದ ನಾವು ತಿಳಿಯಬಹುದು. ಇನ್ನು ನಮ್ಮ ವಿಷಯವನ್ನೇ ಹೇಳುವುದಾದರೆ- ನಮಗೆ ಉಜ್ವಲ ಭವಿತವ್ಯವಿದೆ; ಹಿಂದುಸ್ತಾನವು ಜಾತ್ಯತೀತ ರಾಷ್ಟ್ರವಾಗಬೇಕೆಂಬ ಧ್ಯೇಯವನ್ನಿರಿಸಿ ತನ್ನ ಕಾರ್ಯವನ್ನು ಮುಂದುವರಿಸಹತ್ತಿದೆ. ಪಂಡಿತ ನೆಹರೂರವರು ವಿಜ್ಞಾನದ ಕೈವಾರಿಗಳಾಗಿದ್ದಾರೆ. ಹಾಗೂ ಅವರ ಸ್ವಾರ್ಥರಹಿತ ಧೋರಣೆಯು ಅವರನ್ನು ಜಗತ್ತಿನಲ್ಲಿಯೇ ವಿಭೂತಿವ್ಯಕ್ತಿಗಳನ್ನಾಗಿ ಮಾಡಿದೆ. ವಿಜ್ಞಾನ ವಿಷಯದಲ್ಲಿ ಹಿಂದಿದ್ದ ನಾವು ಇಂದಿನ ಪರಿಸ್ಥಿತಿಗೆ ಹೊಂದುವಂತೆ ಮುಂದುವರಿದು, 'ವಿಜ್ಞಾನ, ಹಣ ಹಾಗು ರಾಜಕಾರಣ' ಇವುಗಳು ಒಂದನ್ನೊಂದು ಪೋಷಿಸುವ ಧೋರಣೆಯನ್ನು ಅನುಸರಿಸಿ, ಜಗತ್ತಿಗೇ ಆದರ್ಶಪ್ರಾಯರಾಗೋಣ. ನೀತಿ ಹಾಗು ಅಧ್ಯಾತ್ಮ ವಿಷಯಗಳಲ್ಲಿ ಇದ್ದ ನಮ್ಮ ಪರಂಪರೆಯನ್ನು ಕೇವಲ ನೆನೆಯುತ್ತ ಕೂಡದೆ ಆಚರಣೆಯಲ್ಲಿಳಿಸಿ, ಸ್ವತಂತ್ರ ಭಾರತದ ಆದರ್ಶ ಪ್ರಜೆಗಳಾಗೋಣ. ನಮ್ಮ ಭಾರತದಲ್ಲಿ ವಿಜ್ಞಾನಿಗಳು ರಾಜಕಾರಣಿಗಳ ಕೈಗೊಂಬೆಗಳಾಗುವದು ಬೇಡ, ಇಲ್ಲವೆ ಯಾರೂ ಸ್ವಾರ್ಥದ ಕೈಗೊಂಬೆಗಳಾಗುವದು ಬೇಡ. ಪೂಜ್ಯ ಮಹಾತ್ಮಾಜಿಯವರ ಸ್ಮಾರಕವನ್ನು ಮಾಡಬೇಕೆಂದಿರುವ ನಾವು ಇದನ್ನು ಸಾಧಿಸಿಯೇ ತೀರೋಣ ಮತ್ತು "ವಿಜ್ಞಾನಿಗಳು ರಾಜಕಾರಣಿಗಳ ಕೈಗೊಂಬೆಗಳಾಗಿ ಅವರ ತಾಳಕ್ಕೆ ಕುಣಿಯುವವರಾಗಿದ್ದಾರೆ" ಎಂಬ ಮಾತಿಗೆ ಅಪವಾದವಾದ ರಾಷ್ಟ್ರದ ಪ್ರಜೆಗಳಾಗೋಣ. ಇನ್ನು ವಿಜ್ಞಾನವನ್ನು ವಿನಾಶಕ್ಕೆ ಉಪಯೋಗಿಸುವ ಹಟವನ್ನು ಸಾಧಿಸುವ ಧೋರಣೆಯನ್ನು ಅನುಸರಿಸುವದಿದ್ದರೆ— ಪಂಡಿತ ನೆಹರೂರವರು ಹೇಳಿದ 'ಅಜ್ಞಾನ, ದಾರಿದ್ರ್ಯ ಹಾಗು ರೋಗ' ಇವುಗಳ ವಿನಾಶಕ್ಕೆಂದು ಉಪಯೋಗಿಸೋಣ ಮತ್ತು ಈ ಕಾರ್ಯಕ್ಕೆಂದು ವಿಜ್ಞಾನಿಯನ್ನು ಸಮಾಜದ ಕೈಗೊಂಬೆಯನ್ನಾಗಿ ಮಾಡೋಣ. ಜಯ್ ಹಿಂದ!

ಸಂಪತ್ತು ಬಂದಾಗ ಧೀರರ ಚಿತ್ತ ನೈದಿಲೆಯಂತೆ ಕೋಮಲವಾಗಿರುತ್ತದೆ. ಆದರೆ ವಿಪತ್ಕಾಲದಲ್ಲಿ ಅದು ಪರ್ವತದ ಗೋರ್ಕಲ್ಲಿನಂತೆ ಅತ್ಯಂತ ಕಠೋರವಾಗುವದು.

—ಸಂಸ್ಕೃತದಿಂದ

ಚಂದ್ರಿಕೆ

ಲೇಖಕರು:— ಶ್ರೀ. ಕೆ. ಗೋಪಾಲಕೃಷ್ಣರಾವ, ಬೆಂಗಳೂರ

ಶೃಂಗಾರದಭಿಸಾರಿಕೆ – ಹೇ ಚಂದ್ರಿಕೆ
ಕಂದರ್ಪ ವೈತಾಳಿಕೆ ।
ಇಂದುವಿನ ಸಂಜಾತೆ, ಸೌಂದರ್ಯಸಂಭೂತೆ,
ಮಂದಾನಿಲ ಸೇವಿತೆ – ಸಂಭಾವಿತೆ ॥

ನಾಗರತ್ನ ಅಠಾಣ ರಾಗದಲ್ಲಿ ಆಲಾಪನೆಯನ್ನು ಮುಗಿಸಿ ಕೀರ್ತನೆಯನ್ನು ಹಾಡತೊಡಗಿದಳು. ಅಠಾಣ ರಾಗ; ಝಂಪೆ ತಾಳ. ಪಲ್ಲವಿ, ಅನುಪಲ್ಲವಿಯನ್ನೇ ಕಾಲು ಗಂಟೆ ಹಾಡಿದಳು.

ನೈದಿಲೆಯ ಪ್ರಿಯಸಖಿ, ಸುಧಾಂಶು ಸಿರಿವಂತಕಿ,
ಭೂವ್ಯೋಮ ವಿಸ್ತಾರ ಪ್ರಶಾಂತ ವ್ಯಾಪಕಿ,
ಸಾಗರದ ಪೇರಲೆಯೊಳುನ್ಮಾದ ನರ್ತಕಿ,
ಹೇ ಚಿರ ಪಸನ್ನಮುಖಿ, ಹರಿ ಚರಣ ಸೇವಕಿ ॥

ಎಂದು ಮೊದಲನೆಯ ಚರಣವನ್ನು ಹಾಡಲು ತೆಗೆದುಕೊಂಡಳು. ಕೀರ್ತನೆಯ ಸಾಹಿತ್ಯ ಭಾವಪೂರಿತವಾಗಿತ್ತು. ನಾಗರತ್ನಳ ಬಾಯಲ್ಲಿ ಪ್ರತಿಯೊಂದು ಮಾತೂ ಸ್ಫುಟವಾಗಿ ಹೊರಡುತ್ತಿತ್ತು. ಶ್ರೋತೃವೃಂದ ಸ್ತಂಭಿತರಾಗಿ ಕೇಳುತ್ತಿದ್ದರು.

ಮೃದು ಮಧುರ ಭಾವನಾ ವಿಚಾರ ಪ್ರಚೋದಿನಿ,
ಸಂಗೀತ ಸಾಹಿತ್ಯ ಮನೋವಿಕಾಸಿನಿ,
ರಸಿಕ ಜನ ರಂಜನಿ ವಿರಹಾಗ್ನಿವರ್ಧಿನಿ,
ಯೋಗೀ ಜನಾವೃಂದಕಾನಂದದಾಯಿನಿ ॥

ಎಂದು ಎರಡನೆಯ ಚರಣವನ್ನು ಹಾಡಿ ತನ್ನ ಮಧುರ ಕಂಠದಿಂದ ಸಭಿಕರನ್ನು ಮುಗ್ಧಗೊಳಿಸಿದಳು. "ಭೇಷ್ ಭೇಷ್, ಭಲಾ ಅಪ್ಪ" ಎಂದು ಅವರು ತಮ್ಮ ಮೆಚ್ಚುಗೆಯನ್ನು ವ್ಯಕ್ತಪಡಿಸುತ್ತಿದ್ದರು. ನಾಗರತ್ನಳೂ ಹುರುಪುಗೊಂಡು ಆ ಚರಣದ ಸಾಹಿತ್ಯವನ್ನು ವಿಶೇಷವಾಗಿ ವಿಸ್ತಾರ ಮಾಡುತ್ತಾ ಸ್ವರಕಲ್ಪನೆಯನ್ನು ಮಾಡತೊಡಗಿದಳು.

॥ ನಿಪ – ನಿನಿಪ ॥ (ಮೃದು ಮಧುರ)
॥ ಸಾನಿ – ಪಾ ॥ ದನಿ – ನಿಪಪ ॥ (ಮೃದು . . .)
॥ ರಿಮ, ರಿಸ ನಿ ॥ ಸರಿ – ಸರಿಮ ॥ ರಿಮಪ ಮಪ ॥ ನಿ ಸನಿನಿಪ॥ (ಮೃದು . . .)
॥ ನೀ ಸರಿ ರಿಸ ಪದ ನಿಪ ॥ (ಮೃದು . . .)
॥ ಮಾ, ಪನಿ ಸರಿ ಸನಿಸ ॥ ದಾ ಪಮ ಪದ ನಿನಿಸ ॥ (ಮೃದು. .)

ಅವಳು ಹಾಡುತ್ತಿದ್ದಂತೆ ಭಾವುಕರ ಮನದಲ್ಲಿ ಎರಡು ಚಿತ್ರಗಳು ಮೂಡುತ್ತಿದ್ದವು. ಒಂದು, ಹಾಲಿನಂತೆ ಚೆಲ್ಲಿದ್ದ ಹುಣ್ಣಿಮೆಯ ಬೆಳದಿಂಗಳ ಚಿತ್ರ. ಮತ್ತೊಂದು ಹುಣ್ಣಿಮೆಯ ಬೆಳದಿಂಗಳಷ್ಟೇ ಪ್ರಶಾಂತ ಶುಭ್ರ ತೇಜೋವದನೆಯ ಚಿತ್ರ. ಹಾಡುತ್ತಿದ್ದ ನಾಗರತ್ನಳೂ ಶುಭ್ರತೇಜೋವದನೆ. ಆದರೆ ನಾಗರತ್ನಳ ದೃಷ್ಟಿಯಲ್ಲಿ ಚಂಚಲತೆಯಿತ್ತು. ಎದುರಿನಲ್ಲಿ ಕುಳಿತಿದ್ದ ಕಲೋಪಾಸಕರನ್ನು ತನ್ನ ಕಣ್ಣೋಟದಿಂದ ಕುಣಿಸಿ ಬಿಡುತ್ತಿದ್ದಳು.

ನಿನ್ನ ಜ್ಯೋತ್ಸ್ನೆಯೊಳೆನಿತೊ ಇರುಳ ನಾ ಕಳೆದಿರುವೆ,
ಜೀವನದ ಕ್ಲೇಶಗಳನಲ್ಲಿ ತೊರೆದಿರುವೆ,
ಹಗುರ ಮನವಾಗೆ ಸುಖ ಶಾಂತಿಯನು ಪಡೆದಿರುವೆ,
ಅಶರೀರೆ, ನಿನ್ನ ಪ್ರಭೆಗಿದೊ ನಮಿಸುತಿರುವೆ ॥

ಎಂದು ಕೊನೆಯ ಚರಣವನ್ನು ಹಾಡಿ ಮುಗಿಸಿದಳು. ಹಾಗೆ ಅವರ ಮನದಲ್ಲಿ ಕಳಿದಿದ್ದ ಕೋಮಲೆಯ ಚಿತ್ರ ಬೆಳದಿಂಗಳಿನಲ್ಲಿ ಸಂಪೂರ್ಣವಾಗಿ ಬೆರತುಹೋಯಿತು. ಆ ಹಾಡನ್ನು ಕೇಳಿ ನನಗಾದ ಆನಂದವಂತೂ ವರ್ಣನಾತೀತ. ಅದೇ ವರ್ಷ ತಾನೆ ನಾನು ಸಾಗರಕ್ಕೆ ಅಮಲ್‌ದಾರನಾಗಿ ಹೋಗಿದ್ದೆ. ಆಗ ತಾನೆ ಅಲ್ಲಿ ಶ್ರೀರಾಮ ಮಂದಿರದ ಕಟ್ಟಡ ಮುಗಿದಿತ್ತು. ಅದರ ಆರಂಭೋತ್ಸವದಲ್ಲಿ ಹಾಡಲು ಸಾಗರದ ಹೆಣ್ಣುಮಗಳಾದ ನಾಗರತ್ನಳನ್ನು ಮದ್ರಾಸಿನಿಂದ ಕರೆಸಿದ್ದರು. ಸಂಗೀತದ ಕೊನೆಯಲ್ಲಿ ನನ್ನನ್ನು ಎರಡು ಮಾತನಾಡಲು ಬಿನ್ನವಿಸಿಕೊಂಡರು. ನಾನು ಅದೇ ಹಾಡನ್ನು ಕುರಿತು ಪ್ರಶಂಸೆ ಮಾಡಿದೆ. "ಕರ್ನಾಟಕದ ತರುಣಿ ಈ ದಾಕ್ಷಿಣಾತ್ಯ ಕರ್ನಾಟಕ ಸಂಗೀತವನ್ನು ಅಭ್ಯಾಸಮಾಡಿ ತಮಿಳರಿಂದಲೂ 'ಸೈ' ಎನ್ನಿಸಿಕೊಂಡು ಅವರ ಮಧ್ಯೆ ರಾಜಿಸುತ್ತಿರುವುದು ನಮಗೊಂದು ಹೆಮ್ಮೆ—ಮತ್ತೆ ತ್ಯಾಗರಾಜ ಮತ್ತು ದೀಕ್ಷಿತರ ಕೃತಿಗಳಿಗೆ ಸಂಗೀತ ಸಭೆಯಲ್ಲಿ ಯಾವ ಸ್ಥಾನಮಾನಗಳಿವೆಯೋ ಅವೇ ಸ್ಥಾನಮಾನಗಳನ್ನು ಕನ್ನಡ ಕೃತಿಗಳಿಗೂ ಈಕೆ ದೊರಕಿಸಿ ಕೊಡುತ್ತಿರುವುದು ಮತ್ತೊಂದು ವೈಶಿಷ್ಟ್ಯ" ಎಂದು ಹೇಳಿದೆ. ಅಲ್ಲಿನ ಕಾರ್ಯಗಳನ್ನು ಮುಗಿಸಿಕೊಂಡು ಮನೆಗೆ ಹಿಂತಿರುಗುತ್ತಿದ್ದಾಗ ತುಂಬಿದ ಬೆಳದಿಂಗಳು. ಊರಿಗೂ ನಮ್ಮ ಬಂಗಲೆಗೂ ನಡುವೆ ಒಂದು ಕೊಳವಿದೆ. ಅದರಲ್ಲಿ ಕಮಲ ಕನ್ನೈದಿಲೆಯ ಪುಷ್ಪಗಳುಂಟು. ಆ ಹೊತ್ತಿನಲ್ಲಿ ನೈದಿಲೆಗಳು ಅರಳಿದ್ದವು. ಆ ಬೆಳದಿಂಗಳಿನಲ್ಲಿ ಅಲ್ಲಿನ ನೋಟ ಚಿತ್ತಾಕರ್ಷಕವಾಗಿತ್ತು. ಕೊಳದ ಸೋಪಾನದಡಿಯಲ್ಲಿ ಕೆಲಕಾಲ ಕುಳಿತಿದ್ದು ಹೋಗೋಣವೆನ್ನಿಸಿತು. ನನ್ನೊಡನೆ ಬರುತ್ತಿದ್ದ ಆ ಊರಿನ ಗಣ್ಯವ್ಯಕ್ತಿ ರಿಟೈಯರ್ಡ್ ತಾಲ್ಲೂಕ ಕಚೇರಿ ಹೆಡ್‌ಗುಮಾಸ್ತೆ ವೆಂಕಟರಮಣಯ್ಯನವರಿಗೆ ನನ್ನ ಅಭಿಲಾಷೆಯನ್ನು ತಿಳಿಸಿದೆ. ಅವರು 'ಆಗಬಹುದು' ಎಂದು ನನ್ನೊಡನೆ ಸೋಪಾನದಲ್ಲಿ ಕುಳಿತರು. ಅನಂತರ ವೆಂಕಟರಮಣಯ್ಯನವರು "ತಾವು ಸಂಗೀತ ಕಚೇರಿಯಲ್ಲಿ ಪ್ರಶಂಸೆ ಮಾಡಿದ ಆ ಚಂದ್ರಿಕಾಗೀತವನ್ನು ಅವರು ಇಲ್ಲೇ ರಚಿಸಿದ್ದು," ಎಂದರು.

"ಯಾರು ಅದನ್ನು ರಚಿಸಿದವರು ?" ಎಂದು ಕೇಳಿದೆ.

ಶ್ರೀ. ಕೆ. ಗೋಪಾಲಕೃಷ್ಣರಾಯರು ಚಿಕ್ಕ ಕತೆಗಳನ್ನು ಬರೆಯುವ ಕನ್ನಡ ಸಾಹಿತಿಗಳಲ್ಲಿ ಮೇಲ್ತರಗತಿಗೆ ಸೇರಿದವರು. ಅವರ ಕತೆಗಳು ಪ್ರಸಿದ್ಧ ಮಾಸಪತ್ರಿಕೆಗಳಲ್ಲಿಯೂ ಸಂಗ್ರಹರೂಪವಾಗಿಯೂ ಪ್ರಕಟವಾಗಿ ಕನ್ನಡಿಗರ ಆದರಕ್ಕೆ ಪಾತ್ರವಾಗಿವೆ. ಇಲ್ಲಿ ಒಬ್ಬ ಸಂಭಾವಿತ ಗೃಹಸ್ಥರ ಮೇಲೆ ಬಂದ ಕ್ಷಣಿಕ ಅಪವಾದ ಮತ್ತು ಅದರ ಪರಿಹಾರವಾದ ವಿಚಿತ್ರ ಬಗೆಯನ್ನು ಅವರು ನಿರೂಪಿಸಿದ್ದಾರೆ.

“ ತಮಗೆ ತಿಳಿಯದೇ ? ಹಿಂದೆ ಇಲ್ಲಿ ಅಮಲ್‌ದಾರರಾಗಿದ್ದ ಶ್ರೀಮಾನ್ ನಾಗರಾಜಾರಾಯರು. ಇದು ಅವರ ಕೃತಿಗಳಲ್ಲಿ ಬಹಳ ಪ್ರಚಾರಕ್ಕೆ ಬಂದಿರುವ ಕೀರ್ತನೆ ” ಎಂದರು.

“ ಯಾವ ನಾಗರಾಜಾರಾಯರು ? ಈಗ ಕೋಲಾರದಲ್ಲಿ ಮ್ಯಾಜಿಸ್ಟ್ರೇಟರಾಗಿದ್ದಾರಲ್ಲಾ ಅವರೇ ?'' ಎಂದು ಕುತೂಹಲದಿಂದ ಕೇಳಿದೆ. ಅವರು ನನಗೂ ಆಫೀಸರಾಗಿದ್ದರು.

“ ಹೌದು, ಹಿಂದೆ ಅವರು ಇಲ್ಲಿ ಅಮಲ್‌ದಾರರಾಗಿದ್ದರು. ಅದಕ್ಕೂ ಹಿಂದೆ ಎಂದರೆ ಅವರು ವ್ಯಾಸಂಗ ಪೂರೈಸಿ ಕೆಲಸಕ್ಕೆ ಸೇರಿದಾಗ ಅವರನ್ನು ಇದೇ ತಾಲ್ಲೂಕ ಕಚೇರಿ ಶಿರಸ್ತೆದಾರರಾಗಿ ಪೋಸ್ಟ ಮಾಡಿದ್ದರು. ಆಗ ಸುಮಾರು ಒಂದುವರೆ ವರ್ಷ ಅವರು ನಮ್ಮೊಡನೆ ಕೆಲಸ ಮಾಡಿಕೊಂಡಿದ್ದರು. ಬಹಳ ಒಳ್ಳೆಯ ಮನುಷ್ಯರು. ಈ ಕೃತಿಗೂ ಇದನ್ನು ಹಾಡಿದ ಈ ನಾಗರತ್ನಳಿಗೂ ಇವರಿಗೂ ಹತ್ತಿರ ಸಂಬಂಧವಿದೆ,” ಎಂದರು.

“ ವಿಚಾರ ಏನೋ ಬಹಳ ಸ್ವಾರಸ್ಯವಾಗಿದೆಯೆಂದು ಕಾಣುತ್ತೆ” ಎಂದೆ.

“ ಹೌದು, ತಮಗೆ ವಿರಾಮವಿದ್ದಾಗ ಅದರ ಕತೆಯನ್ನು ತಮ್ಮಲ್ಲಿ ಅರಿಕೆ ಮಾಡುತ್ತೇನೆ,” ಎಂದರು.

“ ಈಗಲೇ ಆಗಲಿ, ಬೆಳದಿಂಗಳು ಚನ್ನಾಗಿದೆ. ಇನ್ನೂ ಕೆಲವು ಕಾಲ ಇಲ್ಲೇ ಕುಳಿತಿರಬಹುದು. ಸ್ಥಳವು ಪ್ರಶಸ್ತವಾಗಿದೆ. ಸಂಗೀತವನ್ನು ಕೇಳಿ ಮನವೂ ಪ್ರಸನ್ನಗೊಂಡಿದೆ. ತಾವು ನಮ್ಮ ಕುತೂಹಲವನ್ನು ಕೆರಳಿಸಿಬಿಟ್ಟದ್ದೀರಿ” ಎಂದೆ.

ವೆಂಕಟರಮಣಯ್ಯನವರು ಕತೆಯನ್ನು ಹೇಳಲು ಆರಂಭಿಸಿದರು.

“ ನಾಗರಾಜಾರಾಯರು ಇಲ್ಲಿಗೆ ಶಿರಸ್ತೆದಾರರಾಗಿ ಬಂದಾಗ ಅವರಿಗೆ ಆಗತಾನೆ ಮದುವೆಯಾಗಿತ್ತು. ಕೆಲ ದಿನಗಳಲ್ಲಿ ನಿಷೇಕ ಪ್ರಸ್ತವೂ ಆಯಿತು. ಆದರೆ ಆಕೆಯನ್ನು ಅವರು ಇಲ್ಲಿಗೆ ಕರೆತರಬೇಕಾದರೆ ಸುಮಾರು ಒಂದು ವರ್ಷದ ಮೇಲೆಯೇ ಆಯಿತು. ನಾಗರಾಜಾರಾಯರಿಗೆ ತನ್ನವರು ಎನ್ನುವವರಿತರರಾರೂ ಇರಲಿಲ್ಲ. ಅವರಿಗೆ ಇಲ್ಲಿ ಹೋಟಲಿನ ಊಟ, ಕ್ವಾರ್ಟರ್ಸಿನಲ್ಲಿ ವಾಸವಾಗಿತ್ತು. ಅವರೇನೋ ಆಕೆಯನ್ನು ಕರೆದುಕೊಂಡು ಬರಲು ಅನೇಕ ಸಲ

ಪ್ರಯತ್ನಪಟ್ಟರು. ಆದರೆ ನಡುವೆ ಅವರ ತವರುಮನೆಯಲ್ಲಿ ತಂಗಿಯ ಮದುವೆಯೋ, ತಮ್ಮನ ಉಪನಯನವೋ, ಅಕ್ಕನ ಮಗುವಿನ ಚೌಲವೋ, ಗೌರಿ ಹಬ್ಬವೋ ಯಾವುದಾದರೂ ಒಂದು ಅಡ್ಡಿ ಬಂದು ಬಿಡುತ್ತಿತ್ತು. ಅವರು ನಿರಾಶರಾಗಿ ಆಕೆ ಬಂದಾಗ ಬರಲಿ ಎಂದು ಆಕೆಯ ಯೋಚನೆಯನ್ನೆ ಬಿಟ್ಟುಬಿಟ್ಟು ತಮ್ಮ ಬೇಸರವನ್ನು ಕಳೆಯಲು ವೀಣೆಯನ್ನು ಪಟ್ಟಾಗಿ ಹಿಡಿದುಕೊಂಡು ಕುಳಿತರು. ಇಲ್ಲಿನ ಮುನಿಸಿಫರ ಮನೆಯಲ್ಲಿ ಅವರ ಮಗಳಿಗೆ ಪಾಠ ಹೇಳಿಕೊಡುತ್ತಿದ್ದರು. ತಿಂಗಳಿನಲ್ಲಿ ಇಪ್ಪತ್ತು ದಿವಸ ಅವರ ಮನೆಯಲ್ಲಿಯೇ ಊಟ ಮಾಡಿ, ಮಲಗಿಕೊಳ್ಳುವದಕ್ಕೆ ಮಟ್ಟಿಗೆ ಕ್ವಾರ್ಟರ್ಸಿಗೆ ಬರುವರು. ನಮ್ಮ ತಾಯಿಗೆ ಅವರನ್ನು ಕಂಡರೆ ಬಹಳ ವಿಶ್ವಾಸ. ಅವರ ವಿಷಯದಲ್ಲಿ 'ಅಯ್ಯೋ ಎಂಥ ಒಳ್ಳೆ ಹುಡುಗ ಅವರ ಅತ್ತೆಮನಿಯವರು ಹೆಂಡತಿಯನ್ನು ಕಳುಹಿಸಿಕೊಡದೆ ಅವನನ್ನು ಕಾಡುತ್ತಿದ್ದಾರಲ್ಲಾ. ಈ ವಯಸ್ಸಿನಲ್ಲಿ ಆತನು ಏಕಾಂಗಿಯಾಗಿ ಇರಬಾರದು. ಅದು ಅವರಿಗೆ ತಿಳಿಯದೆ ಹೋಗಿದೆಯಲ್ಲಾ' ಎಂದು ಹಂಬಲಿಸುತ್ತಿದ್ದಳು. ಹಬ್ಬಹುಣ್ಣಿಮೆಗಳಲ್ಲಿ ಅವರನ್ನು ನಮ್ಮ ಮನೆಗೆ ಊಟಕ್ಕೆ ಕರೆಯುವರು. ನಾವೂ ಅವರನ್ನು ಮನೆಯವರ ಹಾಗೆ ಸಲಿಗೆಯಿಂದಲೇ ಕಾಣುತ್ತಿದ್ದೆವು.

"ಈ ಕೊಳ ಅವರ ಮೆಚ್ಚಿನ ಸ್ಥಳವಾಗಿತ್ತು. ಮುನಸೀಫರ ಮನೆಯಿಂದ ತಮ್ಮ ಕ್ವಾರ್ಟರ್ಸಿಗೆ ಹಿಂತಿರುಗಿ ಬರಬೇಕಾದರೆ ಇದೇ ದಾರಿಯಲ್ಲಿ ಬರಬೇಕು. ಇಲ್ಲಿ ಕುಳಿತು ಅವರು ಎಷ್ಟೋ ಸಂಜೆ ರಾತ್ರಿಗಳನ್ನು ಏಕಾಂಗಿಯಾಗಿ ಕಳೆದಿದ್ದಾರೆ. ಅನೇಕ ಕವನಗಳನ್ನು ಇಲ್ಲಿ ಕಟ್ಟಿ ಹಾಡಿಕೊಂಡಿದ್ದಾರೆ.

"ನಾಗರಾಜಾರಾಯರು ಇಲ್ಲಿದ್ದಾಗಲೇ ಅವರ 'ಪುಷ್ಪಾಂಜಲಿ' ಕವಿತಾ ಸಂಗ್ರಹವೂ ಹೊರಬಿದ್ದಿದ್ದು. ಅದರಲ್ಲಿ ಅವರು ಇಲ್ಲಿ ರಚಿಸಿದ ಅನೇಕ ಕವಿತೆಗಳಿವೆ. ಈ ದಿನ ನಾಗರತ್ನ ಹಾಡಿದ ಆ ಚಂದ್ರಿಕಾ ಗೀತವು ಅದರಲ್ಲಿ ಪ್ರಕಟವಾಗಿದೆ.

"ಒಂದು ದಿನ ನನ್ನ ತಾಯಿಯ ಬಲವಂತದ ಮೇಲೆ ನಾಗರಾಜಾರಾಯರು ತಮ್ಮ ಮಾವನವರಿಗೆ ತನ್ನ ಹೆಂಡತಿಯನ್ನು ಒಡನೆ ಕಳುಹಿಸಿಕೊಡಬೇಕು, ಇಲ್ಲದೆ ಹೋದರೆ ನಾನು ಇಲ್ಲೇ ಬೇರೆ ಒಂದು ಹೆಣ್ಣನ್ನು ಮದುವೆ ಮಾಡಿಕೊಂಡುಬಿಡುತ್ತೇನೆ; ಆ ಮೇಲೆ ಆಕ್ಷೇಪಣೆ ಮಾಡಬೇಡಿ ಎಂದು 'ಅಲ್ಟಿಮೆಟಂ' ಕೊಟ್ಟರು. ಆ ಕಾಗದ ತಲುಪಿದ ಮೂರನೆಯ ದಿನವೇ ಅವರ ಹೆಂಡತಿ ತನ್ನ ಅಣ್ಣನೊಡನೆ ಶನಿವಾರ ಬೆಳಗಿನ ರೈಲಿನಲ್ಲಿ ಹೊರಟು ಸಂಜೆಗೆ ಸಾಗರವನ್ನು ತಲುಪುವದಾಗಿ ಕಾಗದ ಬರೆದಳು. ಆ ದಿನ ಅವರ ಸಡಗರವಂತೂ ಹೇಳತೀರದು. ಅವರಿಗಿಂತಲೂ ಹೆಚ್ಚಾಗಿ ನಮ್ಮ ತಾಯಿಯ ಓಡಾಟ ನೋಡಬೇಕು! ನಮ್ಮ ತಾಯಿಯೇ ನಿಂತು ಅವರ ಮನೆಗೆ ಸಾರಣೆ ಕಾರಣೆ ಮಾಡಿಸಿದಳು. ಆ ದಿನ ಮಧ್ಯಾಹ್ನವೇ ಅವರ ಮನೆಯಲ್ಲಿ ಮೆಣಸಿನಪುಡಿ, ಚಟ್ನಿಪುಡಿ, ಸಾರಿನಪುಡಿ ಇವುಗಳನ್ನು ಮಾಡಿಸಿಟ್ಟಳು. ನಮ್ಮ ಮನೆಯಿಂದಲೇ ತೊಕ್ಕು ಉಪ್ಪಿನಕಾಯಿಯ ಮರಿಗೆಗಳು ಅಲ್ಲಿಗೆ ಬಂದವು. ಹೊಸ ಸೊಸೆ ಮನೆಗೆ ಬರುವಾಗ ಎಷ್ಟು ಸಂಭ್ರಮವೋ ಅಷ್ಟು ಸಂಭ್ರಮ ಅಲ್ಲಿ ಕಾಣುತ್ತಿತ್ತು.

"ನಾಗರಾಜಾರಾಯರ ಹೆಂಡತಿ ಊರಿಗೆ ಬರುವ ಸಂಗತಿ ಹಿಂದಿನ ದಿನವೇ ಊರಿನಲ್ಲೆಲ್ಲ ಹಬ್ಬಿತ್ತು. ಅವರಂತೂ ಆ ದಿನ ರಜ ತೆಗೆದುಕೊಂಡುಬಿಟ್ಟಿದ್ದರು. ಸಂಜೆ ನಾವೆಲ್ಲರೂ ಅವರ ಮನೆಯ ಬಳಿ ನೆರೆದಿದ್ದೆವು. ಆತ ಆಳುಗಳ ಕೈಯಲ್ಲಿ ಸೌದೆ ಪೇರಿಸುತ್ತಿದ್ದರು. ಅದು ಮುಗಿದ ಮೇಲೆ ನಾವೆಲ್ಲರೂ ರೈಲ್ವೆ ಸ್ಟೇಶನ್ನಿನ ಬಳಿಗೆ ಹೋಗಬೇಕೆಂದು ನಿಶ್ಚಯಿಸಿದ್ದೆವು.

"ಸಂಜೆ ಆರು-ಆರೂವರೆ ಗಂಟೆಯಾಗಿತ್ತು. ಹೊತ್ತು ಮುಳುಗುವ ಸಮಯ. ಸೌದೆ ಪೇರಿಸಿದ್ದೂ ಮುಗಿಯುತ್ತಾ ಬಂದಿತ್ತು. ಇನ್ನೇನು ನಾವು ಎಲ್ಲರೂ ಅಲ್ಲಿಂದ ರೈಲ್ವೆ ಸ್ಟೇಶನ್ನಿನ ಕಡೆಗೆ ಹೊರಡಬೇಕು. ನಮ್ಮ ತಾಯಿಯೂ ನನ್ನ ಮನೆಯವರೂ ಅವರ ಮನೆಯಲ್ಲಿಯೇ ನಿಂತಿರುವುದಾಗಿ ಹೇಳಿದರು. ಆ ದಿನ ಅವರಿಬ್ಬರೂ ಅಲ್ಲೇ ಸೇರಿಕೊಂಡು ಔತನದ ಅಡಿಗೆಯನ್ನು ಮಾಡಿದ್ದರೆಂದು ತೋರುತ್ತೆ. ಆ ಹೊತ್ತಿಗೆ ಸರಿಯಾಗಿ ಆ ಮೂಲೆಯ ಸೈಕಲ್ ಷಾಪ್ ಲಕ್ಷ್ಮಣ ಧಾವಿಸಿಕೊಂಡು ಅಲ್ಲಿಗೆ ಬಂದ. ಬಂದವನೇ 'ಇದೇನೋ ನಾಗರಾಜಾರಾಯರ ಮನೆ?' ಎಂದು ಕೇಳಿದ. ನಾವು 'ಹೌದು' ಎಂದು ಹೇಳಲು 'ಎಲ್ಲಿ ಅವರು?' ಎಂದ. 'ಯಾಕಪ್ಪ' ಎಂದು ನಾಗರಾಜಾರಾಯರು ಕೇಳಿದರು. ಅವನು ಬಂದ ರೀತಿಯನ್ನು ನೋಡಿ ನಾವುಗಳೆಲ್ಲರೂ ಆತ ರೈಲ್ವೆ ಸ್ಟೇಶನ್ನಿನಿಂದ ವರ್ತಮಾನ ತಂದಿದ್ದಾನೆ ಎಂದುಕೊಂಡಿದ್ದೆವು. ಅವನು ಬೈಸಿಕಲ್ಲನ್ನು ಗೋಡೆಗೆ ಒರಗಿಸಿ ನಾನಿದ್ದೆಡೆಗೆ ಬಂದು 'ನೀವೇನೋ ನಾಗರಾಜಾರಾಯರು! ದೊಡ್ಡ ಮನುಷ್ಯರಲ್ಲವೇ ನೀವು! ಅಳಿಯನ ಕುರುಡು ಬೆಳಗಾದರೆ ತಾನೆ ಗೊತ್ತಾಗುವುದು' ಎಂದ. ನಾಗರಾಜಾರಾಯರು 'ಏನಪ್ಪ ಬಂತು ಇದು. ಕಚೇರಿಯಲ್ಲಿ ಏನಾದರೂ ತಪ್ಪುಗಿಪ್ಪಾಗಿದೆಯೋ?' ಎಂದುಕೊಂಡರು. ನಾನು 'ಏನಯ್ಯಾ ಅದು? ದೊಡ್ಡ ಮನುಷ್ಯರ ಹತ್ತರ ಮಾತನಾಡುವಾಗ ನಾಲಿಗೆ ಬಿಗಿಹಿಡಿದು ಮಾತನಾಡಬೇಕು. ತಿಳೀತೋ' ಎಂದು ಗದರಿಕೊಂಡೆ. 'ನೋಡಿ ಸ್ವಾಮಿ' ಈ ದೊಡ್ಡ ಮನುಷ್ಯರು ಹೋಗಿ ನಮ್ಮ ಜನರ ಹುಡುಗಿ ಚಂದ್ರೀನ ಮರಳು ಮಾಡಿ ಒಂದು ವರ್ಷದಿಂದ ಇಟ್ಟುಕೊಂಡುಬಿಟ್ಟಿದ್ದಾರೆ. ನಿನ್ನೆ ರಾತ್ರಿ ಅವಳ ಮನೆಗೆ ಹೋಗಿದ್ದಾಗ "ನನ್ನ ಹೆಂಡತಿ ನಾಳೆ ಬಂದು ಬಿಡುತ್ತಾಳೆ. ಇನ್ನುಮೇಲೆ ನಿಮ್ಮ ಮನೆಗೆ ಬರುವುದಕ್ಕೆ ಆಗುವುದೋ ಇಲ್ಲವೋ" ಎಂದು ಹೇಳಿ ಅವಳಿಗೆ ದುಡ್ಡು ಕೊಡಲು ಹೋಗಿ ಅವಳ ದುಡ್ಡು ಒಡವೆ ಎಲ್ಲವನ್ನೂ ಹೊತ್ತುಕೊಂಡು ಬಂದುಬಿಟ್ಟಿದ್ದಾರೆ'

ಎಂದು ಹೇಳಿದ. ಒಡನೆ ನಾನು 'ನಿನಗೇನಾ ಬುದ್ಧಿಗಿದ್ದಿ ಕೆಟ್ಟು ಹೋಗಿದೆಯೋ? ಇವರು ಆ ಕೆಲಸಕ್ಕೆ ಹೋಗೋ ಮನುಷ್ಯರಲ್ಲ ಇನ್ಯಾರೋ ಇರಬೇಕು ನೋಡು, ಹೋಗಾ' ಎಂದೆ. 'ಇವರೇ ಸ್ವಾಮಿ, ಚಂದ್ರಿ ಹೇಳಿದಳು; ಇವರು ಮುನಸಿಫರ ಮನೇಲಿ ಪಾಠ ಹೇಳುತ್ತಾರಂತೆ. ಪದ್ಯಗಿದ್ಯ ಬರೀತಾರಂತೆ. ಚಂದ್ರೀ ಮೇಲೆ ಹಾಡು ಕಟ್ಟಿದ್ದಾರೆ ಅಂತ ಕೂಡ ಗೊತ್ತಾಯಿತು' ಎಂದ. ನಾನು ನಾಗರಾಜಾರಾಯರ ಮುಖವನ್ನು ನೋಡಿದೆ. ಲಕ್ಷ್ಮಣ ಹೇಳತೊಡಗಿದ, 'ನಿನ್ನೆ ರಾತ್ರಿ ಮನೆಗೆ ಬಂದಿದ್ದಾಗ ಇವರು ಅವಳ ಕೈಯಲ್ಲಿ ಹತ್ತು ರೂಪಾಯಿ ನೋಟೊಂದನ್ನು ಕೊಟ್ಟರಂತೆ. ಅವಳು ಸರಸವಾಡುತ್ತಾ ಅವರ 'ಪರ್ಸ'ನ್ನು ಕಿತ್ತುಕೊಂಡು ಅದರೊಳಗೆ ಇನ್ನೂ ಎಷ್ಟು ದುಡ್ಡಿದೆ ಅಂತ ನೋಡಿದಳಂತೆ. 'ಪರ್ಸೆ'ಲ್ಲಾ ಬರಿದಾಗಿದ್ದುದನ್ನು ಕಂಡು "ನಿಮ್ಮ ಖರ್ಚಿಗೆ ಅಷ್ಟು ಇರಲಿ" ಎಂದು ಹೇಳಿ ಒಳಗಿಂದ ಸಂದೂಕ ತಂದು ಅದರಿಂದ ಚಿಲ್ಲರೆ ತೆಗೆದುಕೊಟ್ಟು ನೋಟನ್ನು ಸಂದೂಕದಲ್ಲಿಟ್ಟಳಂತೆ. ಆ ಹೊತ್ತಿಗೆ ಒಳಗಡೆ ಮಗು ಅಳುವುದಕ್ಕೆ ಆರಂಭಿಸಲು ಸಂದೂಕವನ್ನು ಅಲ್ಲಿ ಬಿಟ್ಟು ಅವಳು ಒಳಕ್ಕೆ ಹೋದಳಂತೆ. ಬೆಳಗಾದಮೇಲೆ ಸಂದೂಕ ತೆಗೆದು ನೋಡುತ್ತಾಳೆ, ಆ ನೋಟೂ ಇಲ್ಲ ಇವಳ ಇನ್ನೆರಡು ಒಡವೆಗಳೂ ಇಲ್ಲ. ಅವುಗಳನ್ನು ಕಳೆದುಕೊಂಡರೂ ಅವಳು ಆ ವಿಷಯದಲ್ಲಿ ಬಾಯಿ ಬಿಟ್ಟಿದ್ದರೆ ತಾನೇ. ಅವಳು ಯಾಕೋ ಈ ದಿನ ಒಂದು ತರವಾಗಿದ್ದಾಳಲ್ಲಾ ಎಂದುಕೊಂಡು ನನ್ನ ತಾಯಿ ಅವಳನ್ನು ಬಲವಂತ ಪಡಿಸಿದಮೇಲೆ ಅವಳು ನಡೆದ ಸಂಗತಿ ಹೇಳಿದಳು. ಇವರನ್ನು ಹುಡುಕಿ ನಾನು ಮುನಿಸೀಫರ ಮನೆಗೂ ಹೋಗಿ ಅಲ್ಲಿಂದ ಇಲ್ಲಿಗೆ ಬಂದೆ' ಎಂದು ಹೇಳಿದ. ನಾಗರಾಜಾರಾಯರ ವಿಷಯದಲ್ಲಿ ನಮಗೆ ಎಷ್ಟೇ ಗೌರವವಿದ್ದರೂ ಅವನ ಮಾತು ಕೇಳಿದ ಮೇಲೆ 'ಯಾರನ್ನು ಹೇಗೆ ನಂಬುವುದು? ಯಾವ ಹುತ್ತದಲ್ಲಿ ಯಾವ ಹಾವಿದೆಯೋ? ಇವರು ಇಷ್ಟು ದಿನ ಇಲ್ಲಿ ಏಕಾಂಗಿಯಾಗಿದ್ದಾರೆ. ಏನು ಹವ್ಯಾಸ ಇಟ್ಟುಕೊಂಡಿದ್ದಾರೋ' ಎನ್ನಿಸಿತು. ಆದರೂ ಆ ಲಕ್ಷ್ಮಣನನ್ನು 'ಗೌರವಸ್ಥರ ಮೇಲೆ ದೋಷಾರೋಪಣೆ ಮಾಡಿ ದುಡ್ಡು ಕಿತ್ತುಕೊಳ್ಳುವುದಕ್ಕೆ ಈ ಆಟ ಹೂಡಿದ್ದೀರಾ?' ಎಂದು ಗದರಿಕೊಂಡೆ. 'ಇಲ್ಲಾ ಸ್ವಾಮಿ ಈತ ಅವಳಿಗೆ ಬರೆದು ಕೊಟ್ಟಿರೊ ಈ ಪುಸ್ತಕ ನೋಡಿ' ಎಂದು ತನ್ನ ಜೋಬಿನಿಂದ ನಾಗರಾಜಾರಾಯರ 'ಪುಷ್ಪಾಂಜಲಿ' ಗ್ರಂಥವನ್ನು ತೆಗೆದು ನನ್ನ ಕೈಗೆ ಕೊಟ್ಟ. ಅದರಲ್ಲಿ 'ಚಂದಿರಮ್ಮನಿಗೆ—ಪ್ರೀತಿಪೂರ್ವಕ—ನಾಗರಾಜಾರಾಯ' ಎಂದು ಬರೆದು ಸಹಿ ಮಾಡಿತ್ತು. ಅದನ್ನು ನಾಗರಾಜಾರಾಯರಿಗೆ ತೋರಿಸಿ 'ಇದಕ್ಕೆ ಏನು ಹೇಳುತ್ತೀರಿ ನಾಗರಾಜಾರಾಯರೆ'? ಎಂದು ಅವರನ್ನು ಕೇಳಿದೆ. ಅವರೂ ಪುಸ್ತಕವನ್ನು ನೋಡಿ ಅಪ್ರತಿಭರಾದರು. 'ಅಕ್ಷರ ಏನೋ ನಂದೇ. ಆದರೆ ಯಾವ ಚಂದ್ರಿಕೆಯನ್ನೂ ನಾನು ಕಾಣೆ. ಇದರಲ್ಲಿ ಏನೋ ಮೋಸವಿದೆ' ಎಂದರು. 'ಇದಕ್ಕಿಂತಲೂ ಹೆಚ್ಚಿನ ರುಜುವಾತು ಇದೆ ಸ್ವಾಮಿ. ಅದು ಇವರ ಮಗಳು! ಚಂದ್ರೀಗೆ ಹುಟ್ಟಿದ ಮಗು!' ಎಂದ. ಆ ಹೊತ್ತಿಗೆ ನಮ್ಮ ತಾಯಿ 'ಏನಿರೋ ಇನ್ನೂ ಇಲ್ಲೇ ಇದ್ದೀರಿ, ಸ್ಟೇಶನ್ನಿಗೆ ಹೋಗೋದಿಲ್ಲವೇ, ಏನಿದು ಗಲಾಟೆ?' ಎಂದು ಹೊರಗಡೆ ಬಂದಳು. ಲಕ್ಷ್ಮಣ ಅವಳಲ್ಲಿ ಪಂಚಾಯಿತಿಗೆ ಹೋಗಲು 'ನಾಚಿಕೆ ಇಲ್ಲವೇ ನಿಮಗೆ? ಮನೆ ಹತ್ತಿರಕ್ಕೆ ಬಂದಿದ್ದೀರಿ ಗಲಾಟೆ ಎಬ್ಬಿಸೋದಕ್ಕೆ. ಸುಮ್ಮನೆ ಹೊರಟುಹೋಗುತ್ತೀರೋ ಪೊರಕೆ ಏಟು ಬೀಳಬೇಕೊ' ಎಂದು ಕೈಗೆ ಪೊರಕೆ ತೆಗೆದುಕೊಂಡಳು. ಲಕ್ಷ್ಮಣ 'ಆಗಲಿ ಈಗ ತಿರುಗಿ ಬರುತ್ತೇನೆ' ಎಂದು ಹೇಳಿ ಬೈಸಿಕಲ್ ತೆಗೆದುಕೊಂಡು ಹೊರಟು ಹೋದ. ಈ ಗಲಾಟೆ ಮುಗಿಯುವ ಹೊತ್ತಿಗೆ ರೈಲು ಬಂದೇಬಿಟ್ಟಿತ್ತು. ರೈಲ್ವೇ ಸ್ಟೇಷನ್ನಿನಿಂದ ಗಾಡಿ ಮಾಡಿಕೊಂಡು ನಾಗರಾಜಾರಾಯರ ಹೆಂಡತಿ ಮತ್ತು ಭಾವ ಮೈದುನ ಬಂದು ಇಳಿದರು. ಅವರ ಭಾವ ಮೈದುನ 'ಒಳ್ಳೇ ಭಾವ, ಸ್ಟೇಶನ್ನಿಗೆ ಚೆನ್ನಾಗಿ ಬಂದಿದ್ದಿರಿ. ನಿಮ್ಮ ಕಚೇರಿ ಜವಾನ ಅಲ್ಲಿ ನಮಗೆ ಸಿಕ್ಕದೆ ಹೋಗಿದ್ದರೆ ಊರಲ್ಲೆಲ್ಲಾ ಅಲೆಯಬೇಕಾಗಿತ್ತೇನೋ' ಎಂದು ಹಂಗಿಸಿದ. ನನ್ನ ಮನೆಯವರು ನಾಗರಾಜಾರಾಯರ ಹೆಂಡತಿಯನ್ನು ಒಳಕ್ಕೆ ಕರೆದುಕೊಂಡು ಹೋದರು. ನಮ್ಮೆಲ್ಲರಿಗೂ ಕಾಫಿ ತಿಂಡಿ ಬಂತು. ನಾಗರಾಜಾರಾಯರ ಭಾವಮೈದುನ ನನ್ನೊಡನೆ 'ಭಾವನವರ ಕೋಪ ಇನ್ನೂ ಇಳಿದೇ ಇಲ್ಲ ನೋಡಿ, ನಾವು ಅವತ್ತಿನಿಂದ ಕರೆದುಕೊಂಡು ಬರಬೇಕೆಂದೇ ಇದ್ದೆವು. ಆದರೆ ಏನೇನೋ ಅಡಚಣೆಗಳು ಬಂದುಬಿಟ್ಟವು. ಮುಖ್ಯವಾಗಿ ನಮ್ಮ ತಂದೆತಾಯಿಗಳಿಗೆ ಇವಳನ್ನು ಇಷ್ಟು ದೂರ ಕಳುಹಿಸಿಕೊಡಲು ಇಷ್ಟವಿಲ್ಲ. ಅದರಿಂದ ಭಾವನವರಿಗೆ ಮೈಸೂರಿಗೆ ವರ್ಗ ಮಾಡಿಸೋದಕ್ಕೆ ಪ್ರಯತ್ನ ಮಾಡುತ್ತಿದ್ದರು. ಇಷ್ಟರಲ್ಲಿಯೇ ನಮ್ಮ ಪ್ರಯತ್ನವೂ ಕೈಗೂಡಬಹುದು' ಎಂದ. ಅವನ ತಂಗಿಯನ್ನು ಕರೆದು 'ಪದ್ಮ, ಮಾತನಾಡಿಸೆ ಭಾವನವರನ್ನ' ಎಂದು ಹೇಳಿದ.

"ನಾವು ಕಾಫಿ ಕುಡಿಯುತ್ತಿರುವ ಹೊತ್ತಿಗೆ ಹೊರಗಡೆ ಯಾರೋ ಬರುತ್ತಿರುವ ಹಾಗೆ ಕಂಡಿತು. ಹೊರಗೆ ಬಂದು ನೋಡಿದೆ, ಲಕ್ಷ್ಮಣ ಅವನ ತಾಯಿ ಬಜಾರಿ ರಂಗಿ, ಇನ್ನೊಬ್ಬ ಹೆಂಗಸು ನಮ್ಮ ಕ್ವಾರ್ಟರ್ಸಿನ ಕಡೆಗೆ ಬರುತ್ತಿದ್ದರು. ಇನ್ನೇನೋ ದೊಡ್ಡ ಗಲಾಟೆ ಆಗುತ್ತೆ ಎಂದುಕೊಂಡೆ 'ನಾಗರಾಜಾ ರಾಯರೇ, ನೋಡಿ ಹೊರಗೆ ಏನೋ ಈ ಕಡೆಗೇ ಸವಾರಿ ದಯಮಾಡಿಸುತ್ತಿದೆ' ಎಂದೆ. ಅವರು 'ದೇವರ ಸತ್ಯವಾಗಿಯೂ ಸ್ವಾಮಿ, ನಾನು ಅಂತ ಕೆಲಸಕ್ಕೆ ಹೋದವನಲ್ಲ. ಇವರದೇನೋ ಒಂದು ದೊಡ್ಡ ಗ್ಯಾಂಗ್ ಇದೆ ಅಂತ ಕಾಣುತ್ತೆ. ಈ ಆಟ ಹೂಡಿ ದುಡ್ಡು ಕೀಳಬೇಕು ಅಂತಿದ್ದಾರೆ ಎಂದು ಕಾಣುತ್ತೆ' ಎಂದರು. ಅವರ ಆಗಿನ ಅವಸ್ಥೆ ನೋಡಿ 'ಅಯ್ಯೋ' ಎನ್ನಿಸಿತು. ಅವರ ಭಾವ ಮೈದುನ ಬೇರೆ ಏನು ಸಮಾಚಾರ ಎಂದು ಒತ್ತಿ ಕೇಳುತ್ತಿದ್ದಾನೆ. ನಮ್ಮ ಗುಜು ಗುಜು ಕಂಡು ನಮ್ಮ ತಾಯಿ ಹೊರಗೆ ಬಂದು ನೋಡಿ ಅವರು ಇಲ್ಲಿಗೆ ಬರಲಿ, ಅವರಿಗೆ ತಕ್ಕ ಶಾಸ್ತಿಮಾಡಿ

ಕಳುಹಿಸುತ್ತೇನೆ' ಎಂದು ಸಿದ್ಧಳಾಗಿ ನಿಂತಳು. ನಾಗರಾಜಾರಾಯರ ಹೆಂಡತಿ ಏನೋ ಇಲ್ಲಿ ನಡೆದುಹೋಗಿದೆ. ಅದನ್ನು ಮುಚ್ಚುವುದಕ್ಕೆ ಇವರೆಲ್ಲರೂ ಪ್ರಯತ್ನಪಡುತ್ತಿದ್ದಾರೆ ಎಂದು ಮಾಡಿಕೊಂಡಳು. ನನ್ನ ಮನೆಯಾಕೆಯನ್ನು ಕೇಳಿದಳು, ಅವಳು ಹೇಳಲಿಲ್ಲ. ನಮ್ಮ ತಾಯಿಯನ್ನೇ ಕೇಳಿದಳು. ನಮ್ಮ ತಾಯಿಗೆ ಏನು ಹೇಳಬೇಕು ಏನು ಹೇಳಬಾರದು ಎಂಬ ಪರಿಜ್ಞಾನವಿಲ್ಲ. ಅದರಿಂದ ಏನು ಪರಿಣಾಮವಾಗುವುದೆಂಬುದನ್ನೂ ಅವಳು ಯೋಚಿಸಲಿಲ್ಲ. 'ಆ ಸೂಳೇನ ಇವರು ಇಟ್ಟುಕೊಂಡಿದ್ದಾರಂತೆ' ಎಂದುಬಿಟ್ಟಳು. ಆ ಮಾತು ಕೇಳಿದೊಡನೆ ನಾಗರಾಜಾರಾಯರ ಹೆಂಡತಿ ಭೂಮಿಗೆ ಇಳಿದುಹೋದಳು. ತಾನು ಇಲ್ಲಿಗೆ ಬರದೇ ನಿಂತದ್ದೇ ಇದಕ್ಕೆ ಕಾರಣವೆಂಧೂ ತನ್ನ ಕಳುಹಿಸಿ ಕೊಡದೆ ಹಟ ಮಾಡಿ ತನ್ನ ತಂದೆ ತಾಯಿ ತನ್ನ ತಲೆ ಮೇಲೆ ಬಂಡೆ ಎಳೆದುಬಿಟ್ಟರು ಎಂದೂ ಹೇಳಿಕೊಂಡು ಅಳುತ್ತ ಕುಳಿತಳು. 'ನನ್ನನ್ನು ಇಲ್ಲಿಂದ ಕರೆದುಕೊಂಡು ಹೋಗಿ ಬಿಡಪ್ಪಾ' ಎಂದು ತನ್ನ ಅಣ್ಣನನ್ನು ಕೇಳತೊಡಗಿದಳು. ಅವಳನ್ನು ಸಮಾಧಾನಪಡಿಸುವುದಕ್ಕೆ ಸಾಕುಸಾಕಾಗಿ ಹೋಯಿತು.

"ಅವರು ಹತ್ತಿರಕ್ಕೇ ಬಂದರು. 'ಬಂದಿದ್ದೆಲ್ಲಾ ಬರಲಿ, ನಾನು ತಪ್ಪುಮಾಡಿದ್ದರೆ ತಾನೆ ನನಗೆ ಹೆದರಿಕೆ' ಎಂದು ನಾಗರಾಜಾರಾಯರೇ ಮುಂದೆ ಬಂದರು. ಆ ಲಕ್ಷ್ಮಣ ತನ್ನ ಜೊತೆಯಲ್ಲಿ ತಂದಿದ್ದ 'ಪೆಟ್ರೊಮಾಕ್ಸ' ದೀಪವನ್ನು ಅವರ ಮುಖಕ್ಕೆ ಹಿಡಿದು 'ನೋಡು ಇವರೇನೋ' ಎಂದು ಆ ಹೆಂಗಸನ್ನು ಕೇಳಿದ. ಅವಳು ತಲೆಯಲ್ಲಾಡಿಸಿದಳು. ನಮಗೆ ಧೈರ್ಯ ಬಂತು. ನಾವು ಅವರ ಮೇಲೆ ತಿರುಗಿ ಬಿದ್ದೆವು. ಅವರನ್ನು ಹಿಡಿದು ಪೋಲೀಸಿಗೆ ಕೊಡುವುದಾಗಿ ಹೇಳಿದೆವು. ಬಜಾರಿ ರಂಗಿ ಆ ಹೆಂಗಸಿನ ಮೂತಿ ತಿವಿದಳು. ನನ್ನೊಡನೆ 'ಇವಳು ನಮ್ಮ ಕುಲದಲ್ಲಿ ತಪ್ಪಿಹುಟ್ಟಿದ್ದಾಳೆ ಸ್ವಾಮಿ, ತಪ್ಪಿ-ಹುಟ್ಟಿದ್ದಾಳೆ. ಇವಳನ್ನು ನನ್ನ ಮನೇಗೆ ತಂದುಕೊಳ್ಳಬೇಕು ಅಂತಿದ್ದೆ. ನನ್ನ ಮಗನಿಗೇ ಮದುವೆ ಮಾಡಬೇಕೆಂದಿದ್ದೆ. ಮದುವೆ ಮಾಡಿಕೊಂಡು ಗರತಿಯಾಗಿರೋದನ್ನು ಬಿಟ್ಟು ಅವರನ್ನು ಕಟ್ಟಿಕೊಂಡು ಅವರ ಸೂಳೆ ಆಗಿರಲು ಮನಸ್ಸು ಮಾಡಿದಳು. ಏನು ಹಗಲೂ ರಾತ್ರಿ ಅವರು ಬರೆದ ಹಾಡುಗಳನ್ನು ಹಾಡಿದ್ದೂ ಹಾಡಿದ್ದೆ. ತನ್ನ ಮಗುವನ್ನು ಮುದ್ದಿಸಿದ್ದೂ ಮುದ್ದಿಸಿದ್ದೇ. ಯಾವ ಹೆಂಡತಿ ಕೂಡ ಗಂಡನ ಮೇಲೆ ಅಷ್ಟು ಪ್ರೀತಿ ವಿಶ್ವಾಸ ಇಡೋದಿಲ್ಲ. ಹಾಗೆ ಮೆರದುಬಿಟ್ಟಳು. ಈಗಲೂ ಇನ್ನೂ ಇವರ ಯೋಗ್ಯತೆ ಇವಳಿಗೆ ಗೊತ್ತಾಗಿಲ್ಲ. ತನಗೆ ಇವರು ಮೋಸ ಮಾಡಿದ್ದರೂ ಇವರಿಗೆ ಅವಮಾನ ಆಗಬಾರದು ಅಂತ ಇವರಲ್ಲ ಅಂತ ತಲೆ ಅಲ್ಲಾಡಿಸುತ್ತಿದ್ದಾಳೆ' ಎಂದಳು.

"ಆ ಹೊತ್ತಿಗೆ ಸರಿಯಾಗಿ ಮುನಸೀಫರೂ ಅವರ ಮಗಳೂ ಕಾರಿನಲ್ಲಿ ಅಲ್ಲಿಗೆ ಬಂದರು. ಇಷ್ಟು ಹೊತ್ತಿಗೆ ನಾಗರಾಜಾರಾಯರ ಕುಟುಂಬ ಬಂದಿರುತ್ತಾರೆಂದು ಅವರ ಶಿಷ್ಯಳಾದ ಇಂದಿರಮ್ಮ ತನ್ನ ತಂದೆಯನ್ನು ಕರೆದುಕೊಂಡು ಬಂದಿದ್ದಳು. ಮುನಸೀಫರು ಇಲ್ಲಿನ ಗಲಾಟೆ ಕಂಡು 'ಏನು ಸಮಾಚಾರ' ಎಂದು ವಿಚಾರಿಸಿದರು. ನಾನು ವಿಷಯವನ್ನೆಲ್ಲಾ ಹೇಳಿದ ಮೇಲೆ ಅವರೇ 'ಅದಕ್ಕೇನೋ ಆಗವನು ನಾಗರಾಜಾರಾಯರನ್ನು ಹುಡುಕಿಕೊಂಡು ನಮ್ಮ ಮನೆ ಹತ್ತಿರಕ್ಕೆ ಬಂದಿದ್ದಿದ್ದು? ನಾಗರಾಜಾರಾಯರು ಇಲ್ಲಿ ಕ್ವಾರ್ಟರ್ಸಿನಲ್ಲಿದ್ದಾರೆ' ಎಂದು ಅವನಿಗೆ ನಾನೇ ಹೇಳಿ ಕಳುಹಿಸಿದೆ, ಎಂದರು. ಅವರ ಕಣ್ಣು ಅಲ್ಲಿದ್ದ ನಾಗರಾಜಾರಾಯರ ಪುಸ್ತಕದ ಮೇಲೆ ಬಿತ್ತು. ಅದನ್ನು ಕೈಗೆ ತೆಗೆದುಕೊಂಡು ನೋಡಿದರು. ಲಕ್ಷ್ಮಣ 'ನಾನೇನೂ ಸುಳ್ಳು ಹೇಳುತ್ತಿಲ್ಲ. ನೀವೇ ನೋಡಿ ಸ್ವಾಮಿ ಅದನ್ನು. ಅವರು ಅವಳಿಗೆ ಬರೆದು ಕೊಟ್ಟಿರೋ ಪುಸ್ತಕ. ಅದರಲ್ಲಿ ಅವರ ಸಹಿ ಹಾಕಿದ್ದಾರೆ, ಎಂದ. "ಅವರು ಎಷ್ಟಾದರೂ ನ್ಯಾಯಾಧಿಪತಿಗಳಲ್ಲವೇ? ಅದರಲ್ಲಿನ ಬರವಣಿಗೆಯನ್ನು ಪರೀಕ್ಷಿಸಿ ನೋಡುತ್ತಿದ್ದರು. ಅವರ ಮಗಳು ಪುಸ್ತಕವನ್ನು ಕೈಗೆ ತೆಗೆದುಕೊಂಡು ನೋಡಿ 'ಅಣ್ಣಾ ಇದು ನಮ್ಮ ಮೇಸ್ಟರು ನನಗೆ ಕೊಟ್ಟಿದ್ದ ಪುಸ್ತಕ. ಅವರು ಕೊಟ್ಟ ಎರಡು ದಿವಸಕ್ಕೇ ಇದು ಕಳೆದು ಹೋಗಿಬಿಟ್ಟಿತು. ನೋಡು ಅದರ ಮೇಲೆ ಆ ದಿನ ನನ್ನ ಅಜಾಗರೂಕತೆಯಿಂದ ಆದ ಕುಂಕುಮದ ಎಣ್ಣೆ ಕಲೆ ಹಾಗೇ ಇದೆ' ಎಂದಳು. ಮುನಸೀಫರು ಬರವಣಿಗೆಯನ್ನು ಮತ್ತೂ ಪರೀಕ್ಷಿಸಿ ನೋಡಿದರು. ಅದರಲ್ಲಿ 'ಇ' ಅಕ್ಷರವನ್ನು ಅಳಿಸಿ ಅಲ್ಲಿ 'ಚ' ಎಂದು ತಿದ್ದಿರುವುದು ಗೊತ್ತಾಯಿತು. ಆ ಹೆಂಗಸನ್ನು ಹತ್ತಿರಕ್ಕೆ ಕರೆದು ಅವಳಿಗೆ 'ಸತ್ಯವನ್ನು ಹೇಳು ಭಯಪಡಬೇಡ' ಎಂದು ಅಭಯವನ್ನು ಕೊಟ್ಟು ಬಲವಂತಪಡಿಸಿದ ಮೇಲೆ ಅವಳಿಂದ ಅವರ ಮನೆಗೆ ಬರುತ್ತಿದ್ದಾತ ಇವರಲ್ಲ, ಬೇರೆ ಅಂತಲೂ ಆತ ಮೊದಲಿನಿಂದಲೂ ತಾನು ನಾಗರಾಜಾರಾಯ, ತಾಲೂಕ ಕಚೇರಿ ಶಿರಸ್ತೆದಾರ, ನೆಂದು ಹೇಳಿಕೊಳ್ಳುತ್ತಿದ್ದನೆಂತಲೂ ಆ ಹಾಡುಗಳನ್ನೆಲ್ಲಾ ಅವನೇ ಬರೆದೆನೆಂದು ಅವುಗಳನ್ನು ಹಾಡಿ ತೋರಿಸಿ ಕೊಡುತ್ತಿದ್ದನೆಂತಲೂ ಗೊತ್ತಾಯಿತು. ಅಲ್ಲದೆ ಅವಳು ಕೊಟ್ಟ ಅವನ ವರ್ಣನೆಯಿಂದ ಮುನಸೀಫರಿಗೆ ಯಾರ ಮೇಲೆಯೋ ಸಂಶಯ ಹುಟ್ಟಿತ್ತು. ಅದರ ನಿವಾರಣೆಯಾಯಿತು. ಆ ಮನುಷ್ಯ ಅವರ ಮನೆಯಲ್ಲಿ ಅಡಿಗೆ ಕೆಲಸ ಮಾಡಿಕೊಂಡಿದ್ದ ಮಂಜುನಾಥ. ಅವನು ನಾಗರಾಜಾರಾಯರ ಸ್ನೇಹ ಮಾಡಿಕೊಂಡು ಅವರು ಹಾಡುಗಳನ್ನೆಲ್ಲಾ ಬರೆದ ಹಾಗೆ ತಾನು ಅವರಿಂದ ಹಾಡಿಸಿ ಕಲಿತುಕೊಳ್ಳುತ್ತಿದ್ದ. ಕೆಲವು ದಿನಗಳ ಹಿಂದೆ ಅವನಿಗೆ ಸಮನ್ಸ್‌ಪ್ಯಾದಿ ಕೆಲಸ ಕೊಡಿಸಿ ಅವನನ್ನು ಕಚೇರಿಗೆ ಕಳುಹಿಸಿಬಿಟ್ಟಿದ್ದರು. ಆ ದಿನ ಬೆಳಿಗ್ಗೆ ಸಮನ್‌ಗಳನ್ನು ಜಾರಿ ಮಾಡಲು ಸೊರಬದ ಕಡೆಗೆ ಹೋಗಿದ್ದ. 'ಅವನು ಊರಿನಿಂದ ಹಿಂತಿರುಗಲಿ. ಅವಳಿಗೆ ಅವನಿಂದ ಯಾವ ವಿಧವಾದ ಪರಿಹಾರ ಕೊಡಿಸಬೇಕೋ ಅದನ್ನು ವ್ಯವಸ್ಥೆ ಮಾಡೋಣ' ಎಂದು ಹೇಳಿ ನಾಗರಾಜಾರಾಯರನ್ನು ಕುರಿತು, 'ಏನಿರಿ ನೀವು ಈ ಚಂದ್ರೀನ ನೋಡದೇ ಇದ್ದರೂ ಮೊನ್ನೆ ಗಣೇಶನ ಹಬ್ಬದ ದಿವಸ

ಚೌತಿ ಚಂದ್ರನನ್ನ ನೋಡಿರಬೇಕು. ಹೋಗಲಿ ಬಿಡಿ, ಅನಾಯಾಸವಾಗಿ ಒಬ್ಬ ಮಗಳನ್ನು ಪಡೆದುಕೊಂಡುಬಿಟ್ಟಿರಿ. ಅದನ್ನು ನೀವು ಸಾಕಿಕೊಂಡು ಬಿಡಿ' ಎಂದು ತೀರ್ಪು ಕೊಟ್ಟರು. ಊರಿಗೆಹೋಗಿದ್ದ ಮಂಜುನಾಥನಿಗೆ ಇಲ್ಲಿನ ವಿಷಯ ಹೇಗೆ ಗೊತ್ತಾಯಿತೋ ಏನೋ. ಅವನು ಸಾಗರಕ್ಕೆ ಹಿಂತಿರುಗಲೇ ಇಲ್ಲ. ಸಮಾನ್‌ಗಳೆಲ್ಲವನ್ನೂ ಅಲ್ಲಿಂದ ಇಲ್ಲಿಗೆ ಪೋಷ್ಟ ಮೂಲಕ ಕಳುಹಿಸಿ ಉಡುಪಿಗೆ ಎದ್ದುಬಿಟ್ಟ. ನಾಗರಾಜಾರಾಯರಿಗೂ ಆ ತಿಂಗಳ ಕೊನೆಯ ಹೊತ್ತಿಗೆ ಮೈಸೂರಿಗೇ ವರ್ಗವಾಗಿಬಿಟ್ಟಿತು. ಅವರೂ ಸಾಗರವನ್ನು ಬಿಟ್ಟು ಹೊರಟುಬಿಟ್ಟರು.

"ಅವರು ಇಲ್ಲಿಗೆ ಅಮಲ್‌ದಾರರಾಗಿ ಹಿಂತಿರುಗಿ ಬಂದಾಗ ನಾನು ಹಿಂದಿನಂತೆಯೇ ಹೆಡ್‌ಗುಮಾಸ್ತೆಯಾಗಿದ್ದೆ. ಕೊನೆಗೂ ಹೆಡ್‌ಗುಮಾಸ್ತೆಯಾಗಿಯೇ ರಿಟೈಯರ್ಡ್ ಆದೆ. ಒಂದು ದಿನ ಅವರೇ 'ಆ ಚಂದ್ರಾಸಾನಿ ಏನಾದಳರೀ!' ಎಂದು ಕೇಳಿದರು. 'ಅವಳು ತಾವು ಊರುಬಿಟ್ಟು ಕೆಲವು ದಿವಸಗಳಲ್ಲೇ ತೀರಿಕೊಂಡು ಬಿಟ್ಟಳು ಸ್ವಾಮೀ ತಾನು ಕಟ್ಟಿಕೊಂಡಿದ್ದ ಕಲ್ಪನೆಯ ಗೋಪುರ ಕಳಚಿ ಬಿದ್ದಿತೆಂದು ಕಾಣುತ್ತದೆ. ಅಥವಾ ಅಂದು ಆದ ಅವಮಾನ ಸಹಿಸಲಾರದೆಯೋ ಏನೋ ಅಂತೂ ಪ್ರಾಣ ಬಿಟ್ಟುಬಿಟ್ಟರು. ಅವಳ ಹುಡುಗಿ ಆ ಲಕ್ಷ್ಮಣನ ಮನೇಲಿ ಬೆಳೆಯುತ್ತಿದ್ದಾಳೆ. ಬಹಳ ಕಷ್ಟಪಡುತ್ತಿದೆ ಅದು' ಎಂದು ಹೇಳಿದೆ. ನಾಗರಾಜಾರಾಯರು 'ಕೆಸರಿನಲ್ಲಿ ಕಮಲ' ಎಂದು ಅಪ್ಪಣೆ ಕೊಟ್ಟರು. ಅದು ಚಂದ್ರಾಸಾನಿಗೆ ಅನ್ವಯಿಸಿದ್ದೊ ಅಥವಾ ಅವರ ಮಗಳಿಗೊ ನನಗೆ ತಿಳಿಯದು. ಆದಿನ ಸಂಜೆ ನಾಗರಾಜಾರಾಯರ ಹೆಂಡತಿ ಆ ಹುಡುಗಿಯನ್ನು ಕರೆದುಕೊಂಡು ಬರುವಂತೆ ನನಗೆ ಹೇಳಿ ಕಳುಹಿಸಿದರು. ಅವಳಿಗೆ ಅನ್ನ ಬಟ್ಟೆ ಕೊಟ್ಟು ಅವರ ಮನೆಯಲ್ಲಿಯೇ ಬೆಳೆಸಿದರು. ಅವಳಿಗಿದ್ದ ಸಂಗೀತ ಜ್ಞಾನಕ್ಕೆ ಆಶ್ಚರ್ಯಪಟ್ಟು ಅವಳನ್ನು ಆ ಪುಣ್ಯಾತಗಿತ್ತಿ ತನ್ನ ತೌರುಮನೆಗೆ ಕಳಿಸಿಕೊಟ್ಟು ಮೈಸೂರಿನಲ್ಲಿ ಸಂಗೀತ ಪಾಠ ಹೇಳಿಸಿದರು. ಅನಂತರ ಅವಳನ್ನು ತಿರುಚೂರಿಗೆ ಕಳುಹಿಸಿ ಕೊಟ್ಟಿದ್ದರು. ಈಗ ನೋಡಿ ಅವಳು ಮದ್ರಾಸಿನಲ್ಲಿ ದೊಡ್ಡ ಗಾಯಕಿಯಾಗಿ ಹೆಸರುಗೊಂಡಿದ್ದಾಳೆ" ಎಂದು ವೆಂಕಟರಮಣಯ್ಯನವರು ಅವಳ ಕತೆಯನ್ನು ಹೇಳಿ ಪೂರೈಸಿದರು. ನನ್ನ ಮನವೋ ಕತೆಯನ್ನು ಕೇಳುತ್ತಿದ್ದ ಹಾಗೆ ಅಂದಿನ ಬೆಳದಿಂಗಳಿನಲ್ಲಿ ತೇಲುತ್ತಿದ್ದ ಆ ಬಿಳಿಯ ಮೋಡದೊಂದಿಗೆ ಅಲೆಯುತ್ತಿತ್ತು. ನಾಗರತ್ನ ಹಾಡಿದ್ದ ಆ ಚಂದ್ರಿಕಾಗೀತ ಮನದಲ್ಲಿ ಮೊರೆಯುತ್ತಲೇ ಇತ್ತು. ಅವರು ಕತೆಯನ್ನು ಹೇಳಿ ನಿಲ್ಲಿಸಿದ ಮೇಲೆ ಆ ರಸಿಕ ಮಂಜನಾಥ ಚಂದಿರನ್ನನೊಡನೆ ಇದು ನಿನ್ನ ಮೇಲೆ ಬರೆದಿದ್ದೇನೆ ಎಂದು ಹೇಳಿದಾಗ ಅದರ ಕೊನೆಯ ಚರಣದಲ್ಲಿ '**ಅಶರೀರೆ**' ಎಂದೇ ಅವಳನ್ನು ಸಂಬೋಧಿಸಿದನೋ ಅಥವಾ **ಸಶರೀರೆ**' ಎಂದು ಕರೆದನೋ ಆ ಪುಸ್ತಕದ ಪ್ರತಿಯಲ್ಲಿಯೂ ಹಾಗೆ ತಿದ್ದಿದ್ದಾನೆಯೋ ಎಂದು ವೆಂಕಟರಮಣಯ್ಯನವರನ್ನು ಕೇಳಬೇಕೆಂದೆನಿಸಿತು. ಆದರೆ ನಾನು ಅವರನ್ನು ಕೇಳಲಿಲ್ಲ. ಈಗಲೂ ಆ ಸಂಶಯ ನನ್ನ ಮನದಲ್ಲಿ ಹಾಗೇ ಉಳಿದುಬಿಟ್ಟಿದೆ.

ವಿಶ್ವದ ಚಲಚ್ಚಿತ್ರ ಸಿಂಹಾವಲೋಕನ

ಲೇಖಕರು:— ಶ್ರೀ. ಮೋದಿ ಹುಚ್ಚೇಶ್ವರ

ಚಲಚ್ಚಿತ್ರ ಪ್ರಪಂಚವಿಂದು ವರ್ತಮಾನ ಪತ್ರದ ಮುಖಪುಟವನ್ನೇ ಆಕ್ರಮಿಸಿದೆಯಷ್ಟೇ ಅಲ್ಲ, ವಿಶ್ವದ ಜನಜೀವನದ ಹಾಸು-ಹೊಕ್ಕಾಗಿ, ಪಾರ್ಲಿಮೆಂಟಿನ ಚರ್ಚೆಯ ವಿಷಯವಾಗಿ ಬರುತ್ತಿರುವದು ಸಾಮಾನ್ಯಮಾತಲ್ಲ. ಜಗತ್ತಿನ ಪ್ರಮುಖ ಉದ್ಯಮಗಳಲ್ಲಿ ಐದನೆಯ ಸ್ಥಾನವನ್ನು ಈಗಾಗಲೇ ಇದು ಆಕ್ರಮಿಸಿದೆಯೆಂಬುದನ್ನು ಮರೆಯಲಾಗದು. ಕನ್ನಡ ರಂಗಭೂಮಿಯ ಶತಮಾನೋತ್ಸವ, ಗುಬ್ಬಿ ನಾಟಕ ಮಂಡಳಿಯ ರನ್ನ ಮಹೋತ್ಸವದ ಅಧ್ಯಕ್ಷ ಪೀಠವನ್ನಲಂಕರಿಸಿದ್ದ ಮಾನ್ಯವರ ಶ್ರೀ ಬಾ. ಗಂ. ಖೇರರು "ಚಲಚ್ಚಿತ್ರಗಳಲ್ಲಿ ರೋಮಾಂಚಕರ ಸನ್ನಿವೇಶಗಳಿಗಾಗಿ ಒಮ್ಮೊಮ್ಮೆ ಗಂಭೀರವಾದ ನಾಟ್ಯಕಲೆಯು ಹಿಂದೆ ಬೀಳುವದುಂಟು" ಎಂದು ದೂರಿದ್ದಾರೆ. ಜನತೆಯಲ್ಲಿ ಗಳಿಸಿದ ಅತ್ಯಂತ ಪ್ರೀತಿಯ ದ್ಯೋತಕವೇ ಅದಾಗಿದೆಯೆಂಬುದು ಬಹು ಜನರು ಅರಿತ ವಿಷಯ. ಆದರಿಂದು, ಚಲಚ್ಚಿತ್ರ ಪ್ರಪಂಚವೇ ಒಂದು ಕವಲುದಾರಿಗೆ ಬಂದು ನಿಂತಿದೆ. ಚಲಚ್ಚಿತ್ರವು ಪ್ರಥಮತಃ ವ್ಯವಹಾರಿಕವೋ ಅಥವಾ ಸಾಂಸ್ಕೃತಿಕವೋ ಎಂಬುವೇ ಆ ಎರಡು ದಿಶೆಗಳು. ಇದೀಗ ಅದೊಂದು ವ್ಯವಹಾರ ಮತ್ತು ಉದ್ಯೋಗವೋ, ಅಥವಾ ಒಂದು ತತ್ವ ಮತ್ತು ಉಚ್ಚತಮ ಮಟ್ಟವನ್ನು ರೂಪಿಸಬಲ್ಲ ಕಲಾಸಾಧನವೋ? ಆನಂದ ಲಹರಿಯನ್ನು ಹೆಚ್ಚಿಸಬಲ್ಲ ಸಂಪತ್ತೊ? ಮಾನವನ ಸಂಘ ಮತ್ತು ನಾಗರಿಕತೆಯ— ಒಳ್ಳೆಯದಿರಲಿ, ಕೆಟ್ಟದ್ದೇ ಇರಲಿ— ನೀತಿಮತ್ತೆಯನ್ನು ರೂಪಿಸುವ ಮಹತ್ವದ ಘಟಕವಾಗಲೆಂದು ಬರಿಯ ಹಾರೈಸಿದ ಮಾತ್ರಕ್ಕೇ ನಡೆಯದು. ಆ ವ್ಯವಸಾಯದಲ್ಲಿ ದುಡಿಯುವ ತಯಾರಿಕೆಗಾರ, ನಿರ್ಮಾತೃ, ನಟ-ನಟಿಯರು, ಸಂಗೀತಗಾರ, ಕಥೆಗಾರ, ಕವಿ, ಚಿತ್ರ ನಿರ್ಮಾಪಕರಿಂದ ಹಿಡಿದು ಸಾಮಾನ್ಯ ಕೆಲಸಮಾಡುವ ಕೂಲಿಯ ಮನುಷ್ಯನ ವರೆಗೆ ಎಲ್ಲರೂ ಆ ಯಥಾಯೋಗ್ಯ ದಿಶೆಯಲ್ಲಿ ನಡೆಯಬೇಕಾದ ಅಗತ್ಯ ಇಂದು ಅಷ್ಟಿಷ್ಟಲ್ಲ. ಇಂದು, ಅಂತರರಾಷ್ಟ್ರೀಯ ಜನಮನವನ್ನು ಯುದ್ಧಪ್ರಚೋದನೆಗೆ ಉದ್ರೇಕಗೊಳಿಸದಂತೆ ತಡೆಹಿಡಿಯಬಲ್ಲ ಶಕ್ತಿ ಅದಕ್ಕೂ ಇದೆಯೆಂದು ಹೇಳಿದರೆ ಅತಿಶಯೋಕ್ತಿಯಾಗದು.

ಇಂಗ್ಲಂಡಿನಲ್ಲಿ ಚಲಚ್ಚಿತ್ರಗಳ ಪ್ರಸಾರ ಮುಂದುವರಿದ ಜನಾಂಗವೆಂದು ಅಗ್ರಪೂಜೆ (ರಾಜನೀತಿಜ್ಞರು, ಒಳ್ಳೇ ನಾಗರಿಕರು ಎಂಬ) ಹೊಂದುತ್ತಿರುವ ಬ್ರಿಟಿಶ್ ಜನರು ಚಲಚ್ಚಿತ್ರ ನೋಡುವದಕ್ಕೆ ಹೋಗುವ ಅಂಕಿಸಂಖ್ಯೆಯನ್ನು ಪರಿಶೀಲಿಸಿದರೆ ಬೋಧಪ್ರದದಿರದು :

ವಯಸ್ಸು	೦-೪	೫-೯	೧೦-೧೬	೧೬ ರ ಮೇಲ್ಪಟ್ಟು
ವಾರಕ್ಕೊಂದು ಸಲ ಅಥವಾ ಹೆಚ್ಚಿಗೆ	೧೩·/.	೪೯·/.	೬೫·.	೩೨·/.
ಕಡಿಮೆ ನಿಯಮಿತತನದಿಂದ ಹೋಗುವವರು...	೯	೨೭	೩೧	೪೧
ಈಗ ಹೋಗದ ಮತ್ತು ಎಂದೂ ಹೋದ...	೭೭	೨೪	೫	೨೭
ಶಾಂಪಲ (samples)	೨೩೧	೨೪೮	೨೬೮	೩,೧೩೭

ಅದರಂತೆ ವಯಸ್ಕರು ನೋಡಹೋಗುವ ಅಂಕಿಸಂಖ್ಯೆಯನ್ನು ಪರಿಶೀಲಿಸಿರಿ:

ವಯಸ್ಸು	೧೬-೧೯	೨೦-೨೯	೩೦-೩೯	೪೦-೪೯	೫೦-೫೯	೬೦ ರಿಂದ ಮೇಲೆ
ವಾರಕ್ಕೊಂದು ಸಲ ಅಥವಾ ಹೆಚ್ಚಿಗೆ	೬೯·/.	೫೭·/	೩೫·/.	೪೦· .	೨೨·/.	೧೧ .
ಕಡಿಮೆ ನಿಯಮಿತತನದಿಂದ ಹೋಗವರು	೨೮	೩೪	೪೬	೫೨	೪೩	೨೮
ಈಗಹೋಗದ ಮತ್ತು ಎಂದೂ ಹೋಗದ	೨	೯	೧೯	೨೦	೩೫	೬೧
ಶಾಂಪಲ್ (Samples)	೧೧೬	೫೩೭	೬೯೨	೬೮೫	೫೦೮	೫೯೬

ಶಾಲಾ ಬಾಲಕರು ೧೦೦ ಕ್ಕೆ ೬೫ ರಷ್ಟು ಪ್ರತಿವಾರಕ್ಕೊಮ್ಮೆಯಾದರೂ ಅಥವಾ ಅದಕ್ಕೂ ಹೆಚ್ಚು ಸಲ ಸಿನಿಮಾ ನೋಡಲು ಹೋಗುತ್ತಿರುವರೆಂದ ಬಳಿಕ ಅದರ ಮಹತ್ವವೆಷ್ಟು ಹೆಚ್ಚುತ್ತ ನಡೆದಿದೆಯೆಂದು ತಾನೇ ತಾನಾಗಿ ಹೊಳೆಯುವದು. *

ಅಮೇರಿಕೆ-ಭಾರತ

ಅಮೇರಿಕೆಯ ಚಲಚ್ಚಿತ್ರಗಳು (ಹಾಲಿವುಡ್ಡ) ಇಷ್ಟು ಮುಂದೆ ಬರಲಿಕ್ಕೆ ಆ ದೇಶದ ಜನ ಅದಕ್ಕೆ ಕಲ್ಪಿಸಿದ "ಸ್ವತಂತ್ರ ವ್ಯವಹಾರ" (free trade) ಮುಖ್ಯ ಕಾರಣ. ಅದನ್ನರಿತ ಪಶ್ಚಿಮ ಯುರೋಪದ ಕಕ್ಷೆಯಲ್ಲಿ ಇರುವ ರಾಷ್ಟ್ರಗಳು (ಮಾರ್ಶಲ್ ಯೋಜನೆಯನ್ನು ಒಪ್ಪಿದವುಗಳು) ಸರ್ವಗ್ರಾಹಿಯಾದ ಅಂತರರಾಷ್ಟ್ರೀಯ ನೀತಿಮತ್ತೆಯನ್ನು ಅನುಸರಿಸಲು ಅಣಿಯಾಗಿವೆಯೆಂದರೆ ಆಶ್ಚರ್ಯವಲ್ಲ. ಆಂಗ್ಲ ನಿರ್ದೇಶಕರೂ ಚಲಚ್ಚಿತ್ರ ನಿರ್ಮಾಪ

* Penguine Film Revised (1948) Statistics by H. H. Wollenberg.

"ಹಣೆಯ ಬರಹ" (Destiny) ೧೯೨೧ ರಲ್ಲಿ ಚಲಚ್ಚಿತ್ರವಾಗಿ ಹೊರಬಂದುದು. ಬರ್ನಾರ್ಡ ಗಯಟಿ 'Death' ಮತ್ತು ಲಿಲ್ ಡ್ಯಾಗೋವ್ವರ, ವಾಲ್ಟರಜಾನ್ಸನ್ ಪ್ರೇಮಿಗಳಾಗಿ ಅಭಿನಯಿಸಿದರು. (ಜರ್ಮನ್)



ಕರೂ, ಕುಶಲ ತಂತ್ರಕಾರರೂ "ಸಂಯುಕ್ತ ರಾಷ್ಟ್ರದ ಶೈಕ್ಷಣಿಕ, ವೈಜ್ಞಾನಿಕ ಮತ್ತು ಸಾಂಸ್ಕೃತಿಕ ಸಂಘ" (United Nations Educational Scientific and Cultural Organization) ಕಟ್ಟುವ ಹೊಂಗನಸನ್ನು ಕಾಣುತ್ತಲಿದ್ದಾರೆ. ಪ್ರಚಾರ ನಡೆಯಿಸಿಯೂ ಇದ್ದಾರೆ. ಅದರ ಮೊದಲ ಹೆಜ್ಜೆಯೆಂದು ಮಾರ್ಶಲ್ ಯೋಜನೆಯಲ್ಲಿ ಬರುವ ರಾಷ್ಟ್ರಗಳೆಲ್ಲ ಕೂಡಿಕೊಂಡು ಒಂದು ಸಹಕಾರೀ ಯೋಜನೆಯನ್ನು ಮಾಡಿ ಮುಂದುವರಿಯಬೇಕೆಂದಿದ್ದಾರೆ. ಹಾಲಿವುಡ್ಡು ಇದೀಗ ಇಷ್ಟು ಮುಂದುವರಿಯಲಿಕ್ಕೆ ಕಾರಣವೆಂದರೆ, ಅವರು ಚಲಚ್ಚಿತ್ರ ನಿರ್ಮಾಪನೆಯನ್ನು ಸಂಯುಕ್ತ ಪ್ರಯತ್ನದಿಂದ ಮಾಡುವದು. ಅದೇ ನಮ್ಮ ಹಿಂದುಸ್ತಾನದಲ್ಲಿ,– ಅದರಲ್ಲಿಯೂ ನಮ್ಮ ಕನ್ನಡ ನಾಡಿನಲ್ಲಿ ಒಂದು ಚಿತ್ರ ಹೊರಬರುವದರೊಳಗೆ ಅದರಲ್ಲಡಕವಾದ ಜನ ಅದೆಷ್ಟು ಗುಂಪುಗಳಲ್ಲಿ ಹಂಚಿಹೋಗಿ, ಗುಂಪು ಕಟ್ಟಿಕೊಂಡೋ, ಒಬ್ಬರನ್ನೊಬ್ಬರು ಸೇರದೆಯೋ ನಡೆದುಕೊಳ್ಳುತ್ತಿರುವದು ಸಾಮಾನ್ಯ ಸಂಗತಿಯೇ ಆಗಿದೆ, ಸ್ವಾಭಾವಿಕವೇನೋ ಎನ್ನಿಸಹತ್ತಿದೆ. ಒಂದು ವೇಳೆ ಇವರೆಲ್ಲ ಯೇನಕೇನ ಪ್ರಕಾರೇಣ ತಮ್ಮ ಕಲಾ ಪ್ರೌಢಿಮೆ ತೋರಿಸಹೋದರೆ, ಎರವಲು ಸ್ಟೂಡಿಯೋಗಳು ಹೇಗಾದರೂ ಮಾಡಿ ಕೆಡಿಸಿಬಿಡುವ ಗತ್ತುಗಾರಿಕೆಯಲ್ಲಿ ನಡೆಯುತ್ತಿರುವವು- ಈ ದೃಷ್ಟಿಕೋನವು ತೀವ್ರ ಹೋದಷ್ಟು ನಾಡಿಗೆ ಮಂಗಲ; ನುಡಿ ಸೇವೆಗೆ ಹಿತಕಾರಿ.

ಯುದ್ಧೋತ್ತರ ದೃಷ್ಟಿ

ಯುದ್ಧೋತ್ತರ ಉತ್ಪಾದನೆಯನ್ನು ಪರಿಶೀಲಿಸಿದರೆ ಹೊಸ ಮನ್ವಂತರ (New realism) ದ ಹಾದಿ ಹಿಡಿದದ್ದು ಸ್ಪಷ್ಟವಾಗಿ ಕಂಡು ಬರುತ್ತಲಿದೆ. ದೃಷ್ಟಾಂತಕ್ಕೆಂದು ಹೇಳಬೇಕಾದರೆ ಇಟಲಿಯ "ತೆರೆದ ಪಟ್ಟಣ"(Open City)" "ಪೈಸಾ" (Paisa) ಸ್ಕೈಸಿಯಾ (Sciuscia) ಫ್ರಾನ್ಸದ "ಲಾಬೆಟೇಲಿ ಡು ರೇಲ" (La Bataille du Rail) ಸ್ಕ್ಯಾಂಡಿನೇವ್ಹಿಯನ್ "ಅಪರಾಧ" (ಗುನ್ಹೆ) ಮತ್ತು ದಂಡ" (Crime and Punisbment) ಪುನರ್ರಚಿತ ಜರ್ಮನಿಯಲ್ಲಿಯೂ ಹೊಸ ಮನ್ವಂತರದ ಹೊಸ್ತಿಲನ್ನು ಕಾಣಬಹುದು. ರಶಿಯಾ ಯುದ್ಧಕಾಲದಲ್ಲಿ ಹೆಚ್ಚಾಗಿ ದೇಶಾಭಿಮಾನವನ್ನು ಉದ್ರೇಕಗೊಳಿಸುವ ಐತಿಹಾಸಿಕ ಚಿತ್ರಗಳನ್ನು ಹೊರಡಿಸಹತ್ತಿದರೀಗ ಯುದ್ಧೋತ್ತರ ಪುನರ್ರಚನೆಯ ಸಮಸ್ಯೆಗಳನ್ನೆಲ್ಲ ಹೇಗೆ ಬಿಡಿಸಬೇಕೆಂಬ ಚಿತ್ರಗಳನ್ನು ನಿರ್ಮಿಸಹತ್ತಿದೆ.



"ಅನೇ ಎನ್ರಿಕೊ" (ಇಟಾಲಿಯನ್) ಜಾರ್ಜಿಯೋ ಪ್ಯಾಸ್ಟಿನಾ ನಿರ್ಮಾತೃ. ಓಸ್ವ್ಯಾಲ್ಡೋ ವ್ಹ್ಯಾಲೆಂಟಿ ಎನ್ರಿಕೋನ ಪಾತ್ರ ವಹಿಸಿದ್ದಾನೆ.

ತಾಂತ್ರಿಕ ಮತ್ತು ಉದ್ದೇಶಪೂರ್ಣತೆಯಲ್ಲಿ ನಾವೀನ್ಯವನ್ನು ತಂದುಕೊಳ್ಳುವಲ್ಲಿ ಎಲ್ಲ ರಾಷ್ಟ್ರದ ವಿದ್ವಾಂಸರು ಪರಿಶ್ರಮಪಡುತ್ತಿರುವದು ತುಂಬಾ ಸಮಾಧಾನಕರವಾದ ವಿಷಯ. ಕವಿಕಾವ್ಯಮಹೋನ್ನತಿಯನ್ನರಿತು, ಸಿನಿಮಾ ರಂಗದಲ್ಲಿ ಉತ್ತಮ ಕಾದಂಬರಿಗಳನ್ನು ರೂಪಿಸುವಲ್ಲಿ ಹಿಂದೆಗೆದಿಲ್ಲ. ಶ್ರೀ ಡಸ್ಟೋವ್ಹಸ್ಕಿಯ "ಕರ್ಮಝೋವ ಬಂಧುಗಳು" ಲಿಯೋಟಾಲಸ್ಟಾಯಿಯವರ "ಕ್ರೂಝುರ ಸೋನಟಾ" (ಇಟಲಿ) ವ್ಹಿಕ್ಟರ ಹ್ಯೂಗೋರ "ರಾಯಬ್ಲಾಸ್" ಕರ್ವ್ಹಾಂಟರ "ಡಾನ್ ಕ್ವಿಕ್ಝೋಟ್" (ಸ್ಪೇನ) ಬಂಕಿಂಚಂದ್ರ ಚಟರ್ಜಿಯವರ "ಚಂದ್ರಶೇಖರ" ರವೀಂದ್ರನಾಥ ಠಾಕೂರರ "ರೆಕ್" (Wreck) ಸ್ಟೆಂಡಾಲರ "ಲಾ ಚಾಟ್ರೂಜ ಡಿ ಪಾರ್ಮೆ" ಮುಂತಾದವು ಬ್ರಿಟಿಶ ಹುಟ್ಟುವಳಿಯಲ್ಲಿ 'ಓಲಿವ್ಹರ ಟ್ವಿಸ್ಟ,' 'ಎನ್ನಾರೆಕೆನಿನಾ,' "ಹೆಮ್ಲೆಟ" ಅವುಗಳಲ್ಲಿ ಕೆಲವು ಕಥೆಗಾರರು ಅದೆಷ್ಟೇ ಮಹತಿಯನ್ನು ಪಡೆದಿದ್ದರೂ ಅವರ ಕೃತಿಯನ್ನು ಅಮರವಾಗಿಸುವದು ಕಲಾಕುಶಲರಾದ ತಾಂತ್ರಿಕರು, ನಿರ್ದೇಶಕರು ಮತ್ತು ನಟನಟಿಯರು ಎಂದು ಬೇರೆ ಹೇಳುವದೇ ಬೇಡ. ಕನ್ನಡ ನಾಡಿನಲ್ಲಿ ಕೀರ್ತಿವೆತ್ತ ಶ್ರೀ ದೇವುಡು ನರಸಿಂಹ ಶಾಸ್ತ್ರಿಗಳ "ಚಿರಂಜೀವಿ" ಶ್ರೀ ಅ. ನ ಕೃಷ್ಣರಾಯರ "ಜೀವನ ನಾಟಕ" ಇತ್ತೀಚೆಗೆ ಶ್ರೀ ಎನ್. ಕೆ ಕುಲಕರ್ಣಿಯವರ "ಚಂದ್ರಹಾಸ" ಚಿತ್ರಗಳು ಅಯಶಸ್ವಿಯಾದದ್ದೂ ಶ್ರೀ ಆರ್.



ಲಾ ಬೆಟಿಲಿ ಡುರೇಲ್ (ಫ್ರೆಂಚ) ರೇನ್ ಕ್ಲಿಮಂಟ ನಿರ್ಮಾತೃ

ನಾಗೇಂದ್ರರಾಯರೇ ಬರೆದು ನಟಿಸಿ ನಿರ್ಮಾತೃವಿನ ಕೆಲಸ ವಹಿಸಿದ "ಹರಿಶ್ಚಂದ್ರ" "ವಸಂತಸೇನಾ" ಚಲಚ್ಚಿತ್ರಗಳು ಯಶಸ್ವಿಯಾದದ್ದೂ ಈ ಸಂದರ್ಭದಲ್ಲಿ ನೆನಸಿಕೊಳ್ಳುವದುಚಿತ. ಆದರಿಂದ ನಿರ್ದೇಶಕನ ಪಾತ್ರ ಮಹತ್ವದ್ದು ಎರಡು ಚೆನ್ನಾಗಿ ಹೊಳೆಯುತ್ತದೆ.

ಅಮೇರಿಕೆಯ ಸ್ಪರ್ಧೆ

ಅಮೇರಿಕೆಯ ಚಲಚ್ಚಿತ್ರಗಳೆಲ್ಲ ಯುರೋಪಿನ ರಾಷ್ಟ್ರದಲ್ಲಿ ಕೂಡಾ ತನ್ನ ಕೈಚಳಕ ತೋರದೆ ಬಿಟ್ಟಿಲ್ಲ. ದೊಡ್ಡ ರಾಷ್ಟ್ರಗಳಲ್ಲಿ ಫ್ರಾನ್ಸ ದೇಶವು ಅಮೇರಿಕೆಯ ಚಲಚ್ಚಿತ್ರಪ್ರದರ್ಶನದ ಪೈಪೋಟಿಯಿಂದಾಗಿ, ಒಂದು ಸಾವಿರ ಮಿಲಿಯನ್ ಫ್ರ್ಯಾಂಕ (ಒಂದು ಖರ್ವ) ಹಾನಿ ಹೊಂದಿದೆಯೆಂದು ಅಂದಾಜ ಮಾಡಲಾಗಿದೆ. ಸಣ್ಣ ದೇಶಗಳೊಳಗೆ ಡೆನ್ಮಾರ್ಕನ್ನು ಹೆಸರಿಸಬಹುದು. ಇದ್ದ ಕೆಲವು ಸ್ಟೂಡಿಯೋಗಳು ಕೈಕಾಲು ಕಳೆದುಕೊಳ್ಳಹತ್ತಿವೆಯೆಂದು ಕೋಪನ್‌ಹೇಗನ್ನದ ಒಂದು ವರದಿ ಹೇಳುತ್ತಿದೆ ಇಂಗ್ಲಂಡಕ್ಕೂ ಇದರ ಶಾಖ ತಟ್ಟದೇ ಹೋಗಿಲ್ಲ ಝುಕೋಸ್ಲೋವಾಕಿಯಾದ ಚಲಚ್ಚಿತ್ರೋದ್ಯಮದಲ್ಲಿ ಸರಕಾರವೇ ಲಕ್ಷ್ಯ ಹಾಕಿದೆ ನಟನಟಿಯರ ಪಗಾರ ಮತ್ತು ನಿರ್ಮಾಣಕ್ಕೆ ಆಗುವ ಖರ್ಚು-ಕಂದಾಯದ ನಿರ್ಮಿತಿಯನ್ನು ಹಾಕಿದ್ದಾರೆ. ಅದಕ್ಕೆಲ್ಲ ಅಮೇರಿಕೆಯ ಚಲಚ್ಚಿತ್ರಗಳ ವಿತರಣೆಯ "ಅತಿ ಪ್ರಸರಣ"ತೆಯೇ ಕಾರಣ.



ಪ್ರೇಕ್ಷಕರಲ್ಲಿ ಪ್ರಗತಿ

ಸಿನಿಮಾ ನೋಡುವ ಜನರಲ್ಲೂ ಅದೆಷ್ಟೋ ಕ್ರಾಂತಿಯಾಗಿ ಪ್ರಗತಿಯ ಹಾದಿಯಲ್ಲಿದ್ದಾರೆ ಮೊದಲ ರೀಲಿನ ೧-೨ ನೂರು ಫೂಟು ಚಿತ್ರ ಚಲಿಸುವದರಲ್ಲಿಯೇ ನಿರ್ಮಾತೃವಿನ ತಪ್ಪು-ತಡಿ ಕಲಾಕುಶಲತೆಯನ್ನು ತಿಳಿದುಕೊಳ್ಳುವ ಮಟ್ಟಕ್ಕೆ ಕೆಲವರಾದರೂ ಬರುತ್ತಿರುವದು ಸಂತೋಷಕರ. ಇದೀಗ ತಾಂತ್ರಿಕ ಮಟ್ಟವನ್ನು ಚೆನ್ನಾಗಿ ಕಾಯ್ದುಕೊಳ್ಳಬೇಕಾದರೆ, ಸ್ವಲ್ಪ ಹಣ ಸಡಿಲು ಬಿಡುವಿಕೆ ಅನಿವಾರ್ಯವೆಂಬುದು ಸರ್ವಶ್ರುತ. ಸೆನ್ಸರ್ ಬೋರ್ಡಿಗೆ ನೀರಿನಂತೆ ಹಣ ಹಾಳು ಮಾಡುವದಾಗಲೀ, ಅವರ ಕೃಪಾಪಾತ್ರತೆಯನ್ನೆ ಒಂದು ಉದ್ದೇಶವಾಗಿಟ್ಟುಕೊಂಡು ಹೊರಡಿಸುವ ಚಲಚ್ಚಿತ್ರಗಳಾಗಲೀ ಅವೆಂದಿಗೂ ಯಶಸ್ವಿಯಾಗವು. ಇದೇ ಹೊಸ ಮನ್ವಂತರದ ಹೊಸ ಪ್ರಯೋಗ. ಈ ಮನ್ವಂತರಕ್ಕೆ, ತಡವಾಗಿಯಾದರೂ ಚಿಂತೆಯಿಲ್ಲ ಹಿಂದುಸ್ಥಾನವು ಮಾರ್ದನಿಗೊಡುತ್ತಲಿದೆ. ಮೊನ್ನೆ ತಾನೇ "ಫಿಲ್ಮ ಪಿಕ್ಚೋರಿಯಲ್" ನಲ್ಲಿ ಬರೆಯುತ್ತ ಶ್ರೀ ವ್ಹಿ. ಶಾಂತಾರಾಮ ಒಳ್ಳೇ ಮುದ್ದಾದ ವಿಚಾರವೊಂದನ್ನು ಹೇಳಿದ್ದಾರೆ. "ಇಂದಿನ ಮನ್ವಂತರಕ್ಕೆ ಎರಡೇ ಎರಡು ತರದ ಚಿತ್ರಗಳಿಗಾಗಿ ಬಾಕ್ಸುಗಳು (Box Office) ತುಂಬುತ್ತವೆ. . . . ನಿಜವಾಗಿಯೂ ಉತ್ತಮ ಕಲಾವಂತ ಚಲಚ್ಚಿತ್ರಗಳು ಅಥವಾ ಅಗ್ಗಕ್ಕೆ ಮುಗ್ಗು ಜೋಳ' ಎಂಬಂತೆ ದುರ್ನಡೆ-ನುಡಿಗಳಿಂದ ಮೂಲ ಹುಟ್ಟುಗುಣಗಳ ಮೇಲೆ ಕೆಟ್ಟ ಪರಿಣಾಮ ಮಾಡುವ, ಹೊಲಸು ಮನರಂಜಿಸುವ, ಚಲಚ್ಚಿತ್ರಗಳು. ಹೊಲಬುಗೆಟ್ಟ ಚಲಚ್ಚಿತ್ರಗಳ ಹೆಚ್ಚುವಿಕೆಯ ಮೆಚ್ಚುಗೆಯನ್ನು ನಾನೆಂದಿಗೂ ಅಲ್ಲಗಳೆಯಲಾರೆ. ಆದರೆ ಅದೆಷ್ಟು ದಿನ ನಮ್ಮ ನಿರ್ಮಾಪಕರು ಇಂಥ ಹೊಲಸು ಚಿತ್ರಗಳ ಮೇಲೆ ಹೊಟ್ಟೆಹೊರೆದುಕೊಳ್ಳುವರು ಎಂಬುದೇ ನನ್ನ ಸವಾಲು. ಮತ್ತು ಅಗ್ಗತನ ಹೊಲಬುಗೇಡಿತನಕ್ಕೂ ಒಂದು ಮಿತಿಯಿದೆ. ಒಂದೊಮ್ಮೆ ಆ ಸೀಮೆಯನ್ನು ಜನ ಮುಟ್ಟಿತೋ ಆಗ ಬೇಸರಿಯಲೇಬೇಕಾದುದು ಅನಿವಾರ್ಯವಾಗುತ್ತದೆ."



"ಅಪರಾಧ (ಗುನ್ಹೆ) ಮತ್ತು ದಂಡ" (ಸ್ವೀಡನ್) ಹಂಫ್ರೆ ಫಾಸ್ಟಮನ್ ನಿರ್ಮಾತೃ ರಾಸ್ಕೆಲಿಂಕೋವ್ಹನ ಪಾತ್ರವನ್ನೂ ಅವನೇ ವಹಿಸಿದ್ದಾನೆ.

ಸುಧಾರಣೆಯ ಹಾದಿ

ಇದೇ ಪೌರಸ್ತ್ಯರು ಪಾಶ್ಚಾತ್ಯರಿಗೆ ಹೇಳುವ ಅರ್ಥಪೂರ್ಣ ಮಾತು. ಆದರೆ ಈ ಮಾತನ್ನು ಕೃತಿಯಲ್ಲಿಳಿಸಲು ಬರಿಯ ನಿರ್ಮಾತೃಗಳು ಹೆಣಗಿದರಾಗದು. ಅವರ ಜೊತೆಗೆ ಹೆಗಲಿಗೆ ಹೆಗಲು ಕೊಟ್ಟು ನಟ-ನಟಿಯರು, ತಾಂತ್ರಿಕರು, ಪ್ರದರ್ಶನಕಾರರು ಈ ಮಹೋನ್ನತ ಉದ್ದೇಶಕ್ಕಾಗಿ ಹೆಣಗಬೇಕಾಗುತ್ತದೆ. ವಿಶ್ವದಲ್ಲಿ ಹಾಲಿವುಡ್ಡನ್ನೊಂದು ಬಿಟ್ಟರೆ, ಸಂಖ್ಯಾನುಕ್ರಮವಾಗಿ ಚಲಚ್ಚಿತ್ರಗಳನ್ನು ಹೊರಡಿಸುವ ಬಹು ದೊಡ್ಡ ರಾಷ್ಟ್ರವೆಂದರೆ ಹಿಂದುಸ್ಥಾನ. ಗುಣಾನುಕ್ರಮದಲ್ಲಿ ಮಾತ್ರ ಅದರ ವಿರುದ್ಧದಿಶೆ ನೆಲೆಯೂರಿ ನಿಂತಿದೆ. ಅದಕ್ಕೆ ಕಾರಣ ನಮ್ಮ ತಾಂತ್ರಿಕ ಕೆಲಸಗಾರರು ಕುಶಲರಲ್ಲದಿರುವದು, ಸಹಕಾರದ ಅಭಾವ, ರಚನಾತ್ಮಕ ಯೋಜನೆಯಿಲ್ಲದಿರೋಣ, ಅಸಂಬದ್ಧ ಕಾರ್ಯಬಾಹುಲ್ಯ, ಶ್ರೀಮಂತರ ಸಂಶಯಿತ ದೃಷ್ಟಿಯಿಂದಾದ ಯೋಗ್ಯ ಭಾಂಡವಲಿನ ಅಸಹಕಾರ ಎಂದು ಹೇಳಬಹುದು.

ಈ ತೊಂದರೆ ತೊಡಕುಗಳನ್ನು ಗೆಲ್ಲಲು ರಚನಾತ್ಮಕ ಮೆಟ್ಟಲುಗಳಿವೆಯೆಂಬುದು ಸುಜ್ಞರು ತಿಳಿದ ವಿಷಯ. ಬ್ರಿಟಿಶ ರಾಷ್ಟ್ರದಲ್ಲಿರುವಂತೆ ಸಿನೆಮೆಟೋಗ್ರಾಫ ಮಂಡಲ (Cinimetograph Council) ವೊಂದನ್ನು ಸ್ಥಾಪಿಸಿ ಈ ವ್ಯವಸಾಯದಲ್ಲಿ ಹೆಚ್ಚಿನ ಸಂಶೋಧನೆ ನಡೆಯಿಸಬೇಕು. ಫಿಲ್ಮಿಸ್ತಾನದವರು ಪ್ರಯತ್ನಿಸಿದಂತೆ ಅಖಂಡ ಭಾರತದ ದೃಷ್ಟಿಯಿಂದ ನಿಪುಣ ಕಲೆಗಾರರೆಲ್ಲ ಒಂದಡೆ ಸೇರಿ ಅಲೋಚಿಸಿ ಯೋಜನೆ ಹಾಕಬೇಕು. ನಮ್ಮ ಸಿನೆಮಾ ಸಂಸ್ಥೆಗಳೆಲ್ಲ, ಅಮೇರಿಕೆಯ ಬಂಡವಲನ್ನು ಒಂದಿಲ್ಲೊಂದು ರೀತಿಯಿಂದ ಉಪಯೋಗಿಸುತ್ತಿರುವದನ್ನು (ರಾಕಫೆಲರ ಸಂಸ್ಥೆ ಮತ್ತು ಅದರಂಥ ಇನ್ನುಳಿದ ಸಂಸ್ಥೆ) ಕಡಿಮೆ ಮಾಡಿ ಇಲ್ಲಿಯ ಶೆಟ್ಟಿ ಸಾವಕಾರರ ಮನವೊಲಿಸಿ ವಿಶ್ವಾಸ ತುಂಬಿ ಹಣ ಪಡೆಯಬೇಕು ಮತ್ತು ರಶಿಯಾದಲ್ಲಿಯಂತೆ ಯುದ್ಧೋತ್ತರ ಪುನರ್ರಚನೆಯ ಕುರಿತು, ಆಗುತ್ತಿರುವ ಯೋಜನೆಗಳ ಮಹತ್ವವನ್ನು ಜನಮನದಲ್ಲಿ ಬಿಂಬಿಸುವ ಶೈಕ್ಷಣಿಕ ಚಲಚಿತ್ರಗಳನ್ನು ಹೊರಡಿಸುವ ಸಾಹಸ ಮಾಡಬೇಕು. ಪ್ರೌಢ ಶಿಕ್ಷಣ, ತಾಂತ್ರಿಕ ಶಿಕ್ಷಣ, ಸಮಾಜ ನೈರ್ಮಲ್ಯಗಳನ್ನು ಉದ್ಬೋಧಕವಾಗಿ ಚಿತ್ರಿಸುವ ನಮ್ಮ ಕಲಾವಂತರು ಮುಂದೆ ಬರಬೇಕು.

ಪತ್ನೀವ್ರತ

(ಶ್ರೀ. ಜಿ. ಪಿ. ರಾಜರತ್ನಂ, ಬೆಂಗಳೂರು)

ಪತಿವ್ರತೆ ಆದವರ ವಿಷಯ ನಾವು ಬಹಳವಾಗಿ ಕೇಳಿದ್ದೇವೆ. ಆದರೆ **ಪತ್ನೀವ್ರತ** ಆದವರ ವಿಷಯ ಅಷ್ಟಾಗಿ ನಮ್ಮ ಕಿವಿಗಳಿಗೆ ಬಿದ್ದಿಲ್ಲ. ಅದನ್ನು ಕುರಿತು ಎರಡು ಮಾತನಾಡಬೇಕೆಂದು ಇಲ್ಲಿ ಉದ್ದೇಶಿಸಿದ್ದೇನೆ.

ನಾವು ನಮ್ಮ ಈ ದೇಶದಲ್ಲಿ ಸೀತಾ, ದ್ರೌಪದಿ, ಚಂದ್ರಮತಿ, ದಮಯಂತಿ, ವಾಸವದತ್ತಾ ಇವರ ಕಥೆಗಳನ್ನು ಕೇಳಿದ್ದೇವೆ. ಇವರನ್ನು ಉತ್ತಮವರ್ಗದ ಪತಿವ್ರತೆಯರೆಂದು ಲೋಕ ಎಣಿಸಿದೆ. ಇವರುಗಳು ಅನ್ವರ್ಥವಾಗಿಯೂ 'ಸಹಧರ್ಮಚರೀ' ಗಳಾಗಿ, ತಮ್ಮ ಪತಿಗಳಿಗೆ ಒದಗಿದ ಸುಖದುಃಖಗಳಲ್ಲಿ ಸಮಾನಭಾಗಿಗಳಾಗಿ, ಅವರು ತಾತ್ಕಾಲಿಕವಾಗಿ ತಮ್ಮ ಕೈಬಿಟ್ಟರೂ ತಾವು ಮಾತ್ರ ಕನಸುಮನಸಿನಲ್ಲಿಯೂ ಅವರ ಧ್ಯಾನವನ್ನು ಬಿಡದೆ, ಪುನಃ ಅನೇಕ ಕಾಲದ ಅಗಲಿಕೆಯ ಅನಂತರ ಅವರ ಸಮಾಗಮವನ್ನು ಪಡೆದು ಕೃತಕೃತ್ಯೆಯರಾದವರು. ಇಂತಹ ಪತಿವ್ರತೆಯರದು ಒಂದು ಗುಂಪು.

ಇನ್ನೊಂದು ಗುಂಪು–ಪತಿಯನ್ನು ಸರ್ವಕಾಲಕ್ಕೂ ಕಳೆದುಕೊಂಡು ಎಂದರೆ ಆತನು ಕಾಲಾಧೀನನಾದ ಬಳಿಕ, ಆತನಿಲ್ಲದೆ ಬದುಕು ಬರಿದಾಯಿತೆಂದು, ಆತನೊಡನೆಯೇ ಸಹಗಮನ ಮಾಡಿಕೊಳ್ಳುವ ಸತಿಯರದು. ಈ ಗುಂಪಾದರೂ ಸಣ್ಣ ಗುಂಪಲ್ಲವೆಂಬುದನ್ನು ನಾಡಿನ ಮೂಲೆಮೂಲೆಗಳಲ್ಲಿ ಮಾಸತಿಕಲ್ಲುಗಳು ಕೂಗಿ ಹೇಳುತ್ತಿವೆಯಾದರೂ ಸಹಗಮನ ಮಾಡಿದ ಸತಿಯರ ಸಾಲಿನಲ್ಲಿ ಮಹಾಭಾರತದ ಮಾದ್ರಿಯ ಹೆಸರು ಲೋಕೋತ್ತರವಾದುದು. ಪುತ್ರಾರ್ಥಿನಿಯಾಗಿ ಸಪತ್ನಿಯ ಸಾಹಾಯ್ಯದಿಂದಲಾದರೂ ಅವಳಿ ಮಕ್ಕಳನ್ನು ಪಡೆದವಳು, ಅಂತಹ ಮಕ್ಕಳನ್ನೂ ಬಿಟ್ಟು ಗಂಡನೊಡನೆ ಚಿತೆಯನ್ನೇರಿದುದು ಮಹಾ ದುಷ್ಕರವಾದುದೇ. ಆದರೆ ಅವಳ ಸಪತ್ನಿಯಾದ ಕುಂತೀದೇವಿಯು ಸಹಗಮನ ಮಾಡದಿದ್ದರೂ ಅವಳು ವಹಿಸಿಕೊಂಡ ಕರ್ತವ್ಯವಾದರೂ ಏನೂ ಸುಕರವೆನ್ನುವಂತಹದಾಗಿರಲಿಲ್ಲ. ಇವರಿಬ್ಬರನ್ನೂ ತೂಗುವ ತೊಲೆ ನಮ್ಮ ಕೈಯ ಅಡಕಕ್ಕೆ ಮೀರಿದ್ದು.

ಮೂರನೆಯ ಮೆಟ್ಟಲಿನವರು ಮತ್ತೊಂದು ಗುಂಪು. "ಮರಣಹೊಂದಿದ ಪತಿಯೊಡನೆ ಸಹಗಮನ ಮಾಡುವುದು ಏನು ಮಹಾ!" ಎಂದು ಮೃತ್ಯುವಿನ ಬೆನ್ನಂಟಿ ಹೋಗಿ, ಅವನ ಕರವಶವಾಗಿದ್ದ ಪತಿಯ ಪ್ರಾಣಗಳನ್ನು ಮತ್ತೆ ಪಡೆದು ಬಂದವರದು. ಈ ಮೆಟ್ಟಲಿನಲ್ಲಿ–ಸೂರ್ಯಸಮಳಾದ ದೇವಿ ಸಾವಿತ್ರಿಯನ್ನು ಬಿಟ್ಟರೆ–ಬೇರೊಂದು ಹೆಸರು ನಾವು ಕೇಳಿಲ್ಲ.

ಇದುವರೆಗೆ ಲೋಕೋತ್ತರೆಯರು ಎನ್ನಿಸಿದ ಪತಿವ್ರತೆಯರನ್ನು ಜ್ಞಾಪಿಸಿಕೊಂಡಾಯಿತು. ಇವರ ಜೊತೆಗೆ ಇಂತಹ ಪತ್ನೀವ್ರತರು ಯಾರಾದರೂ ಉಂಟೆ ನೋಡುವ.

ಶ್ರೀರಾಮನು 'ಏಕಪತ್ನೀವ್ರತಸ್ಥ' ನೆಂದು ಹೆಸರಾದವನು. ಕಾರಣಾಂತರದಿಂದ ಸೀತೆಯನ್ನು ಕಾಡಿಗಟ್ಟಿ, ತಾನು ಯಾಗಮಾಡಬೇಕಾಗಿ ಬಂದಾಗ, ಧರ್ಮಪತ್ನಿಯ ಆವಶ್ಯಕತೆಯನ್ನು ಕಲ್ಪಿಸಿಕೊಂಡವನು. ಇವನಂತೆಯೇ ರಾಜರುಗಳು ಹರಿಶ್ಚಂದ್ರ, ನಳ ಮೊದಲಾದವರು, ಅವರು ಕೂಡ ಪುರಾಣದ ಕಥೆಯಲ್ಲಿ ಏಕಪತ್ನೀವ್ರತರಂತೆ ಕಂಡುಬಂದರೂ, ಅವರಿಗೆ ಅಂತಃಪುರ ಬೇರೆ ಇದ್ದಿತು ಎಂಬ ಕಾರಣದಿಂದಲೋ ಏನೋ ಅವರ ಪತ್ನೀವ್ರತ ಆ ಪತ್ನಿಯರ ಪಾತಿವ್ರತ್ಯಕ್ಕೆ ಸರಿಗಟ್ಟಿ ಶೋಭಿಸಲಿಲ್ಲ. ಪುರಾಣ ಇತಿಹಾಸ ಚರಿತ್ರೆಗಳಲ್ಲಿ ಇನ್ನೂ ಇತರ ರಾಜರ ವಿಷಯ ಕೇಳುತ್ತೇವೆ. ಅವರೆಲ್ಲರೂ ಹೇಳಿ ಕೇಳಿ 'ಬಹುವಲ್ಲಭಾಃ'— ಶ್ರೀಕೃಷ್ಣನಿಗಿಂತ ಸ್ವಲ್ಪ ಕೆಳಮಟ್ಟದವರು.

ಸತ್ತ ಪತ್ನಿಯರೊಡನೆ ಸಹಗಮನಮಾಡಿಕೊಂಡ ವೀರಪತಿಯ ಕಥೆಯಾವುದೂ ಅಂಥ ಪ್ರಶಸ್ತವಾದಂತೆ ಗೋಚರವಾಗಿಲ್ಲ.

ಆದರೆ, ಹೋದ ಪತಿಯ ಜೀವವನ್ನು ಮತ್ತೆ ಪಡೆದ ಆ ಸಾವಿತ್ರಿ ಹೇಗೋ ಹಾಗೆ, ಮೃತಳಾದ ಪತ್ನಿಯನ್ನು ಮತ್ತೆ ಬದುಕಿಸಿ ತಂದ ಒಂದು ಲೋಕೋತ್ತರವಾದ ಕಥೆ ನಮ್ಮ ಮಹಾಭಾರತದ ಆದಿಪರ್ವದಲ್ಲಿದೆ. ರುರು ಎಂಬಾತನು ಪ್ರಮದ್ವರಿ ಎಂಬಾಕೆಯನ್ನು ಬಯಸಿ ಮದುವೆಯಾಗುತ್ತಾನೆ. ಮದುವೆಯಾದ ತರುಣದಲ್ಲಿ ಆ ಪ್ರಮದ್ವರಿಯನ್ನು ಹಾವು ಕಚ್ಚುತ್ತದೆ. ಪತ್ನಿಯನ್ನು ಹೀಗೆ ಕಳೆದುಕೊಂಡರೆ, ರುರು ಆಕೆಯ ಜೀವದಾನಕ್ಕಾಗಿ ದೇವತೆಗಳಲ್ಲಿ ಮೊರೆಯಿಡುತ್ತಾನೆ. ಬೇಕಾದರೆ, ರುರು ತನ್ನ ಆಯುಷ್ಯದ ಅರ್ಧವನ್ನು ಸತ್ತವಳಿಗೆ ಎರೆದು ಅವಳನ್ನು ಬದುಕಿಸಿಕೊಳ್ಳಬಹುದು ಎಂದು ದೇವತೆಗಳು ವರ ಕೊಡುತ್ತಾರೆ. ಅದರಂತೆ ರುರು ತನ್ನ ಆಯುಸ್ಸಿನ ಅರ್ಧವನ್ನು ಪ್ರಮದ್ವರಿಗೆ ನೀಡುತ್ತಾನೆ. ಆಕೆ ಬದುಕಿಬರುತ್ತಾಳೆ. ಆಯುಸ್ಸು ಇದ್ದಷ್ಟು ಕಾಲ ಅವರಿಬ್ಬರೂ ಅನ್ಯೋನ್ಯವಾಗಿ ಬದುಕಿದ್ದು, ಒಂದೇ ಗಳಿಗೆಯಲ್ಲಿ ಇಬ್ಬರೂ ಮೃತ್ಯುವಿಗೆ ವಶರಾಗುತ್ತಾರೆ. ಇಂತಹ ಅನ್ಯೋನ್ಯವಾದ ಬದುಕನ್ನೂ ಅನ್ಯೋನ್ಯವಾದ ಸಾವನ್ನೂ ಚಿತ್ರಿಸುವ ಕಥೆ ಬೇರೆ ಯಾವುದಾದರೂ ಸಾಹಿತ್ಯದಲ್ಲಿ ಇದ್ದರೆ, ಅದನ್ನು ತಿಳಿಯಬೇಕೆಂದು ಆಸೆ.

ಎಂದರೆ, ಇದಕ್ಕೆ ಹತ್ತಿರ ಬರುವ ಕಥೆಗಳು ಎಲ್ಲೂ ಇಲ್ಲವೆಂದಲ್ಲ. ಗ್ರೀಕರಲ್ಲಿ ಆರ್ಫಿಯಸ್ ಎಂಬವನು ಯೂರಿಡೈಸಿ ಎಂಬ ತನ್ನ ಪತ್ನಿಯನ್ನು ಮೃತ್ಯುಧಾನಿಯಿಂದ ಬಿಡಿಸಿ ತಂದ ಕಥೆ ಇದೆ. ಆದರೆ ಅಲ್ಲಿ "ಭೂಮಿಯನ್ನು ಮುಟ್ಟುವ ವರೆಗೂ ನೀನು ನಿನ್ನ ಪತ್ನಿಯನ್ನು ನೋಡಲಾಗದು, ಅವಳ ಕೂಡೆ ಮಾತಾಡಲಾಗದು. ಮೀರಿದರೆ ಅವಳನ್ನು ಮತ್ತೆ ಕಳೆದುಕೊಳ್ಳುವೆ" ಎಂದ ಪ್ಲೂಟೋವಿನ

ಶ್ರೀ ಜಿ. ಪಿ. ರಾಜರತ್ನಂ ಅವರು ಬೆಂಗಳೂರಿನ ಸರಕಾರಿ ಕಾಲೇಜಿನಲ್ಲಿ ಕನ್ನಡ ಪ್ರಾಧ್ಯಾಪಕರಾಗಿದ್ದಾರೆ. ಇವರು ಹಳೆಯ ಹೊಸ ಸಾಹಿತ್ಯಗಳ ಕಟ್ಟುಗಳನ್ನು ಚೆನ್ನಾಗಿ ಮೊಗಚಾಡಿ ಸಮರಸದೃಷ್ಟಿ ಪಡೆದ ವಿದ್ವಾಂಸರಿದ್ದು ಶಾಕ್ಯ ಸಾಹಿತ್ಯಮಂಟಪವೆಂದು ಬೌದ್ಧ ಸಾಹಿತ್ಯದ ಅನೇಕ ಗ್ರಂಥಗಳನ್ನು ಕನ್ನಡಕ್ಕೆ ಅನುವಾದಿಸಿ, ಸಾರಗ್ರಹಣ ಮಾಡಿಕೊಟ್ಟು ಮತ್ತು ವಿವೇಚಿಸಿ ಉಪಕರಿಸಿದ್ದಾರೆ. ಅಲ್ಲದೆ ಒಳ್ಳೆಯ ರಸಿಕತನವುಳ್ಳ ಈ ಸದಾಚ್ಯವನಾತ್ಮರು ಹಲವಾರು ಸ್ವತಂತ್ರ ಗದ್ಯಪದ್ಯಗಳಿಂದ ಹೊಸಗನ್ನಡದ ಬೆಳೆಯನ್ನು ಹುಲುಸಾಗಿಸಿದ "ಪುರುಷ ಸರಸ್ವತಿ"ಗಳೆನಿಸಿದ್ದಾರೆ. ಎಂಬುದನ್ನು ಸದ್ಯಃ ಇವರು ಬರೆಯಲು ಆಯ್ದುಕೊಂಡ ವಸ್ತುವೇ ತೋರಿಸಿಕೊಡುತ್ತದೆ. ಇದರಲ್ಲಿ ಇವರು ಪತ್ನೀವ್ರತರನ್ನು ಜಾಗತಿಕ ಸಾಹಿತ್ಯದಿಂದ ಸಂಶೋಧಿಸಿ ಪತಿವ್ರತೆಯರೆದುರಿಡಲು ಪ್ರಯತ್ನಿಸಿದ್ದಾರೆ.

ಮಾತನ್ನು ಮೀರಿ, ಕಣ್ಣನ್ನು ಕಾಪಾಡಿಕೊಳ್ಳಲಾರದೆ, ಭೂಮಿಬರುವ ಮೊದಲೇ ಅವಳ ಕಡೆ ಕಣ್ಣು ಹೊರಳಿಸಿ, ಆರ್ಫಿಯಸ್ ಯೂರಿಡೈಸಿಯನ್ನು ಎಂದೆಂದಿಗೂ ಕಳೆದುಕೊಳ್ಳುತ್ತಾನೆ. ಅದೇ ಗ್ರೀಕರ ಪುರಾಣಗಳಲ್ಲಿ ಹೆರ್‌ಕ್ಯುಲೀಸ್ ಎಂಬ ವೀರನು ತನ್ನ ಸ್ನೇಹಿತನ ಪತ್ನಿಯಾದ ಅಲ್ಸೆಸ್ಟಿಸ್ ಎಂಬಾಕೆಯನ್ನು ಬದುಕಿಸಿತರುತ್ತಾನೆ— ಮೃತ್ಯುವಿನೊಡನೆ ಹೋರಾಡಿ. ಆದರೂ; ಏನೇ ಎಂದರೂ ಇವಕ್ಕೂ ರುರು ಪ್ರಮದ್ವತಿಯರ ಕಥೆಗೂ ಭಾರತಕ್ಕೂ ಗ್ರೀಸಿಗೂ ಎಷ್ಟೋ ಅಷ್ಟೇ ದೂರ.

ಇದುವರೆಗೆ ನಾವು ನೋಡಿದ ಉದಾಹರಣೆಗಳು ಎಲ್ಲವೂ **'ಸ್ವಪತ್ನೀವ್ರತ'**ವನ್ನು ಕುರಿತವು. ಇದರಷ್ಟೇ ಮುಖ್ಯವಾದ, ಅಥವಾ ಇದಕ್ಕಿಂತ ಮುಖ್ಯವೆಂದು ನಮ್ಮ ಪೂರ್ವಿಕರು ಚಿತ್ರಿಸಿರುವ '**ಪರಪತ್ನೀವ್ರತ**'ವೆಂಬುದೂ ಒಂದು ಉಂಟು. ಈ 'ಪರಪತ್ನೀವ್ರತ'ವನ್ನು ಪಾಲಿಸದೆ ಕೆಟ್ಟ ರಾವಣ. ದುರ್ಯೋಧನ, ಕೀಚಕ ಮುಂತಾದವರೂ ಉಂಟು. ಜೊತೆಜೊತೆಯಲ್ಲೇ ಈ 'ಪರಪತ್ನೀವ್ರತದ' ಬೇರೆ ಬೇರೆ ಮುಖಗಳನ್ನು ಆರಾಧಿಸಿದ ಆರ್ಯರ ಕಥೆಗಳೂ ಅಲ್ಲಲ್ಲೇ ಉದ್ದಕ್ಕೂ ಉಂಟು.

ಲಕ್ಷ್ಮಣನ ವೃತ್ತಾಂತ ಲೋಕವಿಶ್ರುತವಾದದ್ದು. ಕಿಷ್ಕಿಂಧೆಗೆ ಹೋದಾಗ ಅತ್ತಿಗೆಯ ಮೈಮೇಲಿನ ಯಾವ ಆಭರಣವನ್ನೂ ಅವನು ಗುರುತಿಸಲಾರದೆ ಹೋದನಂತೆ, ಕಾಲಿನ ಅಂದುಗೆ ಒಂದು ಮಾತ್ರ ಗುರುತಾಯಿತಂತೆ.

ಜಟಾಯುವಿನ ಕಥೆ ಯಾರಿಗೆ ಗೊತ್ತಿಲ್ಲ? ಅಸಹಾಯಳಾದ ಹೆಂಗುಸನ್ನು ರಾಕ್ಷಸನಾದವನು ಕದ್ದೊಯ್ಯುತ್ತಿದ್ದಾಗ, ತಾನು ಹಕ್ಕಿ ಎಂಬುದನ್ನೂ ನೆನೆಯದೆ, ರಾಕ್ಷಸನ ಕೈಯಲ್ಲಿ ತನಗೆ ಮರಣವಾದೀತು ಎಂದು ಹೆದರದೆ, ಅವನನ್ನು ಇದಿರಿಸಿ, ಹೆಣ್ಣಿನ ಮಾನ ಸಂರಕ್ಷಣೆಗಾಗಿ ತಾನು ತನ್ನ ಜೀವವನ್ನು ಒಪ್ಪಿಸಿತು.

ನಳ, ಕರ್ಕೋಟಕನ ವಿಷದಿಂದ ಬಾಹುಕನಾದವನು, ದಮಯಂತಿಗೆ ಪುನಃ ಸ್ವಯಂವರವೆಂದು ಕೇಳಿ ಹೊರಟ ಋತುಪರ್ಣನಿಗೆ ಸಾರಥಿಯಾಗಿ ತಾನೂ ಭೀಮಕನ ನಗರಕ್ಕೆ ಹೋದನು. ಅಲ್ಲಿ, ಸಾರಥಿಯಾಗಿ ಬಂದವನು ನಳನೇ ಇರಬೇಕು, ಪರೀಕ್ಷಿಸುವ, ಎಂದು ದಮಯಂತಿ ತನ್ನ ದಾಸಿಯಾದ ಕೇಶಿನಿಯನ್ನು ಬಾಹುಕನ ಬಳಿಗೆ ಅಟ್ಟುತ್ತಾಳೆ. ಎರಡು ಸಲ ಬಂದುಹೋದ ಕೇಶಿನಿ ಮತ್ತೆ ಮೂರನೆಯ ಸಲ ಬಂದಾಗ, ಬಾಹುಕವೇಷದ ನಳನು ಹೇಳುತ್ತಾನೆ: "ಭದ್ರೆ, ನಾವು ಅನ್ಯದೇಶದಿಂದ ಬಂದ ಅತಿಥಿಗಳು. ನೀನು ಹೀಗೆ ಬಂದು ಹೋಗುತ್ತಿದ್ದರೆ, ನೋಡಿದವರು ಶಂಕೆಗೊಂಡಾರು. ಸುಖವಾಗಿ ಹೋಗಿ ಬಾ."

ಪರ್ಷಿಯಾದ ಕವಿ ಸಾದಿ ಒಂದು ಕಥೆ ಹೇಳುತ್ತಾನೆ. ಒಬ್ಬ ಯುವಕ ಒಬ್ಬ ಸಂನ್ಯಾಸಿಯ ಬಳಿ ಬಂದನಂತೆ. ಬಂದು ಕೇಳಿದನಂತೆ– ಒಂದು ರಹಸ್ಯವಾದ ಕಡೆ, ಏಕಾಂತದಲ್ಲಿ, ತುಂಬುಯೌವನದ ಒಂದು ಗಂಡೂ ಒಂದು ಹೆಣ್ಣೂ ಇದ್ದರೆ, ಅಲ್ಲಿ ಬೇರೆ ಯಾರದೂ ಅಡ್ಡಿ ಇಲ್ಲದಿದ್ದರೆ, ಅವರು ತಮ್ಮ ಮನಸ್ಸನ್ನು ಹಿಡಿದಿಡುವುದು ಸಾಧ್ಯವೇ? ಅದಕ್ಕೆ ಆ ಸಂನ್ಯಾಸಿ ಹೇಳಿದನಂತೆ: "ಅವರಾದರೂ ತಮ್ಮ ಮನಸ್ಸನ್ನು ಬಿಗಿಹಿಡಿದ್ದಾರು. ಆದರೆ ಆಡುವ ಜನರ ನಾಲಗೆಯನ್ನು ಬಿಗಿಹಿಡಿಯುವವರಾರು?" ನಿಜವೇ, ಪರಪತ್ನೀವ್ರತವನ್ನು ಬಲ್ಲವನು ತನ್ನಿಂದ ಪರಸ್ತ್ರೀಗೆ ನಿಂದೆಯಾಗಲಿ ಪರಸ್ತ್ರೀಯಿಂದ ತನಗೆ ನಿಂದೆಯಾಗಲಿ ಸೋಕದಂತೆ ಎಚ್ಚರವಾಗಿ ನಡೆದುಕೊಳ್ಳುತ್ತಾನೆ.

ಬುದ್ಧನನ್ನು ಒಂದು ಸಲ ಆತನ ಶಿಷ್ಯನಾದ ಆನಂದ ಕೇಳಿ[ದ]ನಂತೆ: "ಭಗವನ್! ಸ್ತ್ರೀಯರ ಬಗ್ಗೆ ನಾವು ಹೇಗೆ ನಡೆದುಕೊ[ಳ್ಳ]ಬೇಕು?" ಬುದ್ಧ ಹೇಳಿದ: "ಅತ್ತಕಡೆ ನೋಡದಿರು, ಆನಂದ." ಆನಂ[ದ] ಕೇಳಿದ: "ಒಂದು ವೇಳೆ ನೋಡಬೇಕಾಗಿ ಬಂದರೆ?" ಬುದ್ಧ ಹೇಳಿ[ದ]: "ಅವರೊಡನೆ ಮಾತನಾಡದಿರು, ಆನಂದ!" ಆನಂದ ಮತ್ತೆ ಕೇಳಿದ: "ಅವರೊಡನೆ ಮಾತನಾಡಬೇಕಾಗಿ ಬಂದರೆ?" ಬುದ್ಧ ಅದಕ್ಕೆ ಹೇಳಿದ: "ಮನಸ್ಸು ಎಚ್ಚರವಾಗಿರಲಿ, ಆನಂದ. ಯಾರನ್ನು ನೋಡುವೆಯೋ, ಯಾರೊಡನೆ ಮಾತನಾಡುವೆಯೋ ಅವರ ವಯಸ್ಸಿಗನುಗುಣವಾಗಿ 'ಈಕೆ ನನ್ನ ತಾಯಿ, ಈಕೆ ನನ್ನ ತಂಗಿ, ಈಕೆ ನನ್ನ ಮಗಳು' ಎಂದು ಎಚ್ಚರತಪ್ಪದೆ ಭಾವಿಸಿಕೋ."

ಇದೇ ಬುದ್ಧ ಇನ್ನೊಮ್ಮೆ ಹೇಳಿದ: "ಈ ಕಾರಣಗಳಿಂ[ದ] ಯಾವನೂ ಪರಪತ್ನಿಯನ್ನು ಸೇವಿಸದಿರಲಿ." ಯಾವುವು ಆ ಕಾರಣಗಳು? "ಪ್ರಮತ್ತನಾಗಿ ಪರಪತ್ನಿಯನ್ನು ಸೇವಿಸಿದವನಿಗೆ ನಾಲು[ಕು] ದುಃಸ್ಥಿತಿಗಳು ಪ್ರಾಪ್ತವಾಗುತ್ತವೆ. ಅವು ಏನೆಂದರೆ— ಅವನು ಪಾಪ ಸಂಪಾದಿಸುತ್ತಾನೆ, ಅವನಿಗೆ ಸುಖನಿದ್ರೆಯಿಲ್ಲ, ಅವನು ನಿಂದೆಗೆ ಒಳಗಾಗುತ್ತಾನೆ; ಕಡೆಗೆ ನರಕಕ್ಕೆ ಹೋಗುತ್ತಾನೆ. ಪಾಪಲಾಭವಾದುದರಿಂದ ಕೆಟ್ಟ ಗತಿಗೆ ಹೋಗುತ್ತಾನೆ. ಭಯಗೊಂಡವನ[ು] ಭಯಗೊಂಡವಳೊಡನೆ ಪಡೆಯುವ ರತಿ ಬಹಳ ಅಲ್ಪವಾದದ್ದು. ಸಿಕ್ಕಿಬಿದ್ದರೆ, ರಾಜನು ದೊಡ್ಡ ದಂಡ ವಿಧಿಸುತ್ತಾನೆ. ಆದಕಾರ[ಣ] ಯಾರೂ ಪರಪತ್ನಿಯನ್ನು ಸೇವಿಸುವುದು ಬೇಡ."

ಈ ಕಾರಣಗಳಲ್ಲಿ, ಪರಲೋಕದಲ್ಲಿ ನಂಬದೆ ಪಾಪ ಸಂಪಾದನೆ ಮಾಡುವವರಾದರೂ ರಾಜನು ವಿಧಿಸುವ ದಂಡಕ್ಕಾಗಲಿ ಜನಗಳಿಂದ ಬರುವ ನಿಂದೆಗಾಗಲಿ ಹಿಂದೆಗೆಯದವರಾದರೂ ಈ "ಭೀತಸ್ಸ ಭೀತಾಯ ರತೀ ಚ ಥೋಕಿಕಾ" "ಭಯಗೊಂಡವನು ಭಯಗೊಂಡವ[ಳ]ಳೊಡನೆ ಪಡೆಯು ರತಿ ಅತ್ಯಲ್ಪ" ಎಂಬ ಕಾರಣದಿಂದಲಾದರೂ ಪರಸ್ತ್ರೀ ಸಂಗಕ್ಕೆ ಹೇಸಬೇಕಾದ್ದೆ.

ಆದ್ದರಿಂದಲೇ ಬುದ್ಧ–ತಥಾಗತ–ಹಿಂದಿನವರ ಮಾತನ್ನು ಮತ್ತೆ ಹೇಳಿದ:

ಚಕ್ಖುನಾ ಸಂವರೋ ಸಾಧು, ಸಾಧು ಜಿಹ್ವಾಯ ಸಂವರೋ
ಸೋಕೇನ ಸಂವರೋ ಸಾಧು, ಸಾಧು ಸಬ್ಬತ್ಥ ಸಂವರೋ

ಆತ ಹೇಳಿದ: ಕಣ್ಣು ಭದ್ರ; ನಾಲಿಗೆ ಭದ್ರ; ಕಿವಿ ಭದ್ರ; ಎಲ್ಲ ಕಡೆ ಭದ್ರ; ಇದರಿಂದ ಮೇಲು.

ಇದೇ ಸರ್ವತೋಭದ್ರದ ಸಂದೇಶವನ್ನು ಗಾಂಧಿಯವರೂ ಎತ್ತಿಕೊಂಡು ಎಚ್ಚರಿಸುತ್ತಿದ್ದರು. ಅವರ ಮುಂದೆ ಯಾವಾಗಲೂ ಮೂರು ಕೋತಿಗಳ ಒಂದು ವಿಗ್ರಹಪಂಕ್ತಿ ಇರುತ್ತಿತ್ತಂತೆ. ಅದರಲ್ಲಿ ಒಂದು ಕೋತಿ ತನ್ನ ಎರಡೂ ಕಣ್ಣು, ಇನ್ನೊಂದು ತನ್ನ ಎರಡೂ ಕಿವಿ, ಇನ್ನೊಂದು ತನ್ನ ಎರಡೂ ತುಟಿ ಬಿಗಿದು ಮುಚ್ಚಿಕೊಂಡಿದ್ದಂತೆ ಕಡೆದಿತ್ತಂತೆ.

ಈ ಸರ್ವತ್ರವಾದ ಸಂಯಮ ಎಲ್ಲ ಕ್ಷೇತ್ರಗಳಲ್ಲಿಯೂ ಅನು[ಷ್ಠಿ]ಷ್ಠಿತವಾಗುವುದು ಶ್ರೇಷ್ಠವೇ ಆದರೂ, ಸ್ತ್ರೀಯೆಂಬ ಕ್ಷೇತ್ರದಲ್ಲಿ ಈ ಸಂಯಮ ವಿನಿಯೋಗವಾಗಬೇಕಾದ್ದು ಅತ್ಯಗತ್ಯ–ವ್ಯಕ್ತಿಗಾಗಿ ಸಂಘ ಸಮುದಾಯಕ್ಕಾಗಿ.

ಈ ಅರ್ಥದಲ್ಲಿಯೇ ಮನ್ವಾಚಾರ್ಯರು ಹೇಳಿದ್ದು: 'ಯತ್ರ ನಾರ್ಯಸ್ತು ಪೂಜ್ಯಂತೇ ರಮಂತೇ ತತ್ರ ದೇವತಾಃ'

ನಾರೀಪೂಜೆ ಎಂದರೆ ಇದು; ಪತ್ನೀವ್ರತ ಎಂದರೆ ಇವು— ಮೇಲೆ ಹೇಳಿದ್ದು—ಸರ್ವತ್ರವಾದ ಸಂವರ.

Regd. No B 3148 | LICENCE No. 3 Licenced to Post without Prepayment | KARMAVEER 1-11-4